# ಸೊಂಡೂರು ಭೂಹೋರಾಟ

## ಪ್ರಸ್ತಾವನೆ

ಸೊಂಡೂರಿನಲ್ಲಿ ರೈತರು ಭೂಮಿಗಾಗಿ ಹೋರಾಟ ಮಾಡಿ ಇಲ್ಲಿಗೆ ಮೂವತ್ನಾಲ್ಕು ವರ್ಷ. ಭೂಮಿ ಪಡೆದು ಹೊಲದಲ್ಲಿ ಮೈನಿಂಗ್ ಕಲ್ಲು ಇರುವವರು ತಾವು ಸ್ವತಃ ಮೈನಿಂಗ್ ವ್ಯಾಪಾರ ಮಾಡಿಯೋ, ಗಣಿಧನಿಗಳಿಗೆ ಗುತ್ತಿಗೆ ಕೊಟ್ಟೋ ಸುಖವಾಗಿದ್ದಾರೆ. ಇನ್ನು ಮೈನಿಂಗ್ ಕಲ್ಲು ಇರದ ಕೃಷಿಯನ್ನು ಮಾತ್ರ ನಂಬಿದವರು ಕೃಷಿ ಮಾಡುತ್ತ ಬಾರದ ಮಳೆಯನ್ನು, ಮೇಲೇಳದ ಬೆಳೆಯನ್ನೂ ಕಂಡು ಭೂಮಿ ಯಾಕಾದರೂ ಸಿಕ್ತೋ ಅನ್ನುವ ದಯನೀಯ ಸ್ಥಿತಿಯಲ್ಲಿದ್ದಾರೆ. ಇನಾಮು ಭೂಮಿ ಇಲ್ಲದೆ, ಇತರರಿಗೆ ಭೂಮಿ ಕೊಡಿಸಲಿಕ್ಕಾಗಿ ಹೋರಾಟದಲ್ಲಿ ಭಾಗವಹಿಸಿದ ಕೆಲವು ಹೋರಾಟಗಾರರು ಶೋಚನೀಯವಾಗಿ ಬದುಕುತ್ತಿದ್ದಾರೆ. ಇವರ ಈ ಬದುಕಿಗೆ 'ಕುಮಾರಸ್ವಾಮಿ ಭೂಮಿಗಾಗಿ ಹೋರಾಟ ಮಾಡಿದ್ರಿಂದ ದೇವರ ಶಾಪ ಅವರಿಗೆ ತಟ್ಟಿದೆ' ಎನ್ನುವವರೂ ಇದ್ದಾರೆ. ಸ್ವತಃ ಅವರೇ 'ಯಾಕಾದ್ರೂ ಹೋರಾಟ ಮಾಡಿದೆವೋ. ನಮಿಗೆ ಒಳ್ಳೇದಾಗ್ಲಿಲ್ಲ' ಎನ್ನುತ್ತಾರೆ. ಇದು ಒಂದು ಹೋರಾಟ ಉಂಟು ಮಾಡಿದ ಪರಿಣಾಮಗಳ ಈ ಹೊತ್ತಿನ ಚಿತ್ರ. ಇದರ ಮೂಲಕ ಒಂದು ಹೋರಾಟವನ್ನು ಹೇಗೆ ಅರ್ಥಮಾಡಿಕೊಳ್ಳುವುದು? ವರ್ತಮಾನದ ಕಣ್ಣೋಟದಿಂದ ಭೂತವನ್ನು ಕಾಣುವಾಗ ಅವೆರಡರ ಮುಖಾಮುಖಿಯನ್ನು ಅರ್ಥೈಸುವ ವಿಧಾನ ಯಾವುದು? ಎನ್ನುವ ಪ್ರಶ್ನೆಗಳು ಎದುರಾಗುತ್ತವೆ.

ಹಾಗೆ ನೋಡಿದರೆ ಭೂಮಿಗಾಗಿ ರೈತರು ಮಾಡಿದ ಹೋರಾಟಗಳಿಗೆ ಕರ್ನಾಟಕದಲ್ಲಿ ಒಂದು ಪರಂಪರೆಯೇ ಇದೆ. ೧೬೮೩ರಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯರ ಎದುರು ಭೂತೆರಿಗೆಯ ಹೇರಿಕೆ ವಿರೋಧಿಸಿ ನಡೆದ ಹೋರಾಟದಿಂದ, ಈಗಿನ ಕಾವೇರಿ ನದಿ ನೀರು ಹಂಚಿಕೆ ಬಗ್ಗೆ ಸುಪ್ರೀಂಕೋರ್ಟಿನ ತೀರ್ಪನ್ನು ವಿರೋಧಿಸುವವರೆಗೆ ಅದರ ಹರವು ದೊಡ್ಡದು. ಮೊದಲ ಹಂತದ ಹೋರಾಟಗಳು ಭೂಮಿಯ ತೆರಿಗೆ, ಕಂದಾಯ, ಗೇಣಿಯನ್ನು ವಿರೋಧಿಸಿ ನಡೆದವು. ೧೯೪೭ರ ಈಚೆಗೆ ಭೂಮಿಯನ್ನು ಪಡೆಯುವ ಹಕ್ಕಿಗಾಗಿ, ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಉಳುವವನೆ ಭೂಒಡೆಯ ಎನ್ನುವ ನೆಲೆಯಲ್ಲಿ ಹೋರಾಟಗಳಾದವು. ಆ ಹೊತ್ತಿಗಾಗಲೆ ಭಾರತದ ಇತರೆ ಕಡೆಗಳಲ್ಲಿ ಆದ ಮಾಪಿಳ್ಳೆ ದಂಗೆಗಳು, ಬಾರ್ಡೋಲಿ ಸತ್ಯಾಗ್ರಹ, ವಾರಲಿ ಆದಿವಾಸಿಗಳ ಹೋರಾಟ, ಆಂಧ್ರದ ತೆಲಂಗಾಣ ಹೋರಾಟಗಳ ಪರಿಣಾಮ ಕರ್ನಾಟಕದ ರೈತ ಹೋರಾಟಗಳ ಮೇಲಾಗಿತ್ತು. ಭೂಮಾಲಿಕಶಾಹಿಯನ್ನು ನಾಶಗೊಳಿಸಬೇಕೆಂಬ ಕಮ್ಯುನಿಷ್ಟರು, ಆರ್ಥಿಕ ಸ್ವಾತಂತ್ರ್ಯದ ಮೂಲಕ ಸಮಾಜವಾದಿ ಸಮಾಜ ನಿರ್ಮಿಸಬೇಕೆಂಬ ಸೋಷಲಿಸ್ಟರು, ರೈತರ ಬಗ್ಗೆ ಆಳುವ ಸರ್ಕಾರದ ನಿರ್ಲಕ್ಷ್ಯ ವಿರೋಧಿಸಿ ರೈತ ಸಂಘದವರು ಬೇರೆ ಬೇರೆ ಆಯಾಮಗಳಲ್ಲಿ ರೈತ ಹೋರಾಟಗಳನ್ನು ರೂಪಿಸಿದರು.

'ಕಮ್ಯುನಿಸ್ಟರಾಗಲಿ ಅಥವಾ ಸಮಾಜವಾದಿಗಳಾಗಲಿ ಪರಿಣಾಮಕಾರಿಯಾದ ರೈತ ಚಳುವಳಿಯನ್ನು ಸಂಘಟಿಸುವಲ್ಲಿ ವಿಫಲರಾಗಿದ್ದಾರೆ. ಕಮ್ಯುನಿಸ್ಟರು ವಿಫಲರಾಗಿರುವುದು ರೈತ ಚಳುವಳಿಯನ್ನು ತಪ್ಪಾಗಿ ಅರ್ಥೈಸಿರುವುದರಿಂದ ಹಾಗೂ ಸೋಷಲಿಸ್ಟರು ವಿಫಲವಾಗಿರುವುದು ಸಂಘಟನಾ ನ್ಯೂನ್ಯತೆಗಳಿಂದ' ಎಂದು ಸಮಾಜವಾದಿ ನಾಯಕರಲ್ಲಿ ಒಬ್ಬರಾದ ಕಿಶನ್‌ಪಟ್ನಾಯಕ್ ಹೇಳುತ್ತಾರೆ. ಹಾಗೆಯೆ ಸಮಾಜವಾದಿ ಲೇಖಕರಾದ ಪಿ.ಲಂಕೇಶ್ ಅವರು 'ಭೂಸುಧಾರಣೆ ಪ್ರಮಾಣಿಕವಾಗಿ ಜಾರಿಗೆ ಬಂದಿದೆ ಎಂದು ಇಟ್ಟುಕೊಂಡರೂ, ಕರ್ನಾಟಕದಲ್ಲಿ ಅವಿಭಕ್ತ ಕುಟುಂಬಗಳು, ಬೇನಾಮಿ ಸ್ವಾಮ್ಯ ಇತ್ಯಾದಿಗಳಿಂದಾಗಿ ದೊಡ್ಡ ಹಿಡುವಳಿದಾರ ರೈತರಿದ್ದಾರೆ. ಬಹುಸಂಖ್ಯಾತ ರೈತರು ಅಷ್ಟಿಷ್ಟು ಜಮೀನಿನ ಒಡೆತನ ಹೊಂದಿದ್ದಾರೆ. ಹಳ್ಳಿಯ ಸಂದರ್ಭದಲ್ಲಿ ಭೂಸ್ವಾಮ್ಯ ಪಡೆದ ರೈತರು ಇತರರಿಗಿಂತ ಸ್ವಲ್ಪ ನೆಮ್ಮದಿ ಮತ್ತು ಪ್ರಭಾವ ಹೊಂದಿದವರು. ಹಳ್ಳಿಯಲ್ಲಿ ಶಿಕ್ಷಣ ಪಡೆದು ನಗರದತ್ತ ಹೋದ ಬಹುಪಾಲು ಹುಡುಗರು ಕೂಡ ಇಂಥ ರೈತ ಕುಟುಂಬದವರು. ಈ ರೈತ ಕುಟುಂಬದವರೇ ರಾಜಕೀಯರಾಗಿ ಕೂಡ ಸ್ಥಾನಮಾನಗಳನ್ನು ಗಳಿಸಿರುವವರು. ಇವತ್ತು ರೈತರು ತಮ್ಮ ಸಂಘಗಳನ್ನು ರೂಪಿಸಿಕೊಂಡು ಸರ್ಕಾರದ ಎದುರು ನಿಂತು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಅದಕ್ಕೆ ಕಾರಣ ಕೂಡ ಭೂಸ್ವಾಮ್ಯ ಹೊಂದಿದ ರೈತರ ಸ್ಥಿತಿವಂತಿಕೆ' ಎನ್ನುತ್ತಾರೆ. ಈ ಇಬ್ಬರ

ಮಾತುಗಳು ಕರ್ನಾಟಕದ ಭೂಹೋರಾಟಗಳನ್ನು ಅರ್ಥಮಾಡಿಕೊಳ್ಳಲು ಮುಖ್ಯ ಒಳನೋಟಗಳನನು ಕೊಡುತ್ತವೆ. ಈ ಹೊತ್ತಿನಲ್ಲಿ ರೈತ ಹೋರಾಟವನ್ನು ಅಧ್ಯಯನ ಮಾಡುವುದೆಂದರೆ ಭೂತದ ಮೂಲಕ ವರ್ತಮಾನವನ್ನು ಕಟ್ಟಿಕೊಳ್ಳುವ ಕಾಣ್ಕೆಗಳನ್ನು ಪಡೆಯುವುದು ಅಂದೇ ಅರ್ಥ. ನಡೆದಿದೆ ಎನ್ನಲಾಗುವ ಭೂಹೋರಾಟದ ಕಥನ ವರ್ತಮಾನದ ಕಥನವು ಕೂಡ.

ಸೊಂಡೂರು ಒಂದು ಸ್ವತಂತ್ರ ಸಂಸ್ಥಾನ. ಜನರು ರಾಜರ ನೇರ ಆಳ್ವಿಕೆಗೆ ಒಳಪಟ್ಟಿದ್ದರು. ೧೯೪೭ರ ನಂತರವೂ ಈ ಆಳ್ವಿಕೆ ಬೇರೆಯದೇ ಸ್ವರೂಪದಲ್ಲಿ ಮುಂದುವರೆಯಿತು. ೧೫,೦೦೦ ಎಕರೆಯಷ್ಟು ಸಾರ್ವಜನಿಕ ಭೂಮಿಯನ್ನು ರಾಜಸಂಸ್ಥಾನ ವಶಪಡಿಸಿಕೊಂಡಿತು. ರೈತರು ಈ ಭೂಮಿಗೆ ಇಂತಿಷ್ಟು ಗೇಣಿ ನೀಡಿ ಸಾಗುವಳಿ ಮಾಡುತ್ತಿದ್ದರು. ಅದು ೧೯೭೩ರವರೆಗೂ ಮುಂದುವರಿದಿತ್ತು. ಈ ನಡುವೆ ರಾಜಶಾಹಿಯನ್ನು ವಿರೋಧಿಸಿ ಜನರ ಪ್ರತಿಭಟನೆಗಳು ನಡೆಯುತ್ತಿದ್ದವು. ಪ್ರಜಾಪ್ರಭುತ್ವ ಸರ್ಕಾರದೊಂದಿಗೆ 'ರಾಜರು' ವಿಲೀನಗೊಂಡಿದ್ದರಿಂದ ಅವುಗಳು ಶಕ್ತಿಕಳೆದುಕೊಂಡವು. ಹೀಗಿದ್ದೂ ಮೊದಲ ಬಾರಿಗೆ ಇನಾಮು ಭೂಮಿಯ ಹಕ್ಕಿಗಾಗಿ ೧೯೭೩ರಲ್ಲಿ ರೈತರ ಹೋರಾಟ ನಡೆಯಿತು. ಸೋಷಲಿಸ್ಟ್ ಪಾರ್ಟಿ ಈ ಹೋರಾಟದ ನಾಯಕತ್ವ ವಹಿಸಿತು. ೪೯ ದಿನಗಳ ಸುದೀರ್ಘ ಹೋರಾಟದಿಂದ ಇನಂ ರದ್ದಾಯಿತು. ಈ ಹೋರಾಟವು ಹಲವು ಸಂಘರ್ಷಗಳ ಫಲವಾಗಿತ್ತು. ೧೯೪೭ಕ್ಕೂ ಮುಂಚೆ ರಾಜರ ಆಡಳಿತ ಅನುಭವಿಸಿದ ಜನ, ಆನಂತರ ಪ್ರಜಾಪ್ರಭುತ್ವ ಸರ್ಕಾರಕ್ಕೂ ಒಗ್ಗಿಕೊಳ್ಳತೊಡಗಿದ್ದರು. ಈ ಎರಡು ಸ್ಥಿತಿಗಳ ಆಕರ್ಷಣೆ ಹಾಗೂ ವಿಕರ್ಷಣೆಯ ಗುಣಗಳು ಹೋರಾಟವನ್ನು ಪ್ರಭಾವಿಸಿದವು. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಆರ್ಥಿಕ ಸ್ವಾತಂತ್ರ್ಯ ಪಡೆಯಬೇಕೆಂಬ ಕನಸಿನ ಸೋಷಲಿಸ್ಟ್ ಪಾರ್ಟಿ, ಈ ದೇಶದ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುತ್ತೇವೆ ಎನ್ನುವ ಕಾಂಗ್ರೆಸ್ ಸರ್ಕಾರ- ಈ ಬಗೆಯ ಆದರ್ಶ ವ್ಯಾಖ್ಯಾನಗಳ ನಿಜದ ಮುಖಾಮುಖಿಯಾಗಿ ಈ ಹೋರಾಟವನ್ನು ಕಾಣಬಹುದು. 'ತಾತ್ವಿಕವಾಗಿ ರಾಜಪ್ರಭುತ್ವದ ನಾಶಕ್ಕಾಗಿ, ಭೂಮಿಯ ಮೇಲಿನ ಹಕ್ಕಿಗಾಗಿ, ನಡೆದ ಹೋರಾಟ ಭೂಮಿಯನ್ನು ಪಡೆದ ನೆಪದಲ್ಲಿ, ಜನತಾಂತ್ರಿಕ ವ್ಯವಸ್ಥೆಯೊಳಗೆ ಪ್ರಭುತ್ವದ ಹೊಸರೂಪಕ್ಕೆ ಕಾರಣವಾಯಿತು' ಎಂದು ಹೋರಾಟವನ್ನು ವ್ಯಾಖ್ಯಾನಿಸಬಹುದು. ೭೦ರ ದಶಕದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪರಿಸರವನ್ನು ಈ ಹೋರಾಟದಿಂದ ಅರ್ಥಮಾಡಿಕೊಳ್ಳಲು ಸಾಧ್ಯವಿದೆ.

ಸೊಂಡೂರು ಸಂಸ್ಥಾನದ ಬಗ್ಗೆ ಅಧ್ಯಯನ ಮಾಡಲೆಂದು ಈ ಭಾಗದವರೊಬ್ಬರು ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿಗೆ ನೊಂದಾಯಿಸಿ, ರಾಜರ ಬಗೆಗೆ ಬರೆಯುವುದು ಕಷ್ಟ ಎಂದು ನೊಂದಾವಣಿಯನ್ನು ರದ್ದುಗೊಳಿಸಿದ್ದರು. ಕ್ಷೇತ್ರಕಾರ್ಯದ ಸಂದರ್ಭದಲ್ಲಿಯೂ ರಾಜರ ವಿರುದ್ಧ ಆದ ಹೋರಾಟವನ್ನು ಹೇಳುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಹಾಗೆಯೇ ಈ ಅಧ್ಯಯನ ಮಾಡುವ ಬಗ್ಗೆಯೂ ಭಯವನ್ನು ಹುಟ್ಟಿಸಿದರು. ಇನ್ನು ಮಹಾರಾಜರ ಕರಕುಶಲ ಕೇಂದ್ರ, ಅರಮನೆ ಮುಂತಾದ ಕಡೆ ಒಂದು ಛಾಯಾಚಿತ್ರ ತೆಗೆಯಲು ಸೆಕ್ಯುರಿಟಿ ಗಾರ್ಡ್‌ಗಳು ಅವಕಾಶ ಮಾಡಿಕೊಡಲಿಲ್ಲ. ಇದೆಲ್ಲವೂ ಒಂದು ಕಾಲದ ರಾಜ ಪ್ರಭುತ್ವನ್ನು ಅಧ್ಯಯನ ಮಾಡುವವರು ಎದುರಿಸಬೇಕಾದ ವಾಸ್ತವಿಕ ಸಮಸ್ಯೆಗಳಾಗಿವೆ. ಹಾಗೆಯೆ ರಾಜರ ಪ್ರಭಾವವು ಈ ಹೊತ್ತಿನಲ್ಲಿಯೂ ಹೇಗೆ ಜನರಲ್ಲಿ ಉಳಿದಿದೆ ಎನ್ನುವದಕ್ಕೆ ಸಾಕ್ಷಿ ಕೂಡ. ಇನ್ನು ಕೆಲವರು 'ಇಲ್ಲಿ ಹೋರಾಟವೆ ನಡೆದಿಲ್ಲ. ಯಾರೋ ಬೆಂಗಳೂರಿನ ಕೆಲ ಕಿಡಿಗೇಡಿಗಳು ಬಂದು ಗದ್ದಲ ಮಾಡಿದರು' ಎನ್ನುವವರು ಇದ್ದಾರೆ. ೧೯೭೩ರಲ್ಲಿ ನಡೆದ ಹೋರಾಟವನ್ನು ಅಧ್ಯಯನ ಮಾಡಹೊರಟಾಗ ಎದುರಾದ ಚಿತ್ರಗಳಿವು. ರಾಜರ ಬಗೆಗಿರುವ ಈ ಬಗೆಯ ಮನಸ್ಥಿತಿ ಭಯದ್ದೋ, ಆತಂಕದ್ದೋ, ಗೌರವದ್ದೋ- ಅರ್ಥಮಾಡಿಕೊಳ್ಳುವುದು ಕಷ್ಟ. ಹೀಗಾಗಿ ಈ ಅಧ್ಯಯನವೇ 'ರಾಜರ ವಿರುದ್ಧ' ಎನ್ನುವ ಅಭಿಪ್ರಾಯಗಳು ಬಂದವು. ನಿಜವೆಂದರೆ ಒಬ್ಬ ಭೂಸ್ವಾಮಿಯ ಜತೆ ತಾನು ಉಳುವ ಭೂಮಿಯ ಮೇಲಿನ ಹಕ್ಕಿಗಾಗಿ ಸಾಮಾನ್ಯ ರೈತರು ಹೋರಾಟ ಮಾಡಿದ ಒಂದು ಸಂಘರ್ಷದ ಕಥನವಿದು.

ಭೂಹೋರಾಟಗಳನ್ನು ಅಧ್ಯಯನ ಮಾಡಹೊರಟಾಗ ಕೆಲವು ಸಿದ್ಧ ಮಾದರಿಗಳಿವೆ. ಕರ್ನಾಟಕದಲ್ಲಿ ನಡೆದ ಭೂಹೋರಾಟಗಳ ಸಂಖ್ಯೆಗೆ ಹೋಲಿಸಿದರೆ ಆ ಕುರಿತು ನಡೆದ ಅಧ್ಯಯನಗಳು ತುಂಬ ಕಡಿಮೆ. ಹೆಚ್ಚಿನವು ಮಾಹಿತಿ ಪ್ರಧಾನವಾಗಿವೆ. ಇದು ಚರಿತ್ರೆಯನ್ನು ದಾಖಲಿಸುವ ಸಾಂಪ್ರದಾಯಿಕ ಕ್ರಮ. ಹೋರಾಟದಲ್ಲಿ ಭಾಗವಹಿಸಿದವರು ಆತ್ಮಕಥನ ಮಾದರಿಯಲ್ಲಿ ನಿರೂಪಿಸುವ ಇನ್ನೊಂದು ಕ್ರಮವಿದೆ. ಅದು

ಕನ್ನಡದಲ್ಲಿ ಪ್ರಯೋಗವಾದ್ದು ಕಡಿಮೆ. ಎರಡನೆಯ ಕ್ರಮದ ಮಿತಿಯೆಂದರೆ ಸ್ವವಿಮರ್ಶೆಗಿಂತ ಸ್ವಮೋಹವೆ ಹೆಚ್ಚಾಗಿರುವುದು. ಮಹಾರಾಷ್ಟ್ರದಲ್ಲಿ ಆದಿವಾಸಿಗಳ ಬದುಕಿನ ಭಾಗವಾಗಿ ಭೂಹೋರಾಟ ಸಂಘಟಿಸಿದ್ದ ಗೋದಾವರಿ ಪರುಳೇಕಾರರ ಕಥನವನ್ನು ('ಮಾನವ ಎಚ್ಚೆತ್ತಾಗ') ಈ ನೆಲೆಯಲ್ಲಿ ನೋಡಬಹುದು. ಮೂರನೆಯದಾಗಿ ಹೋರಾಟ ನಡೆದ ಕಾಲಘಟ್ಟದ ಆಸುಪಾಸಿನವರು ಹೋರಾಟದಲ್ಲಿ ಭಾಗವಹಿಸಿದವರನ್ನು ಸಂದರ್ಶಿಸಿ, ಪತ್ರಿಕಾ ಬರಹ, ಕರಪತ್ರ ಮುಂತಾದ ಆಕರಗಳನ್ನು ಬಳಸಿಕೊಂಡು ಒಂದು ಹೋರಾಟದ ಚರಿತ್ರೆಯನ್ನು ಕಟ್ಟುವ ಕ್ರಮ ಜನಪ್ರಿಯವಾಗಿದೆ. ಈ ನೆಲೆ ಕನ್ನಡದಲ್ಲಿ ಹೆಚ್ಚು ಬಳಕೆಯಾಗಿದೆ. ಈ ನೆಲೆಯಲ್ಲಿಯೆ ವರ್ತಮಾನದ ಎಚ್ಚರಗಳ ಮೂಲಕ ಗತವನ್ನು ಪರಿಶೀಲಿಸುವ ಒಂದು ಮಾದರಿಯಿದೆ. ಪ್ರಸ್ತುತ ಅಧ್ಯಯನವು ಅಂತಹ ಮಾದರಿಯನ್ನು ಅನುಸರಿಸಿದೆ. ಕನ್ನಡದಲ್ಲಿ ಜಿ.ರಾಜಶೇಖರ ಅವರು 'ಕಾಗೋಡು ಸತ್ಯಾಗ್ರಹ' ಎಂಬ ತಮ್ಮ ಕೃತಿಯಲ್ಲಿ ಈ ಪ್ರಯೋಗವನ್ನು ಮಾಡಿದ್ದಾರೆ. ಇದು ಭೂಹೋರಾಟದ ಅಧ್ಯಯನಗಳಿಗೆ ಒಂದು ಕೃತಿಯಾಗಿದೆ. ಒಂದು ಭೂ ಹೋರಾಟವನ್ನು ಅದರ ವರ್ತಮಾನದ ಪರಿಣಾಮಗಳ ಮೂಲಕ ನೋಡುವ, ಹೋರಾಟ ಸಂದರ್ಭದ ರಾಜಕೀಯ, ಸಾಂಸ್ಕೃತಿ, ಸಾಮಾಜಿಕ ಪರಿಧಿಯಲ್ಲಿಟ್ಟು ಪರೀಕ್ಷಿಸುವ, ಶುದ್ಧ ರಾಜಕೀಯ ಚರಿತ್ರೆಯ ಕಥನವನ್ನಾಗಿಸುವ, ಮಾಹಿತಿಯೊಂದಿಗೆ ಸರಿದೂರವನ್ನು ನಿರ್ಮಿಸಿಕೊಂಡು ವಿಶ್ಲೇಷಿಸುವ, ಒಂದು ಕಾಲಘಟ್ಟದ ಸಾಂಸ್ಕೃತಿಕ ಕಥನವನ್ನಾಗಿಸುವ ಮೂಲಕ ಗತ ವರ್ತಮಾನವನ್ನು ಬೆಳೆಯುವ ಸೂಕ್ಷ್ಮತೆಯಲ್ಲಿ ಒಂದು ಹೋರಾಟವನ್ನು ದಾಖಲಿಸುವ ತುರ್ತು ಈ ಕಾಲಕ್ಕಿದೆ. ಪ್ರಸ್ತುತ ಈ ಅಧ್ಯಯನವು ವರ್ತಮಾನದ ಕಣ್ಣೋಟದಿಂದ ಗತವನ್ನು ಪರಿಶೀಲಿಸುವ ಸಾಂಸ್ಕೃತಿಕ ಕಥನದ ಮಾದರಿಯನ್ನು ಅನುಸರಿಸಿದೆ.

ಒಂದು ಚರಿತ್ರೆಯಾಗಿ ಈ ಅಧ್ಯಯನ ದಾಖಲಾಗುತ್ತಿದೆ. ದಾಖಲೆಗಳನ್ನು ಮಾತ್ರ ಐತಿಹಾಸಿಕ ತಿಳುವಳಿಕೆ ಎಂಬ 'ಆಧಾರವಾದಿ' ಚರಿತ್ರೆಯ ವಿಧಾನವೊಂದಿದೆ. ಆದರೆ ಈ ಅಧ್ಯಯನ ಇತಿಹಾಸವೆಂಬುದು ವೈಯಕ್ತಿಕ ವ್ಯಾಖ್ಯಾನಗಳ ವ್ಯಕ್ತಿನಿಷ್ಠ ಕಲ್ಪನಾ ಪ್ರತಿಭೆ, ವಾಸ್ತವಾಂಶಗಳು ಬೆರೆತುಕೊಂಡ ಕಥನ ಕಲೆ ಹಾಗೂ ಇದೊಂದು ಭಾಷಿಕ ಸಂಕಥನ ಎನ್ನುವುದನ್ನು ತಾತ್ವಿಕ ಭಿತ್ತಿಯಾಗಿಸಿಕೊಂಡಿದೆ. ಮಾಹಿತಿಗಳನ್ನಷ್ಟೇ ಜೋಡಿಸುತ್ತಾ ಹೋದಾಗ ಅವು ಬೆದರು ಗೊಂಬೆಗಳಂತೆ ಭಯವನ್ನು ಹುಟ್ಟಿಸುತ್ತವೆ. ಆದರೆ ಆ ಗೊಂಬೆಗಳಿಗೆ ಜೀವವಿರುವುದಿಲ್ಲ. ಬೊಂಬೆಗಳನ್ನೇ ಕಥನದ ಪಾತ್ರಗಳನ್ನಾಗಿಸಿ, ಸೂತ್ರ ಹಿಡಿದು ಆಡಿಸುವ ತೊಗಲುಗೊಂಬೆ ಕಲಾವಿದ ಕಥನವನ್ನು ಮುನ್ನಡೆಸುತ್ತಾನೆ. ಅಂತೆಯೇ ಈ ಅಧ್ಯಯನದ ಮಾಹಿತಿಗಳಿಗೆ ಸೂತ್ರ ಹಿಡಿದು ಆಡಿಸುವ ಸೃಜನಶೀಲ ಮಾದರಿಯಿದೆ. ಒಂದು ಕಡೆ ಸೊಂಡೂರಿನ ರಾಜವಂಶ, ಇನ್ನೊಂದೆಡೆ ಆಳಿಸಿಕೊಳ್ಳುವ ಜನಸಮುದಾಯ, ಹೀಗೆ ರಾಜ ಮತ್ತು ಸಾಮಾನ್ಯ ಪ್ರಜೆಗಳ ನಡುವಿನ ಸಂಘರ್ಷದ ತುಣುಕು ಕಿಡಿಗಳು ಕಾಲದಿಂದ ಕಾಲಕ್ಕೆ ಸಿಡಿದು ಬೆಳಕು ಕಾಣುವ ಮುನ್ನ ನಂದುತ್ತ ಕಾಣೆಯಾಗಿದ್ದವು. ಈ ರೀತಿ ಕಾಣೆಯಾದ ಕಿಡಿಗಳ ಆತ್ಮಗಳೇ ಒಟ್ಟಾಗಿ ೧೯೭೪ರಲ್ಲಿ ಸ್ಫೋಟವನ್ನು ಸಾಧ್ಯವಾಗಿಸಿದವು ಎಂದು ಇಡಿಯಾದ ಹೋರಾಟದ ಸಂಕ್ಷಿಪ್ತ ಚಿತ್ರ ಕೊಡಬಹುದು.

ಆದಾಗ್ಯೂ ಅಧ್ಯಯನಕ್ಕೆ ಕೆಲವು ಮಿತಿಗಳಿವೆ. ಪತ್ರಿಕಾ ವರದಿಗಳನ್ನು ಆ ಕಾಲದ ಖಚಿತ ಮಾಹಿತಿ ಎಂದು ನಂಬಲಾಗಿದೆ. ಕೆಲವು ಕಡೆ ಮಾತ್ರ ವರದಿಗಳನ್ನು ಪರೀಕ್ಷಿಸಲು ಸಾಧ್ಯವಾಗಿದೆ. ಭೂಮಿ ಕಳೆದುಕೊಂಡವರ ನಿಲುವು ದಾಖಲಿಸಲು ಎಂ.ವೈ. ಘೋರ್ಪಡೆಯವರೊಂದಿಗೆ ಮಾತುಕತೆ ಸಾಧ್ಯವಾಗಲಿಲ್ಲ. ಹೋರಾಟದ ಸಮಗ್ರ ಚಿತ್ರ ಕೊಡಲು, ಆ ಮೂಲಕ ಓದುಗರಿಗೂ ಅಧ್ಯಯನಕಾರರಿಗಿಂತ ಭಿನ್ನವಾಗಿ ಆಲೋಚಿಸಲು ಅನುವಾಗಲೆಂದು ಹೇರಳ ಮಾಹಿತಿ ಕೊಡಲಾಗಿದೆ. ಹಾಗಾಗಿ ಈ ಅಧ್ಯಯನದಲ್ಲಿ ಮಾಹಿತಿಯ ಭಾರವು ಇದೆ. ಆಧಾರ ಸಹಿತ ಮಾಹಿತಿ ವಿಶ್ಲೇಷಣೆಗೆ ಮೌಖಿಕ ಸಂದರ್ಶನದ ಭಾಗಗಳನ್ನು ಬಳಸಿಕೊಳ್ಳಲಾಗಿದೆ. ನಿರೂಪಣೆಯಲ್ಲಿ ಅಧ್ಯಯನವು ರಾಜವಂಶದ ವಿರೋಧಿ ಎನ್ನುವಂತೆ ಕೆಲವು ಕಡೆ ಕಾಣಬಹುದು. ಆದರೆ ಮಾಹಿತಿಯೇ ಹೀಗೆ ಕಾಣಿಸಿದೆ ಹೊರತು ಅಧ್ಯಯನವಲ್ಲ. ಒಂದು ಕಾಲದ ಭಾಷೆ ಮತ್ತು ಸಂದರ್ಭವನ್ನು ನೈಜವಾಗಿ ಕಟ್ಟಿಕೊಡಲು ಪತ್ರಿಕೆಗಳ ವರದಿಯನ್ನು, ಸದನದ ಕಲಾಪವನ್ನು, ಯಜಮಾನರ ಕಾದಂಬರಿಯನ್ನು ದೀರ್ಘವಾಗಿ ಉದ್ಧರಿಸಲಾಗಿದೆ. ಇಷ್ಟು ಮಿತಿಗಳ ನಡುವೆ ಈ ಅಧ್ಯಯನ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ಬಹು ಮುಖ್ಯ ಆಕರಗಳಲ್ಲಿ ಒಂದಾಗುವುದೆಂಬ ಭರವಸೆ ಈ ಅಧ್ಯಯನ ಕಾರನದು. ಇದು ನನ್ನ ಸಂಶೋಧನೆಯ

ಮೊದಲ ಕೃತಿ. ಓದಿ ಅರೆ-ಕೊರೆಗಳನ್ನು ತಿದ್ದುತ್ತೀರೆಂದು ಭಾವಿಸುತ್ತೇನೆ. ಓದುಗರ ಪ್ರತಿಕ್ರಿಯೆಗಳನ್ನು ಪ್ರೀತಿಯಿಂದ ಮುಕ್ತವಾಗಿ ಸ್ವಾಗತಿಸುತ್ತೇನೆ.

ಈ ಅಧ್ಯಯನಕ್ಕೆ ಕಾರಣವಾದವರನ್ನು ಕೃತಜ್ಞತಾ ಭಾವದಿಂದ ನೆನೆಯಬೇಕಿದೆ. ವಿದ್ಯಾರ್ಥಿಗಳ ಮೇಲೆ ಅಪಾರ ಪ್ರೀತಿ ಕಾಳಜಿ ಇರುವ ಮಾನ್ಯ ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ ರೈ ಅವರು ವಿದ್ಯಾರ್ಥಿ ದೆಸೆಯಲ್ಲಿ ಇಂಥದ್ದೊಂದು ಸಂಶೋಧನೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಅವರ ಪ್ರೀತಿ ಒತ್ತಾಸೆ ಇಲ್ಲದಿದ್ದರೆ ಈ ಅಧ್ಯಯನ ಸಾಧ್ಯವಾಗುತ್ತಿರಲಿಲ್ಲ. ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಸಣ್ಣಪುಟ್ಟ ಲೇಖನ, ಪಿಎಚ್.ಡಿ., ಕಾವ್ಯ ಎಂದುಕೊಂಡಿದ್ದವನಿಗೆ ಇಂತಹ ಒಂದು ಸವಾಲಿನ ಜವಾಬ್ದಾರಿಯನ್ನು ಕೊಟ್ಟು ಯೋಜನೆಯ ಕೊನೆಯವರೆಗೆ ಮಾರ್ಗದರ್ಶನ ಮಾಡಿದ ಲೋಹಿಯಾ ಅಧ್ಯಯನ ಪೀಠದ ಸಂಚಾಲಕರಾದ ಪ್ರೊ. ರಹಮತ್ ತರೀಕೆರೆ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ. ಅಧ್ಯಯನದ ಬಗೆಗೆ ತಾತ್ವಿಕ ತಿಳುವಳಿಕೆ ನೀಡಿದ ಪೀಠದ ಸಲಹಾ ಸಮಿತಿ ಸದಸ್ಯರುಗಳಾದ ಡಾ.ಕಾಳೇಗೌಡ ನಾಗವಾರ, ಕೆ.ಫಣಿರಾಜ್, ಡಾ.ನಟರಾಜ ಹುಳಿಯಾರ್ ಅವರಿಗೂ ಪ್ರೀತಿಯ ಕೃತಜ್ಞತೆಗಳು.

ಈ ಯೋಜನೆಯ ಜತೆಗಾರರಾದ ಬಿ. ಪೀರಬಾಷ, ಡಾ. ಸತೀಶ್ ಪಾಟೀಲ್ ಅವರಿಗೂ, ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕರು ಹಾಗೂ ಸಿಬ್ಬಂದಿಯವರಿಗೂ, ಮಾಹಿತಿ ಒದಗಿಸಿದ 'ಪ್ರಜಾವಾಣಿ' 'ಕನ್ನಡ ಪ್ರಭ' 'ಸಂಯುಕ್ತ ಕರ್ನಾಟಕ' 'ಪ್ರಪಂಚ' ಪತ್ರಿಕೆಗಳ ಸಂಪಾದಕರುಗಳಿಗೂ, ಪಿಎಚ್.ಡಿ., ಸಂಶೋಧನೆಯ ಮಧ್ಯೆಯೇ ಇಂಥದ್ದೊಂದು ಯೋಜನೆ ಪೂರೈಸಲು ಅವಕಾಶ ಕಲ್ಪಿಸಿದ ಪ್ರೀತಿಯ ಮಾರ್ಗದರ್ಶಕರಾದ ಡಾ.ಹೆಬ್ಬಾಲೆ ಕೆ.ನಾಗೇಶ ಅವರಿಗೂ, ಹಸ್ತಪ್ರತಿ ಓದಿ ಸಲಹೆ ನೀಡಿದ ಡಾ. ಮೃತ್ಯುಂಜಯ ರುಮಾಲೆ ಹಾಗೂ ಡಾ. ಶ್ರೀಧರ ಪಿಸ್ಸೆ ಅವರಿಗೂ, ಕರಡು ತಿದ್ದುವಲ್ಲಿ ಸಹಕರಿಸಿದ ಚಂದ್ರಪ್ಪ ಸೊಬಟಿ, ನಿಂಗಪ್ಪ ಹೊಸಳ್ಳಿ ಅವರಿಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸ್ನೇಹಿತರಿಗೂ, ಅನುಬಂಧದಲ್ಲಿ ಹೆಸರಿಸಲಾದ ಮಾಹಿತಿದಾರರಿಗೂ, ಆಲೋಚಿಸುವುದನ್ನು ಕಲಿಸಿದ ಕನ್ನಡ ವಿಶ್ವವಿದ್ಯಾಲಯದ ಪರಿಸರಕ್ಕೂ, ಕ್ಷೇತ್ರಕಾರ್ಯಕ್ಕೆ ನೆರವಾದ ಜಿ. ಪರಮೇಶ, ಜಿ. ಪ್ರಕಾಶ್, ಡಿ.ಎಂ. ಘನಶ್ಯಾಮ, ಆನಂದ ಋಗ್ವೇದಿ ಅವರಿಗೂ, ನನ್ನ ಬರಹವನ್ನು ಬೆರಗಿನಿಂದ ನೋಡುವ ನನ್ನ ಮನೆಯವರಿಗೂ, ಪ್ರಸಾರಾಂಗದಿಂದ ಪ್ರಕಟಿಸುತ್ತಿರುವ ಮತ್ತು ನನ್ನ ಆಲೋಚನೆಯನ್ನು ವಿಸ್ತರಿಸಿದ ಪ್ರೀತಿಯ ಮೇಷ್ಟ್ರು ಹಾಗೂ ಪ್ರಸಾರಾಂಗದ ನಿರ್ದೇಶಕರೂ ಆದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರಿಗೂ, ಮುಖಪುಟ ವಿನ್ಯಾಸ ಮಾಡಿದ ಕೆ.ಕೆ. ಮಕಾಳಿಯವರಿಗೂ, ಪುಟ ವಿನ್ಯಾಸಗೊಳಿಸಿದ ಸುಜ್ಞಾನಮೂರ್ತಿಯವರಿಗೂ, ಡಿ.ಟಿ.ಪಿ. ಮಾಡಿದ ಉಲ್ಲಾಸ್, ಜಿ.ಶಿವಕುಮಾರ್ ಅವರಿಗೂ, ಈ ಅಧ್ಯಯನಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲರ ಪ್ರೀತಿ ವಿಶ್ವಾಸಕ್ಕೂ, ಈಗ ಪುಸ್ತಕ ಓದುತ್ತಿರುವ ನಿಮಗೂ ತುಂಬು ಹೃದಯದ ಕೃತಜ್ಞತೆಗಳು.

**ಅರುಣ್ ಜೋಳದಕೂಡ್ಲಿಗಿ**

ಲೋಹಿಯಾ ಜನ್ಮದಿನ, ೨೦೦೭

ಜೋಳದಕೂಡ್ಲಿಗಿ

## ಸಂಚಾಲಕರ ಮಾತು

ಕರ್ನಾಟಕದ ಸಮಾಜವಾದಕ್ಕೆ ಸಂಬಂಧಪಟ್ಟ ಅಧ್ಯಯನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲೆಂದು ಕನ್ನಡ ವಿಶ್ವವಿದ್ಯಾಲಯದಲ್ಲಿ ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠವು ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಯಾಗಿದೆ. ರಾಮಮನೋಹರ ಲೋಹಿಯಾ ಅವರು ಧೀಮಂತ ರಾಜಕಾರಣಿ ಮಾತ್ರವಲ್ಲದೆ, ೨೦ನೇ ಶತಮಾನದ ಭಾರತದ ಪ್ರಮುಖ ಚಿಂತಕರಲ್ಲಿ ಸಹ ಒಬ್ಬರು. ಅವರ ಸಂಪರ್ಕವು ಕರ್ನಾಟಕಕ್ಕೆ ೧೯೫೦ರ ದಶಕದಲ್ಲಿ ಹಲವು ಚಾರಿತ್ರಿಕ ಕಾರಣಗಳಿಂದ ಒದಗಿ ಬಂದಿತು. ಮುಂದೆ ಅದು ಒಂದು ದೊಡ್ಡ ಪ್ರಭಾವವಾಗಿ

ಕರ್ನಾಟಕದ ರಾಜಕಾರಣ, ಚಳುವಳಿ, ತಾತ್ವಿಕ ಚಿಂತನೆ ಹಾಗೂ ಸಾಹಿತ್ಯವನ್ನು ವ್ಯಾಪಿಸಿತು. ಈ ಪ್ರಭಾವವು, ೨೦ನೇ ಶತಮಾನದ ಕೊನೆಯ ಅರ್ಧಭಾಗದ ಕರ್ನಾಟಕದ ರಾಜಕಾರಣ, ಚಿಂತನೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಜಗತ್ತನ್ನು ಲೋಹಿಯಾ ಅವರನ್ನು ಕೈಬಿಟ್ಟು ಚರ್ಚಿಸಲು ಸಾಧ್ಯವಿಲ್ಲ ಎಂಬಂತೆ ಆವರಿಸಿಕೊಂಡಿದೆ. ವಿಶಾಲ ನೆಲೆಯಲ್ಲಿ ಲೋಹಿಯಾ ಪೀಠವು ಲೋಹಿಯಾವಾದಿ ಪ್ರಭಾವವನ್ನು ಒಳಗೊಂಡಂತೆ ಎಲ್ಲ ಬಗೆಯ ಸಮಾಜವಾದಿ ಚಿಂತನೆಗಳಿಗೆ ಒಂದು ವೇದಿಕೆ ಆಗಬೇಕೆಂಬುದು ವಿಶ್ವವಿದ್ಯಾಲಯದ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಅದು ಕಳೆದ ಹಲವಾರು ವರ್ಷಗಳಿಂದ ಕೆಲವು ಉಪಯುಕ್ತವಾದ ಕಮ್ಮಟಗಳನ್ನೂ ವಿಚಾರ ಸಂಕಿರಣಗಳನ್ನೂ ಹಮ್ಮಿಕೊಂಡು ಬಂದಿದೆ. ಹಲವು ಪ್ರಕಟಣೆಗಳನ್ನು ಮಾಡಿಕೊಂಡು ಬಂದಿದೆ. ಈ ಪರಂಪರೆಯನ್ನು ಮುಂದುವರೆಸಿ, ೨೦೦೫-೦೭ನೇ ಸಾಲಿನಲ್ಲಿ ಎರಡು ಬಗೆಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಯಿತು. ಅವುಗಳಲ್ಲಿ ಮೊದಲನೆಯದು ಉಪನ್ಯಾಸ ಯೋಜನೆ. ಎರಡನೆಯದು ಸಂಶೋಧನ ಯೋಜನೆ. ಈ ಯೋಜನೆಗಳನ್ನು ಕೈಗೆತ್ತಿಕೊಳ್ಳುವಲ್ಲಿ, ಪೀಠಕ್ಕೆ ಎರಡು ಮುಖ್ಯ ಆಶಯಗಳಿದ್ದವು. ೧. ಈ ಯೋಜನೆಗಳು ಕರ್ನಾಟಕದ ಸಮಾಜವಾದಿ ಚಿಂತನೆ, ಚಳುವಳಿ, ಸಾಹಿತ್ಯ ಹಾಗೂ ರಾಜಕಾರಣಕ್ಕೆ ಸಂಬಂಧಿಸಿದಂತೆ ಹೆಚ್ಚು ಚರ್ಚೆಗೆ ಬಾರದ ಆದರೆ ತಾತ್ವಿಕವಾಗಿ ಮಹತ್ವದ ಸಂಗತಿಗಳ ಮೇಲೆ ಬೆಳಕು ಚೆಲ್ಲುವಂತಿರಬೇಕು. ೨. ಈ ಯೋಜನೆಗಳು ಕರ್ನಾಟಕದ ಸಮಕಾಲೀನ ರಾಜಕೀಯ ಸಾಮಾಜಿಕ ಬದುಕಿಗೆ ಲಗತ್ತನ್ನು ಪಡೆದುಕೊಂಡು ಒಂದು ಬಗೆಯ ಚಲನಶೀಲತೆಯನ್ನು ಪ್ರೇರಿಸುವಂತಿರಬೇಕು.

ಈ ಹಿನ್ನೆಲೆಯಲ್ಲಿ ಮೊದಲ ಹಂತದಲ್ಲಿ 'ಕರ್ನಾಟಕದಲ್ಲಿ ಹಿಂದುಳಿದ ಸಮುದಾಯಗಳ ಹೊಸ ರಾಜಕೀಯ ಸಮೀಕರಣಗಳು' ಎಂಬ ವಿಷಯ ಕುರಿತು ದಿನಾಂಕ. ೧೯.೧೦.೨೦೦೬ ರಂದು, ವಿಶ್ವವಿದ್ಯಾಲಯದ ಆವರಣದಲ್ಲಿ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಲೋಹಿಯಾ ಚಿಂತನೆಗಳನ್ನು ಅನುವಾದ ಮಾಡಿಸಿ ಸಂಪಾದಿಸಿ ಕೊಟ್ಟಿರುವ ಹಾಗೂ ಲೋಹಿಯಾ ಸಮಾಜವಾದದ ಹಿನ್ನೆಲೆಯಲ್ಲಿ ಕರ್ನಾಟಕದ ಸಾಹಿತ್ಯ ರಾಜಕಾರಣ ಸಮಾಜಗಳನ್ನು ಸೂಕ್ಷ್ಮವಾಗಿ ಸೈದ್ಧಾಂತಿಕ ಪ್ರಬುದ್ಧತೆಯಲ್ಲಿ ವಿಶ್ಲೇಷಿಸುವ ಡಾ. ನಟರಾಜ ಹುಳಿಯಾರ್ ಅವರು ಈ ಉಪನ್ಯಾಸ ನಡೆಸಿಕೊಟ್ಟರು. ಎರಡನೆಯ ಹಂತದಲ್ಲಿ ಮೂರು ಸಂಶೋಧನ ಯೋಜನೆಗಳನ್ನು ಹಂಪಿ ಪರಿಸರದ ಪ್ರತಿಭಾವಂತರೂ ಹೊಸ ತಲೆಮಾರಿನ ಲೇಖಕರೂ ಆದ ಮುರು ಯುವಕರಿಗೆ ನೀಡಲಾಯಿತು. ಆಯೋಜನೆಗಳೆಂದರೆ ೧. ಸಮಾಜವಾದಿ ಚಳುವಳಿಗಾರರ ಸಂದರ್ಶನ ಸಂಪುಟ –ಬಿ. ಪೀರ್ ಬಾಷಾ. ೨. ಸೊಂಡೂರು ಭೂಹೋರಾಟ-ಅರುಣ್ ಜೋಳದಕೂಡ್ಲಿಗಿ. ೩.ಹೆಬ್ಬಳ್ಳಿ ಭೂಹೋರಾಟ - ಡಾ. ಸತೀಶ್ ಪಾಟೀಲ್. ಈ ಮೂರು ಯೋಜನೆಗಳು ಪೂರ್ಣಗೊಂಡು ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿವೆ.

ಈ ಕೃತಿಯನ್ನು ರಚಿಸಿಕೊಟ್ಟಿರುವ ಶ್ರೀ. ಅರುಣ್ ಜೋಳದಕೂಡ್ಲಿಗಿ ಅವರು ಕನ್ನಡದ ಹೊಸತಲೆಮಾರಿನ ಲೇಖಕರಲ್ಲಿ ಒಬ್ಬರು. ಸೊಂಡೂರು ಭೂಹೋರಾಟ ನಡೆದ ಸ್ಥಳದ ಅಸುಪಾಸಿನ ಊರಿನವರು. ಅವರು ಈ ಪುಸ್ತಕ ರಚನೆಗಾಗಿ ಅನೇಕ ಹಳ್ಳಿಗಳನ್ನು ತಿರುಗಿ ಹೋರಾಟದಲ್ಲಿ ಪಾಲುಗೊಂಡ ಜನರನ್ನೂ ನಾಯಕರನ್ನೂ ಭೇಟಿಮಾಡಿದ್ದಾರೆ. ಪತ್ರಿಕಾಲಯ, ತಾಲೂಕು ಕಛೇರಿ, ರಾಜ್ಯಪತ್ರಾಗಾರ ಇಲಾಖೆ ಹಾಗೂ ಪೊಲೀಸ್ ಠಾಣೆಗಳಿಗೆ ಹೋಗಿ ವರದಿಗಳನ್ನು ಸಂಗ್ರಹಿಸಿದ್ದಾರೆ. ವಿಧಾನಸೌಧದಲ್ಲಿ ಇರುವ ಕಲಾಪದ ವರದಿಯ ಸಂಪುಟಗಳನ್ನು ಅಧ್ಯಯನ ಮಾಡಿ ಅಮೂಲ್ಯ ಮಾಹಿತಿಯನ್ನು ಪಡೆದಿದ್ದಾರೆ. ಕರ್ನಾಟಕದ ಭೂಹೋರಾಟಗಳ ಬಗ್ಗೆ ಬಂದಿರುವ ಮುಖ್ಯ ಬರಹಗಳ ಓದಿ ಅವುಗಳ ಸಾರವನ್ನು ಈ ಕಥನದಲ್ಲಿ ಬಳಸಿಕೊಂಡಿದ್ದಾರೆ. ಹೀಗೆ ನಾನಾ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ತಾತ್ವಿಕ ವಿಶ್ಲೇಷಣೆಗೆ ಒಳಪಡಿಸಿ, ತಮ್ಮ ಆಕರ್ಷಕ ಭಾಷೆಯಲ್ಲಿ ಈ ರಾಜಕೀಯ ಚರಿತ್ರೆಯ ಕಥನವನ್ನು ಕಟ್ಟಿಕೊಟ್ಟಿದ್ದಾರೆ. ಈ ಮೂಲಕ ಕರ್ನಾಟಕದ ಸಮಾಜವಾದಿ ರಾಜಕಾರಣ ಹಾಗೂ ಚಳುವಳಿಗಳ ಬಗ್ಗೆ ಒಂದು ಉಪಯುಕ್ತವಾದ ಹೊರಳು ನೋಟವನ್ನು ಒದಗಿಸಿದ್ದಾರೆ. ಕರ್ನಾಟಕದ ಅಷ್ಟು ಚರ್ಚೆಗೆ ಬಾರದ ಒಂದು ರಾಜಕೀಯದ ಮುಖವನ್ನು ಹೊರತೆಗೆದಿದ್ದಾರೆ. ಚರಿತ್ರೆಯ ಸೊಂಡೂರು, ಚಳುವಳಿಯ ಸಂದರ್ಭದ ಸೊಂಡೂರು ಹಾಗೂ ಈಗಿನ ಗಣಿಗಾರಿಕೆಗೂ ಗಣಿಹಗರಣಗಳಿಗೂ ಕಾರಣವಾಗಿರುವ ಸೊಂಡೂರು-ಹೀಗೆ ಸೊಂಡೂರಿನ ಮೂರು ಅವಸ್ಥೆಗಳನ್ನು ಹಿಡಿದುಕೊಟ್ಟಿದ್ದಾರೆ. ಚಳವಳಿಗೆ ಸಂಬಂಧಿಸಿದ ಅಪರೂಪದ ಫೋಟೊಗಳನ್ನು ಒದಗಿಸಿದ್ದಾರೆ. ಗ್ರಂಥಸೂಚಿಯನ್ನೂ ವಿಷಯಸೂಚಿಯನ್ನೂ ಒದಗಿಸಿದ್ದಾರೆ. ಒಟ್ಟಿನಲ್ಲಿ ಈ ಕೃತಿಯನ್ನು ಕರ್ನಾಟಕದ ಚರಿತ್ರೆ, ರಾಜಕಾರಣ ಹಾಗೂ ಚಳುವಳಿಗಳ ಅಧ್ಯಯನದಲ್ಲಿ ಮಹತ್ವದ ಆಕರಗ್ರಂಥವಾಗಿ ಬಳಕೆಯಾಗುವಂತೆ ರೂಪಿಸಿದ್ದಾರೆ. ಈ ಕೆಲಸ ಮಾಡಿದ ಅರುಣ್ ಅವರನ್ನು ಅಭಿನಂದಿಸುತ್ತೇನೆ.

ಬೇರೆ ಬೇರೆ ರಾಜಕೀಯ ಪಕ್ಷಗಳಿಂದಲೂ ಸಂಘಟನೆಗಳಿಂದಲೂ ಕರ್ನಾಟಕದಲ್ಲಿ ಹಲವಾರು ಭೂಹೋರಾಟಗಳು ನಡೆದಿವೆ. ಅವುಗಳಲ್ಲಿ ಸೊಂಡೂರು ಭೂಹೋರಾಟವು ವಿಶಿಷ್ಟವಾದುದು. ಇದು ಒಬ್ಬ ಭೂಸ್ವಾಮಿಯ ವಿರುದ್ಧ ಮಾತ್ರವಲ್ಲದೆ, ಒಬ್ಬ ಮಾಜಿ ದೊರೆಯೂ ಹಾಲಿ ಅಧಿಕಾರದಲ್ಲಿದ್ದ ಮಂತ್ರಿಯ ವಿರುದ್ಧವೂ ಸಂಘಟನೆಗೊಂಡ ಚಳುವಳಿಯೂ ಆಗಿತ್ತು. ಸೊಂಡೂರು ಒಂದು ಸ್ವತಂತ್ರ ಪ್ರಾಂತ್ಯವಾಗಿದ್ದು, ೧೯೪೭ರಲ್ಲಿ ಬ್ರಿಟಿಶರು ರಾಜಕೀಯ ಅಧಿಕಾರ ಬಿಟ್ಟುಕೊಟ್ಟ ಬಳಿಕ ಭಾರತದೊಳಗೆ ವಿಲೀನಗೊಳ್ಳಲು ನಿರಾಕರಿಸಿದ ಪ್ರಾಂತ್ಯಗಳಲ್ಲಿ ಒಂದು. ಅದು ಕಾಂಗ್ರೆಸ್ ಚಳುವಳಿಯನ್ನು ನಿಷೇಧಿಸಿತ್ತು. ಅದು ಕೋಟ್ಯಂತರ ಬೆಲೆಬಾಳುವ ಕಬ್ಬಿಣದ ಅದುರಿನ ಬೆಟ್ಟಗಳನ್ನೂ ಘನವಾದ ಕಾಡನ್ನೂ ಸಾವಿರಾರು ಎಕರೆ ಜಮೀನನ್ನೂ ಪಡೆದಿತ್ತು. ಅದರಲ್ಲಿ ಇಲ್ಲಿನ ಸುಪ್ರಸಿದ್ಧ ಕುಮಾರಸ್ವಾಮಿಯ ಗುಡಿಗೆ ಸೇರಿದ ಭೂಮಿಯೂ ಸೇರಿತ್ತು. ಹೀಗಾಗಿ ಈ ಭೂಹೋರಾಟದಲ್ಲಿ ಕುಮಾರಸ್ವಾಮಿ ದೈವವೂ ಒಂದು ಪಾತ್ರವಾಗಿದೆ. ಹೀಗೆ ರಾಜಕಾರಣ, ಧರ್ಮ ಹಾಗೂ ಆರ್ಥಿಕ ಆಯಾಮಗಳನ್ನು ಉಳ್ಳ ಈ ಭೂಹೋರಾಟವು ವಿಶಿಷ್ಟವಾದುದು. ಈ ಹೋರಾಟದ ರೂವಾರಿಗಳಲ್ಲಿ ಮುಖ್ಯರಾದವರು ಕೆ.ಜಿ. ಮಹೇಶ್ವರಪ್ಪ, ಎಲಿಗಾರ ತಿಮ್ಮಪ್ಪ, ಯಜಮಾನ್ ಶಾಂತರುದ್ರಪ್ಪ, ಎಸ್.ಎಸ್. ಕುಮಟ ಅವರು. ಇವರು ಕರ್ನಾಟಕದ ಸಮಾಜವಾದಿ ಚಳವಳಿಯಲ್ಲಿ ಅಷ್ಟೊಂದು ಪ್ರಸಿದ್ಧಿ ಪಡೆಯದ ಅಜ್ಞಾತರು. ಆದರೆ ಬಹಳ ಶ್ರದ್ಧೆಯಿಂದ ತಮ್ಮನ್ನು ತೊಡಗಿಸಿಕೊಂಡು ಹೋರಾಟ ಮಾಡಿದವರು. ಇಂತಹವರ ಪಾತ್ರವನ್ನು ಈ ಕೃತಿಯು ಇಲ್ಲಿ ಎತ್ತಿತೋರಿಸಿದೆ. ಈ ಹೋರಾಟದಲ್ಲಿ ಬಿಹಾರ ಮತ್ತು ಮಹಾರಾಷ್ಟ್ರಗಳಿಂದ ಸಮಾಜವಾದಿ ನಾಯಕರು ಬಂದು ಭಾಗವಹಿಸಿದರು. ಕರ್ನಾಟಕದ ಲೇಖಕರೂ ಚಿತ್ರನಟಿಯರೂ ಛಾಯಾಚಿತ್ರಗಾರರೂ ಇದಕ್ಕೆ ಬೆಂಬಲ ಸೂಚಿಸಿದರು. ವಿಶೇಷವೆಂದರೆ, ನಾಡಿನ ಬೇರೆಬೇರೆ ಪತ್ರಿಕೆಗಳು ಈ ಹೋರಾಟದಲ್ಲಿ ಪರವಿರೋಧದ ನಿಲುವನ್ನು ತಾಳಿ ವಹಿಸಿದ ಪಾತ್ರ. ಈ ಕುರಿತ ಅಧ್ಯಾಯವು ಕುತೂಹಲಕರವಾಗಿದೆ. ಕೊನೆಗೆ ಈ ಹೋರಾಟವು ಒಂದು ಕಾದಂಬರಿಗೆ ಕೂಡ ವಸ್ತುವಾಯಿತು. ಎಲ್ಲ ಕಾರಣಕ್ಕೆ ಇದೊಂದು ಅಪೂರ್ವ ಮಾಹಿತಿ ಮತ್ತು ವಿಶ್ಲೇಷಣೆಯುಳ್ಳ ಕೃತಿಯಾಗಿದೆ.

ಲೋಹಿಯಾ ಪೀಠದ ಯೋಜನೆಗಳ ಹಿಂದೆ ಆಡಳಿತಾತ್ಮಕವಾಗಿ ಮಾತ್ರವಲ್ಲದೆ ಸೈದ್ಧಾಂತಿಕವಾಗಿ ಕೂಡ ಬೆಂಬಲವಾಗಿ ನಿಂತವರು ಮಾನ್ಯ ಕುಲಪತಿಯವರಾದ ಡಾ. ಬಿ.ಎ. ವಿವೇಕ ರೈ ಅವರು. ತಮ್ಮ ಸಮಾಜವಾದಿ ಒಲವಿನ ಕಾರಣ, ಅವರು ಪೀಠದ ಯೋಜನೆಗಳನ್ನು ರೂಪಿಸಲು ಬೇಕಾದ ಎಲ್ಲ ಮಾರ್ಗದರ್ಶನವನ್ನು ನೀಡಿದರು. ಅವರ ವಿಶ್ವಾಸವನ್ನು ಹಾಗೂ ಬೌದ್ಧಿಕ ನೆರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಪ್ರಸ್ತುತ ಕೃತಿಯು ಹೀಗೆ ಉಪಯುಕ್ತವಾಗಿ ರೂಪುಗೊಳ್ಳಲು ಕಾರಣಕರ್ತರಾದವರು ಪೀಠದ ಸಲಹಾ ಸಮಿತಿ ಸದಸ್ಯರಾದ ಡಾ.ಕಾಳೇಗೌಡ ನಾಗವಾರ ಹಾಗೂ ಪ್ರೊ. ಕೆ. ಫಣಿರಾಜ ಅವರು. ಅವರು ಲೇಖಕರ ಜತೆ ನಡೆಸಿದ ಚರ್ಚೆಯಿಂದ ಮತ್ತು ಕೊಟ್ಟ ಸೂಚನೆಗಳ ಕಾರಣದಿಂದ ಈ ಕೃತಿಗೆ ಪ್ರಯೋಜನವಾಗಿದೆ. ಈ ಇಬ್ಬರು ಚಿಂತಕರ ನೆರವನ್ನು ಇಲ್ಲಿ ನೆನೆಯುತ್ತೇನೆ. ಈ ಪುಸ್ತಕದ ಅಕ್ಷರ ಜೋಡಣೆ ಮಾಡಿದವರು ಫಾಂಟ್‌ಲೈನ್ ಗ್ರಾಫಿಕ್ಸಿನ ಉಲ್ಲಾಸ್. ಜಿ, ಜಿ.ಶಿವಕುಮಾರ್ ಅವರು. ಇದರ ವಿನ್ಯಾಸವನ್ನು ಮಾಡಿದವರು ಸುಜ್ಞಾನಮೂರ್ತಿ ಅವರು. ಮುಖಪುಟವನ್ನು ರಚಿಸಿದವರು ಕೆ.ಕೆ.ಮಕಾಳಿ ಅವರು. ಈ ಪುಸ್ತಕವನ್ನು ಪ್ರೀತಿಯಿಂದಲೂ ವಿಶ್ವಾಸದಿಂದಲೂ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರು ಪ್ರಕಟಿಸುತ್ತಿರುವರು. ಇವರೆಲ್ಲರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಈ ಪುಸ್ತಕವನ್ನು ಪ್ರೀತಿಯಿಂದ ಬರಮಾಡಿಕೊಳ್ಳಬೇಕು ಎಂದು ಓದುಗರಲ್ಲಿ ವಿನಂತಿಸುತ್ತೇನೆ.

**ರಹಮತ್ ತರೀಕೆರೆ**

ಸಂಚಾಲಕರು

ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠ

# ಬಯಲನು ತುಂಬುವ ಆಲಯದ ಬೆಳಕಿನ ಬೀಜಗಳು

ಕನ್ನಡ ವಿಶ್ವವಿದ್ಯಾಲಯ ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ, ಗಟ್ಟಿಗೊಳಿಸುವ, ಹರಡುವ ಕಾಯಕವನ್ನು ನೋಂಪಿಯಂತೆ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಒಂದು ಆಡುಂಬೊಲವಾಗಿ ಕಾರ್ಯ ನಿರ್ವಹಿಸುತ್ತಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳ ಆಚೆಗೆ ಅನೂಹ್ಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳು ಮೂಡಿಬಂದಿವೆ. ಇದು ನಿರಂತರ ನಡೆಯಬೇಕಾದ ಬಹುದಾರಿಗಳ ಮಹಾಯಾನ. ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿ ಜಾಗತೀಕರಣದ ಈ ಸಂಕ್ರಮಣ ಸ್ಥಿತಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ರಚನೆ ಮತ್ತು ಕಾರ್ಯಗಳು ಸವಾಲಿನವು ಮತ್ತು ಜವಾಬ್ದಾರಿಯವೂ ಆಗಿವೆ. ‘ಕನ್ನಡ’ ಎನ್ನುವ ಪರಿಕಲ್ಪನೆಯನ್ನು ಭಾಷೆ, ಸಾಹಿತ್ಯ, ಬದುಕು ಮತ್ತು ಅದರ ಆಧುನಿಕ ಸನ್ನಿವೇಶಗಳಲ್ಲಿ ಅರ್ಥೈಸುವ ಮತ್ತೆ ಕಟ್ಟುವ ಕೆಲಸವನ್ನು ಕನ್ನಡ ವಿಶ್ವವಿದ್ಯಾಲಯ ಒಂದು ಕಾಯಕದಂತೆ ಕೈಗೆತ್ತಿಕೊಂಡಿದೆ. ಕನ್ನಡ ಮತ್ತು ಅಭಿವೃದ್ಧಿ ಎನ್ನುವ ಎರಡು ಪರಿಕಲ್ಪನೆಗಳು ಎದುರುಬದುರಾಗುವ ಆತಂಕ ಒಂದು ಕಡೆಯಾದರೆ, ಅವು ಒಂದನ್ನೊಂದು ಪ್ರಭಾವಿಸಿ ನೆರವಾಗುವ ಆವರಣವನ್ನು ನಿರ್ಮಾಣ ಮಾಡುವುದು ಇನ್ನೊಂದೆಡೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯವು ಈ ಸಂಬಂಧಿಯಾದ ಹೊಸ ಆಲೋಚನೆಗಳ ಸಂವಾದ ಮತ್ತು ಅದರ ಆನ್ವಯಿಕ ಸಾಧನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಬಯಸಿದೆ.

ಮಾಹಿತಿ ತಂತ್ರಜ್ಞಾನವು ಜಾಗತೀಕರಣದ ಪ್ರಮುಖ ಅಸ್ತ್ರವಾಗಿ ಪ್ರಯೋಗವಾಗುತ್ತಿರುವಾಗ ಈ ಅಸ್ತ್ರವನ್ನು ಕನ್ನಡದ ಅಭಿವೃದ್ಧಿಗಾಗಿ ಬಳಸುವ ಹೊಣೆಗಾರಿಕೆಯು ಕನ್ನಡ ವಿಶ್ವವಿದ್ಯಾಲಯದ ಮೇಲೆ ಇದೆ. ಕನ್ನಡ ತಂತ್ರಾಂಶಗಳ ಅಭಿವೃದ್ಧಿಯ ಎಲ್ಲಾ ತೊಡಕುಗಳನ್ನು ನಿವಾರಿಸಿಕೊಂಡು ಮುಂದೆ ಸಾಗಬೇಕೆನ್ನುವ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯ ಈ ಸಂಬಂಧ ಸಾಹಿತಿಗಳ, ಭಾಷಾತಜ್ಞರ, ತಂತ್ರಜ್ಞರ ಸಮಾಲೋಚನೆಯನ್ನು ನಡೆಸಿ ಕನ್ನಡವು ಸರ್ವವ್ಯಾಪಿಯಾಗಿ ಬೆಳೆಯಲು ಶ್ರಮಿಸುತ್ತಿದೆ.

ಕನ್ನಡವು ಕಾಗದರಹಿತ ಮಾಧ್ಯಮದಲ್ಲಿ ಕಾಣಿಸಿಕೊಳ್ಳುತ್ತಿರುವಾಗಲೂ ಪುಸ್ತಕ ರೂಪದಲ್ಲಿ ಕನ್ನಡ ಕೃತಿಗಳ ಪ್ರಕಟಣೆ ಸಮಾನಾಂತರವಾಗಿ ಕ್ರಿಯಾಶೀಲವಾಗಿ ನಡೆಯುವುದು ಬಹಳ ಮುಖ್ಯವಾದದ್ದು, ತಾಂತ್ರಿಕ-ಮೌಖಿಕ ಮಾಧ್ಯಮದಲ್ಲಿ ಕನ್ನಡವು ಬಳಕೆಯಾಗುತ್ತಿರುವಾಗಲೇ ಕಾಗದದಲ್ಲಿ ಕನ್ನಡ ಅಕ್ಷರಗಳು ಮುದ್ರಣಗೊಂಡು ಕಣ್ಣಿಗೆ, ಕಿವಿಗೆ ಮತ್ತು ಮನಸ್ಸಿಗೆ ಕನ್ನಡವನ್ನು ಸಂವಹನಗೊಳಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಿದೆ. ಇಲ್ಲಿ ಪ್ರಕಟಗೊಳ್ಳುವ ಮಾಧ್ಯಮದೊಂದಿಗೆ ಅಭಿವ್ಯಕ್ತಿಗೊಳ್ಳುವ ಚಿಂತನಾ ಶರೀರವೂ ಮುಖ್ಯವಾದದ್ದು, ಭಾಷೆ, ಸಾಹಿತ್ಯ, ಕಲೆಗಳು, ವಿಜ್ಞಾನ, ತಂತ್ರಜ್ಞಾನ, ಸಮಾಜವಿಜ್ಞಾನ ಎನ್ನುವ ಬೌದ್ಧಿಕ ಗಡಿ ರೇಖೆಗಳನ್ನು ಕಳಚಿಕೊಂಡು ಕನ್ನಡ ಜ್ಞಾನವು ಕನ್ನಡ ವಿಶ್ವವಿದ್ಯಾಲಯದಲ್ಲಿ ರೂಪುಗೊಳ್ಳುವ ಮತ್ತು ಪ್ರಕಟಗೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ಡಾ.ರಾಮಮನೋಹರ ಲೋಹಿಯಾ ಅಧ್ಯಯನ ಪೀಠದ ಮಹತ್ವದ ಯೋಜನೆಯಾದ ಸೊಂಡೂರು ಭೂಹೋರಾಟವು ಅಪೂರ್ವ ಮಾಹಿತಿ ಮತ್ತು ಚಿಂತನೆಗಳ ಶರೀರವು ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿರುವುದು ತುಂಬಾ ಧನ್ಯತೆಯ ಸಂಗತಿ. ಕರ್ನಾಟಕದ ಸಮಾಜವಾದಿ ಚಿಂತನೆಗೆ ನೆಲೆಬೆಲೆಗಳನ್ನು ತಂದುಕೊಟ್ಟ ಡಾ.ರಾಮಮನೋಹರ ಲೋಹಿಯಾ ಅವರ ಸಮಾಜವಾದಿ ಚಿಂತನೆಯ ಪ್ರಭಾವ ಅನೇಕ ಕ್ಷೇತ್ರಗಳಲ್ಲಿ ಆಳವಾಗಿ ಬೇರೂರಿದೆ. ಕನ್ನಡ ಸಾಹಿತ್ಯಕ್ಕೆ ಸಾಮಾಜಿಕ ಹೋರಾಟದ ಶಕ್ತ ಆಯಾಮವನ್ನು ದೊರಕಿಸಿಕೊಟ್ಟದ್ದು ಲೋಹಿಯಾ ಚಿಂತನೆ. ಹಣ, ಅಧಿಕಾರ ಮತ್ತು ಭೋಗ ಇವು ಕರ್ನಾಟಕದ ಆಧುನಿಕ ಸಮಾಜದ ಪ್ರಭುತ್ವಾತ್ಮಕ ಧೋರಣೆಯಾಗಿರುವ ಇಂದಿನ ಸಂದರ್ಭದಲ್ಲಿ, ಭೂಗತವಾಗಿರುವ ಲೋಹಿಯಾ ಚಿಂತನೆಯ ಹೋರಾಟದ ನೆನಪುಗಳನ್ನು ಉತ್ಖನನ ಮಾಡಿ ಮತ್ತೆ ಕಟ್ಟುವ ಸಾಹಸವನ್ನು ಲೋಹಿಯಾ ಪೀಠ ಕೈಗೆತ್ತಿಕೊಂಡಿದೆ. ಸೊಂಡೂರು ಭೂಹೋರಾಟ ಎನ್ನುವ ಈ ಗ್ರಂಥ ಅಂಥ ಸಾಹಸಮಯ ಉತ್ಖನನದ ಫಲ. ಲೋಹಿಯಾ ಅಧ್ಯಯನ ಪೀಠದ ಸಂಚಾಲಕರಾದ ಡಾ.ರಹಮತ್ ತರೀಕೆರೆ ಅವರು ತಮ್ಮ

ಸಮಾಜವಾದಿ ಚಿಂತನೆ ಮತ್ತು ಕಾರ್ಯಕ್ಷಮತೆಯ ಫಲವಾಗಿ ಈ ಯೋಜನೆಯ ಕನಸನ್ನು ನನಸಾಗಿಸಿದ್ದಾರೆ. ತುಂಬಾ ಮಹತ್ವದ ಹೋರಾಟವೊಂದರ ಸಮಗ್ರ ಚಿತ್ರಣ ಮೌಖಿಕ ಪರಂಪರೆಯಿಂದ ಲಿಖಿತ ಪರಂಪರೆಗೆ ರೂಪಾಂತರಗೊಂಡಿದೆ. ದಾಖಲಾಗದ ನೂರಾರು ಸಂಗತಿಗಳು ಈ ಯೋಜನೆಯ ಫಲವಾಗಿ ಮೊದಲಬಾರಿಗೆ ಬೆಳಕು ಕಾಣುತ್ತಿವೆ. ಇದು ತುಂಬಾ ಜವಾಬ್ದಾರಿಯ ಹಾಗೂ ಅಪಾಯಕಾರಿಯಾದ ಕೆಲಸವೂ ಹೌದು. ಸತ್ಯದ ಅನೇಕ ಕಠೋರ ಸಂಗತಿಗಳು ದಾಖಲೆಗೆ ಒಳಗಾಗಲು ಹಿಂಜರಿಯುತ್ತವೆ. ಆದರೆ ಈ ಎಲ್ಲ ಆತಂಕಗಳನ್ನು ನಿವಾರಿಸಿಕೊಂಡು ಈ ಯೋಜನೆ ಪೂರ್ಣಗೊಂಡಿದೆ ಮತ್ತು ಅದರ ಫಲವಾಗಿ ಈ ಗ್ರಂಥ ಪ್ರಕಟವಾಗುತ್ತಿದೆ. ಸೃಜನಶೀಲ ಮನಸ್ಸಿನ ಒಳ್ಳೆಯ ಕವಿ, ಸಂಶೋಧಕ ಮನಸ್ಸಿನ ತರುಣ ಶ್ರೀ ಅರುಣ್ ಜೋಳದ ಕೂಡ್ಲಿಗಿ ಬಹು ಕಷ್ಟಕರವಾದ ಈ ಯೋಜನೆಯನ್ನು ಪ್ರೀತಿ ಮತ್ತು ಪರಿಶ್ರಮದಿಂದ ಸಮರ್ಥವಾಗಿ ನಿರ್ವಹಿಸಿ ಪೂರ್ಣಗೊಳಿಸಿ ಪ್ರಕಟಣೆಗೆ ಸಿದ್ಧಪಡಿಸಿ ಕೊಟ್ಟಿದ್ದಾರೆ. ಸಮಾಜವಾದಿ ಚಿಂತನೆಯ ಕವಿ ಮನಸ್ಸು, ಸತ್ಯವನ್ನು ನಿರ್ದಾಕ್ಷಿಣವಾಗಿ ಹೇಳುವ ಧೈರ್ಯ ಮತ್ತು ಸಾಹಸವನ್ನು ಕಾಣುವ ಹಂಬಲ ಈ ಎಲ್ಲ ಶಕ್ತಿಗಳ ಫಲವಾಗಿ ಈ ಕೃತಿ ರೂಪುಗೊಂಡಿದೆ. ಶ್ರೀ ಅರುಣ್ ಜೋಳದಕೂಡ್ಲಿಗಿ ಅವರ ಸಾಹಸದ ಸಂಶೋಧನೆ ಮತ್ತು ಕೃತಿ ರಚನೆಗಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆಯ ಮಾರ್ಗದರ್ಶಕರಾಗಿ ಹೆಜ್ಜೆ ಹೆಜ್ಜೆಗೂ ಸಲಹೆ ಸೂಚನೆಗಳನ್ನು ಕೊಟ್ಟು ತುಂಬಾ ಅಪೂರ್ವವಾದ ಇಂತಹ ಸಂಪುಟವೊಂದು ನಿರ್ಮಾಣವಾಗಲು ಕಾರಣಕರ್ತರಾದ ಲೋಹಿಯಾ ಪೀಠದ ಸಂಚಾಲಕರಾದ ಡಾ. ರಹಮತ್ ತರೀಕೆರೆ ಅವರ ಪ್ರಯತ್ನ, ಸಾಧನೆ ಮತ್ತು ಪರಿಶ್ರಮಕ್ಕಾಗಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಲೋಹಿಯಾ ಪೀಠದ ಸಲಹಾ ಸಮಿತಿ ಸದಸ್ಯರಾದ ಡಾ.ಕಾಳೇಗೌಡ ನಾಗವಾರ ಮತ್ತು ಪ್ರೊ.ಕೆ. ಫಣಿರಾಜ್ ಅವರು ಈ ಯೋಜನೆಯ ರೂಪುರೇಷೆಗಳಲ್ಲಿ ತಮ್ಮ ಅಮೂಲ್ಯವಾದ ಸಲಹೆ ಸಹಕಾರವನ್ನು ಕೊಟ್ಟಿದ್ದಾರೆ. ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ. ಪ್ರಾದೇಶಿಕವಾಗಿ ಲೋಹಿಯಾ ಚಿಂತನೆಯೊಂದು ಉತ್ಪನನಗೊಂಡು ಸಾಕಾರಗೊಂಡು ಸಂಕಥನವೊಂದರ ಅಪೂರ್ವ ದಾಖಲೆಯಾದ ಸೊಂಡೂರು ಭೂಹೋರಾಟ ಗ್ರಂಥವು, ಜಾಗತೀಕರಣದಿಂದ ದಿಕ್ಕು ತಪ್ಪಿರುವ ಆಧುನಿಕ ಕರ್ನಾಟಕಕ್ಕೆ ಮಾರ್ಗದರ್ಶಿಯಾಗಲಿ ಎಂದು ಹಾರೈಸುತ್ತೇನೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಸುಜ್ಞಾನಮೂರ್ತಿ ಅವರಿಗೆ ಅಭಾರಿಯಾಗಿದ್ದೇನೆ.

**ಬಿ.ಎ. ವಿವೇಕ ರೈ**
ಕುಲಪತಿ

## ೧. ಸೊಂಡೂರು: ಪರಿಸರ (1)

"ಅಗಲ ಕಿರಿದಾದ ಅತಿ ಉದ್ದವಿರುವ ಕಣಿವೆಯಲ್ಲಿ ಎತ್ತರದ ಬೆಟ್ಟಗಳು ವಾಯುವ್ಯದಿಂದ ಆಗ್ನೇಯ ದಿಕ್ಕಿನವರೆಗೆ ಸಮಾನಾಂತರವಾಗಿವೆ. ಅವುಗಳಿಗೆ ಲಂಬವಾದ ಒಂದು ಸಣ್ಣ ನದಿ ಮಧ್ಯದ ಊರು ಸೊಂಡೂರು" ಎಂದು ೧೮೮೯ರಲ್ಲಿ ಬ್ರಿಟಿಷ್ ಅಧಿಕಾರಿ ಬ್ರೂಸ್‌ಫೂಟ್ ಸೊಂಡೂರಿನ ಬಗ್ಗೆ ಉದ್ಧರಿಸುತ್ತಾನೆ. ೧೯೩೦ರಲ್ಲಿ ಇಲ್ಲಿಗೆ ಭೇಟಿ ನೀಡಿದ ಮಹಾತ್ಮಗಾಂಧಿ 'ಸೊಂಡೂರು ಒಂದು ಓಯಸಿಸ್' ಸೆಪ್ಟೆಂಬರ್ ನಲ್ಲಿ ಅದರ ಸೌಂದರ್ಯ ನೋಡು ಎಂದು ಹೇಳುತ್ತಾರೆ. ಈ ಮಾತುಗಳನ್ನು ನೆನೆಯುತ್ತ ಈಗಿನ ಸೊಂಡೂರನ್ನು ಪ್ರವೇಶಿಸಿದರೆ, ಈ ಮಾತುಗಳು ಆಗಿನ ಕಾಲಕ್ಕೆ ಮಾತ್ರ ಎನ್ನುವಂತಹ ಭೌಗೋಳಿಕ ಪರಿಸರ ಈಗಿದೆ. ಸೊಂಡೂರು ಬಳ್ಳಾರಿ ಜಿಲ್ಲೆಯ ತಾಲೂಕು ಕೇಂದ್ರ. ಬಳ್ಳಾರಿಯಿಂದ ನೈರುತ್ಯಕ್ಕೆ ಸುಮಾರು ೫೪ ಕಿ.ಮೀ. ದೂರದಲ್ಲಿದೆ. ಬೆಂಗಳೂರಿನಿಂದ ವಾಯುವ್ಯದಲ್ಲಿ ೩೫೪ ಕಿ.ಮೀ. ಅಂತರವಿದೆ. ತಾಲೂಕಿನ ಉತ್ತರ ಮತ್ತು ಪಶ್ಚಿಮಕ್ಕೆ ಹೊಸಪೇಟೆ, ದಕ್ಷಿಣಕ್ಕೆ ಕೂಡ್ಲಿಗಿ, ಪೂರ್ವಕ್ಕೆ ಬಳ್ಳಾರಿ ಹಾಗೂ ಮೊಳಕಾಲ್ಮೂರು

(ಚಿತ್ರದುರ್ಗ ಜಿಲ್ಲೆ) ತಾಲೂಕುಗಳಿವೆ. ಸಮುದ್ರ ಮಟ್ಟದಿಂದ ೩೦೦೦ ಅಡಿ ಎತ್ತರದಲ್ಲಿದೆ. ಇಲ್ಲಿನ ಅಕ್ಷಾಂಶ ೧೪.೫೮°, ಜಿಲ್ಲೆಯ ಮಲೆನಾಡು. ಈ ಜಿಲ್ಲೆಯ ಪುಟ್ಟ ಕಾಶ್ಮೀರ, ಬೆಟ್ಟ ಗುಡ್ಡಗಳಿಂದಾವೃತವಾದ ಸುಂದರ ನಾಡು. ಅದು ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು ಉತ್ತಮ ನೆಲ ಉಲ್ಲೇಖಿಸಲಾಗುತ್ತದೆ. ಇಂತಹ ರಮ್ಯ ಕಲ್ಪನೆ ಈಗಿನ ಸೊಂಡೂರಿನೊಂದಿಗೆ ಹೊಂದಿಕೊಳ್ಳಲಾರದು. ಸೊಂಡೂರನ್ನು ಒಳಗೊಂಡ ಬಳ್ಳಾರಿ ಜಿಲ್ಲೆಯು ಪೂರ್ವಭಾಗಕ್ಕೆ ಆಂಧ್ರಪ್ರದೇಶದ ಅನಂತಪುರ ಹಾಗೂ ಕರ್ನೂಲ್, ಪಶ್ಚಿಮಕ್ಕೆ ಧಾರವಾಡ, ದಕ್ಷಿಣಕ್ಕೆ ಚಿತ್ರದುರ್ಗ, ಉತ್ತರಕ್ಕೆ ರಾಯಚೂರು ಜಿಲ್ಲೆಗಳು ಗಡಿಗಳಾಗಿವೆ.

[1]

ಈ ಪ್ರದೇಶ ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾಗಿದ್ದು, ಬೆಟ್ಟಗಳಿಂದ ಆವರಿಸಿದೆ. ಸೊಂಡೂರು, ಕೂಡ್ಲಿಗಿ, ಹಡಗಲಿ, ಹರಪನಹಳ್ಳಿ, ಗುಡೆಕೋಟೆ, ಹೊಸಪೇಟೆ, ಕಂಪ್ಲಿ, ದರೋಜಿ, ಕುರುಗೋಡು, ಬಳ್ಳಾರಿ ಮುಂತಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಬೆಟ್ಟಗಳಿವೆ. ಸೊಂಡೂರು ಕುಮಾರಸ್ವಾಮಿ ಬೆಟ್ಟ ಶಿಖರ (೧೦೩೬ ಮೀ) ರಾಮನಮಲೈ ಶಿಖರ (೯೯೨ ಮೀ) ಮತ್ತು ಜಂಬುನಾಥ ಶಿಖರ (೯೦೮ ಮೀ)ಗಳಿವೆ. ಬೆಟ್ಟ ಸಾಲುಗಳ ಪೂರ್ವಭಾಗದಲ್ಲಿ ವಾಯುವ್ಯದಿಂದ ಆಗ್ನೇಯಕ್ಕೆ (ಹಗರಿಯಿಂದ ದರೋಜಿ) ಹಬ್ಬಿರುವ ಸುಗ್ಗಲದೇವಿ ಬೆಟ್ಟದಲ್ಲಿ ತಾಮ್ರದ ಅದಿರು ಇರುವುದರಿಂದ ತಾಮ್ರದ ಪರ್ವತವೆಂದು ಕರೆಯುತ್ತಾರೆ. ಕೂಡ್ಲಿಗಿಯಲ್ಲಿ ಆನೆಕಲ್ಲು ದುರ್ಗ (೨೭೪ ಮೀ) ಜರಿಮಲೆ ದುರ್ಗ (೮೩೮ ಮೀ) ಎಂಬ ಎರಡು ಬೆಟ್ಟಸಾಲುಗಳಿವೆ. ಗುಡೇಕೋಟೆಯಿಂದ ಈಶಾನ್ಯಕ್ಕೆ ಹರಡಿರುವ ಗುಡೇಕೋಟೆ ಬೆಟ್ಟ, ಚಿನ್ನಹಗರಿ ನದಿ ದಾಟಿ ಚಿತ್ರದುರ್ಗ ಜಿಲ್ಲೆಯ ಸೆರಗಿನಲ್ಲಿ ಹಾದು ಹೋಗುತ್ತದೆ. ಹಡಗಲಿ, ಹರಪನಹಳ್ಳಿ ತಾಲೂಕುಗಳಲ್ಲಿ ಮಲ್ಲಪ್ಪನ ಗುಡ್ಡ (೯೭೮ ಮೀ) ತುಂಗಭದ್ರ ದಂಡೆಯ ಹನ್ನೂರಿನ ಬಳಿ ಪ್ರಾರಂಭವಾಗಿ ಆಗ್ನೇಯ ಕಡೆಗೆ ಹೆಚ್ಚಿದೆ. ಮಲ್ಲಪ್ಪನ ಗುಡ್ಡದ ನೈರುತ್ಯಕ್ಕಿರುವ ಕಲ್ಲಪ್ಪನ ಗುಡ್ಡ ವಾಯುವ್ಯದಿಂದ ಈಶಾನ್ಯಕ್ಕೆ ಇದೆ. ನರಸಿಂಹ ದೇವರಗುಡ್ಡ ಸೇರಿದಂತೆ ಈ ಭಾಗದ ಬೆಟ್ಟಸಾಲು ಉಚ್ಚಂಗಿಯಲ್ಲಿ ಕೊನೆಗೊಳ್ಳುತ್ತದೆ. ಈ ಬೆಟ್ಟಗುಡ್ಡಗಳನ್ನು ದೈವೀಕರಿಸಿ ಸೌಂದರ್ಯವನ್ನು ಮೈದುಂಬಿ ವರ್ಣಿಸುವ ಕಾಲ ಒಂದಿತ್ತು. ಈಗ ಬೆಟ್ಟಗಳನ್ನೆಲ್ಲ ಉಪಭೋಗಿ ದೃಷ್ಟಿಯಿಂದ ನೋಡಲಾಗುತ್ತಿದೆ. ತಕ್ಕಡಿಯಲ್ಲಿಟ್ಟು ಮಾರಲು ಬರುವಂತಿದ್ದರೆ ಬೆಟ್ಟಗಳೇ ತಕ್ಕಡಿಯಲ್ಲಿ ಕೂತು ಕಣ್ಮರೆಯಾಗುತ್ತಿದ್ದವು. ಆದರೂ ಬೆಟ್ಟಗಳ ಅಗೆದು ಹಣವಾಗಿಸುವ ಕಾರ್ಯಕ ನಡೆದಿದೆ. ದೂರದ ಬೆಟ್ಟ ನುಣ್ಣಗೆ ಸವೆಯುತ್ತಿವೆ.

ಈ ಭಾಗದಲ್ಲಿ ಮರಳುಮಿಶ್ರಿತ ಕೆಂಪುಮಣ್ಣು, ಫಲವತ್ತಾದ ಜೇಡಿಮಣ್ಣು ಹರಡಿದೆ. ಗ್ರೆನಾಯಿಟ್, ಸಿಸ್ಟ್, ಸ್ಯಾಂಜ್‌ಸ್ಟೋನ್, ಜಾಸ್ಪರ್ ಮುಂತಾದ ಶಿಲೆಗಳು ಹಾಗೂ ಬೆಟ್ಟಗಳಲ್ಲಿ ಕಬ್ಬಿಣ, ಬಂಗಾರ, ತಾಮ್ರದ ಅದಿರಿನ ಮಿಶ್ರಣದ ಗಣಿಗಳಿವೆ. ಸೊಂಡೂರಿನ ಸುತ್ತಮುತ್ತ ಹಾಗೂ ನಂದಿಹಳ್ಳಿಯಿಂದ ಹೊಸಪೇಟೆಯ ವರೆಗಿನ ೪೦ ಕಿ.ಮೀ. ಉದ್ದ ಹಾಗೂ ೧೫.೨೦ ಕಿ.ಮೀ. ಅಗಲವುಳ್ಳ ಹಾಗೂ ಎತ್ತರವಾದ ಪರ್ವತಗಳಲ್ಲಿ ದೊರೆಯುವ ಐರನ್ ಪಾರ್ಮೇಶನ್ ಎಂಬ ಕಲ್ಲಲ್ಲಿ ಕಬ್ಬಿಣದ ನಿಕ್ಷೇಪಗಳು ದೊರೆಯುತ್ತವೆ. ಇಲ್ಲಿ ದೊರೆಯುವ ಅದಿರು ಹೆಮ ಟೈಟ್ ರೂಪದಲ್ಲಿರುವ ಉತ್ತಮ ದರ್ಜೆಗೆ ಸೇರಿದ್ದು. ಮ್ಯಾಂಗನೀಸ್ ಅದಿರಿನ ನಿಕ್ಷೇಪಗಳು ಡೇರಸ್, ಫಿಲೈಟ್ ಎಂಬ ಕಲ್ಲುಗಳಲ್ಲಿ ದೊರೆಯುತ್ತದೆ. ಈ ನಿಕ್ಷೇಪಗಳು ಸುಬ್ರಾಯನಹಳ್ಳಿ ಮತ್ತು ರಾಮಘಡ ವ್ಯಾಪ್ತಿಗೆ ಸೇರಿರುತ್ತದೆ. ಈ ಅದಿರಿನ ವಿಶೇಷ ಗುಣವೆಂದರೆ ನಿಗದಿತ ಅಂಶಕ್ಕಿಂತ ಕಡಿಮೆ ಪ್ರಮಾಣದಲ್ಲಿ ರಂಜಕ ಹಾಗೂ ಗಂಧಕಗಳನ್ನು ಹೊಂದಿರುವುದು. ಈ ಕಾರಣಕ್ಕಾಗಿಯೇ ಜಗತ್ತಿನ ಮಾರುಕಟ್ಟೆಯಲ್ಲಿ ಸೊಂಡೂರಿನ ಮ್ಯಾಂಗನೀಸ್ ಅದಿರಿಗೆ ವಿಶೇಷ ಬೇಡಿಕೆ ಇದೆ.

'ಸೊಂಡೂರು' ಎಂಬ ಹೆಸರು ಬಂದ ಬಗೆಗೆ ಹಲವು ಪಾಠಗಳಿವೆ. ಒಂದು: ಪುರಾಣ ಕಾಲದ 'ಸ್ಕಂಧಪುರ' ಕಾಲನಂತರ ಸ್ಕಂದೂರು>ಸಂದೂರು>ಸಂಡೂರು>ಸೊಂಡೂರು ಆಗಿರುವ ಸಾಧ್ಯತೆ ಇದೆ. ಎರಡು: ಸೊಂಡೂರಿನ ಗ್ರಾಮದೇವತೆ 'ಊರಮ್ಮ'ನನ್ನು ಚಂಡಿ ಎಂದು ಕರೆಯುವುದರಿಂದ ಚಂಡಿಯ+ಊರು ಚಂಡೂರು, ಸಂಡೂರು ಆಗಿರಬಹುದು. ಮೂರು: ಸೊಂಡೂರಿನ ಸುತ್ತಲೂ ಹರಡಿಕೊಂಡಿರುವ ಬೆಟ್ಟಗಳು ಆನೆಯ ಸೊಂಡಿಲಿನಂತೆ ಕಾಣುವುದರಿಂದ ಸೊಂಡಿಲ ಊರು>ಸೊಂಡೂರು ಎಂದಾಗಿರುವ ಸಾಧ್ಯತೆಯಿದೆ. ನಾಲ್ಕು; ಗುಡ್ಡ ಬೆಟ್ಟಗಳ ಕಡಿದಾದ ಊರಲ್ಲಿ ಸಂದಿಗಳಿರುವುದರಿಂದ ಸಂದಿಗಳ ಊರು>ಸಂದೂರು> ಸೊಂಡೂರು ಆಗಿರಬಹುದೆಂಬ ನಂಬಿಕೆಯಿದೆ.[2] ಐದು: ಕೆ.ರಾಮದಾಸ್ ತಮ್ಮ 'ಶ್ರೀ ಕುಮಾರಸ್ವಾಮಿಯು ಸಿಕ್ಕಿದ್ದು' ಗ್ರಂಥದಲ್ಲಿ ಸೊಂಡೂರು ಸಂಸ್ಥಾನದ ಆಸ್ಥಾನ

ಕವಿಗಳು ಈ ನಿಸರ್ಗ ಸೌಂದರ್ಯ ನೋಡಿ 'ಸುಂದರ ಪುರ'ವೇ ಮುಂದೆ 'ಸೊಂಡೂರು' ಆಗಿರಬಹುದು ಎಂದು ಊಹಿಸುತ್ತಾರೆ. ಕುಮಾರಸ್ವಾಮಿ ಬೆಟ್ಟದಲ್ಲಿರುವ ಕ್ರಿ.ಶ. ೧೨೦೯ರ ಹೊಯ್ಸಳ ಎರಡನೇ ವೀರಬಲ್ಲಾಳನ ಶಾಸನದಲ್ಲಿ ಸೊಂಡೂರು ಎಂದು ನಮೂದಿಸಲಾಗಿದೆ. ಹೀಗೆ ಪುರಾಣದಿಂದ, ಜನಪದದಿಂದ ಭೌಗೋಳಿಕ ಲಕ್ಷಣದಿಂದ, ಶಿಷ್ಟ, ಸಾಹಿತ್ಯದಿಂದ ಬಂದಿರಬಹುದಾದ 'ಸೊಂಡೂರು' ಈಗ ಗಣಿಗಾರಿಕೆ ಇನ್ನೊಂದು ಹೆಸರು ಎನ್ನುವಷ್ಟರ ಮಟ್ಟಿಗೆ ಪ್ರಚಲಿತದಲ್ಲಿದೆ.

ಇತಿಹಾಸ ಪೂರ್ವ ಕಾಲದಲ್ಲಿ ಮಾನವನಿಗೆ ಪೂರಕ ವಾತಾವರಣವಿತ್ತು. ಈ ಪರಿಸರದಲ್ಲಿರುವ ಬೆಟ್ಟಗಳು, ಅರಣ್ಯ, ವಿವಿಧ ಕಾಡುಪ್ರಾಣಿಗಳು, ಜಲ ಮತ್ತು ಆಯುಧ ತಯಾರಿಕೆಗೆ ತಾಮ್ರ, ಕಬ್ಬಿಣದ ಅದಿರು ಮುಂತಾದವು ಅನುಕೂಲವಾಗಿದ್ದವು. ರೈತರ ಸಾಮಾಗ್ರಿಗಳಿಗೆ ಅಗತ್ಯವಾಗಿ ಬೇಕಾದ ಸಲಕರಣೆಗಳನ್ನು ಮಾಡಿಕೊಡಲು ಇಲ್ಲಿ ಕಮಾರರು ಇದ್ದರು. ಇದಕ್ಕೆ ಸಾಕ್ಷಿಯೆಂಬಂತೆ ಯಶವಂತ ನಗರದ ಬಳಿ ಕಪ್ಪುಕಲ್ಲಿನ ಗುಡ್ಡಗಳು ಹಾಗೂ ಕುಲುಮೆಯಲ್ಲಿ ಬಳಸುತ್ತಿದ್ದ ಜೇಡಿಮಣ್ಣಿನ ಕೊಳವೆಗಳು, ಬೂದಿಯ ರಾಶಿಗಳನ್ನು ಈಗಲೂ ಕಾಣಬಹುದು. ಸೊಂಡೂರಿನ ದಕ್ಷಿಣಕ್ಕೆ ಸುಮಾರು ೫೦ ಕಿ.ಮೀ. ದೂರದಲ್ಲಿರುವ ಬ್ರಹ್ಮಗಿರಿಯಲ್ಲಿಯ ಬೃಹತ್ ಶಿಲಾ (ಸು.ಕಿ.ಮೀ. ೬೦೦-೨೦೦) ಗೋರಿಗಳ ಉತ್ಖನನದಲ್ಲಿ ಕಬ್ಬಿಣದ ಆಯುಧಗಳಾದ ಈಟಿ, ಭರ್ಚಿ, ಕತ್ತಿ, ಬಾಣದ ಮೊನಚು ದೊರೆತಿವೆ. ಈ ಭಾಗದ ಗವಿಗಳಲ್ಲಿ ವರ್ಣಚಿತ್ರಗಳು ಕಂಡುಬಂದಿವೆ. ಈಟಿ, ಭರ್ಚಿ, ಬಾಣ ಮುಂತಾದವು ಚಿತ್ರದಲ್ಲಿವೆ. ಈ ಕಾರಣದಿಂದ ಕಬ್ಬಿಣದ ಉಪಕರಣಗಳ ವೈಜ್ಞಾನಿಕ ಅಧ್ಯಯನ ಸು.ಕ್ರಿ.ಪೂ ೪೦೦-೫೦೦ರ ಹೊತ್ತಿಗೆ ಪ್ರಾರಂಭವಾಗಿರಬಹುದೆಂದು ಇತಿಹಾಸಕಾರರು ಊಹಿಸುತ್ತಾರೆ. ಹಿರೇಬೆಣಕಲ್ಲಿನ ಗವಿ ವರ್ಣಚಿತ್ರಗಳಲ್ಲಿ ಕತ್ತಿ, ಈಟಿ, ಬಿಲ್ಲು, ಕುದರೆ ಸವಾರರನ್ನು ಈಗಲೂ ನೋಡಬಹುದು.[3]

ಬ್ರಿಟಿಷ್ ಅಧಿಕಾರಿ ಕರ್ನಲ್ ಮೆಕೆಂಜಿ ಈ ಭಾಗದ ಬೂದಿದಿಬ್ಬಗಳನ್ನು ಅಧ್ಯಯನ ಮಾಡಿ, ಸ್ಥಳೀಯ ಕಥೆಗಳನ್ನು ಸಂಗ್ರಹಿಸಿದನು. ದೊಡ್ಡ ದೊಡ್ಡ ರಾಕ್ಷಸರನ್ನು ಮತ್ತು ರಾಮಾಯಣ ಮಹಾಭಾರತದ ಕಾವ್ಯಗಳಲ್ಲಿರುವ ವಾಲಿ, ಹಿಡಂಬಾಸುರ ಮುಂತಾದ ಪ್ರಮುಖ ವ್ಯಕ್ತಿಗಳನ್ನು ಸುಟ್ಟಿದ್ದರಿಂದ ಬೂದಿದಿಬ್ಬಗಳು ಉಂಟಾದವೆಂಬ ನಂಬಿಕೆಗಳಿವೆ. ಇಂಗ್ಲೆಂಡಿನ ಇತಿಹಾಸಕಾರ ನ್ಯೂಬೋಲ್ಡ್ ಎಂಬುವನು ೧೮೪೩ರಲ್ಲಿ ಮೊದಲು ಬಳ್ಳಾರಿ ಬಳಿಯ ಕಪ್ಪು ಗಲ್ಲಿನಲ್ಲಿ ಉತ್ಖನನ ನಡೆಸಿ ಇವು ಮಾನವನ ಔದ್ಯೋಗಿಕ ಕೇಂದ್ರವಾಗಿರದೆ. ಪ್ರಾಯಶಃ ಶವ ಸಂಸ್ಕಾರದ ವಿಧಿಗೆ ಸಂಬಂಧಿಸಿರಬೇಕೆಂಬ ನಿರ್ಣಯಕ್ಕೆ ಬಂದನು. ಕ್ರಿ.ಶ. ೧೯೩೯ರಲ್ಲಿ ಯಜ್ಞಾನಿ ಎಂಬ ಇತಿಹಾಸಕಾರರು ಕಪ್ಪಗಲ್ಲಿನಲ್ಲಿರುವ ಬೂದಿದಿಬ್ಬಗಳನ್ನು ಪರಿಶೀಲಿಸಿ ಚಿನ್ನ, ಕಬ್ಬಿಣ ಮುಂತಾದ ಲೋಹಗಳನ್ನು ತಯಾರಿಸುವ ಸಂದರ್ಭದಲ್ಲಿ ಅದಿರನ್ನು ಕರಗಿಸುವ ಕಾರಣದಿಂದ ಈ ಬಗೆಯ ದಿಬ್ಬಗಳು ಆಗಿರಬಹುದೆಂದು ಹೇಳುತ್ತಾರೆ. ಆದರೆ ಪುರಾಣಗಳ ಉಲ್ಲೇಖಗಳನ್ನು ನೋಡಿದರೆ ಸೊಂಡೂರಿನ ಪರ್ವತಗಳಿಗೆ ಕೃತಯುಗದಲ್ಲಿ 'ದೇವಗಿರಿ' ಎಂದು, ತ್ರೇತಾಯುಗದಲ್ಲಿ 'ಸ್ವರ್ಣಗಿರಿ' ಎಂದು, ದ್ವಾಪರಯುಗದಲ್ಲಿ 'ದಿವ್ಯಾಚಲ' ಎಂದೂ ಕಲಿಯುಗದಲ್ಲಿ 'ಲೋಹಾಚಲ'ವೆಂದೂ ಕರೆಯಲಾಗುತ್ತಿತ್ತು. ತಾರಕಾದಿ ಅಸುರರ ಸಂಹಾರಕ್ಕಾಗಿ ಶ್ರೀಸ್ವಾಮಿ ಕಾರ್ತಿಕೇಯನು ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥನೆ ಮಾಡಿಸಿಕೊಂಡು ದೇವಸೇನಾಧಿಪತ್ಯವನ್ನು ವಹಿಸಿಕೊಂಡು ಬಂದು ಈ ಪರ್ವತದಲ್ಲಿ ನೆಲೆಸಿತೆಂದು ಪ್ರತೀತಿ ಇದೆ.

೧೯೪೮ರಲ್ಲಿ ರಚನೆಯಾದ 'ಕುಮಾರಸ್ವಾಮಿಯು ಸಿಕ್ಕಿದ್ದು' ಎಂಬ ಕೃತಿಯಲ್ಲಿ ಕೆ. ರಾಮರಾವ್‌ರವರು ಆಗಿನ ಸೊಂಡೂರಿನ ಪರಿಸರವನ್ನು ಕಾವ್ಯಮಯವಾಗಿ ಕಟ್ಟಿಕೊಡುತ್ತಾರೆ. ಇದು ರಮ್ಯಾತ್ಮಕ ಮತ್ತು ಭಾಹುಕ ಕಲ್ಪನೆ. ಸಮಕಾಲೀನ ಸೊಂಡೂರನ್ನು ಅರ್ಥ ಮಾಡಿಕೊಳ್ಳಲು ೧೯೪೮ರ ಭೌಗೋಳಿಕ ಪರಿಸರದ ಈ ಉಧೃತ ಭಾಗವನ್ನು ನೋಡಬಹುದು.

*ಈ ಸುಂದರ ಪುರದ ಭೂಮಿಯು ಬಹಳ ಫಲವತ್ತಾದುದು. ಸಾರವಂತವಾದುದು. ಮಾವು, ಬಾಳೆ, ವೀಳೆಯದೆಲೆಗಳ ತೋಟಗಳು ವಿಶೇಷವಾಗಿ ಇವೆ. ಅಲ್ಲಲ್ಲಿ ಕೆಲವು ತೋಟಗಳಲ್ಲಿ ತೆಂಗಿನ ಗಿಡಗಳೂ ಉಂಟು. ಬಳ್ಳಾರಿಯಿಂದ ಒಂದು ರಸ್ತೆಯು ಸೊಂಡೂರು ಮಾರ್ಗವಾಗಿ ಹೊರಟು ಮುಂದೆ ಕೂಡ್ಲಿಗಿ ಮಾರ್ಗವಾಗಿ ಹೋಗಿ ಮದ್ರಾಸ್ ಮುಂಬಯಿ ರಸ್ತೆಯನ್ನು ಕೂಡುತ್ತದೆ. ಲೋಹಾಚಲದ ಹೊರಗಿನ ಈ (ಕೂಡ್ಲಿಗಿ ತಾಲ್ಲೂಕಿನ) ಭಾಗಕ್ಕೆ 'ಹೊರ ಮಲೆಸೀಮೆ' ಎಂದು ಹೆಸರು. ಸಂಸ್ಥಾನ ಸೀಮೆಗಳಲ್ಲಿಯ ರಸ್ತೆಗಳು ಎಡಬಲಕ್ಕೆ*

*ಹುಣಸೆ, ಬೇವು, ಮಾವು ಮತ್ತು ಆಲ ವೃಕ್ಷಗಳಿಂದ ಆಚರಿಸಲ್ಪಟ್ಟು ಪ್ರಯಾಣಿಕರಿಗೆ ನೆರಳನ್ನು, ತಂಪನ್ನು, ಸಂಪನ್ನು ಮತ್ತು ಇಂಪನ್ನು ಉಂಟುಮಾಡುತ್ತವೆ. ಇಲ್ಲಿಯ ಜನರ ಮಾತೃಭಾಷೆಯು ಕನ್ನಡವಿರುತ್ತದೆ. 'ಶ್ರೀಷಣ್ಮುಖ ಯಾತ್ರೆ' ಎಂಬ ಶತಕದಲ್ಲಿ ಈ ನಾಡನ್ನು*

*ಸುಂದರ ಕಿರಿನಾಡು ಹಸುರಿನ |*
*ಹಂದರದ ಗಿರಿನಾಡು ಕುಂದದ ||*
*ನಂದನದ ಸಿರಿನಾಡು ಶುಕ ಪಿಕ ಪಕ್ಷಿಗಳ ನಾಡ ||*
*ಇಂದಿರೆಯ ನೆಲಮಾಡ ಶಾರದೆ |*
*ಬಂದುಲಿವ ಕರುಮಾಡ ಸೊಂಡೂ ||*
*ರೆಂದು ಹೆಸರಾಂತಿಹುದು ರಕ್ಷಿಸು ದೇವ ಷಣ್ಮುಖನೆ ||*

*ಎಂದು ವರ್ಣಿಸುತ್ತದೆ. ಈ ಪ್ರಾಂತವನ್ನು ಚೆನ್ನಾಗಿ ನೋಡಿದವರಿಗೆ ಅದರಲ್ಲಿಯ ಯಾತಾರ್ಥತೆಯು ಗೋಚರಿಸದೆ ಇರುವುದಿಲ್ಲ. ಸೃಷ್ಟಿ ಜನ್ಯವಾದ ಸಹಜ ಸನ್ನಿವೇಶಗಳಿಂದ ಕೂಡಿದ ಈ ಸೀಮೆಯು ನೋಡುವವರಿಗೆ 'ಪ್ರಕೃತಿಗಧಿದೇವಿ' ಎಂಬ ಸುಂದರಳಾದ ವನಿತಾಮಣಿಯು ರಾಗ ಶಿಖರಗಳ ಕುಂಕುಮದ ತಿಲಕವನ್ನು ಇಟ್ಟುಕೊಂಡು ತನ್ನ ಒಂದು ಮೊಣಕೈಯನ್ನು ನೆಲಕ್ಕೆ ಊರಿ ಅಂಗೈಯನ್ನು ತಲೆಗೆ ಕೊಟ್ಟು ಕಾಲುಗಳನ್ನು ಅರ್ಧಚಂದ್ರಾಕಾರವಾಗಿ ನೀಡಿಕೊಂಡು ಇನ್ನೊಂದು ಹಸ್ತದ ಒಳಗಡಗೆಯ ವಜ್ರಪಂಜರದಲ್ಲಿ ಸುಂದರ ಪುರವೆಂಬ ಶಿಶುವನ್ನು ಮಗ್ಗಲಲ್ಲಿ ಇಟ್ಟುಕೊಂಡು ಮೊಲೆಯೂಡುತ್ತಿರುವ ಹಾಗೆ ಕಾಣುತ್ತದೆ. ಕಾಲಕಾಲಕ್ಕೆ ಮಳೆಯು ತಪ್ಪದೆ ಬೀಳವುದರಿಂದ ಹಸಿರು ಹುಲ್ಲು ಹುಲುಸಾಗಿ ಬೆಳೆದು ಆ ಸುಂದರಿಯು ಉಟ್ಟ ಹಸುರುಡುಗೆಯಂತೆ ತೋರುವುದು ಅಲ್ಲದೆ ಖನಿಜ ಸಂಪತ್ತಿನಿಂದ ಕೂಡಿದ ಮರಡಿಗಳು ಅವಳ ಮಟ್ಟಸಾದ ಕುಚಗಳಂತೆಯೂ ಅವುಗಳ ಮೇಲೆ ಚೆಗಿತ ತಮಾಲ ವೃಕ್ಷಗಳು ಅವಳ ಕುಪ್ಪಸದಂತೆಯೂ, ಗಹ್ವರದ ಪಡೆಗಳಲ್ಲಿರುವ ಸಿಹಿನೀರಿನ ತಿಳಿನೀರಿನ ತಿಳಿಗೊಳಗಳು ಅವಳ ಇನಿದಾದ ಅಧರಾಮೃತದಂತೆಯೂ, ನಿಬಿಡವಾದ ಗಿಡಬಳ್ಳಿ, ಪೊದೆಗಳಿಂದ ಮುಚ್ಚಲ್ಪಟ್ಟು, ಮಳೆ ಬಂದಾಗ ಮಾತ್ರ ಧಾತು ನೀರಿನಿಂದ ಪ್ರವಹಿಸುವ ಕಾಳ್ವರಗಳು ಅವಳ ಮನೋಹರವಾದ ಕಜ್ಜಲದಿಂದ ಕೂಡಿದ ಆನಂದ ಭಾಷ್ಪಗಳಂತೆಯೂ, ಒಳಪೊಕ್ಕೂ ವಿಹರಿಸುವವರಿಗೆ ಸಕಲ ವಿಧವಾದ ದುಃಖದ ಮೊರವೆಯನ್ನು ಕೊಟ್ಟು ಸ್ವರ್ಗಸುಖವನ್ನು ಉಂಟು ಮಾಡುತ್ತದೆ. ಅಲ್ಲದೆ ಗಿಳಿ, ಕೋಗಿಲೆ, ಹಂಸ ಮತ್ತು ನವಿಲುಗಳೇ ಮೊದಲಾದ ಪಕ್ಷಿ ನಿಕರಗಳು ಅವಳ ನುಡಿ, ಕಂಠ, ನಡಿಗೆ ಮತ್ತು ನರ್ತನಗಳನ್ನು ಕ್ಷಣ ಕ್ಷಣಕ್ಕೂ ಈ ನಾಡಿನಲ್ಲಿ ಪ್ರಕಟಗೊಳಿಸುತ್ತಿರುವುದನ್ನು ಕಾಣಬಹದು. ಭೂಮಂಡಲದಲ್ಲಿಯ ಶುಚಿ, ಆರೋಗ್ಯ, ತೃಪ್ತಿ, ಶಾಂತಿ ಮತ್ತು ಸೌಂದರ್ಯ ಮೊದಲಾದವುಗಳಲ್ಲಿ ಜಳ್ಳನ್ನು ತೂರಿ ಸಾರವಾದ ನಿಧಿಯನ್ನು ಈ ಸುಂದರ ಪುರದ ಸೀಮೆಯಲ್ಲಿ ರಾಶಿ ಮಾಡಿ ಅದು ಚದುರಿ ಹೋಗದಂತೆ 'ಲೋಹಚಲ'ವೆಂಬ ಒಡ್ಡನ್ನು ಸೃಷ್ಟಿ ಕರ್ತನು ಸೃಷ್ಟಿಸಿರುವಂತೆ ಕಾಣುತ್ತದೆ. (ಪುಟ. ೫)*

ಇದು ಸೊಂಡೂರಿನ ಮನೋಹರ ವರ್ಣನೆ. ಆಗಿನ ಸಾಮಾಜಿಕ ಬದುಕಲ್ಲಿ ಬಡತನ, ದಾರಿದ್ರ್ಯ ಇರಲೇ ಇಲ್ಲ ಎನ್ನುವ ಸುಖೀ ರಾಜ್ಯ ಕಲ್ಪನೆ. ಈ ಕೃತಿ ಸಂಸ್ಥಾನಿಕ ಮಹಾರಾಜರನ್ನು ಮೆಚ್ಚಿಸಲಿಕ್ಕೆ ಬರೆದಿರುವ ಸಾಧ್ಯತೆಯಿದೆ. ಇದು ಸಂಸ್ಕೃತ ಕಾವ್ಯಗಳಲ್ಲಿ 'ಸಮುದ್ರವಸನೇ ಪರ್ವತಸ್ತನ ಮಂಡಲೇ' ಎಂಬ ಭೂ ದೇವಿಯ ವರ್ಣನೆಯನ್ನು ನೆನಪಿಸುತ್ತದೆ. ಆದರೆ ಇದರ ಆಚೆಯೂ ೪೦ ರ ದಶಕದ ಸೊಂಡೂರಿನ ಒಂದು ಚಿತ್ರವಿದೆ. ಭೂಮಿಯ ಫಲವತ್ತತೆ, ಬೆಳೆಗಳು, ಪ್ರಕೃತಿಯ ಸೌಂದರ್ಯದ ವರ್ಣನೆ ಹೀಗೆ ಪರಿಸರವನ್ನು ಮೈದುಂಬಿ ವರ್ಣಿಸುತ್ತ ಸಾಮಾನ್ಯ ಜನರನ್ನು ಪ್ರಕೃತಿಯ ಭಾಗವಾಗಿಯೇ ಚಿತ್ರಿಸುತ್ತಾರೆ. ಕೃತಿಯೊಂದರ ರಚನೆ ಎಂದರೆ ಅದು ವರ್ಣನೆಗಾಗಿಯೇ ಎಂಬ ಕಾಲದ ಒತ್ತಡ ಇಲ್ಲಿದ್ದಂತಿದೆ. ಇಲ್ಲಿ ಸೊಂಡೂರಿನ ಬೆಟ್ಟಗಳನ್ನು ಸುಂದರ ವನಿತಾಮಣಿಗೆ ಹೋಲಿಸಲಾಗಿದೆ. ಇದೇ ವರ್ಣನೆಯನ್ನು ಈಗಿನ ಸೊಂಡೂರಿನೊಂದಿಗೆ ಹೋಲಿಸಿದರೆ ಕುಚಗಳೇ ಕತ್ತರಿಸಿದ, ನಿರಂತರ ಅತ್ಯಾಚಾರಕ್ಕೊಳಗಾದ, ಮೈಯೆಲ್ಲ ರಕ್ತಮಯವಾದ ವಿಕೃತಗೊಳಿಸಿರುವ ನಗ್ನ ಹೆಣ್ಣೊಂದರ ಭಯಾನಕ ಆಕೃತಿ ತಲ್ಲಣಗೊಳಿಸುತ್ತದೆ.

೨೦೦೧ರ ಜನಗಣತಿಯ ಸೊಂಡೂರು ಹೀಗಿದೆ. ಜನಸಂಖ್ಯೆ ೨.೧೧೬೬ರಷ್ಟಿದೆ. ಪುರುಷರು ೯೮,೨೭೮ ಇದ್ದರೆ ಮಹಿಳೆಯರು ೯೨,೮೮೮ ರಷ್ಟಿದ್ದಾರೆ. ಗ್ರಾಮೀಣ ಭಾಗದ ಜನಸಂಖ್ಯೆ ೧೫೬,೯೯೮ರಷ್ಟಿದೆ. ನಗರ ಪ್ರದೇಶದ ಜನಸಂಖ್ಯೆ ೩೪,೧೬೮. ಲಿಂಗಪ್ರಮಾಣ ೯೪೫ರಷ್ಟಿದೆ. ಬಳ್ಳಾರಿ ಜಿಲ್ಲೆಯಲ್ಲಿಯೆ ಅತಿ ಹೆಚ್ಚು ಅಂದರೆ ಸಾವಿರಕ್ಕೆ ೫೫ರಷ್ಟು ಮಹಿಳೆಯರು ಪುರುಷರಿಗಿಂತ ಕಡಿಮೆ ಇದ್ದಾರೆ. ಕೃಷಿಯನ್ನು ಅವಲಂಬಿಸಿದವರು ಶೇ. ೩೦.೬ರಷ್ಟು, ಕೃಷಿ ಕೂಲಿಕಾರರು ಶೆ. ೩೨.೮ರಷ್ಟು ಕೃಷಿಯೇತರ ಕೆಲಸಗಾರರು ಶೇ. ೩೪.೯ರಷ್ಟಿದೆ. ೮೯ ಹಳ್ಳಿಗಳಿದ್ದು ೨ ಪಟ್ಟಣಗಳಿವೆ. ಶಿಕ್ಷಣ ಶೇ. ೫೩.೩ರಷ್ಟಿದೆ. ಈ ಬಗೆಯ ಅಂಕೆ ಸಂಖ್ಯೆಗಳಲ್ಲಿ ಸೊಂಡೂರು ಕಾಲ್ಪನಿಕ ಚಿತ್ರದಂತೆ ಕಾಣುತ್ತದೆ. ಕೃಷಿ ಅವಲಂಬಿತರಿಗಿಂತ ಕೃಷಿಯೇತರ ಕೆಲಸಗಾರರೇ ಹೆಚ್ಚಿದ್ದಾರೆ. ಅಂದರೆ ಮೈನಿಂಗ್‌ನಲ್ಲಿ ತೊಡಗಿಕೊಂಡವರ ಸಂಖ್ಯೆಯೇ ಅಧಿಕವಾಗಿದೆ. ೧೯೭೩ರ ಸಂದರ್ಭಕ್ಕೆ ಹೋಲಿಸಿದರೆ ಸಾಕ್ಷರತೆಯ ಪ್ರಮಾಣ ಹೆಚ್ಚಾಗಿದೆ. ೧೯೫೨ರಿಂದ ಸೊಂಡೂರಿನ ರಾಜಕೀಯ ಚರಿತ್ರೆ ಹೀಗಿದೆ. ಈ ತನಕ ಸೊಂಡೂರು ಕ್ಷೇತ್ರದಿಂದ ಆರಿಸಿ ಬಂದ ವಿಧಾನಸಭಾ ಸದಸ್ಯರುಗಳೆಂದರೆ ಡಾ. ನಾಗನಗೌಡ (೧೯೫೨-೫೭), ಅರಗಿನ ರಾಯನಗೌಡ (೧೯೫೭-೫೯), ಎಂ.ವೈ. ಘೋರ್ಪಡೆ(೧೯೫೯-೭೪), ಹಿರೋಜಿಲಾಡ್(೧೯೭೪-೭೬), ಸಿ.ರುದ್ರಪ್ಪ (೧೯೭೬-೮೦), ಯು. ಭೂಪತಿ (೧೯೮೦-೮೫), ಎಂ.ವೈ. ಘೋರ್ಪಡೆ (೧೯-೮೬-೨೦೦೪), ಸಂತೋಷಲಾಡ್(೨೦೦೪ರಿಂದ). ಎಂ.ವೈ. ಘೋರ್ಪಡೆಯವರು ಒಟ್ಟು ೩೩ ವರ್ಷ ಸೊಂಡೂರಿನಲ್ಲಿ ಆರಿಸಿ ಬಂದಿದ್ದಾರೆ.

ತಾಲೂಕಿನ ಭೌಗೋಳಿಕ ಕ್ಷೇತ್ರ ೯೪,೩೫೯ ಹೆಕ್ಟೇರಿನಷ್ಟಿದೆ. ಇದರಲ್ಲಿ ಸಾಗುವಳಿ ಮಾಡುವ ಭೂಮಿ ೩೪೨೯೦ ಹೆಕ್ಟೇರು. ಮಳೆ ಆಧಾರಿತ ಸಾಗುವಳಿ ಭೂಮಿ ೨೮.೨೯೦ ಹೆಕ್ಟೇರು ಇದ್ದು ಒಟ್ಟು ನೀರಾವರಿ ಸಾಗುವಳಿ ಭೂಮಿ ೬೦೦೦ ಹೆಕ್ಟೇರುಗಳಿಷ್ಟಿದೆ. ಹೀಗಾಗಿ ನೀರಾವರಿಗಿಂತ ಮಳೆಯಾಶ್ರಿತ ಸಾಗುವಳಿ ಭೂಮಿಯೇ ಹೆಚ್ಚಾಗಿದೆ. ತಾಲ್ಲೂಕಿನಲ್ಲಿ ಒಟ್ಟು ೨೪ ಕೆರೆಗಳಿವೆ. ಇವುಗಳಿಂದಾಗಿ ೧೦೦೦ ಹೆಕ್ಟೇರುಗಳಷ್ಟು ನೀರಾವರಿ ಆಗುತ್ತಿದೆ. ಈಗ ೪೦೦ ಅಡಿಗಳಷ್ಟು ಬೋರ್ ಕೊರೆಸಿದರೂ ನೀರು ಬರುವುದು ಕಷ್ಟವೆ. ಅಂತರ್ಜಲ ಕಡಿಮೆಯಾಗಿದೆ. ಕೆರೆ ಹೂಳು ತೆಗೆಸಲಾಯಿತು ಎಂದು ತಾಲೂಕು ಪಂಚಾಯ್ತಿಯಲ್ಲಿ ಲಕ್ಷಗಳಲ್ಲಿ ಲೆಕ್ಕ ಬರೆದಿಟ್ಟಿದ್ದಾರೆ. ಆದರೆ ಕೆರೆಗಳು ನೀರಿಗಿಂತ ಹೂಳು ತುಂಬಿಕೊಂಡಿರುವುದೇ ಹೆಚ್ಚು. ೮೮೦ ಕೊಳವೆ ಬಾವಿಗಳಿವೆ. ಇದರಿಂದಾಗಿ ೩೬೩೫ ಹೆಕ್ಟೇರಿನಷ್ಟು ನೀರಾವರಿ ಆಗುತ್ತಿದೆ. ಉಳಿದಂತೆ ಕಾಲುವೆಗಳ ನೀರಿನಿಂದ ೧೩೬೫ ಹೆಕ್ಟೇರಿನಷ್ಟು ನೀರಾವರಿ ಸಾಧ್ಯವಿದೆ. ೯ ರೈತ ಸೇವಾ ಸಹಕಾರಿ ಸಂಘಗಳಿವೆ. ಇವುಗಳಲ್ಲಿ ರೈತರ ಹೆಸರಿನಲ್ಲಿ ಅನುದಾನ ಪಡೆದದ್ದಕ್ಕಿಂತ ರೈತರಿಗೆ ಸಹಾಯ ಮಾಡಿದ್ದು ಕಡಿಮೆ. ಸಣ್ಣ ರೈತರ ಕುಟುಂಬಗಳು ೧೫೮೦೦ ಇವೆ. ಮಧ್ಯಮ ರೈತ ಕುಟುಂಬಗಳು ೨೫೭೭, ಭೂಹಿಡುವಳಿದಾರರ ಕುಟುಂಬಗಳು ೩೯೨೩ರಷ್ಟಿದೆ. ಈಗೀಗ ಭೂಮಿಯ ವರ್ಗೀಕರಣ ಹೆಚ್ಚಾಗಿ ನಡೆಯುತ್ತಿರುವುದರಿಂದ ತುಂಡುಭೂಮಿಗಳಾಗಿ ಪರಿವರ್ತನೆ ಹೊಂದುತ್ತಿವೆ. ಕಬ್ಬಿಣದ ಕಲ್ಲುಗಳಿರುವ ಹೊಲಗಳೆಲ್ಲ ಹಣದ ಬೆಳೆ ಬೆಳೆಯುತ್ತಿವೆ.

ಇಲ್ಲಿ ಮುಖ್ಯವಾಗಿ ಜೋಳ, ಮೆಕ್ಕೆಜೋಳ, ಸಜ್ಜೆ, ನವಣೆ, ಸೂರ್ಯಕಾಂತಿ, ಶೇಂಗಾ ಹಾಗೂ ಕೆಲ ಪ್ರದೇಶಗಳಲ್ಲಿ ರಾಗಿ, ಅಲ್ಪ ಪ್ರಮಾಣದಲ್ಲಿ ತೊಗರೆ ಮತ್ತು ಹತ್ತಿ ಬೆಳೆಯಲಾಗುತ್ತದೆ. ಅಲ್ಲದೆ ನೀರಾವರಿಯಲ್ಲಿ ಭತ್ತ ಮತ್ತು ಕಡಲೆ ಬೆಳೆಯುತ್ತಾರೆ. ತಾಲೂಕಿನ ಒಟ್ಟು ವಾರ್ಷಿಕ ಸರಾಸರಿ ಮಳೆ ೭೦೦ರಿಂದ ೭೫೦ ಮಿ. ಮೀಟರ್ ೨೦೦೬ರಲ್ಲಿ ಅತಿ ಕಡಿಮೆ ಅಂದರೆ ೨೭೭,೭೪ರಷ್ಟಾಗಿದೆ. ೭೦ರ ದಶಕದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿಯೇ ಅತಿ ಹೆಚಚು ಮಳೆ ಬೀಳುತ್ತಿದ್ದ ಸೊಂಡೂರಿನ ಪ್ರದೇಶದಲ್ಲಿ ಈಗ ಬಹಳ ಕಡಿಮೆಯಾಗಿದೆ. ಕಾರಣ ಆಗಿನ ಸಂಪದ್ಭರಿತ ಕಾಡು ಈಗ ಬೋಳಾಗಿ ಕುರುಚಲು ಕಾಡಾಗಿದೆ. ಬೆಟ್ಟಗಳನ್ನೆಲ್ಲಾ ಮೈನಿಂಗ್‌ಗಾಗಿ ಡಿಪ್ಪಿಂಗ್ ಮಾಡುತ್ತಿರುವುದರಿಂದ ಒಂದು ಕಾಲದ ಹಸಿರಿನ ಸೊಂಡೂರು ಕೆಂಪಾಗಿದೆ. ೨೦೦೬-೦೭ನೇ ಸಾಲಿನಲ್ಲಿ ಮಳೆಯಿಲ್ಲದೆ ಮತ್ತು ಮೈನಿಂಗ್ ಧೂಳಿನಿಂದಾಗಿ ಬೆಳೆಗಳು ಹಾನಿಗೊಳಗಾದವು. ಹೈಬ್ರಿಡ್ ಜೋಳ ೫೬೭೭ ಹೆಕ್ಟೇರಿಗೆ ಬಿತ್ತಿದ್ದು ೩೪೦೬ ಹೆಕ್ಟೇರು ಶೇ ೭೫ರಷ್ಟು ಹಾನಿಗೊಳಗಾಯಿತು. ಉಳಿದ ಬೆಳೆಗಳ ಹಾನಿಗೊಳಗಾದ ಪ್ರಮಾಣ ಇಂತಿದೆ. ಮುಸುಕಿನಜೋಳ ೯೭೮೦ ಹೆಕ್ಟೇರು ಬಿತ್ತಿದ್ದು ೪೦೨೬ರಷ್ಟು ಹಾನಿಗೊಳಗಾದದ್ದು. ಹತ್ತಿ ೧೭೮೮ ಹೆಕ್ಟೇರು ಬಿತ್ತಿದ್ದು ೧೪೩೦ರಷ್ಟು ಹಾನಿಗೊಳಗಾಗಿದೆ. ಈ ಬೆಳೆಹಾನಿಯಲ್ಲಿ ಪ್ರಧಾನ ಪಾತ್ರ ಮಳೆಯಾದರೆ ಮತ್ತೊಂದು ಮೈನಿಂಗ್ ಧೂಳು.

ಈಗ ಸೊಂಡೂರನ್ನು ನೋಡಲು ಹೋದರೆ ಕಾಣುವ ಚಿತ್ರ ಬೇರೆಯದೆ. ಕೂಡ್ಲಿಗಿ, ಹೊಸಪೇಟೆ, ಬಳ್ಳಾರಿಯ ಬಸ್‌ನಿಲ್ದಾಣದಲ್ಲಿ ಬಸ್‌ಗಳನ್ನು ಬೋರ್ಡ್ ನೋಡಿ, ಪ್ಲಾಟ್‌ಫಾರಂ ನೋಡಿ ಗುರುತಿಸಬೇಕಿಲ್ಲ. ಕೆಂಪು ಬೆಟ್ಟದಲ್ಲಿ ಮುಳುಗೆದ್ದು ಬಂದಿದೆ ಎನ್ನುವಷ್ಟು ಕೆಂದೂಳು ಮುತ್ತಿಕೊಂಡಿರುವುದರಲೆ ಸೊಂಡೂರು ಬಸ್ಸು ಎಂದು ತಿಳಿಯುತ್ತದೆ. ಇದರಿಂದ ಅನಕ್ಷರಸ್ಥರೂ ಯಾರನ್ನು ಕೇಳದೆ ಸೊಂಡೂರಿನ ಬಸ್ಸೆಂದು ನಿರಾತಂಕವಾಗಿ ಏರುತ್ತಾರೆ. ಕೂಡ್ಲಿಗಿಯಿಂದ ಯಶವಂತನಗರ ಮಾರ್ಗವಾಗಿ ಸೊಂಡೂರು ತಲುಪುವ, ಹೊಸಪೇಟೆಯಿಂದ ಸುಶೀಲನಗರ ಮಾರ್ಗವಾಗಿ ಸೊಂಡೂರು ತಲುಪುವ ರಸ್ತೆಗಳಂತೂ ಕೊರಕಲು ಗುಂಡಿಗಳು. ಆದರೆ ತಾಲೂಕು ಪಂಚಾಯ್ತಿಯ ಗೋಡೆಗಳ ಮೇಲೆ ರಸ್ತೆ ನಿರ್ಮಾಣಕ್ಕಾಗಿ ಖರ್ಚಾದ ಲಕ್ಷಗಳ ಲೆಕ್ಕಾಚಾರವಿದೆ. ಬಸ್ಸಿನಲ್ಲಿ ಸಿಕ್ಕ ಪ್ರಯಾಣಿಕರೊಬ್ಬರು ಮಾತಾಡುತ್ತ 'ಘೋರ್ಪಡೆಯವರು ಅಷ್ಟು ಸಾರಿ ಮಿನಿಸ್ಟರ್ ಆದ್ರೂ ಸೊಂಡೂರಿಗೆ ಏನು ಮಾಡಿಲ್ಲ ಸಾರ್' ಎಂದು ವಿಷಾದದಿಂದ ಹೇಳುತ್ತಿದ್ದರು. ಒಮ್ಮೆ ಸುಶೀಲನಗರದ ಬಳಿ ತಾಂಡಾದಲ್ಲಿ ಜನರನ್ನು ಮಾತನಾಡಿಸಿ 'ಇಂಥ ಕೆಟ್ಟ ರಸ್ತೆಯಿದ್ದರೂ ನೀವ್ಯಾಕೆ ಪ್ರತಿಭಟಿಸುತ್ತಿಲ್ಲ' ಎಂದು ಕೇಳಲಾಯಿತು. ರಾಮನಾಯ್ಕ ಎಂಬುವವರು 'ಸಾರ್… ಕೇಳಿಕೇಳಿ ಸಾಕಾಯ್ತು. ಈಗ ರಸ್ತೆ ರಿಪೇರಿ ಆಗೋದೆ ಬೇಡ. ಈಗ ಹೆಂಗಿದೆಯೋ ಅಂಗೇ ಇರ್ಲಿ… ಈ ಗುಂಡಿಗಳಿಂದ ಮೈನಿಂಗ್ ಲಾರಿಗಳು ವಾಲಾಡಿ ಕೆಳಕ್ಕೆ ಕಬ್ಬಿಣದ ಕಲ್ಲು ಬೀಳ್ತಾತಿ.. ನಮ್ಮ ತಾಂಡಾದ ಹೆಣ್ಮಕ್ಳು ಈ ಕಲ್ಲು ಆರಿಸ್ತಾರ.. ದಿನಕ್ಕೆ ಮೂರು ನಾಲ್ಕು ಪುಟ್ಟಿ ಆಗ್ತಾವ.. ೨೫ ರೂಪಾಯಿಗೊಂದು ಪುಟ್ಟಿ' ಎಂದರು. ರಸ್ತೆಯಲ್ಲಿ ತೆಗ್ಗು ಗುಂಡಿಗಳಿರುವ ಕಡೆಯಲ್ಲಿ ಬಿದ್ದ ಕಲ್ಲುಗಳನ್ನು ಆರಿಸುವ ಮಹಿಳೆಯರನ್ನೂ ನೋಡಿದೆ. ಈ ಕಾರಣಕ್ಕಾಗಿಯೇ ಸ್ವತಃ ಜನರೆ ರಸ್ತೆಗಳಲ್ಲಿ ಗುಂಡಿ ತೋಡುತ್ತಾರೆ ಎಂದು ಒಬ್ಬರು ಹೇಳಿದರು. ಸುತ್ತಲ ಬೆಟ್ಟಗಳೆಲ್ಲಾ ಬ್ರೆಡ್‌ಪೀಸ್ ಕತ್ತರಿಸಿದಂತೆ ಕಾಣುತ್ತದೆ. ದೂರದ ಬೆಟ್ಟಗಳೆಲ್ಲೆಲ್ಲಾ ಇರುವೆ ಸಾಲಿನಂತೆ ಲಾರಿಗಳು ಓಡಾಡುತ್ತಲೇ ಇರುತ್ತವೆ. ಈಗಂತೂ ಎಲ್ಲಿ ನೋಡಿದರಲ್ಲಿ ಲಾರಿಗಳು. ಸಣ್ಣ ಸಣ್ಣ ರಸ್ತೆಗಳಲ್ಲಿ, ಬೆಟ್ಟಗಳಲ್ಲಿ, ಸೊಂಡೂರಿನಲ್ಲಿ ಸುತ್ತಮುತ್ತಲ ಹಳ್ಳಿಗಳಲ್ಲಿ, ಹೊಲಗಳಲ್ಲಿ, ಲಾರಿಗಳ ಹಿಂಡೋ ಹಿಂಡು. ಈಗ ಕರ್ನಾಟಕದಲ್ಲಿ ಒಂದೇ ಕಡೆ ಇಷ್ಟೊಂದು ಲಾರಿಗಳನ್ನು ಬೇರೆ ಇನ್ನೆಲ್ಲಿಯೂ ನೋಡಲಿಕ್ಕೆ ಸಾಧ್ಯವಿಲ್ಲವೇನೋ. ಇಲ್ಲಿನ ಲಾರಿಗಳ ಕಾಟವನ್ನು ನೋಡುತ್ತಿದ್ದರೆ, ಕುವೆಂಪು ಅವರ ಬೊಮ್ಮನಹಳ್ಳಿ ಕಿಂದರಜೋಗಿ ಪದ್ಯ ನೆನಪಾಗುತ್ತದೆ. 'ಇಲ್ಲೇನ್ ಲಾರಿಗಳ ಕಾಟವೆ ಕಾಟ.. ಇಲ್ಲಿನ ಜನಗಳಿಗತಿಗೋಳಾಟ..' ಎಂದು ಇಡೀ ಪದ್ಯದಲ್ಲಿ ಇಲಿಗಳ ಬದಲು ಲಾರಿಯನ್ನಿಟ್ಟು ಓದಬೇಕೆನ್ನಿಸಿತು. ಇಲಿಗಳ ನಾಶಕ್ಕಾಗಿ ಕಿಂದರಿಜೋಗಿ ಬಂದಂತೆ.. ಈ ಲಾರಿಗಳ ನಾಶಕ್ಕಾಗಿ ಆಧುನಿಕ ಕಿಂದರಿಜೋಗಿಗಾಗಿ ಈ ಸೊಂಡೂರು ಭಾಗದ ಜನರೆಲ್ಲ ಕಾತುರದಿಂದ ಕಾಯುತ್ತಿದ್ದಾರೆ ಅನ್ನಿಸಿತು.

[1] ಸೊಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಖಗಳು ದೇವಾಲಯಗಳು. ಪುಟ ೮,೧೦

[2] ಸೊಂಡೂರು ಕುಮಾರಸ್ವಾಮಿ ಪು.೧೧

[3] ಕನ್ನಡ ಟೈಮ್ಸ್, ೫ ಏಪ್ರಿಲ್ ೨೦೦೭. ಪು.೩

[4] ಕನ್ನಡ ಪ್ರಭ, ವಿಜಯ ಮಲಗಿಹಾಳ್, ಮಾರ್ಚ್. ೧೭.೨೦೦೯

## ೧. ಸೊಂಡೂರು: ಪರಿಸರ (2)

ಇಲ್ಲಿನ ಹೊಲಗಳಲ್ಲಿ ಈಗ ಬೆಳೆ ಕಾಣುವುದು ಅಪರೂಪ. ತಾಲೂಕಿನ ಶೇ ೬೦ರಷ್ಟು ಭೂಮಿಯಲ್ಲಿ ಡಿಪ್ಪಿಂಗ್ (ಮೈನಿಂಗ್ ಕಲ್ಲುಗಳನ್ನು ಅಗೆಯುವುದು) ಮಾಡುತ್ತಿದ್ದಾರೆ. ಪ್ರತಿ ಹೊಲಗಳಿಗೆ ಸುತ್ತಲೂ ತಡಿಕೆ ಕಟ್ಟುವುದು, ಹೊಲವನ್ನು ಅಗೆದು ಕಲ್ಲುಗಳನ್ನು ತೆಗೆಯುವುದು ಸಾಮಾನ್ಯವಾಗಿದೆ. ಹೊಸಪೇಟೆಯಿಂದ ಸುಶೀಲನಗರದ ಮಾರ್ಗವಾಗಿ ಸೊಂಡೂರು ತಲುಪುವ ಹೊತ್ತಿಗೆ ಮೈನಿಂಗ್‌ನ ಭಯಾನಕ ಚಿತ್ರ ಕಾಣುತ್ತದೆ. ರಸ್ತೆಯ ಪಕ್ಕವೇ ನಲವತ್ತಕ್ಕಿಂತ ಹೆಚ್ಚಿನ ಮೈನಿಂಗ್ ಕಂಪನಿಗಳಿವೆ. ಇವುಗಳಲ್ಲಿ ಕಲ್ಲು ಪುಡಿ ಮಾಡುವ, ಲಾರಿಗೆ ತುಂಬವ, ಕಬ್ಬಿಣದ ಕಲ್ಲನ್ನು ಬೇರ್ಪಡಿಸುವ ಕೆಲಸ ನಡೆಯುತ್ತಿರುತ್ತದೆ. ಬುಲ್ಡೋಜರ್ ಗಳು ಕ್ರಷರ್ ಗಳು, ಪೋಕಲೈನ್ ಮಿಷನ್‌ಗಳು, ಜೆ.ಸಿ.ಬಿ. ಯಂತ್ರಗಳು ಹಗಲು ರಾತ್ರಿ ಭೂಮಿ ಅಗೆಯುವ ಕೆಲಸಕ್ಕೆ ಬಿಡುವಿಲ್ಲ. ಪ್ರತಿ ಮೈನಿಂಗ್ ಕಂಪನಿಯ ಗೇಟಿಗೆ ಉತ್ತರ ಭಾರತದ ಸೆಕ್ಯುರಿಟಿ ಗಾರ್ಡ್‌ಗಳು ಕಾದಿರುತ್ತಾರೆ. ಇದರಿಂದಾಗಿಯೇ ಸೊಂಡೂರಿನಲ್ಲಿ ಏಳೆಂಟು ಸೆಕ್ಯುರಿಟಿ ಏಜನ್ಸಿ ಕಂಪನಿಗಳು ತಲೆ ಎತ್ತಿವೆ. ಈ ಮೈನಿಂಗ್‌ನಲ್ಲಿ

ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಬೇರೆ ಬೇರೆ ಭಾಗಗಳಿಂದ ಕೆಲಸವನ್ನರಸಿ ಬಂದ ಬಡ ಕೂಲಿಗಳು ಒಂದು ಅಂದಾಜಿನ ಪ್ರಕಾರ ಹತ್ತು ಸಾವಿರಕ್ಕೂ ಹೆಚ್ಚಿದ್ದಾರೆ. ಇವರೆಲ್ಲ ತಾವು ಕೆಲಸ ಮಾಡುವ ಕಡೆಯೇ ಸಣ್ಣ ಸಣ್ಣ ನೆಲ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಅಂತಹ ಪುಟ್ಟ ಟೆಂಟಿನಲ್ಲಿ ಒಂದಿಡೀ ಕುಟುಂಬ ಬದುಕುತ್ತದೆ. ಹಗಲಲ್ಲಿ ದುಡಿದು ದಣಿದ ಕಾರ್ಮಿಕರಿಗೆ ಸಾರಾಯಿಯೇ ವಿಮೋಚನೆಯ ದಾರಿ. ಸೊಂಡೂರಿನಲ್ಲಿ ಭಾನುವಾರ ಸಂತೆಯ ದಿನ ಹೀಗೆ ಕುಡಿದ ಅಮಲಿನಲ್ಲಿ ರಸ್ತೆಗಳ ಪಕ್ಕವೋ ಸಂದಿಗೊಂದಿಗಳಲ್ಲಿ ಮಲಗಿಕೊಂಡಿರುವ ಗಂಡು, ಹೆಣ್ಣುಗಳು ಸಿಗುತ್ತಾರೆ. ಟೆಂಟಿನ ಮುಂದಿನ ಕಬ್ಬಿಣದ ಕಲ್ಲುಗಳ ರಾಶಿಯಲ್ಲಿಯೇ ಮಕ್ಕಳ ಆಟವೂ ಕೂಡ. ಶಾಲೆಗೆ ಹೋಗಬಹುದಾದ ಎಷ್ಟೋಂದು ಬಾಲಕ ಬಾಲಕಿಯರು ಮೈನಿಂಗ್ ಕೆಲಸದಲ್ಲಿ ದುಡಿಯುತ್ತಿವೆ. ಮಕ್ಕಳು ಹಸಿದು ಊಟ ಮಾಡುವಾಗ ಅನ್ನದ ಜೊತೆ ಮೈನಿಂಗ್ ಧೂಳು ಹೊಟ್ಟೆ ಸೇರುತ್ತದೆ. ಸಾಲದ್ದಕ್ಕೆ ತಾಲೂಕು ಕಚೇರಿಯ ಕಾಂಪೌಂಡಿಗೆ "ಬಾಲಕಾರ್ಮಿಕರನ್ನು ದುಡಿಸಿಕೊಳ್ಳುವುದು ಅಕ್ಷಮ್ಯ ಅಪರಾಧ. ಹಾಗೆ ಕಂಡಬಂದಲ್ಲಿ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಜುಲ್ಮಾನೆಯನ್ನು ವಿಧಿಸಲಾಗುವುದು" ಎಂದು ಬರೆಯಲಾಗಿದೆ. ಧೂಳು ಮುತ್ತಿ ಈ ಮುಸುಕು ಮುಸುಕಾಗಿ ಕಾಣುತ್ತದೆ. ಬಾಲಕಾರ್ಮಿಕರನ್ನು ಪತ್ತೆ ಹಚ್ಚುವ ಸರ್ಕಾರಿ ವೈದ್ಯರ ತಂಡದ ವೈದ್ಯರೊಬ್ಬರನ್ನು ಮಾತನಾಡಿಸಲಾಯಿತು. 'ಎಲ್ಲಿ ಸಾರ್ ಬಡವರು ಮಕ್ಳು, ಮರಿ ಕಟ್ಟಿಕೊಂಡು ದುಡಿತಾರೆ. ಅದಕ್ಕಾಗಿ ಒಂದು ವಾರ ಸರ್ವೇಕ್ಷಣೆ ಮಾಡಿ ಬಾಲಕಾರ್ಮಿಕರು ಇಲ್ಲ ಎಂದು ಸರ್ಕಾರಕ್ಕೆ ರಿಪೋರ್ಟ್ ಕಳಿಸುತ್ತೇವೆ' ಎಂದರು.

ಗಣಿ ಮಾಲಿಕರ ಕೈಯಲ್ಲಿ ಐನೂರು, ಸಾವಿರದ ನೋಟುಗಳು ಚಿಲ್ಲರೆ ಪೈಸೆಗಳಂತಾಗಿವೆ. ಆದರೆ ಇಲ್ಲಿನ ಹಳ್ಳಿಗಳಲ್ಲಿ ಸುತ್ತಾಡುತ್ತಿದ್ದರೆ ಬಡತನ ದಟ್ಟ ದಾರಿದ್ರ್ಯ ಕಣ್ಣಿಗೆ ರಾಚುತ್ತದೆ. ಈ ಜನಗಳಿಗೆ ಒಂದಷ್ಟು ಕೂಲಿ ಸಿಗುತ್ತದೆ ಅನ್ನುವುದನ್ನು ಬಿಟ್ಟರೆ ಅಂತಹ ಬದಲಾವಣೆ ಆಗಿಲ್ಲ. ಕೆಲವರು ಇದ್ದಕ್ಕಿದ್ದಂತೆ ಊಹಿಸಲು ಸಾಧ್ಯವಾಗದಷ್ಟು ಶ್ರೀಮಂತರಾಗಿದ್ದಾರೆ. ಮನೆಯ ಸ್ವಂತ ಉಪಯೋಗಕ್ಕೆ ಎಂಟೊಂಬತ್ತು ಲಕ್ಷದ ವಾಹನಗಳನ್ನು ಇಟ್ಟಿದ್ದಾರೆ. 'ಮೈನಿಂಗ್ ಕಲ್ಲು' ದೊರೆಯುವ ಹೊಲಗಳನ್ನೆಲ್ಲಾ ಲೀಜಿಂಗ್ (ಒಪ್ಪಂದದ ಮೇಲೆ ಇಂತಿಷ್ಟು ದಿನ ಭೂಮಿಯನ್ನು ಅಗೆದು ರೈತನಿಗೆ ಮರಳಿಸುವುದು.) ಕೊಡಲಾಗುತ್ತದೆ. ಕಲ್ಲು ದೊರೆಯುವ ಪ್ರಮಾಣವನ್ನು ಆಧರಿಸಿ ಒಂದು ಎಕರೆಗೆ ಐದಾರು ಲಕ್ಷಗಳಂತೆ ಮಾತುಕತೆ ಆಗುತ್ತದೆ. ಒಂದು ತಿಂಗಳು ಅಥವಾ ಎರಡು ತಿಂಗಳು ಕಲ್ಲು ಅಗೆದು ಮಟ್ಟಸ ಮಾಡಿ ಭೂಮಿಯನ್ನು ರೈತರಿಗೆ ಹಿಂತಿರುಗಿಸುತ್ತಾರೆ. ಮತ್ತೆ ಆ ಭೂಮಿಯಲ್ಲಿ ಬೆಳೆ ಬೆಳೆಯಲು ಸಾಧ್ಯವಿಲ್ಲ. ಹೀಗಾಗಿ ಸಣ್ಣ, ಮಧ್ಯಮ ವರ್ಗದ ರೈತರು ತಮ್ಮ ಭೂಮಿಯನ್ನು ಗಣಿ ಧಣಿಗಳಿಗೆ ಒಪ್ಪಂದಕ್ಕೆ ಕೊಟ್ಟು ಹಣ ಪಡೆಯುತ್ತಾರೆ. ಭೂಮಿ ಅಗೆದ ನಂತರ ಬೆಳೆ ಬೆಳೆಯಲಾಗದ ಹೊಲದಲ್ಲಿ ಅವರು ಮುಂದಿನ ಬದುಕನ್ನ ಹೇಗೆ ಕಟ್ಟಿಕೊಳ್ಳುತ್ತಾರೋ ತಿಳಿಯದು. ಭೇಟಿ ಮಾಡಲಾದ ಐವತ್ತಕ್ಕೂ ಹೆಚ್ಚು ಕುಟುಂಬಗಳು ಕುಮಾರಸ್ವಾಮಿ ಇನಾಮು ಭೂಮಿ ಪಡೆದವರು. ೧೯೭೩ರ ಹೋರಾಟದಿಂದಾಗಿ ಇನಾಮು ಭೂಮಿಯನ್ನು ತಮ್ಮ ಹೆಸರಿಗೆ ಪಟ್ಟ ಮಾಡಿಸಿಕೊಂಡವರಲ್ಲಿ ಬಹುತೇಕರು ಈ ಭೂಮಿಯನ್ನು ಕಲ್ಲು ಅಗೆಯಲು ಲೀಜಿಂಗ್ ಕೊಟ್ಟು ಬರುವ ಹಣದಲ್ಲಿ ಸುಖವಾಗಿದ್ದಾರೆ. ಕೆಲವರು ಕೋಟ್ಯಾಧಿಪತಿಗಳೂ ಕೂಡ. ಮೈನಿಂಗ್ ಪ್ಲಾಟ್ ಮಾಡಲು ಹೊಲವನ್ನು ಬಾಡಿಗೆ ಕೊಡುವ ಪ್ರಕ್ರಿಯೆಯೂ ಇದೆ. ಪ್ರತಿ ತಿಂಗಳು ಎಕರೆಗೆ ಮೂವತ್ತು ಸಾವಿರದಿಂದ ಒಂದು ಲಕ್ಷದವರೆಗೆ ಬಾಡಿಗೆ ಕೊಟ್ಟ ಉದಾಹರಣೆಗಳಿವೆ. ಸೊಂಡೂರಿನ ಪೊಲೀಸ್ ಸ್ಟೇಷನ್ನಿಗೆ ಭೇಟಿ ನೀಡಿ ರೈಟರ್ ಜೊತೆ ಮಾತಾಡಿದಾಗ "ಹೊಲ ಭಾಗ ಮಾಡಿಕೊಳ್ಳಲು ಅಣ್ಣ ತಮ್ಮಂದಿರ ಜಗಳದ ಕೇಸುಗಳೇ ಈಗ ಹೆಚ್ಚಿವೆ. ಅಕ್ರಮ ಗಣಿಗಾರಿಕೆಯಿಂದ ಹಿಡಿದ ಲಾರಿಗಳನ್ನು ನಿಲ್ಲಿಸಿಕೊಳ್ಳಲು ಸ್ಟೇಶನ್ ಬಳಿ ಜಾಗವಿಲ್ಲ. ಮೈನಿಂಗ್ ಸ್ಥಳಗಳಲ್ಲಿ ಕೊಲೆಗಳು ನಡೆಯುತ್ತವೆ ಎಂದು ಸುದ್ದಿ ಸಿಗುತ್ತದೆ. ಹೋಗಿ ನೋಡಿದರೆ ಡೆಡ್‌ಬಾಡಿಗಳೇ ಸಿಗುವುದಿಲ್ಲ. ಮೈನಿಂಗ್ ಗುಂಡಿಗಳಲ್ಲಿ ಮುಚ್ಚಿ ಬಿಡ್ತಾರೆ" ಎಂದು ಅಸಹಾಯಕರಂತೆ ಮಾತನಾಡಿದರು.

ಎಂದೂ ವಾಸಿಯಾಗದ ರೋಗಿಯಂತೆ ಸೊಂಡೂರಿನ ಸರ್ಕಾರಿ ಆಸ್ಪತ್ರೆ ಇದೆ. ಇಲ್ಲಿನ ವೈದ್ಯರು ಎಲ್ಲರೂ ಆರೋಗ್ಯದಿಂದಿದ್ದಾರೆ ಎನ್ನುವಂತಹ ಶಾಂತ ಸ್ಥಿತಿಯಲ್ಲಿದ್ದರು. ಮೈನಿಂಗ್‌ನಿಂದಾಗಿ ಆರೋಗ್ಯದ ಮೇಲಾಗುವ ಪರಿಣಾಮಗಳ ಬಗ್ಗೆ ಚರ್ಚಿಸಲಾಯಿತು. 'ಅದಕ್ಕಾಗಿ ಸರ್ಕಾರ ವಿಶೇಷ ಕಾರ್ಯಕ್ರಮವನ್ನೇನು ಹಾಕಿಕೊಂಡಿಲ್ಲ. ಮಾಮೂಲಿ ಸರ್ಕಾರಿ ಆಸ್ಪತ್ರೆ ಇದ್ದಂಗೆ ಇದೆ' ಎಂದು ಸಹಜವಾಗಿಯೇ ಉತ್ತರಿಸಿದರು. ೨೦೦೫-೦೬ರ ದಾಖಲಾತಿಗಳ ಪ್ರಕಾರ ೬೬೦೦ರಷ್ಟು ರೋಗಿಗಳು ದಾಖಲಾಗಿದ್ದಾರೆ. ೩,೩೦೦ರಷ್ಟು ಚರ್ಮರೋಗದಿಂದ ಬಳಲುತ್ತಿದ್ದಾರೆ. ದಾಖಲಾದಂತೆ ೭೦ಕ್ಕೂ ಹೆಚ್ಚಿನ ಟಿ.ಬಿ. ಪೇಷೆಂಟ್ಸ್ ಇದ್ದಾರೆ. ಉಸಿರಾಟಕ್ಕೆ ಸಂಬಂಧಿಸಿದ ಖಾಯಿಲೆಯಲ್ಲಿ ೫ ಸಾವಿರಕ್ಕೂ

ಹೆಚ್ಚು ರೋಗಿಗಳು ಬಳಲುತ್ತಿದ್ದಾರೆ. ಲಾರಿ ಕ್ಲೀನರ್ ಪ್ರಕಾಶ ಎಂಬ ಹುಡುಗನ ಹತ್ತಿರ ಮಾತಾಡಿದಾಗ 'ಬೆಂಗ್ಳೂರು, ದಾವಣಗೆರೆ, ಕೂಡ್ಲಿಗಿ, ಹರಿಹರಗಳಿಂದ ಹೆಣ್ಮಕ್ಕಳು ಬರ್ತಾರೆ. ಸೆಕ್ಸು ಭರ್ಜರಿ ನಡೆಯುತ್ತೆ' ಎಂದು ಹೇಳುತ್ತಿದ್ದ. ಇತ್ತೀಚಿನ ವರದಿ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ ಅತಿ ಹೆಚ್ಚು ಏಡ್ಸ್ ರೋಗಿಗಳು ಸೊಂಡೂರಿನಲ್ಲೇ ಇದ್ದಾರೆ ಎಂಬ ವರದಿಯೊಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಒಂದು ರಾತ್ರಿ ಮೈನಿಂಗ್ ನಡೆಯುವ ಸ್ಥಳದಲ್ಲಿ ಉಳಿದಿದ್ದೆ. ಹಗಲಿಗಿಂತ ರಾತ್ರಿಯೇ ಯಥೇಚ್ಛವಾಗಿ ಮೈನಿಂಗ್ ಸಾಗಾಟವಾಗುತ್ತದೆ. ಇದು ನಿಜವಾದ ನರಕದರ್ಶನ. ಅಕ್ರಮ ಸಾಗಾಣಿಕೆ ನಡೆಯುವುದು ರಾತ್ರಿಗಳಲ್ಲೇ. ಇಂತಹ ಅವಸರದ ಅವಗಢಗಳಲ್ಲಿ ಲಾರಿಯ ಗಾಲಿಗೆ ಬಿದ್ದೋ, ಮಣ್ಣು ಕುಸಿದೋ, ಮಹಿಳಾ ಕಾರ್ಮಿಕರ ಮೇಲೆ ಅತ್ಯಾಚಾರ ಮಾಡಿಯೋ ಸಾವುಗಳು ಸಹಜವಾಗಿ ಬಿಟ್ಟಿವೆ. 'ಸಣ್ಣ ಕಂಪ್ಲೆಂಟು ಆಗದೆ ಬೆಟ್ಟದ ಕಂದಕಗಳಲ್ಲಿ ಮುಚ್ಚಿಬಿಡ್ತಾರೆ' ಎಂದು ಇಲ್ಲಿಯ ಕೂಲಿ ಕಾರ್ಮಿಕರೊಬ್ಬರು ಹೇಳುತ್ತಿದ್ದರು. ಕುಮಾರಸ್ವಾಮಿ ದೇವಸ್ಥಾನ ಭಾಗದಲ್ಲಂತೂ ಸುತ್ತಲೂ ಮೈನಿಂಗ್‌ನ ಅಬ್ಬರವಿದೆ. 'ಕುಮಾರಸ್ವಾಮಿ' ಈ ಮೈನಿಂಗ್‌ನ್ನು ಕಾಯುವ ಕಾವಲುಗಾರನಂತೆ ಕಾಣುತ್ತಾನೆ. ಇಂತಹ ಪರಿಸರದ ಮಧ್ಯಯೇ ಸಪ್ಪಳ ಮಾಡುವುದೆ ಬೇಡ ಎಂದು ಗಪ್ಪನೆ ಕುಳಿತಂತೆ ನಂದಿಹಳ್ಳಿಯ ಸ್ನಾತಕೋತ್ತರ ಕೇಂದ್ರವಿದೆ. ೧೯೭೩ರ ಭೂ ಹೋರಾಟದಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಈಗಿರುವ ಫಲವತ್ತಾದ ಸ್ಥಳಬಿಟ್ಟು ಬೇರೆ ಜಾಗದಲ್ಲಿ ಆಗಲಿ ಎನ್ನುವ ಬೇಡಿಕೆ ರೈತರದಾಗಿತ್ತು. ಆದರೆ ಘೋರ್ಪಡೆಯವರ ಹಠದಿಂದಾಗಿ ಸ್ನಾತಕೋತ್ತರ ಕೇಂದ್ರ ಇದೆ ಸ್ಥಳದಲ್ಲಿ ಸ್ಥಾಪನೆಯಾಯಿತು. ಈಗ ಅದನ್ನು ಮೈನಿಂಗ್ ಧನಿಗಳಿಗೆ ಕೊಡುವ ಯೋಚನೆ ಸರ್ಕಾರಕ್ಕಿದೆ. ಇಲ್ಲಿನ ಕನ್ನಡ ಅಧ್ಯಾಪಕಿ ಮಲ್ಲಿಕಾ ಘಂಟಿಯವರು 'ಒಂದು ಕಾಲಕ್ಕೆ ರೈತರು ತಮ್ಮ ಮಕ್ಕಳು ಓದಲೆಂದು ವಿಶ್ವವಿದ್ಯಾಲಯ ಕಟ್ಟಲು ಈ ಭೂಮಿ ಕೊಟ್ಟಿದ್ದಾರೆ. ಈಗ ಕನ್ನಡ ವಿಭಾಗವನ್ನು ಇಲ್ಲಿಂದ ಓಡಿಸುವ ಪ್ರಯತ್ನ ನಡೆದಿದೆ. ಹಾಗೆ ನಮ್ಮನ್ನು ಓಡಿಸುವುದಾದರೆ ಈ ಭೂಮಿಯನ್ನು ರೈತರಿಗೆ ವಾಪಸ್ ಕೊಡಿ. ಕನ್ನಡ ಅಧ್ಯಯನಕ್ಕೆ ತೊಂದರೆಯಾಗುವುದನ್ನು ತಪ್ಪಿಸಲು ಆಗದಿದ್ದರೆ ಕನ್ನಡ ನಾಡಿನ ರೈತರಾದರೂ ಸುಖವಾಗಿರಲಿ' ಎನ್ನುತ್ತಾರೆ.

ಗಣಿಗಾರಿಕೆಯಿಂದಾಗಿ ಜನಸಮುದಾಯದಲ್ಲಿ ಹಲವು ಮಿಥ್‌ಗಳು, ಕಥನಗಳು ಹುಟ್ಟಿಕೊಂಡಿವೆ. ಜನಪದ ಅಧ್ಯಯನಕಾರರು ಜನಪದ ನಶಿಸುತ್ತಿದೆ ಎಂಬ ವಿಷಾದದಿಂದ ಹೊರಬಂದು ಹೊಸರೂಪ ಪಡೆಯುತ್ತಿರುವ ಜನಪದದ ಬಗೆಗೆ ಗಮನಹರಿಸುತ್ತಿಲ್ಲ. ನಿಜಕ್ಕೂ ಗಣಿಗಾರಿಕೆ ಬಗೆಗೆ ಹುಟ್ಟಿಕೊಂಡ ಕಥನಗಳು ಕುತೂಹಲಕಾರಿಯಾಗಿವೆ. 'ಗಣಿಜಾನಪದ' ಎಂಬ ಅಧ್ಯಯನವನ್ನೇ ಮಾಡಬಹುದು. ಕೆಲವು ಮಿಥ್‌ಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆತವು. ಅವುಗಳೆಂದರೆ ಒಂದು: ಇತ್ತೀಚೆಗೆ ಕುಮಾರಸ್ವಾಮಿ ದೇವಸ್ಥಾನಕ್ಕೆ ಗಣಿಧನಿಯೊಬ್ಬರು ಹೆಲಿಕ್ಯಾಪ್ಟರ್ ನಲ್ಲಿ ಇಳಿದು ದರ್ಶನ ಪಡೆದರಂತೆ. 'ಕುಮಾರಸ್ವಾಮಿ ಇದರಿಂದ ಕೋಪಗೊಂಡಿದ್ದಾನೆ. ಮುಂದೊಂದು ದಿನ ಆತ ರಕ್ತಕಾರಿ ಸಾಯುತ್ತಾನೆ' ಎಂದು ಸೊಂಡೂರು ಸುತ್ತಮುತ್ತಲ ಹಳ್ಳಿಗಳಲ್ಲಿ ನಂಬಿಕೆಯೊಂದು ಹುಟ್ಟಿಕೊಂಡಿದೆ. ಪತ್ರಿಕಾ ವರದಿಯಲ್ಲಿ ಈಗಾಗಲೇ ಇಪ್ಪತ್ತಕ್ಕಿಂತ ಹೆಚ್ಚಿನ ಹೆಲಿಕ್ಯಾಪ್ಟರ್ ಗೆ ಆರ್ಡರ್ ಕೊಡಲಾಗಿದೆ. ಇವುಗಳೆಲ್ಲಾ ಬಂದದ್ದೇ ನಿಜವಾದರೆ ಏಷ್ಯಾದಲ್ಲಿಯೇ ಬಳ್ಳಾರಿ ಜಿಲ್ಲೆ ಅತಿ ಹೆಚ್ಚು ಹೆಲಿಕ್ಯಾಪ್ಟರ್ ಹೊಂದಿದ ಜಿಲ್ಲೆಯಾಗುತ್ತದೆ ಎಂಬ ಸುದ್ದಿಯಿದೆ. ಎರಡು: ಬ್ಯಾಂಕ್ ನೌಕರರಿಂದ ಹುಟ್ಟಿಕೊಂಡ ಮಿಥ್‌ಗಳೆಂದರೆ ೫೦೦ ಕೋಟಿ ಇರುವವರು ಸುಮಾರು ನಾಲ್ಕು ನೂರಕ್ಕೂ ಹೆಚ್ಚು ಜನ ಹೊಸಪೇಟೆ, ಸೊಂಡೂರಿನ ಭಾಗವೊಂದಲ್ಲೇ ಇದ್ದಾರೆ. ಗಣಿ ಹಣದ ಮುಂದೆ ಬ್ಯಾಂಕ್‌ಗಳೆ ಹೆದರಿ ತತ್ತಿ ಹಾಕುತ್ತಿದೆ. ಭಾರತದಲ್ಲಿ ಕಲ್ಕತ್ತಾದ ನಂತರ ಬ್ಯಾಂಕಿನ ವ್ಯವಹಾರ ಹೊಸಪೇಟೆ ಬಳ್ಳಾರಿಯಲ್ಲಿಯೇ ಹೆಚ್ಚು ನಡೆಯುತ್ತದೆ ಎಂಬ ಸುದ್ದಿಯಿದೆ. ಮೂರು: ಪ್ಯಾರಾಚೂಟ್‌ನಲ್ಲಿ ಗಣಿ ಧಣಿಗಳು ವಾಯುವಿಹಾರ ಹೋಗುತ್ತಿದ್ದಾರೆ. ಜನರು ಈ ಪ್ಯಾರಾಚೂಟ್ ಬಗೆಗೆ ಕುತೂಹಲ, ಬೆರಗಿನಿಂದ ತಮ್ಮತಮ್ಮಲೇ ಮಾತನಾಡಿಕೊಳ್ಳುತ್ತ 'ಪ್ಯಾರಾಚೂಟ್' ಕಥನಗಳೇ ಪ್ರಸಾರವಾಗುತ್ತಿವೆ. ನಾಲ್ಕು: ಪ್ರಪಂಚ ಪ್ರಳಯ ಆಗೋ ಕೇಡುಗಾಲ ಬಂದಾತಿ. ಅದಕ್ಕೆ ಬೆಟ್ಟಗುಡ್ಡನಾ ಮಾರಿಕೊಳ್ಳಾಕ ಹಚ್ಚಾರ.. ಹಿಂಗ ಆದ್ರ ಇಲ್ಲಿ ಭೂಕಂಪ ಆಕ್ಕಾತಿ', ದುಡ್ಡು ಇರೋ ತನಕ ಸುಖವಾಗಿ ಉಂಡು ಸತ್ರಾತು ಭೂಮಿ ತಾಯಿ ಗರ್ಭ ಬಗೆಯೋ ಪಾಪ ನಮ್ಮನ್ನು ಸುಮ್ನೆ ಬಿಡಲ್ಲ.. ಎಂಬ ನಿಲುವಿನ ಕಥನಗಳು ೬೦-೭೦ರ ಅಸುಪಾಸಿನ ಹಿರಿಯರಲ್ಲಿವೆ. ಐದು: ಸೊಂಡೂರು ಭಾಗದ ಹಳ್ಳಿಗಳಲ್ಲಿ ಧೂಳಿನಿಂದಾಗಿ ಹರಡುವ ಕ್ಷಯರೋಗ ಮುಂತಾದ ಚರ್ಮ ಸಂಬಂಧಿ ಕಾಯಿಲೆಗಳು ಬರುವುದರಿಂದ ಹೆಣ್ಣು-ಗಂಡು ಪಡೆಯಲು ಮತ್ತು ಕೊಡಲು (ಮದುವೆಗೆ) ಸುತ್ತಮುತ್ತಲ ಹಳ್ಳಿ ಜನರು ಹೆದರುತ್ತಿದ್ದಾರೆ. ಆರು: ಮೈನಿಂಗ್‌ನಿಂದಾಗಿ ಸೊಂಡೂರು ಪಕ್ಕದ ತಾಲ್ಲೂಕುಗಳ ಹಳ್ಳಿಹಳ್ಳಿಗಳಲ್ಲಿ ಇಲ್ಲಿನ ಹಣದ ಬಗ್ಗೆ, ಕಲ್ಲು ಮಾರಾಟವಾಗುವ ಬಗ್ಗೆ, ಸಾವುಗಳ ಬಗ್ಗೆ, ಇಲ್ಲಿ ಕೆಲಸ ಮಾಡಿ ಹಳ್ಳಿಗಳಿಗೆ ಹೋಗಿ ಅವರು ಹೇಳಿದ ಭಯಾನಕ ಕಥೆಗಳ ಬಗ್ಗೆ ವಿವಿಧ

ರೀತಿಯ ಕಥನಗಳು ಹುಟ್ಟಿಕೊಂಡಿವೆ. ಹೀಗೆ ಗಣಿಗಾರಿಕೆಯನ್ನೆ ಆಧರಿಸಿದ ಅಥವಾ ಅದರ ಪರಿಣಾಮದಿಂದಾಗಿ ಹುಟ್ಟಿಕೊಂಡ ಕಥನಗಳು ಬೇರೆ ಬೇರೆ ಪಾಠಗಳಲ್ಲಿ ಸಿಗುತ್ತವೆ.

'ಸೊಂಡೂರು' ಹೆಚ್ಚು ಸುದ್ದಿಯಲ್ಲಿದ್ದದ್ದು ಈಗಿನ (೨೦೦೬-೦೭) ಕರ್ನಾಟಕದ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರ ಮೇಲೆ ವಿಧಾನಪರಿಷತ್ ಸದಸ್ಯ ಬಳ್ಳಾರಿಯ ಜನಾರ್ಧನರೆಡ್ಡಿಯವರು ೧೫೫ ಕೋಟಿ ರೂ ಗಣಿ ಲಂಚದ ಆರೋಪ ಹೊರಿಸಿದ್ದರಿಂದ ಕರ್ನಾಟಕ ರಾಜ್ಯದ ರಾಜಕಾರಣದಲ್ಲಿ ಇದು ಮೊದಲೇನಲ್ಲ. ಕೆಂಗಲ್ ಹನುಮಂತಯ್ಯ, ಬಿ.ಡಿ.ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗಲು ಗಣಿಗಾರಿಕೆ ಜೊತೆ ಸಂಬಂಧವಿದ್ದ ಪ್ರಕರಣಗಳು ನಡೆದಿವೆ. ೨೦೦೬ರ ಮಾರ್ಚ್‌ನಲ್ಲಿ ಕರ್ನಾಟಕದ ಅರಣ್ಯ ಸಚಿವ ಸಿ.ಚನ್ನಿಗಪ್ಪ ಮುಖ್ಯಮಂತ್ರಿಗಳಿಗೆ ಗಣಿಗಾರಿಕೆಯ ಬಗ್ಗೆ ಒಂದು ವರದಿ ಸಲ್ಲಿಸಿದ್ದರು. ಈ ವರದಿಯ ಕೆಲವು ಅಂಶಗಳನ್ನು ನೋಡಬಹುದು. ಪ್ರತಿದಿನ ಬಳ್ಳಾರಿ ಜಿಲ್ಲೆಯ ಅರಣ್ಯದಲ್ಲಿ ಸು. ೧೧ರಿಂದ ೨೫ ಸಾವಿರ ಟನ್ನಿನಷ್ಟು ಕಬ್ಬಿಣದ ಅದಿರನ್ನು ಪರವಾನಗಿ ಇಲ್ಲದೆ ಸಾಗಿಸಲಾಗುತ್ತಿದೆ. ಇದಕ್ಕೆ ಈ ಭಾಗದಲ್ಲಿರುವ ಸು. ೨೦ ಕಂಪನಿಗಳು ಜವಾಬ್ದಾರರು. ಇಲ್ಲಿನ ಹಲವು ಕಂಪನಿಗಳು ಪ್ರಭಾವಿ ರಾಜಕಾರಣಿಗಳದ್ದು ಎಂದು ವರದಿಯಲ್ಲಿ ಹೇಳಲಾಗಿದೆ. ಆಕ್ರಮಣ ಮಾಡಿರುವ ೨೦ ಉದ್ದಿಮೆಗಳೆಂದರೆ ಎಂ.ಎಸ್.ಪಿ.ಎಲ್, ಕಾರಿಗನೂರು ಮೈನ್ಸ್, ಕುಮಾರಸ್ವಾಮಿ ಮೈನಿಂಗ್, ಎಂ.ಎಂ.ಪಿ, ಬಿ.ಪಿ.ಡಿ.ಪಿ ಟ್ರನೇಟ್ ಮಿನರಲ್, ಜಿ.ರಂಗೇಗೌಡ ಮೈನ್ಸ್, ಎಫ್.ಬಿ.ಎಂ.ಎಂ, ಪಿ.ಎಸ್.ಕೆ, ನಾರಾಯಣ ಮೈನ್ಸ್, ಪಿ.ಪಿ.ಎಸ್, ವಿ.ಪಿ.ಎ.ಎಸ್.ಕೆ, ಪಿ.ಎಂ.ಸಿ, ಎನ್.ಎಚ್.ಪಿ, ಮುನೀರ್ ಎಂಟರ್ ಪ್ರೈಸಸ್, ವಿ.ಎಂ.ಪಿ, ಬ್ಲಾಕ್‌ಗೋಲ್ಡ್ ಮೈನ್ಸ್, ಬಾಲಸುಬ್ರಮಣ್ಯ ಶೆಟ್ಟಿ ಮೈನ್, ಆರ್.ಪಿ.ಎಸ್, ಎಂ.ಎಂ.ವಿ.ಎಲ್. ಇವಾಗಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆ ಒಟ್ಟು ೩೦,೫೬೨ ಹೆಕ್ಟೇರುಗಳಲ್ಲಿ ನಡೆಯುತ್ತಿದೆ. ದೋಣಿಮಲೆ ಬ್ಲಾಕ್, ೯೭೩೩,೯೮ ಹೆಕ್ಟೇರ್, ನಾರ್ಥ್ ಈಸ್ಟರ್ನ್‌ಬ್ಲಾಕ್ ೯೦೬೪,೮೬, ರಾಮನಮಲೆ ಬ್ಲಾಕ್ ೭೭೬೯, ಸ್ವಾಮಿಮಲೆ ಬ್ಲಾಕ್ ೬೯೯೩,೧೨, ಹೆಕ್ಟೇರುಗಳಲ್ಲಿ ಮೈನಿಂಗ್ ನಡೆಯುತ್ತಿದೆ. ಒಟ್ಟು ೪೮ ಗಣಿ ಉದ್ದಮಿಗಳ ಪೈಕಿ ೨೦ ಉದ್ಯಮಗಳು ಅರಣ್ಯವನ್ನು ಅತಿಕ್ರಮಣ ಮಾಡಿವೆ. ಹೀಗೆ ಸಾಗುವ ವರದಿ ಅಕ್ರಮ ಗಣಿಗಾರಿಕೆಯ ಪ್ರಮುಖ ಅಂಶಗಳ ಬಗ್ಗೆ ಗಮನ ಸೆಳೆಯುತ್ತದೆ. ಅವೆಂದರೆ.

- ಅರಣ್ಯ ಸಂರಕ್ಷಣಾ ಕಾಯ್ದೆ ೧೯೮೦ರ ಅಡಿ ಅನುಮೋದನೆ ಪಡೆಯದೆ ಗಣಿಗಾರಿಕೆ ನಡೆಯುತ್ತಿರುವುದು.
- ನಿಗದಿತ ಲೈಸೆನ್ಸ್ ಪಡೆದ ಪ್ರದೇಶಕ್ಕಿಂತ ಹೆಚ್ಚುವರಿಯಾಗಿ ಒತ್ತುವರಿ ಮಾಡಿಕೊಂಡು ಗಣಿಗಾರಿಕೆ ಮಾಡುತ್ತಿರುವುದು.
- ಅರಣ್ಯ, ಗಣಿ ಮತ್ತು ಭೂಗರ್ಭ ಶಾಸ್ತ್ರ ಇಲಾಖೆ ಹಾಗೂ ಗಣಿ ಮಾಲಿಕರು ಗುಪ್ತವಾಗಿ ಒಪ್ಪಂದ ಮಾಡಿಕೊಂಡಿರುವುದು.
- ರಹದಾರಿಗೆ ಬಳಸಲಾಗುವ ಫಾರಂ ೩೧ನ್ನು ನಕಲಿಯಾಗಿ ಮುದ್ರಿಸಿ ದುರುಪಯೋಗ ಮಾಡಿಕೊಂಡಿರುವುದು.
- ಹಳೆ ದಾಸ್ತಾನು ಮಾಡಿದ ಅದಿರನ್ನು ಇಲಾಖೆಯ ಅಧಿಕಾರಿಗಳ ಸಹಕಾರದೊಂದಿಗೆ ಅನಧಿಕೃತವಾಗಿ ರವಾನಿಸುತ್ತಿರುವುದು.
- ಪರಿಸರ ನಿರ್ವಹಣೆ ಯೋಜನೆಯನ್ನು ಅಳವಡಿಸದೆ ಇರುವುದು.
- ಯಾವುದೇ ತಪಾಸಣೆ ಇಲ್ಲದೆ ಗಣಿ ವಾಹನಗಳಿಗೆ ಅನುಮತಿ ನೀಡಲಾಗುತ್ತಿರುವುದು. ಇಷ್ಟು ಅಂಶಗಳಿಂದಾಗಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ದಾಖಲಿಸುವ ವರದಿ, ಇದನ್ನು ನಿಲ್ಲಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಪಟ್ಟಿ ಕೊಡುತ್ತದೆ. ಸದ್ಯಕ್ಕೆ ಬಳ್ಳಾರಿ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಒಟ್ಟು ೪೮ ಗಣಿ ಉದ್ಯಮಗಳಿವೆ. ಒಟ್ಟಾರೆ ತಪಾಸಣೆಯ ವೇಳೆ ಕಂಡುಬಂದ ಅಕ್ರಮ ವ್ಯವಹಾರಗಳ ಹಿನ್ನೆಲೆಯಲ್ಲಿ ಕೆಳಕಂಡ ಕ್ರಮಗಳನ್ನು ಸಚಿವರು ಶಿಫಾರಸ್ಸು ಮಾಡಿದ್ದಾರೆ ಎನ್ನಲಾಗುವ ಕ್ರಮಗಳು ಹೀಗಿವೆ.

೧. ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘಟನೆ ಹಿನ್ನೆಲೆಯಲ್ಲಿ ತಕ್ಷಣವೇ ಜಾರಿಗೆ ಬರುವಂತೆ ಸಂಬಂಧಪಟ್ಟ ಗಣಿಗಾರಿಕೆಗಳ ಲೈಸೆನ್ಸ್ ರದ್ದು ಪಡಿಸಬೇಕು. ಅಕ್ರಮ ಗಣಿಗಾರಿಕೆ ಬಗ್ಗೆ ಸರ್ವೇಕ್ಷಣೆ ನಡೆಸುವವರೆಗೆ ಗಣಿಗಾರಿಕೆ ಚಟುವಟಿಕೆಗಳನ್ನು ಸ್ಥಗಿತಗೊಳಿಸಬೇಕು.

೨. ಭೂಮಾಪನ, ಗಣಿ ಮತ್ತು ಭೂ ವಿಜ್ಞಾನ, ಅರಣ್ಯ, ಕಂದಾಯ ಇಲಾಖೆಗಳು ಹಾಗೂ ಸ್ಥಳೀಯ ಇಲಾಖೆಯ ಪ್ರತಿನಿಧಿಗಳನ್ನೊಳಗೊಂಡ ತಂಡ ರಚಿಸಿ ಇಡೀ ಅರಣ್ಯ ಪ್ರದೇಶದ ಸರ್ವೇಕ್ಷಣೆ ನಡೆಸಬೇಕು.

೩. ನಿಯಮ ಉಲ್ಲಂಘಿಸಿರುವ ಗಣಿ ಮಾಲಿಕರು ಎಷ್ಟು ಪ್ರಭಾವ ಶಾಲಿಯಾಗಿದ್ದರೂ ಅವರ ಮೇಲೆ ಸೂಕ್ತಕ್ರಮ ಕೈಗೊಳ್ಳಬೇಕು.

೪. ಕಳೆದ ೫-೧೦ ವರ್ಷಗಳಿಂದ ಈ ಪ್ರದೇಶದಲ್ಲಿ ಕೆಲಸ ಮಾಡಿರುವ ಮತ್ತು ಮಾಡುತ್ತಿರುವ ಅರಣ್ಯ, ಸಾರಿಗೆ, ಪೊಲೀಸ್ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಿ ಅವರಿಂದ ಆಗಿರುವ ನಷ್ಟವನ್ನು ವಾಪಸು ಮಾಡಿಸುವುದು. ಜೊತೆಗೆ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದು.

೫. ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾಯಿಸುವುದು.

೬. ಅರಣ್ಯ ಜಮೀನು ವ್ಯಾಪ್ತಿ ಗುರುತಿಸಲು ಕಲ್ಲುಕಂಬ ನೆಡುವುದು.

೭. ಗಣಿ ಮಾಡಿದ ಮೇಲೆ ಮಣ್ಣ ಸಮತಟ್ಟು ಮಾಡಿ ಸಸಿ ನೆಡುವಂತೆ ಕ್ರಮಕೈಗೊಳ್ಳುವುದು.

೮. ಗಣಿ ಮಾಲೀಕರು ಅರಣ್ಯ ಇಲಾಖೆಯ ಸುತ್ತೋಲೆಗಳನ್ನು ಪಾಲಿಸುವಂತೆ ಬಿಗಿ ಬಂದೋಬಸ್ತು ಮಾಡಬೇಕು.

೯. ರಹದಾರಿ ಬಳಕೆಯಾದ ದಾಖಲೆಗಳನ್ನು ಗುರುತಿಸುವುದು, ಪರಿಸರ ಸಂರಕ್ಷಣೆ ಯೋಜನೆಯ ಪಾಲನೆ ಮಾಡುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು.

ಈ ಯಾವುದೇ ಕ್ರಮಗಳು ಈಗಿನ ಗಣಿಗಾರಿಕೆಯ ಮೇಲೆ ಆದಂತೆ ಕಾಣುತ್ತಿಲ್ಲ. ಈ ವರದಿಯು ತಯಾರಾಗಲು ಮುಖ್ಯಮಂತ್ರಿಗಳ ಗಣಿಹಗರಣ ಪ್ರಕರಣ ಕಾರಣವಾಯಿತು. ೨೦೦೬ರ ಫೆಬ್ರವರಿ ೧೨,೧೩ರಂದು ಅರಣ್ಯ ಸಚಿವ ಸಿ. ಚೆನ್ನಿಗಪ್ಪನವರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಎ.ಕೆ.ವರ್ಮಾ ಹಾಗೂ ಅವರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಪಿ.ಜೆ. ದಿಲೀಪ್ ಕುಮಾರ್ ಅವರ ಜತೆಗೆ ಬಳ್ಳಾರಿ ಜಿಲ್ಲೆಗೆ ಭೇಟಿ ನೀಡಿ ತಪಾಸಣೆ ನಡೆಸಿ, ಆನಂತರ ಇಲಾಖೆಯಲ್ಲಿ ಚರ್ಚಿಸಿದ್ದರ ಫಲವಾಗಿ ಈ ವರದಿ ರೂಪುಗೊಂಡಿದೆ. ಸಚಿವರು ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ "ಬಳ್ಳಾರಿಯ ಭೇಟಿ ನಂತರ ನಾನು ಕಂಡುಕೊಂಡ ಸತ್ಯಗಳನ್ನು ತಮ್ಮ ಅಗತ್ಯ ಕ್ರಮಕ್ಕಾಗಿ ಇಡುತ್ತಿದ್ದೇನೆ. ಇದಕ್ಕೆ ಕಾರಣವಾಗಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಲ್ಲಿ ಸಾವಿರಾರು ಕೋಟಿ ರೂಪಾಯಿ ನಷ್ಟವನ್ನು ತಪ್ಪಿಸಬಹುದು"

[4] ಎಂದು ಹೇಳಿದ್ದಾರೆ.

ಸೊಂಡೂರು ಪರಿಸರವನ್ನು ಅರ್ಥಮಾಡಿಕೊಳ್ಳಲು ಈಗ ಸ್ವಲ್ಪಮಟ್ಟಿಗೆ ಸಾಧ್ಯವಾಗಿರಬಹುದು. ಈ ಭಾಗದ ಹವಾಗುಣ, ಪರಿಸರ, ಎಲ್ಲವೂ ಕೆಟ್ಟು, ಹೋಗಿದೆ.. ಆದರೆ ಯಾವ ಪರಿಸರವಾದಿಗಳು, ರೈತಸಂಘಗಳು, ಯುವ ಸಂಘಗಳು ಇಂತಹ ಪರಿಸರ ನಾಶದ ಬಗೆಗೆ ಧ್ವನಿ ಎತ್ತುತ್ತಿಲ್ಲ. ಬ್ಲಾಕ್‌ಮೇಲೆ ಮಾಡಿ ಲಕ್ಷಗಟ್ಟಲೆ ಹಣ ಮಾಡುವುದಕ್ಕಾಗಿಯೇ ಯುವಜನ ಮತ್ತು ಪರಿಸರ ಸಂರಕ್ಷಣಾ ಹೆಸರಿನಲ್ಲಿ ಹಲವಾರು ಸಂಘ ಸಂಸ್ಥೆಗಳಿಗೆ ಪರವಾನಿಗಿ ಪಡೆಯಲಾಗುತ್ತಿದೆ. ಆದರೆ, ಸೊಂಡೂರು ನಾಗರಿಕ ಹಿತರಕ್ಷಣ ಸಮಿತಿ ಮಾತ್ರ ಆರೋಗ್ಯಕರ ಚಳವಳಿ ರೂಪಿಸುತ್ತಾ ಬಂದಿದೆ. ಡಾ. ಚನ್ನಬಸಪ್ಪ, ಟಿ.ಎಂ. ಶಿವಕುಮಾರ ಅವರನ್ನು ಒಳಗೊಂಡ ಒಂದು ಯುವಕರ ತಂಡವಿದೆ. ಇತ್ತೀಚೆಗೆ ಏಪ್ರಿಲ್ ೩೦, ೨೦೦೭ರಂದು 'ಸೊಂಡೂರು ಬಂದ್' ಆಚರಿಸಲಾಯಿತು. ತುಂಗಾಭದ್ರ ಜಲಾಶಯದಿಂದ ಕುಡಿಯುವ ನೀರು ಪೂರೈಕೆ, ರಸ್ತೆಗಳ ದುರಸ್ತಿ, ಒಳಚರಂಡಿ ವ್ಯವಸ್ಥೆ, ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ನಿಲ್ಲಿಸಲಾದ ಪದವಿಗಳ ಪುನಾರಾಂಭ ಇವು ಬೇಡಿಕೆಗಳಾಗಿದ್ದವು.

ಇದನ್ನು ಜಿಲ್ಲಾ ಪಂಚಾಯ್ತಿ ವಿರೋಧಿಸಿತು. ಈ ಮಧ್ಯೆ ಬಂದ್ ಯಶಸ್ವಿಯಾಯಿತು. ಜನರೆಲ್ಲ ಸ್ಪಂದಿಸಿದರು. ಈ ಬಂದ್‌ಗೆ ಸಿ.ಪಿ.ಐ, ಕರ್ನಾಟಕ ರಕ್ಷಣಾ ವೇದಿಕೆ, ಸವಿತಾ ಸಮಾಜ, ಅಡಪದ ಅಪ್ಪಣ ಸಮಾಜ, ಕರ್ನಾಟಕ ಸ್ತ್ರೀಶಕ್ತಿ ಗುಂಪುಗಳು, ಟೈಲರ್ಸ್ ಅಸೋಷಿಯೇಷನ್ ಮುಂತಾದ ಸಂಘಟನೆಗಳು ಈವರೆಗಿನ ಮೌನ ತೊರೆದು ಬೆಂಬಲಿಸಿದವು. ಆದರೆ ಇಲ್ಲಿನ ಗ್ರಾಮೀಣ ಭಾಗದಲ್ಲಿ ಜನರಂತೂ ಕೋಟಿ ಲೆಕ್ಕದ ಗಣಿ ಮಾಲಿಕರೆದುರು ಉಸಿರಾಡಲು ಆಗದ ಸ್ಥಿತಿಯಲ್ಲಿದ್ದಾರೆ. ಧೂಳಿನಿಂದಾಗಿ ಬೆಳೆ ಬೆಳೆಯುವುದೇ ಕಷ್ಟವಾಗುತ್ತಿದೆ. ಹಾಗಾಗಿ ರೈತ ಸಂಘದವರು 'ಧೂಳಿನ ಹಾನಿಯ ಪರಿಹಾರಕ್ಕಾಗಿ ಹೋರಾಟ' ಎಂಬ ಚಳವಳಿಯನ್ನು ಮಾಡಲಾಗಿದೆ. 'ಒಂದು ಎಕರೆಗೆ ನಾಲ್ಕು ಸಾವಿರದಂತೆ ಪರಿಹಾರ ಕೊಡುವುದಕ್ಕೆ ಗಣಿ ಧನಿಗಳು ಒಪ್ಪಿಕೊಂಡರು. ಅದರಲ್ಲಿ ರೈತ ಸಂಘವೇ ಎಕರೆಗೆ ಒಂದು ಸಾವಿರ ತಾನು ಉಳಿಸಿಕೊಂಡು ಮೂರು ಸಾವಿರದಂತೆ ಹಂಚಿದರು' ಎಂದು ಲಕ್ಷ್ಮೀಪುರದ ನಾಗಪ್ಪ ಹೇಳುತ್ತಾರೆ. ಹೀಗೆ ಚಳವಳಿಗಳು ಶಕ್ತಿಯನ್ನು ಕಳೆದುಕೊಂಡ ಸ್ಥಿತಿಯಲ್ಲಿ ನಾವಿದ್ದೇವೆ. ಆದರೆ ೧೯೭೩ರಲ್ಲಿ ೪೨ ದಿನಗಳ ಕಾಲ ಈ ಭಾಗದ ರೈತರು ಭೂಮಿಗಾಗಿ ಹೋರಾಟ ಮಾಡಿದರು ಎಂಬುದನ್ನು ನೆನಪಿಸಿಕೊಳ್ಳಬೇಕಿದೆ.

ಈಗಿನ ಗಣಿಗಾರಿಕೆಯ ಮಾಹಿತಿಯನ್ನು ನೋಡಿದರೆ ಯಾವ ಭೂಮಿಯ ಹಕ್ಕಿಗಾಗಿ ಹೋರಾಟ ನಡೆಯಿತೋ, ಅದೇ ಭೂಮಿ ಇಂದು ಗಣಿಗಾರಿಕೆಯ ಮೂಲಕ ಭೂಮಾಲಿಕ ಬಂಡವಾಳಶಾಹಿಗಳನ್ನೇ ಬೆಳೆಸುತ್ತಿದೆ. ಇನಾಮು ಭೂಮಿ ಪಡೆದವರಲ್ಲಿ ಕೆಲವರು ತಮ್ಮ ಭೂಮಿಯನ್ನು ಇಂತಿಷ್ಟು ಹಣಕ್ಕೆ ಗಣಿಧನಿಗಳಿಗೆ ಕೊಡುತ್ತಾರೆ. ಅವರ ಈ ಹೊಲ ಅಗೆದು ಕೋಟಿಗಟ್ಟಲೆ ಸಂಪಾದಿಸಿ ಮತ್ತಷ್ಟು ಶ್ರೀಮಂತರಾಗುತ್ತಾರೆ. ಹಾಗಾಗಿ ಸಾಮಾನ್ಯ ರೈತ ವರ್ಗಕ್ಕೆ ಯಾವ ಉಪಯೋಗವೂ ಆಗಿಲ್ಲ. ಮತ್ತೆ ಇದರ ಲಾಭ ಪಡೆಯುವವರು ಮಧ್ಯಮ ವರ್ಗದ ರೈತರು, ಬಂಡವಾಳಶಾಹಿ ಭೂಮಾಲಿಕರು. ಹಾಗಾಗಿ ರೈತ ಮತ್ತು ಭೂಮಿಯ ಸಂಬಂಧಗಳು ಮತ್ತೆ ಶ್ರೀಮಂತರಿಂದಲೇ ನಿರ್ಧಾರವಾಗುತ್ತಿವೆ.

## ೨. ಸೊಂಡೂರು ಸಂಸ್ಥಾನದ ರಾಜವಂಶ

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರು, ಉಜ್ಜಿನಿಯ ಭಾಗದ ಹಳ್ಳಿಗಳೆಲ್ಲಾ ಸೊಂಡೂರು ರಾಜರ ಬಗೆಗೆ ಕಥೆಗಳಿದ್ದವು. ರಾಜರು ಹುಲಿ, ಚಿರತೆಗಳನ್ನು ಬೇಟೆಯಾಡುತ್ತಾರೆ. ಅವರ ಸಿಂಹಾಸನದ ಮೇಲೆ ಹುಲಿಯ ಚರ್ಮವಿದೆ, ಕೋವಿ (ಬಂದೂಕ)ಗಳಿವೆ.... ಅಂತೆಲ್ಲಾ ಹೇಳುತ್ತಿದ್ದರು. ಇವುಗಳ ನಡುವೆ ಪ್ರಸಿದ್ಧ ಕಥೆಯೆಂದರೆ ಹಂದಿಬೇಟೆಯದು. ಸೊಂಡೂರು ರಾಜರಿಗೆ ಮಿಕದ (ಅಡವಿಹಂದಿ) ಮಾಂಸವಿಲ್ಲದ ಊಟವಿಲ್ಲ ಎನ್ನುವುದು. ಈ ಭಾಗದಲ್ಲಿ ಸೊಂಡೂರಿನಿಂದ ಬೇಟೆಯ ಜೀಪೊಂದು ಬರುತ್ತಿತ್ತು. ಓಪನ್ ಜೀಪಿನಲ್ಲಿ ಹಿಂದೆ ನಾಲ್ಕು ಜನ ಕೋವಿ ಹಿಡಿದು ನಿಂತಿರುತ್ತಿದ್ದರು. ಊರುಗಳ ಪಕ್ಕ ಇರುವ ಬೈರದೇವರ ಗುಡ್ಡ, ಕರೆಕಲ್ಲು ಗುಡ್ಡ ಮುಂತಾದ ಕಡೆ ಅಡವಿ ಹಂದಿಗಳು ಹೆಚ್ಚಿದ್ದವು. ಅದಕ್ಕಾಗಿ ಜೀಪು ಆಗಾಗ ಬರುತ್ತಿತ್ತು. ಹುಡುಗರೆಲ್ಲಾ 'ರಾಜರ ಜೀಪು ಬಂತು' ಎಂದು ಕೇಕೆ ಹಾಕುತ್ತಿದ್ದರು. ಇದು ೧೯೮೯ರ ಘಟನೆ. ಆ ಹೊತ್ತಿನಲ್ಲಿ ಸೊಂಡೂರು ರಾಜರು ಜನ ಸಮುದಾಯದಲ್ಲಿ ಹೆಚ್ಚು ನೆನಪುಳಿದದ್ದು ಮಿಕದ ಮಾಂಸದ ಜೊತೆ. ಆಗ ಈ ಭಾಗದಲ್ಲಿ ಓಪನ್ ಜೀಪು ಬಂತೆಂದರೆ ಸೊಂಡೂರು ರಾಜವಂಶವೇ ಬಂದಂತೆ ಭಾಸವಾಗುತ್ತಿತ್ತು.

ಸೊಂಡೂರು ಸುತ್ತಮುತ್ತಲ ಹಳ್ಳಿಗಳಲ್ಲಿ ರಾಜವಂಶದ ಬಗೆಗೆ ಕಥನಗಳಿವೆ. ಇವುಗಳ ಲಿಖಿತ ಚರಿತ್ರೆಗಿಂತ ವರ್ಣರಂಜಿತವಾದವು. ಜನರಲ್ಲಿ ರಾಜರ ಜೀವಂತಿಕೆ ಇರುವುದು ಈ ಕಾರಣಕ್ಕಾಗಿಯೆ. ಇನ್ನು ರಾಜವಂಶದ ಚರಿತ್ರೆಗೆ ಹಲವು ಆಕರಗಳಿವೆ. ಮದ್ರಾಸ್ ಜಿಲ್ಲಾ ಗೆಜೆಟಿಯರ್, ಬಳ್ಳಾರಿ ಜಿಲ್ಲಾ ಗೆಜೆಟಿಯರ್, ಸರ್ ಥಾಮಸ್ ಮನ್ರೋ ಆಡಳಿತದ ಅವಧಿಯ ರಿಪೋರ್ಟುಗಳು, ಮರಾಠರ ಚರಿತ್ರೆಗೆ ಸಂಭಂದಿಸಿದ ದಾಖಲೆಗಳು ಟಿ.ಬಿ.ಕೇಶವರಾವ್ ಅವರ 'ಸೊಂಡೂರಿನ ಘೋರ್ಪಡೆ ರಾಜಮನೆತನ' ಕೆ.ವಿ. ನಂದ್ಯಪ್ಪ ಅವರ ಸಂಪಾದನೆಯ ಸೊಂಡೂರು 'ತಾಲ್ಲೂಕು ದರ್ಶನ', ಯಜಮಾನ್ ಶಾಂತರುದ್ರಪ್ಪ ಅವರ ಪ್ರಕಟಿತ ಕಾದಂಬರಿ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರ 'ಬಳ್ಳಾರಿ ಜಿಲ್ಲೆಯ

ಪಾಳೆಯಗಾರರು' ಕೃತಿ. ಮುಂತಾದವುಗಳಲ್ಲಿ ರಾಜವಂಶದ ಚರಿತ್ರೆಯು ದಾಖಲಾಗಿದೆ. ಈ ಬಗೆಯ ಅಧ್ಯಯನಗಳಲ್ಲಿ ಚರಿತ್ರೆಯನ್ನು ಗ್ರಹಿಸುವ ಪಾರಂಪರಿಕ ವಿಧಾನವೊಂದಿದೆ.

ಸೊಂಡೂರು ಚರಿತ್ರೆ ಮೌರ್ಯ, ಶಾತವಾಹನರಿಂದ ಆರಂಭವಾಗುತ್ತದೆ. ಆ ನಂತರ ಕದಂಬ, ಗಂಗ, ಬಾದಾಮಿ, ಕಲ್ಯಾಣಿ ಚಾಲುಕ್ಯರು, ರಾಷ್ಟ್ರಕೂಟರು, ದೇವಗಿರಿ ಸೇವುಣರು, ವಿಜಯನಗರ ಹಾಗೂ ವಿಜಾಪುರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಕರ್ನಾಟಕದ ಕೈಫಿಯತ್ತುಗಳಲ್ಲಿ ಕುಮಾರರಾಮನ ವಂಶಸ್ಥರಾದ ಮರಳನವರು ವಂಶಸ್ಥರಿಗೆ ನಾಡತಳವಾರಿಕೆ ಮಾಡಲು ವಿಜಯನಗರದ ಕೃಷ್ಣದೇವರಾಯರು ೨ ಜನರಿಗೆ ಎರಡು ಗ್ರಾಮಗಳನ್ನು ಜಹಗೀರಾಗಿ ನೀಡುತ್ತಾರೆ. ಇವರಲ್ಲಿ ಬೊಮ್ಮಂತ ರಾಜನು ಆರಂಭದ ಅರಸ. ಇವನ ಮಗ ಬಿಸಾಳ ರಾಜನಿಗೆ ಸೊಂಡೂರು ಪ್ರದೇಶವನ್ನು ಬಿಟ್ಟುಕೊಡುತ್ತಾರೆ. ಅಂದು ಸೊಂಡೂರಿಗೆ ಸೇರಿದ ಗ್ರಾಮಗಳೆಂದರೆ ಎತ್ತಿನಹಟ್ಟಿ, ಮುರಾರಿಪುರ, ವೀರಾಪುರ, ಹತ್ತಿನಹಾಳು, ಹೊಸಹಳ್ಳಿ, ಜೋಗ, ಸೊಂಡೂರು ಸೀಮೆಗೆ ಅನೇಕ ರಾಜರು ಬೇಟೆಗೆಂದು ಬಂದ ಪ್ರಸಂಗಗಳಿವೆ. ಮಧ್ಯಕಾಲೀನ ಸಂದರ್ಭದಲ್ಲಿ ಬಹುದೊಡ್ಡ ಅರಣ್ಯ ಪ್ರದೇಶವಾಗಿತ್ತು. ದರೋಜಿ ಕೆರೆ ಒಡೆದಾಗ ಅದರ ಮುಂದೆ ಒಂದು ಒಡಕು ಇರುತ್ತದೆ. ಅದನ್ನು ಕಟ್ಟಲು ಬಿಸಾಳ ರಾಜ ಹೇಳಿ ಹೋದನು. ಹಾಗೆಯೇ ಚೆನ್ನಯರಾಜನು ಒಡೆಯನಾಗಿ “'ಬಿಸಾಳನಾಯಕನ ವಡಕು' ಎಂದು ವಡಕಿಗೆ ಕೆರೆ ಕಟ್ಟಿಸಿದನು. ಇಂದು 'ವಡ್ಡು' ಎಂದು ಆ ಗ್ರಾಮಕ್ಕೆ ಹೆಸರು. ಈಗ ಸೊಂಡೂರಿನಿಂದ ತೋರಣಗಲ್ಲಿಗೆ ಹೋಗುವ ಮಾರ್ಗದಲ್ಲಿದೆ. ಸೊಂಡೂರು ಸಂಸ್ಥಾನದ ಪೂರ್ವದಲ್ಲಿ ಬೇಡ ದೊರೆಗಳು ಇಲ್ಲಿ ಆಳ್ವಿಕೆ ನಡೆಸಿದ್ದಾರೆ

[1]ಎಂದು ತಿಳಿದುಬರುತ್ತದೆ.
ಕ್ರಿ.ಶ. ೧೩೩೬ರಿಂದ ಕ್ರಿ.ಶ. ೧೫೬೫ರವರೆಗೆ ದಕ್ಷಿಣ ಭಾರತ ವಿಜಯನಗರದ ವಶದಲ್ಲಿ ಇದ್ದಿತು. ೧೫೬೫ರಲ್ಲಿ ವಿಜಯನಗರದ ಪತನಾನಂತರ ಬಿಜಾಪುರದ ಆದಿಲ್‌ಶಾಹಿ ರಾಜರು ಈ ಭಾಗವನ್ನು ೧೨೦ ವರ್ಷಗಳ ಕಾಲ ಆಳಿದರು. ೧೬೮೬ರಲ್ಲಿ ಔರಂಗಜೇಬನು ಆದಿಲ್‌ಶಾಹಿಗಳನ್ನು ಸೋಲಿಸಿ ಅವರ ರಾಜ್ಯವನ್ನು ಗೆದ್ದುಕೊಂಡ. ಆಗ ಬಿಜಾಪುರದ ಸುಲ್ತಾನರ ಆಳ್ವಿಕೆಯ ಕಾಲ. ಸುಲ್ತಾನರು ಶಾಹೀ ರಾಜ್ಯದ ವಿಸ್ತರಣೆಯಲ್ಲಿದ್ದರು. ಮರಾಠ ಸರದಾರರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹಿಂದೂರಾಜ್ಯವನ್ನು ಗೆಲ್ಲುವ ಕನಸುಕಂಡರು. ಮರಾಠ ಅರಸರ ಮೂಲ ಮಹಾರಾಷ್ಟ್ರ. ಇವರು ಮೊದಲು ಆಂಧ್ರದಲ್ಲಿದ್ದರು. ಗುತ್ತಿಯಿಂದ ಸೊಂಡೂರಿಗೆ ಬಂದರೆಂದು ತಿಳಿದು ಬರುತ್ತದೆ. ಈ ರಾಜ ಮನೆತನದವರಿಗೆ 'ಘೋರ್ಪಡೆ' ವಂಶದವರೆಂದು ಹೆಸರು. ಶಿವಾಜಿ ವಂಶಕ್ಕೆ ಸಂಬಂಧಿಸಿದ ಬೋಂಸ್ಲೆ ಮನೆತನದ ಸಂಬಂಧಿಕರೇ ಘೋರ್ಪಡೆಯವರು. ಕ್ರಿ.ಶ. ೧೪೭೯ರಲ್ಲಿ ದುರ್ಗದ ಕೋಟೆಯನ್ನು ಪಡೆಯುವಲ್ಲಿ ಯಶಸ್ವಿಯಾದ ಕಾರಣ (ಹಿಂದೊಮ್ಮೆ ಇವರು ಯುದ್ಧದಲ್ಲಿ ಕೋಟೆ ಹತ್ತಲು ಉಡ ಬಳಸಿದ್ದರಿಂದ ಆ ಮನೆತನಕ್ಕೆ ಘೋರ್ಪಡೆ ಎಂದಾಯಿತಂತೆ. ಘೋರ್ಪಡೆ ಎಂದರೆ ಮರಾಠಿಯಲ್ಲಿ ಉಡ ಎಂದರ್ಥ) ರಾಜ್ಯ ಸ್ಥಾಪಿಸಿ ತಮ್ಮ ಹೆಸರಿನ ಮುಂದೆ ಘೋರ್ಪಡೆ ಎಂದು ಕರೆದುಕೊಂಡರು.

ಬಿಜಾಪುರದ ಸುಲ್ತಾನರ ಸೇನೆಯಲ್ಲಿ ಮಲ್ಲೋಜಿರಾವ್ (ಮಹಾಜಿರಾವ್) ಸರದಾರನಾಗಿದ್ದ. ಈತನ ಸೇವಾನಿಷ್ಠೆಗೆ 'ಹಿಂದೂರಾವ್ ಮತ್ತು ಮಮಲಿಕತ್ ಮದಾರ್' ಎಂಬ ಬಿರುದನ್ನು ಕೊಟ್ಟರು. ಈತನಿಗೆ ಮೂವರು ಮಕ್ಕಳು. ಸಂತೋಜಿರಾವ್, ಬಹಿರೋಜಿರಾವ್ ಮತ್ತು ಮಲ್ಲೋಜಿರಾವ್. ಇವರಲ್ಲಿ ಸಂತೋಜಿರಾವ್ ಸುಲ್ತಾನರ ಸೈನ್ಯದಲ್ಲಿ ಸೇನಾಪತಿಯಾಗಿದ್ದ. ಈತನು ಶಿವಾಜಿ ಮಹಾರಾಜ ಮತ್ತು ಸಂಬಾಜಿ ಮಹಾರಾಜರಷ್ಟೇ ಬಲಿಷ್ಠನು. ಮುಂದೆ ಕೊಲ್ಲಾಪುರ ಸಂಸ್ಥಾನದ ಜಹಗೀರುದಾರನಾಗಿ ಬಲಿಷ್ಠನಾಗುತ್ತಿದ್ದಂತೆಯೇ ೧೬೯೮ರಲ್ಲಿ ಈತನ ಕೊಲೆಯಾಯಿತು. ಎರಡನೆಯ ಮಗ ಬಹಿರೋಜಿರಾವನಿಗೆ ಸುಲ್ತಾನರು 'ಹಿಂದೂರಾವ್, ಮಮಲಿಕ್ ಮದಾರ್' ಬಿರುದನ್ನಿತ್ತರು. ಈತ ಚಾಣಾಕ್ಷ ಪರಾಕ್ರಮಿ. ಈತನ ತಮ್ಮ ಮಲ್ಲೋಜಿರಾವ್‌ನೂ ಸಾಹಸಿ. ಈತನಿಗೆ ಸುಲ್ತಾನರು 'ಅಮೀರ್-ಉಲ್-ಉಮರಾವ್' ಎಂದು ಗೌರವಿಸಿದ್ದರು. ಈತನೂ ಕೊಲ್ಲಾಪುರ ಸಂಸ್ಥಾನದ ಜಹಗೀರಾದಾರನಾಗಿದ್ದು. ಬಹಿರೋಜಿಗೆ ನಾಲ್ಕು ಜನ ಮಕ್ಕಳು. ಹಿರಿಯ ಮಗ ಸಯ್ಯಾಜಿರಾವ್ ಬಾಲ್ಯದಲ್ಲಿ ಮೃತನಾದ. ಎರಡನೆ ಮಗನೂ ಯುದ್ಧದಲ್ಲಿ ಮಡಿದ. ಮೂರನೆಯವನಾದ ಸಿದ್ದೋಜಿರಾವ್ ಸೊಂಡೂರನ್ನು ಗೆದ್ದುಕೊಂಡನು. ೧೭೨೮ರಲ್ಲಿ ತನ್ನ ಅಧಿಕಾರ ಸ್ಥಾಪಿಸಿದನು.

ಟಿ.ಬಿ.ಕೇಶವರಾವ್‌ರು ಹೀಗೆ ಬರೆಯುತ್ತಾರೆ. ಜರಮಲಿ ಹಳ್ಳಿಯ ಪೆನ್ನನಾಯಕನಿಗೆ ವಿಜಯನಗರದ ಅರಸ ಅಚ್ಯುತರಾಯನಿಗೆ ಯುದ್ಧದಲ್ಲಿ ಉತ್ತಮ ಸೇವೆಸಲ್ಲಿಸಿದ್ದ. ಆತನ ನಂತರದ ಪಾಳೆಯಗಾರರು ಮತ್ತೆ ಕೆಲವು ಹಳ್ಳಿಗಳನ್ನು ಪಾಳೆಯ ಪಟ್ಟಿಗೆ ಸೇರಿಸಿಕೊಂಡರು. ಸೊಂಡೂರಿನ ಕಣಿವೆ ಪ್ರದೇಶವೂ ಜರಿಮಲೆ ಪಾಳೆಯಗಾರನಿಗೆ ಆಧೀನವಾಯಿತು. ಔರಂಗಜೇಬನ ಮರಣಾ ನಂತರ (೧೭೦೭) ಮರಾಠರ ಛತ್ರಪತಿ ಸಾಹು ‘ಚೌಥ್’ ಎಂಬ ಕಪ್ಪವನ್ನು ಇಡೀ ದಕ್ಷಿಣ ಭಾರತದಲ್ಲಿ ಸಂಗ್ರಹ ಮಾಡುವ ಅಧಿಕಾರವನ್ನು ಪಡೆದದ್ದು, ಇದರಿಂದ ಮರಾಠರು ದಕ್ಷಿಣದ ಮೇಲೆ ದಾಳಿ ನಡೆಸಿದ್ದರು. ಹೀಗಾಗಿ ಬಳ್ಳಾರಿ ಭಾಗದಲ್ಲೂ ಇವರ ಪ್ರವೇಶವಾಯಿತು. ಜರಮಲಿ ಪಾಳೆಯಗಾರನ ದೌರ್ಬಲ್ಯದಿಂದಾಗಿ ಅರಾಜಕ ವ್ಯವಸ್ಥೆ ನೆಲೆಸಿತ್ತು. ಚಿತ್ರದುರ್ಗ ಮತ್ತು ಹರಪನಹಳ್ಳಿ ಪಾಳೆಯಗಾರರು ಜರಮಲಿಯನ್ನು ಕ್ರಮೇಣ ವಶಪಡಿಸಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಮರಾಠರ ವೀರ ಸೇನಾನಿ ಸಿದ್ದೋಜಿರಾವ್ ಘೋರ್ಪಡೆಯು (೧೭೧೮-೪೨) ಕ್ರಿ.ಶ. ೧೭೨೮ರಲ್ಲಿ ಸೊಂಡೂರು ಪ್ರದೇಶವನ್ನು ಕಷ್ಟವಿಲ್ಲದೆ ಜರಿಮಲೆ ಪಾಳೆಗಾರರಿಂದ ಗೆದ್ದುಕೊಂಡ.[2]

ಸಿದ್ದೋಜಿರಾವ್ ಸೊಂಡೂರು ಸಂಸ್ಥಾನದ ಮೂಲ ಪುರುಷ. ಬಹಿರೋಜಿಯ ತಮ್ಮ ಸಿದ್ದೋಜಿಯ ಚಿಕ್ಕಪ್ಪನೂ ಆದ ಮಲ್ಲೋಜಿಗೆ ಒಬ್ಬನೇ ಮಗನಿದ್ದ. ಆತನ ಹೆಸರು ಶಿವರಾವ್. ತಂದೆಯ ನಂತರ ದತ್ತವಾಡದ ಜಹಗೀರನ್ನು ಆಳಿಕೊಂಡಿದ್ದ. ದತ್ತವಾಡದ ಜಹಗೀರಾದರು, ಕಪಸಿ ಜಹಗೀರುದಾರರು, ಸೊಂಡೂರು ಪಾಳೆಗಾರರು ಇವರೆಲ್ಲಾ ಒಂದೇ ರಕ್ತ ಸಂಬಂಧಿಗಳಾಗಿದ್ದರು. ಒಬ್ಬರಿಗೆ ಆಪತ್ತು ಬಂದರೆ ಎಲ್ಲರೂ ನೆರವಾಗುತ್ತಾ ಸಹಕಾರದಿಂದ ತಮ್ಮ ಜಹಗೀರುಗಳನ್ನು ಭದ್ರಪಡಿಸಿಕೊಂಡಿದ್ದರು.

೧೭ನೇ ಶತಮಾನದ ಉತ್ತರಾರ್ಧ ದಕ್ಷಿಣ ಭಾರತ ರಾಜಕೀಯವಾಗಿ ಸಂಕಷ್ಟದಲ್ಲಿತ್ತು. ಶಾಹೀ ಮನೆತನಗಳ ಒಳಜಗಳ, ಪೇಶ್ವೆಗಳ ರಾಜ್ಯ ವಿಸ್ತಾರದ ದಾಹ, ಮೈಸೂರಿನಲ್ಲಿ ಹೈದರಾಲಿಯ ಮಹಾತ್ವಾಕಾಂಕ್ಷೆ, ಇವುಗಳಿಂದಾಗಿ ಇಡೀ ದಕ್ಷಿಣ ಭಾರತ ಗೊಂದಲಮಯವಾಗಿತ್ತು. ಜನಸಾಮಾನ್ಯರಿಗೆ ನೆಮ್ಮದಿ ಇರಲಿಲ್ಲ. ಯುದ್ಧದ ಬೀತಿ ವ್ಯಾಪಕವಾಗಿತ್ತು. ಈ ಸಮಯದಲ್ಲಿಯೂ ಸಿದ್ದೋಜಿರಾವ್ ಸೊಂಡೂರನ್ನು ಸಮರ್ಪಕವಾಗಿ ಮುನ್ನಡೆಸುತ್ತಿದ್ದ. ಈತನಿಗೆ ನಾಲ್ಕು ಜನ ಹೆಂಡತಿಯರು. ಇವರಿಗೆ ದೌಲತ್‌ರಾವ್, ಭುಜಂಗರಾವ್, ಗೋಪಾಲ್‌ರಾವ್, (ಸುಭಾನ್‌ರಾವ್) ಮುರಾರಿರಾವ್ ಎಂಬ ಮಕ್ಕಳಾದರು. ಭುಜಂಗರಾವ್ ಬಾಲ್ಯದಲ್ಲೇ ಮಡಿದ. ಗೋಪಾಲ್‌ರಾವ್ ಅಸಮರ್ಥನಾಗಿದ್ದ ಕಾರಣ ಮುರಾರಿರಾವ್ (ಹಿರಿಯ ಮಗ) ಸೊಂಡೂರಿನ ವಾರಸುದಾರನಾದ. ತಮ್ಮ ದೌಲತ್‌ರಾವ್ ಧಾರವಾಡದ ಬಳಿ ಇರುವ ಗಜೇಂದ್ರಗಡ ಸಂಸ್ಥಾನದ ಜಹಗೀರುದಾರನಾದನು.

ಎಲ್ಲವೂ ಸರಿಯಾಗಿದೆ ಎನ್ನುವಾಗಲೇ ಮೈಸೂರಿನ ಹೈದರಾಲಿಯು ತನ್ನ ಮಹಾ ಸೈನ್ಯವನ್ನು ಸೊಂಡೂರಿನ ಮೇಲೆ ದಾಳಿ ಮಾಡಲು ಬಿಟ್ಟನು. ಮುರಾರಿರಾವ್ ಇದರಿಂದ ವಿಚಲಿತನಾಗಿ ಚಿಕ್ಕಪ್ಪನ ಮಕ್ಕಳಾದ ಯಶವಂತರಾವ್, ಮಲ್ಲೋಜಿರಾವ್ ಇವರಿಗೆ ಸೈನ್ಯ ತರಲು ಹೇಳಿದ. ಈ ಇಬ್ಬರ ಸೈನ್ಯ ಬರುವ ನಡು ಹಾದಿಯಲ್ಲಿಯೇ ಹೈದರನ ಸೈನ್ಯದ ದಾಳಿಗೆ ಸಿಕ್ಕಿತು. ಯಶವಂತರಾವ್ ಅಲ್ಲಿಯೇ ಮಡಿದ. ಮಲ್ಲೋಜಿರಾವ್ ಮಾತ್ರ ಉಪಾಯವಾಗಿ ತಪ್ಪಿಸಿಕೊಂಡು ಮುರಾರಿರಾವ್‌ನನ್ನು ಸೇರಿಕೊಂಡನು. ನಂತರ ಹೈದರ ಸೈನ್ಯ ಸೊಂಡೂರಿನ ಮೇಲೆ ಮಾಡಿದ ದಾಳಿಯಿಂದಾಗಿ ಮಲ್ಲೋಜಿರಾವ್‌ನೂ ಹೋರಾಡುತ್ತಲೇ ಮಡಿದ. ಮುರಾರಿರಾವ್ ಶರಣಾಗತನಾದ. ಹೈದರ್ ಸೊಂಡೂರನ್ನು ವಶಪಡಿಸಿಕೊಂಡು ಮುರಾರಿರಾವ್‌ನನ್ನೂ ಮತ್ತು ಆತನ ದತ್ತುಪುತ್ರ ಶಿವಾಜಿರಾವ್‌ನನ್ನು ಕೊಪ್ಪಳದ ಜೈಲಿನಲ್ಲಿ ಬಂಧಿಸಿಟ್ಟ, ಮುರಾರಿರಾವ್ ೧೭೭೯ರಲ್ಲಿ, ಶಿವರಾವ್ ೧೭೭೯ರಲ್ಲಿ ಕಾರಾಗೃಹದಲ್ಲಿಯೇ ಮರಣ ಹೊಂದಿದ್ದನು.[3]

ಇದರಿಂದ ನೊಂದ ಮರಾಠರು ಸಮಯ ಕಾಯುತ್ತಿದ್ದರು. ದತ್ತವಾಡದ ಯಶವಂತರಾವ್ ಮಕ್ಕಳಾದ ಶಿವರಾವ್ ಮತ್ತು ವೆಂಕಟರಾವ್ ಟಿಪ್ಪುಸುಲ್ತಾನರಿಂದ ಸೊಂಡೂರು ಹಿಂದಕ್ಕೆ ಪಡೆಯಲು ಹೋರಾಡಿದರು. ೧೭೮೫ರಲ್ಲಿ ಶಿವರಾವ್ ಯುದ್ಧದಲ್ಲಿ ಹತನಾದ. ೧೭೯೦ರಲ್ಲಿ ವೆಂಕಟರಾವ್ ಟಿಪ್ಪುವಿನ ಸೈನ್ಯದಿಂದ ಹೊರದೂಡಲ್ಪಟ್ಟ. ಆಗ ಅಣ್ಣನ ಮಗ ಸಿದ್ದೋಜಿಯನ್ನು ರಕ್ಷಿಸಿಕೊಂಡು ಬಂದನು. ಆತ ಯುದ್ಧದಲ್ಲಿ ಗಾಯಗೊಂಡಿದ್ದರಿಂದ ಸ್ವಲ್ಪ ದಿನಗಳ ನಂತರ ಪುತ್ರ ಸಂತಾನವಿಲ್ಲದೆ ಮಡಿದ. ಆತನ ಹೆಂಡತಿ ಮಲ್ಲೋಜಿರಾವ್‌ನ ಮಗ ಖಂಡೇರಾಯನ ಹಿರಿಯ ಮಗ ಶಿವಾಜಿರಾವ್‌ನನ್ನು ದತ್ತು ತೆಗೆದುಕೊಂಡಳು. ಈತನು ೧೭೯೯ರಲ್ಲಿ ಸೊಂಡೂರನ್ನು ಟಿಪ್ಪುಸುಲ್ತಾನನಿಂದ ಗೆದ್ದುಕೊಂಡ. ಈ

ಸಮಯದಲ್ಲಿ ಟಿಪ್ಪು ಶ್ರೀರಂಗಪಟ್ಟಣದಲ್ಲಿ ಯುದ್ಧ ಮಾಡುತ್ತ ಇಂಗ್ಲಿಷರ ಗುಂಡಿಗೆ ಬಲಿಯಾದ. ಟಿಪ್ಪುವಿನ ಸಾವು ಶಿವರಾವ್‌ನಿಗೆ ಸೊಂಡೂರನ್ನು ಭದ್ರಪಡಿಸಿಕೊಳ್ಳಲು ನೆರವಾಯಿತು.

ಇಂಪೀರಿಯಲ್ ಗೆಜೆಟಿಯ್‌ನಲ್ಲಿ ಹೈದರಾಲಿ ಸೊಂಡೂರನ್ನು ಪಡೆದ ನಂತರ ಗುತ್ತಿಯನ್ನು ೧೭೭೯ರಲ್ಲಿ ಆಕ್ರಮಿಸಿದನು. ತಂದೆ ಆರಂಭಿಸಿದ ನೀತಿಯನ್ನು ಟಿಪ್ಪು ಸುಲ್ತಾನನು ಮುಂದುವರಿಸಿದನು. ೧೭೮೫ರಲ್ಲಿ ಸೊಂಡೂರಿಗೆ ಬಂದ ಟಿಪ್ಪು ಕದನ ನಡೆಸಿ ಮುರಾರಿರಾಯರ ದತ್ತು ಪುತ್ರ (ಗೋಪಾಲರಾವ್‌ರ ಮಗ) ಶಿವಾಜಿರಾವ್‌ನನ್ನು ಕೊಲೆಗೈದನು. ೧೭೯೦ರಲ್ಲಿ ಶಿವಾಜಿರಾವ್ ಸಹೋದರನಾದ ವೆಂಕಟರಾವ್ (ಸಿದ್ದೋಜಿ ಅಳಿಯ) ಎಲ್ಲರ ಪರವಾಗಿ ಟಿಪ್ಪು ವಿರುದ್ಧ ಹೋರಾಡಿ ಸೊಂಡೂರನ್ನು ಮತ್ತೆ ವಶಪಡಿಸಿಕೊಂಡನು. ೧೭೯೨ರಲ್ಲಿ ಇಂಗ್ಲಿಷರಿಗೂ ಟಿಪ್ಪುವಿಗೂ ಏರ್ಪಟ್ಟ ಒಪ್ಪಂದದಂತೆ ಘೋರ್ಪಡೆ ವಂಶದವರಿಗೆ ಸೊಂಡೂರಿನ ಅಧಿಕಾರವನ್ನು ನೀಡಲಾಯಿತು. ನಂತರ ಶ್ರೀರಂಗಪಟ್ಟಣದ ಅವನತಿಯವರೆಗೂ ಟಿಪ್ಪು ಸೊಂಡೂರನ್ನು ಮುತ್ತಿಗೆ ಹಾಕಲಿಲ್ಲ ಎಂಬ ಉಲ್ಲೇಖವಿದೆ.

೧೮೧೭ರಲ್ಲಿ ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಸರ್ ಥಾಮಸ್ ಮನ್ರೋ ನೇತೃತ್ವದಲ್ಲಿ ಪೇಶ್ವೆಯವರಿಗೂ ಇಂಗ್ಲಿಷರಿಗೂ ಆದ ಬೆಸ್ಸಿನ್ ಒಪ್ಪಂದದಂತೆ ಸೊಂಡೂರನ್ನು ಇಂಗ್ಲಿಷರಿಗೆ ಬಿಟ್ಟುಕೊಡಲಾಯಿತು. ಆಗ ಇಂಗ್ಲಿಷರು ಶಿವರಾವನಿಗೆ ೧೦೦೦ ಪೌಂಡಿಗೆ ಸಮವಾದ ಭೂಮಿ ಮತ್ತು ಅನುಕಂಪದ ಹಣ ನೀಡಿದರು. ಪೇಶ್ವೆ ಪತನದ ನಂತರ ೧೮೧೮ರಲ್ಲಿ ಸೊಂಡೂರನ್ನು ಮರಳಿ ಘೋರ್ಪಡೆ ಮನೆತನಕ್ಕೆ ವಹಿಸುವಂತೆ ಸರ್ಕಾರ ಅನುಮತಿ ನೀಡಿತು. ಶಿವರಾವನು ೧೮೨೯ರಲ್ಲಿ ರಾಜನಾಗಿ ಸೊಂಡೂರು ರಾಜ್ಯವನ್ನು ಮೊದಲ ಸ್ಥಿತಿಗೆ ತರಲು ಪ್ರಯತ್ನಿಸಿದ. ಶಿವರಾವನಿಗೆ ಮಕ್ಕಳಿಲ್ಲದ ಕಾರಣ ತಮ್ಮ ಭುಜಂಗರಾವನ ಮಗ ವೆಂಕಟರಾವನನ್ನು ದತ್ತು ತೆಗೆದುಕೊಳ್ಳಲಾಯಿತು. ಶಿವರಾವ ೧೮೪೦ರಲ್ಲಿ ನಿಧನ ಹೊಂದಿದ. ಆ ನಂತರ ಕಂಪನಿ ಸರಕಾರವು ವೆಂಕಟರಾವ ಅವರಿಗೆ ೧೮೪೧ರಲ್ಲಿ ಸನದುಕೊಟ್ಟು ಸೊಂಡೂರು ಸಂಸ್ಥಾನದ ರಾಜನೆಂದು ಘೋಷಿಸಲಾಯಿತು. ಈತ ೧೭ ವರ್ಷಗಳ ಕಾಲ ಆಳ್ವಿಕೆ ನಡೆಸಿದ.

ವೆಂಕಟರಾವ ಅವರು ಅಧಿಕಾರವನ್ನು ವಿಲಾಸಿ ಜೀವನಕ್ಕಾಗಿ ಬಳಸಿದರು. ಈತನಿಗೆ ಆರು ಜನ ಹೆಂಡತಿಯರು, ನಾನಿ ಸಾಹೇಬ, ಮಾನಾಬಾಯಿ, ಕೃಷ್ಣಬಾಯಿ, (ದಾದಿಬಾಯಿ) ಆಬಾಯಿ ಸಾಹೇಬ, ನಾನಿಬಾಯಿ, ರಾಣಿಬಾಯಿ. ಈತನ ಹಿರಿಯ ಮಗ ಶಿವಷಣ್ಮುಖರಾವ್, ಈತ ಅಪ್ರಬುದ್ಧನಾಗಿದ್ದಾಗಲೇ ಸನದನ್ನು ೧೮೬೩ರಲ್ಲಿ ಪಡೆದ. ಈತನು ಬಳ್ಳಾರಿಯ 'ಲಂಡನ್ ಮಿಷನ್'ಗೆ ಸಂಬಂಧಿಸಿದ ಜೆ.ಮೆಕಾರ್ಥಿಯನ್ನು ತನ್ನ ಆಡಳಿತದ ಸಲಹೆಗಾರನನನ್ನಾಗಿ ನೇಮಕ ಮಾಡಿಕೊಂಡಿದ್ದನು. ಇವನಿಗೆ ಜನವರಿ ೨೪.೧೮೭೬ರಂದು ಗವರ್ನರ್ ಜನರಲ್ ಆದ ಲಾರ್ಡ್‌ನಾರ್ಥ್ ಬ್ರೂಕನ್ 'ರಾಜ' ಎಂಬ ಬಿರುದನ್ನು ಅಭಿದಾನ ಮಾಡಿದನು. ಶಿವಷಣ್ಮುಖರಾವ್ ೧೮೭೮ರಲ್ಲಿ ತೀರಿದ ನಂತರ ಐದನೆ ಹೆಂಡತಿ ನಾನಿಬಾಯಿಯ ಮಗ (ಜನನ ಮಾರ್ಚ್೨೯, ೧೮೫೦) ರಾಮಚಂದ್ರ ವಿಠಲರಾವ್ ಇದ್ದ ಮಕ್ಕಳಲ್ಲಿ ಬಲಿಷ್ಠನೂ ಚಾಣಾಕ್ಷನೂ ಆಗಿದ್ದ. ಕಾರಣ ಫೆಬ್ರವರಿ ೫, ೧೮೭೯ರಲ್ಲಿ ಬ್ರಿಟಿಷ್ ಕಂಪನಿ ಸರಕಾರವು ಸನದು ಕೊಟ್ಟು ಸೊಂಡೂರಿನ ರಾಜನನ್ನಾಗಿಸಿದರು. ರಾಮಚಂದ್ರ ವಿಠಲರಾವ್ ೨೯ ವರ್ಷಗಳ ಕಾಲ ಸೊಂಡೂರನ್ನು ಆಳಿದ. ಈತನಿಗೆ ಇಬ್ಬರು ಮಕ್ಕಳು. ಶಬಾಬಾಯಿ ಮತ್ತು ವೆಂಕಟರಾವ್ ಶಬಾಬಾಯಿಯನ್ನು ಬೆಳಗಾವಿ ಜಿಲ್ಲೆಯ ತೋದಗಲ್ ಜಹಗೀರುದಾರ ಗೋವಿಂದರಾವ್ ಬಾಪು ಸಹಿಬ್ ಸಿಲ್ಲೆ ಇವರಿಗೆ ಕೊಟ್ಟು ವಿವಾಹ ಮಾಡಲಾಯಿತು. ವಿಠಲರಾವ್‌ನ ಕೊನೆಯ ದಿನಗಳಲ್ಲಿ ವೆಂಕಟರಾವ್ ಹುಟ್ಟಿದ (ಜುಲೈ ೧೦, ೧೮೯೭), ಮುಂದೆ ವಿಠಲರಾವ್ ಡಿಸೆಂಬರ್ ೨, ೧೮೯೭ರಲ್ಲಿ ನಿಧನರಾದರು.

ಆರು ತಿಂಗಳ ಮಗು ವೆಂಕಟರಾವನಿಗೆ ಬ್ರಿಟಿಷ್ ಸರಕಾರವು ರಾಜಸನದು ನೀಡಿ ೧೮೯೩ರಲ್ಲಿ ರಾಜನೆಂದು ಘೋಷಿಸಿತು. ವೆಂಕಟರಾವ್ ಕಿರು ವಯಸ್ಕನಾಗಿದ್ದರಿಂದ ಈತನ ಪರವಾಗಿ ಸಹೋದರ ಮಾಲೋಜಿರಾವ್ ಬಾಳಾಸಾಹೇಬ ಮತ್ತು ಸಂಸ್ಥಾನದ ದಿವಾನರು ರಾಜ್ಯವಾಳಿದರು. ೧೯೨೩ರಲ್ಲಿ ಆಂಗ್ಲ ಸರಕಾರ ನೇರವಿರುವ ರಾಜಕೀಯ ಸಂಬಂಧ ಆಡಳಿತವನ್ನು ಸ್ಥಾಪಿಸಿತು. ಆಗ ಸೊಂಡೂರು ಸ್ವಾಯತ್ತ ಆಡಳಿತವನ್ನು ಹೊಂದಿದ ಪ್ರಮುಖ ಸಂಸ್ಥಾನಗಳಲ್ಲೊಂದಾಯಿತು. ರಾಜನ ಎಲ್ಲ ಕಂದಾಯ ಜವಾಬ್ದಾರಿ, ಪೊಲೀಸ್, ರಾಜ್ಯ, ನಾಗರೀಕ ಸೇವೆ, ನ್ಯಾಯ ತೀರ್ಮಾನ, ಕ್ರಿಮಿನಲ್ ನ್ಯಾಯಾಂಗ ಮುಂತಾದವುಗಳನ್ನು ಮದ್ರಾಸ್ ಸರ್ಕಾರ ನೋಡಿಕೊಳ್ಳುತ್ತಿತ್ತು. ರಾಜನು

ಬಳ್ಳಾರಿ ಜಿಲ್ಲಾ ಕಲೆಕ್ಟರ್ ನ ಆದೇಶವನ್ನು ಪಾಲಿಸಬೇಕಿತ್ತು. ಮುಖ್ಯ ಹೊಣೆ, ಸನ್ನದು ನೀಡುವ ಹಕ್ಕು, ದತ್ತು ಸ್ವೀಕಾರ ಮುಂತಾದವನ್ನು ಬ್ರಿಟಿಷ್ ಸರಕಾರ ವಹಿಸುತ್ತಿತ್ತು. ರಾಜನ ಪ್ರತಿನಿಧಿಯಾದ (Agent)ವನು ತಾಮ್ರಪತ್ರಗಳ ದಾಖಲೆಗಳನ್ನು ಸಾಕ್ಷಾಧಾರಕ್ಕಾಗಿ ಇನಾಂ ರೀತಿಯಲ್ಲಿ ದೇಣಿಗೆ ಕೊಟ್ಟಿದ್ದಾನೆ. ಬಡನಿ, ವಡ್ಡ, ತಳವಾರ ಮುಂತಾದವರಿಗೆ ಗ್ರಾಮಗಳ 'ನರಪತಿ' ಎಂಬ ಬಿರುದು ನೀಡಿ ಇಂತಿಷ್ಟು ಗೌರವ ಹಣವನ್ನು ಕೊಡುತ್ತಿದ್ದರು ಎಂದು ಆಂಗ್ಲರ ಆಡಳಿತ ವರದಿಗಳಿಂದ ತಿಳಿಯುತ್ತದೆ.

ಸೊಂಡೂರು ಸಂಸ್ಥಾನದ ಕೊನೆಯ ದೊರೆ ಯಶವಂತರಾವ್, ಹಿಂದೂರಾವ್ ಘೋರ್ಪಡೆ. ರಾಮಚಂದ್ರ ವಿಠಲರಾವ್‌ನ ಮಗ ವೆಂಕಟರಾವನ ಆಡಳಿತದ ನಂತರ ಆತನ ಒಬ್ಬಳೇ ಮಗಳು ಸುಶೀಲ ರಾಜೆ ಸೊಂಡೂರಿನ ಸಂಸ್ಥಾನಕ್ಕೆ ವಾರಸುದಾರಳಾಗಬೇಕಿತ್ತು. ಆದರೆ ಈಗೆ ಮಹಿಳೆಯಾಗಿದ್ದ ಕಾರಣಕ್ಕೋ, ಅಪ್ರಾಪ್ತಳು ಎಂಬ ಕಾರಣಕ್ಕೋ ತಿಳಿಯದು. ಬ್ರಿಟಿಷ್ ಕಂಪನಿಯು ಧಾರವಾಡದ ಬಳಿ ಇರುವ ಗಜೇಂದ್ರಗಡ ಸಂಸ್ಥಾನದ ವಂಶಸ್ಥರಾದ ಯಶವಂತರಾವ್ ಹಿಂದೂರಾವ್ ಘೋರ್ಪಡೆಯವನರನ್ನು ೧೯೨೪ರಲ್ಲಿ ಸನದು ಕೊಟ್ಟು ರಾಜನನ್ನಾಗಿಸಿದರು. ಯಶವಂತರಾವರ ಮೂಲ ವಂಶಾವಳಿ ಲಭ್ಯವಿಲ್ಲ. ಹಿಂದೊಮ್ಮೆ ೧೭೭೬ರಲ್ಲಿ ಹೈದರ್ ಅಲಿ ದಾಳಿಯಿಂದಾಗಿ ಮುರಾರಿರಾವ್, ಶಿವರಾವ್ ಮಡಿದಾಗಲೂ ರಾಜಗಾದಿಗೆ ಮುಂದುವರೆಯಲು ಸೊಂಡೂರು ಸಂಸ್ಥಾನದಲ್ಲಿ ರಾಜ ವಂಶಸ್ಥರೇ ಇರಲಿಲ್ಲ. ಆಗ ರಕ್ತಸಂಬಂಧಿಗಳಾದ ದತ್ತವಾಡ ಸಂಸ್ಥಾನದ ಯಶವಂತರಾವ್ ಮಕ್ಕಳಾದ ಶಿವರಾವ್ ವೆಂಕಟರಾವ್ ಸೊಂಡೂರು ಸಂಸ್ಥಾನದ ಅಧಿಕಾರ ವಹಿಸಿಕೊಂಡಿದ್ದರು. ಈಗಲೂ ಅಂತಹದ್ದೇ ಸಂದರ್ಭ. ಗಜೇಂದ್ರಗಡದ ವಾರಸುದಾರರೂ ಸೊಂಡೂರು ಘೋರ್ಪಡೆ ಮನೆತನದ ರಕ್ತ ಸಂಬಂಧಿಯೂ ಆದ ಯಶವಂತರಾವ್ ಹಿಂದೂರಾವ್ ಘೋರ್ಪಡೆ (೧೯೨೮-೧೯೪೯) ಸೊಂಡೂರಿನ ರಾಜರಾದರು. ಬಳ್ಳಾರಿಯ ಯಜಮಾನ ಶಾಂತರುದ್ರಪ್ಪನವರು 'ಸುಶೀಲ ರಾಜೆಗೆ ನ್ಯಾಯವಾಗಿ ಸಿಗಬೇಕಾದ ರಾಜಗಾದಿ ಬ್ರಿಟಿಷರ ಕುತಂತ್ರದಿಂದಾಗಿ ಯಶವಂತರಾವ್ ಅವರಿಗೆ ಸಿಕ್ಕಿತು. ಇವರು ಸೊಂಡೂರಿನ ವಾರಸುದಾರರಲ್ಲ' ಎಂದು ಕರಪತ್ರ ಹಂಚಿದರು. ಯಶವಂತರಾವ್ ಹಿಂದೂರಾವ್ ಘೋರ್ಪಡೆಯವರ ಹಿರಿಯ ಮಗನೇ ಮುರಾರಿರಾವ್ ಯಶವಂತರಾವ್ ಘೋರ್ಪಡೆ (ಎಂ.ವೈ.ಘೋರ್ಪಡೆ).

ಸೊಂಡೂರು ಅರಸು ಮನೆತನದ ಚರಿತ್ರೆಯನ್ನು ಭಾರತ ಸರ್ಕಾರದ ಗೆಜೆಟಿರ್ನಲ್ಲಿ ದಾಖಲಿಸಲಾಯಿತು. ಈ ಚರಿತ್ರೆಯನ್ನೇ ಘೋರ್ಪಡೆ ಮನೆತನ ತಮ್ಮ ಪರವಾಗಿ ದಾಖಲಿಸಲು ಅಧಿಕಾರವನ್ನು ಬಳಸಲಾಯಿತು ಎಂದು ಹುಬ್ಬಳ್ಳಿಯಿಂದ ಬರುತ್ತಿದ್ದ 'ಪ್ರಪಂಚ' ಪತ್ರಿಕೆಯಲ್ಲಿ ಪಾಟೀಲ ಪುಟ್ಟಪ್ಪ ಬರೆಯುತ್ತಾರೆ. ಅದರ ಒಂದು ಭಾಗ ಹೀಗಿದೆ: 'ಎಂ.ವೈ.ಘೋರ್ಪಡೆ ಕರ್ನಾಟಕದ ಅರ್ಥಸಚಿವರಾದ ಮೇಲೆ ನವೆಂಬರ್ ೯,೧೯೭೨ರಲ್ಲಿ ಬಳ್ಳಾರಿ ಜಿಲ್ಲಾ ಗೆಜೆಟಿಯರ್ ಪ್ರಕಟವಾಯಿತು. ಇದರಲ್ಲಿ ಸೊಂಡೂರಿನ ಬಗ್ಗೆ ಒಳ್ಳೊಳ್ಳೆ ಮಾತುಗಳನ್ನು ಬರೆಯಲಾಯಿತು. ಗಾಂಧೀಜಿ ಕೊಟ್ಟ ದೇವಾಲಯ ಪ್ರವೇಶದ ಸರ್ಟಿಫಿಕೇಟನ್ನು ಹಾಕಿದ್ದಾರೆ. ಆದರೆ ಘೋರ್ಪಡೆಯವರು ರೈತರ ಜಮೀನನ್ನು ವಶಪಡಿಸಿಕೊಂಡು ಬಳಸುತ್ತಾರೆಂದು ಗೆಜೆಟಿಯರ್ ನಲ್ಲಿ ಬರೆದಿಲ್ಲ. ಗೆಜೆಟಿಯರ್ನ ೮೭ನೇ ಪುಟದಲ್ಲಿ ಸೊಂಡೂರಿನ ಘೋರ್ಪಡೆ ರಾಜರ ವಂಶಾವಳಿಯನ್ನು ಕೊಟ್ಟಿದೆ. ವಿಠಲರಾಯ ಅವರ ಮಗ ವೆಂಕಟರಾವರ ಮಗ ಯಶವಂತರಾವ್ ಎಂದು ವಂಶವೃಕ್ಷದಲ್ಲಿ ಬರೆಯಲಾಗಿದೆ. ಆದರೆ ವಾಸ್ತವೆಂದರೆ ದೊರೆ ವೆಂಕಟರಾವ್ ೧೯೨೭ರಲ್ಲಿ ಮರಣ ಹೊಂದಿದರು. ಅವರಿಗೆ ಇದ್ದ ಸಂತಾನವೆಂದರೆ ಸುಶೀಲ ರಾಜೆ ಒಬ್ಬಳೆ. ತಮ್ಮ ತಂದೆಯ ಮೃತದೇಹದೊಂದಿಗೆ ಬೊಂಬಾಯಿಯಿಂದ ಬರುತ್ತಿದ್ದ ಅವಳನ್ನು ಯಶವಂತರಾವ್ ಅವರು ಅಕ್ಕಲಕೋಟೆಯಲ್ಲಿ ಸಂಬಂಧಿಕರ ಬಳಿ ಉಳಿಯುವಂತೆ ಮಾಡಿ, ಇವರು ಸೊಂಡೂರನ್ನು ಹಿಡಿದುಕೊಂಡರು'[4] ಹೀಗೆ 'ಗೆಜೆಟಿಯರ್‌ನಲ್ಲಿ ದಾಖಲಾದ ಚರಿತ್ರೆಯನ್ನು ತಮ್ಮ ಅಧಿಕಾರದಿಂದ ತಾವೇ ಸೊಂಡೂರಿನ ವಂಶಜರೆಂದು ನಿರೂಪಿಸುವಂತೆ ಮಾಡಲಾಗಿದೆ. ವಿಪರ್ಯಾಸವೆಂದರೆ ಗೆಜೆಟಿಯರ್ ನೋಡಿ ಚರಿತ್ರೆ ದಾಖಲಿಸುವ ಅಧ್ಯಯನಕಾರರೆಲ್ಲಾ ಅದುವೇ ಸೊಂಡೂರು ಚರಿತ್ರೆ ಎಂದು ಮತ್ತೆ ಮತ್ತೆ ಬರೆಯುತ್ತ ಬಂದಿದ್ದಾರೆ.

ಯಶವಂತರಾವ್ ಘೋರ್ಪಡೆಯವರಿಗೆ ೭ ಜನ ಮಕ್ಕಳು. ಹಿರಿಯ ಮಗ ಮುರಾರಿರಾವ್ ಯಶವಂತರಾವ್ ಘೋರ್ಪಡೆ (ಎಂ.ವೈ), ರಣಜಿತ್ ಸಿಂಗ್ ಘೋರ್ಪಡೆ, ವಿಜಯಸಿಂಹ ಘೋರ್ಪಡೆ, ಶಿವಾಜಿರಾವ್ ಘೋರ್ಪಡೆ, ವೆಂಕಟರಾವ್ ಘೋರ್ಪಡೆ, ನಿರ್ಮಲಾದೇವಿ

ಘೋರ್ಪಡೆ, ವಿಜಯದೇವಿ ಘೋರ್ಪಡೆ. ಇವರಲ್ಲಿ ರಾಜಕೀಯ ಪ್ರವೇಶಿಸಿದ್ದು ಎಂ.ವೈ.ಘೋರ್ಪಡೆಯವರು. ಇವರು ಡಿಸೆಂಬರ್ ೭, ೧೯೩೧ರಲ್ಲಿ ಜನಿಸಿದರು. ಇವರ ಬಾಲ್ಯದ ಶಿಕ್ಷಣ ಸೊಂಡೂರಿನಲ್ಲಾಯಿತು. ೧೯೫೨ರಲ್ಲಿ ಎಂ.ಎ. ಎಕನಾಮಿಕ್ಸ್, ಇಂಗ್ಲೆಂಡಿನ ಕೇಮ್ ಬ್ರಿಜ್ ವಿಶ್ವವಿದ್ಯಾಲಯದಲ್ಲಿ ಮುಗಿಸಿದರು. ೧೯೫೯ರಲ್ಲಿ ಉಪಚುನಾವಣೆಯ ಮೂಲಕ ರಾಜಕೀಯ ಪ್ರವೇಶವಾಯಿತು. ೧೯೭೨ರಲ್ಲಿ ದೇವರಾಜ ಅರಸು ಸರ್ಕಾರದಲ್ಲಿ ಅರ್ಥಸಚಿವರಾಗಿದ್ದರು. ವೀರೇಂದ್ರ ಪಾಟೀಲ್, ವೀರಪ್ಪ ಮೊಯಿಲಿ, ಎಸ್.ಎಂ. ಕೃಷ್ಣ ಮುಖ್ಯಮಂತ್ರಿಗಳಾಗಿದ್ದಾಗ ಪಂಚಾಯತ್ ರಾಜ್ ಮಂತ್ರಿಯಾಗಿದ್ದರು. ಇವರು ಅತ್ಯುತ್ತಮ ಛಾಯಾಚಿತ್ರಕಾರರು. ೧೯೬೮ರಲ್ಲಿ ವೈಲ್ಡ್ ಲೈಫ್‌ಗೆ ಸದಸ್ಯರಾಗಿದ್ದರು. ಇವರಿಗೆ ಬ್ರಿಟನ್‌ನಲ್ಲಿ ರಾಯಲ್ ಫೋಟೋಗ್ರಾಫಿಕ್ಸ್ ಸೊಸೈಟಿ ಆಫ್ ಗ್ರೇಟ್ ಬಿಟ್ (ಎಫ್.ಆರ್.ಪಿ.ಎಸ್) ಸಂಸ್ಥೆಯಿಂದ ಫೆಲೋಷಿಪ್ ಸಿಕ್ಕಿದೆ. ಇವರ ಅತ್ಯುತ್ತಮ ಪೋಟೋ ಸಂಗ್ರಹದ 'ಸನ್‌ಲೈಟ್ ಆಂಡ್ ಶ್ಯಾಡೋಸ್' ಎನ್ನುವ ಪುಸ್ತಕ ೧೯೮೩ರಲ್ಲಿ ಬಂದಿದೆ. ಪೋಟೋಗ್ರಫಿ, ಬೇಟೆ ಮುಂತಾದ ಬ್ರಿಟಿಷ್ ಅಧಿಕಾರಿಗಳ, ಶ್ರೀಮಂತ ವರ್ಗದ ಹವ್ಯಾಸಗಳು ಸಹಜವಾಗಿಯೆ ಎಂ.ವೈ.ಘೋರ್ಪಡೆಯವರಿಗಿವೆ. ಇತ್ತೀಚೆಗೆ ರಾಜಕೀಯದಿಂದ ನಿವೃತ್ತಿ ಹೊಂದಿ ವಿಶ್ರಾಂತಿ ಜೀವನದಲ್ಲಿದ್ದಾರೆ. ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳಿಗೆ ಪಾಠ ಮಾಡುತ್ತಾರೆ.

ಸೊಂಡೂರು ಭಾಗದ ಒಂದೊಂದು ಹಳ್ಳಿಗಳಿಗೆ ರಾಜ ಮನೆತನದವರ ಹೆಸರು ಇಡಲಾಗಿದೆ. ಈ ರೀತಿ ಅರಸು ಮನೆತನದ ನೆನಪು ಉಳಿದಿದೆ. ವ್ಯಂಗ್ಯವೆಂದರೆ ಕೆಲ ಹಳ್ಳಿಗಳು 'ರಾಜರ' ಹೆಸರನ್ನಿಟ್ಟುಕೊಂಡೂ ದಾರಿದ್ರ್ಯ ಬಡತನದಿಂದ ನರಳುತ್ತಿವೆ. ಅವುಗಳೆಂದರೆ ಯಶವಂತನಗರ (ಕಣಿವೆಹಳ್ಳಿ), ರಣಜಿತ್‌ಪುರ (ಮುದಕಲ್ ಕುಂಟೆ), ನಾರಾಯಣಪುರ (ಅಪ್ಪೇನಳ್ಳಿ), ದೌಲತ್ಪುರ (ಕೋನಾಪುರ), ವಿಠಲನಗರ (ನವಲಹಟ್ಟಿ), ಭುಜಂಗನಗರ (ಹೊಸಳ್ಳಿ), ತಾರಾನಗರ (ಎತ್ತಿನಹಟ್ಟಿ), ನರಸಿಂಗಾಪುರ (ನರಸಾಪುರ), ಲಕ್ಷ್ಮೀಪುರ (ಚಿಕ್ಕಸೊಂಡೂರು), ಜಯಸಿಂಗ್‌ಪುರ (ಮೇದರಹಳ್ಳಿ), ಸುಶೀಲನಗರ (ಬಾವಿಹಳ್ಳಿ).[5] ಇನ್ನು ಮುಂತಾದ ಹಳ್ಳಿಗಳಿಗೆ ಮೂಲ ಹೆಸರಿದ್ದು ರಾಜವಂಶ ಈ ಹೊಸ ಹೆಸರುಗಳನ್ನು ನಾಮಕರಣ ಮಾಡಿದೆ. ಊರಿನ ಬಹುತೇಕರು ಈಗಲೂ ಮೂಲ ಹೆಸರಿನಿಂದ ಕರೆಯುತ್ತಾರೆ.

---

[1] ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಪು. ೯೦-೯೧

[2] ಸೊಂಡೂರಿನ ಘೋರ್ಪಡೆ ರಾಜಮನೆತನ, ಪು. ೧೪

[3] ಯಜಮಾನ ಶಾಂತರುದ್ರಪ್ಪ ಅವರ ಅಪ್ರಕಟಿತ ಕಾದಂಬರಿ, ಪು. ೮

[4] 'ಪ್ರಪಂಚ', ಜನವರಿ ೧೯,೧೯,೭೫ ಪು. ೨೬

[5] ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು, ಪು. ೧೦

## ೩. ೧೯೪೮ರ ಜಾಹಿರುನಾಮೆ

ಇದು ಸೊಂಡೂರು ಸಂಸ್ಥಾನದ ೧೯೪೮ರ ಸಂವಿಧಾನ. ಭಾರತ ಸ್ವಾತಂತ್ರ್ಯವಾದರೂ ಸಣ್ಣಪುಟ್ಟ, ಸಂಸ್ಥಾನಗಳು ಪರಂಪರೆಯಿಂದ ಆಳಿಕೊಂಡು ಬಂದ ಅಧಿಕಾರವನ್ನು ಅಷ್ಟು ಬೇಗನೆ ಬಿಟ್ಟುಕೊಡಲು ತಯಾರಿರಲಿಲ್ಲ. ಹೀಗಾಗಿ ಒಂದು ಅರ್ಥದಲ್ಲಿ ಬ್ರಿಟಿಷರಿಂದ ಸ್ವತಂತ್ರ ದೊರೆತರೂ, ಸ್ಥಳೀಯ ಅರಸರುಗಳಿಂದ ಆಯಾ ಭಾಗದ ಜನತೆಗೆ ಬಿಡುಗಡೆ ಸಿಕ್ಕಿರಲಿಲ್ಲ. ಸಂಡೂರು ಸಂಸ್ಥಾನವೂ ಸಹ ೧೯೪೭ರಲ್ಲಿ ಸೊಂಡೂರು ಜನತೆಗೆ ಸ್ವತಂತ್ರ್ಯ ನೀಡಲು ನಿರಾಕರಿಸಿತು. ಈ ಕಾರಣಕ್ಕಾಗಿ ಭಾರತದಲ್ಲಿ ಸಂಸ್ಥಾನಿ ಅರಸರ ಆಡಳಿತದ ವಿರುದ್ಧ ನಡೆಯುತ್ತಿದ್ದ ಆಂದೋಲನದ ಪ್ರಭಾವವು ಸೊಂಡೂರು ಜನತೆಯ ಮೇಲಾಯಿತು. ಈ ಸಂದರ್ಭದಲ್ಲಿ ಆಡಳಿತಾತ್ಮಕ ನಿಯಂತ್ರಣ ಹೇರಲು ರೂಪಗೊಂಡದ್ದು ೧೯೪೮ರ ಸೊಂಡೂರು ಜಾಹಿರುನಾಮೆ.

ಪ್ರತಿಭಟನೆಗಳು ಪ್ರಾರಂಭವಾಗುವುದೇ ಆ ಪ್ರತಿಭಟನೆಗೆ ಕಾರಣವಾದ ಪ್ರಮುಖ ಸಂಕೇತಗಳನ್ನು ಸುಡುವ ಅಥವಾ ಅಪಮಾನಗೊಳಿಸುವ ಮೂಲಕ. ನಾವೀಗ ದಿನಂಪ್ರತಿ ಪತ್ರಿಕಾ ವರದಿಗಳಲ್ಲಿ, ಟಿ.ವಿ, ವಾರ್ತೆಗಳಲ್ಲಿ ಚಳವಳಿಯ ಸಂಕೇತವಾಗಿ ಪ್ರತಿಕೃತಿ ದಹನದಂತಹ ವರದಿಗಳನ್ನು ನೋಡುತ್ತೇವೆ. ಇದು ತಮ್ಮ ಆಕ್ರೋಶ, ಅಸಹಾಯಕತೆಯನ್ನು ಪ್ರತಿಭಟಿಸಬೇಕೆಂಬ ಒಳತುಡಿತವನ್ನು ತಿಳಿಸುತ್ತದೆ. ೧೯೭೩ರ ಸೊಂಡೂರು ಭೂ ಹೋರಾಟದ ಪ್ರಾರಂಭವಾದದ್ದು ೧೯೪೮ರ ಸೊಂಡೂರು ಜಾಹಿರುನಾಮೆಯ ಒಂದು ಪ್ರತಿಯನ್ನು ಜನತಾ ಪ್ರತಿಭಟನೆಯ ಸಂಕೇತವಾಗಿ ಸಭೆಯಲ್ಲಿ ಸುಡುವ ಮೂಲಕ. ಅಂದರೆ ಸೊಂಡೂರು ಸಂಸ್ಥಾನದ ಸಂಕೇತದಂತಿದ್ದ ಜಾಹಿರುನಾಮೆಯನ್ನು ಸುಡುವುದು, ಮಹಾರಾಜರ ಆಡಳಿತವನ್ನೇ ನಾಶ ಮಾಡುವ ಜನತೆಯ ಮನೋಸ್ಥಿತಿಯನ್ನು ತೋರಿಸುತ್ತಿತ್ತು.

ಸೊಂಡೂರು ಸಂಸ್ಥಾನ ೧೯೪೮ರ ಹೊತ್ತಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯವರ ಆಧೀನದಲ್ಲಿ ಆಡಳಿತ ನಡೆಸಬೇಕಿತ್ತು. ಈ ಸಂಸ್ಥಾನ ತೆಗೆದುಕೊಳ್ಳುವ ಪ್ರಮುಖ ತೀರ್ಮಾನಗಳಿಗೆ, ಕಾನೂನು ಮತ್ತು ಆಡಳಿತಾತ್ಮಕ ನಿಯಮಾವಳಿಗಳಿಗೆ ಮದ್ರಾಸ್ ಪ್ರೆಸಿಡೆನ್ಸಿಯವರ ಒಪ್ಪಿಗೆ ಬೇಕಿತ್ತು. ಈ ಹಿಂದೆ ೧೯೩೭ರಲ್ಲಿ ಸೊಂಡೂರು ಇನಾಂ ನಿಯಂತ್ರಣ ಕಾನೂನನ್ನು ಜಾರಿಗೆ ತಂದಾಗಲೂ, ೧೯೪೬ರಲ್ಲಿ ರಾಜ್ಯ ಸಂವಿಧಾನಿಕ ಕಾನೂನನ್ನು ಜಾರಿಗೊಳಿಸಿದಾಗಲೂ ತಂದಾಗಲೂ, ಮದ್ರಾಸ್ ಪ್ರೆಸಿಡೆನ್ಸಿಯ ಒಪ್ಪಿಗೆಯನ್ನು ಪಡೆಯಲಾಗಿತ್ತು. ಒಂದು ಕಡೆ ಪ್ರೆಸಿಡೆನ್ಸಿಯು ಒಪ್ಪಿಗೆಗಾಗಿ ಜನಾಭಿಪ್ರಾಯವನ್ನೂ ನಿರೀಕ್ಷಿಸುತ್ತಿತ್ತು. ಇಂತಹ ಸಂದರ್ಭದಲ್ಲಿ ಮಹಾರಾಜರಿಗೆ ಆಪ್ತವಾಗಿರುವ ಕೆಲವರಿಂದ ಜನಾಭಿಪ್ರಾಯದ ಒಂದು ಚಿತ್ರವನ್ನು ಪ್ರೆಸಿಡೆನ್ಸಿಗೆ ತೋರಿಸಿ ಕಾಯ್ದೆ ಕಾನೂನುಗಳಿಗೆ ಒಪ್ಪಿಗೆ ಪಡೆಯಲಾಗುತ್ತಿತ್ತು. ಇಂತಹ ರಾಜಕೀಯ ತಂತ್ರದಿಂದಾಗಿ ದಮನಕಾರಿ ನೀತಿ, ನಿಯಮಾವಳಿಗಳು ಸೊಂಡೂರು ಜನತೆಯನ್ನು ಶೋಷಿಸಲು ಕಾರಣವಾಯಿತು.

೧೯೪೮ರ ಜಾಯಿರುನಾಮೆ ಜಾರಿಯಾಗುವಾಗಲೂ ಇಂತಹ ರಾಜಕೀಯ ತಂತ್ರ ಕೆಲಸ ಮಾಡಿತ್ತು. ಎಲಿಗಾರ ನಾಗರಾಜಪ್ಪನವರು ಈಗಾಗಲೇ ಸೊಂಡೂರು ಸಂಸ್ಥಾನದಲ್ಲಿದ್ದ ಪ್ರೊಕ್ಲಮೇಷನ್ ೧೯೪೮ರಲ್ಲಿ ಮತ್ತೆ ಸ್ಟೇಟ್ ಆಕ್ಟ್ ಆಗಿ ಬದಲಾದ ಬಗೆಗೆ ಹೀಗೆ ಹೇಳುತ್ತಾರೆ:

*ಮದ್ರಾಸ್ ಪ್ರೆಸಿಡೆನ್ಸಿಯು ೧೯೪೮ರ ಸ್ಟೇಟ್ ಆಕ್ಟ್ ಅಂತ ಜಾರಿಗೊಳಿಸ್ಲಿಕ್ಕೆ ಸೊಂಡೂರು ಪ್ರಜೆಗಳ ಅಬ್ಜಕ್ಷನ್ ಏನಾದ್ರೂ ಇದ್ದರೆ ಮದ್ರಾಸಿಗೆ ಬಂದು ಮಂಡಿಸಬಹುದು ಎಂಬ ಅಹವಾಲನ್ನು ಹೊರಡಿಸಿತು. ಪ್ರೆಸಿಡೆನ್ಸಿಯು ಇಂತಹ ಅಹವಾಲು ಘೋಷಣೆಯು ಭುಜಂಗನಗರದ (ಹೊಸಳ್ಳಿ) ಗುರುಶಾಂತಯ್ಯ ಮೇಸ್ತ್ರಗೆ ತಿಳಿಯಿತು. ಮೇಷ್ಟ್ರಗೆ ಇಂಗ್ಲೀಷ್ ಚೆನ್ನಾಗಿ ಬರ್ತಾ ಇದ್ದಿದ್ದರಿಂದ ಈ ಆಕ್ಟ್ ಜಾರಿಗೆ ಬಂದ್ರೆ ಮತ್ತೆ ರಾಜರ ದಬ್ಬಾಳಿಕೆ ತಪ್ಪಿದ್ದಲ್ಲ ಇದನ್ನು ಹೇಗಾದ್ರು ಮಾಡಿ ತಡೀಬೇಕು ಅನ್ಕೊಂಡು ನಮ್ಮ ತಂದೆ (ಎಲಿಗಾರ ತಿಮ್ಮಪ್ಪ)ಯವರಿಗೆ ಹೇಳಿದ್ರು. ಆಗ ನನ್ನ ತಂದೆಗೆ ೧೮ ವರ್ಷ. ಗುರುಶಾಂತಯ್ಯನವರು ಮೇಷ್ಟ್ರು ಆಗಿದ್ದರಿಂದ ಮದ್ರಾಸ್‌ಗೆ ಹೋಗಿ ಪ್ರೊಕ್ಲಮೇಷನ್‌ಗೆ ವಿರುದ್ಧವಾಗಿ ಅಭಿಪ್ರಾಯ ಮಂಡಿಸುವ ಸ್ವಾತಂತ್ರ್ಯ ಇರಲಿಲ್ಲ. ಹೀಗಾಗಿ ಅವರು ನನ್ನ ತಂದೆಯನ್ನು ತಯಾರಿ ಮಾಡಿದ್ರು. ಆಗ ಮದ್ರಾಸ್‌ವರೆಗೂ ಹೋಗ್ಲಿಕ್ಕೆ ಹೆಚ್ಚಿನ ಹಣ ಬೇಕಿತ್ತು. ನಮ್‌ತಂದೆಯವರಿಗೂ ಹಣದ ತೊಂದ್ರೆ ಇತ್ತು. ಮನೆಯಲ್ಲಿ ಶೇಂಗ ಇದ್ವು. ಇವನ್ನೇ ಒಂದೆರಡು ಚೀಲ ಹಾಕ್ಕೊಂಡು ಆದವಾನಿಗೆ ಹೋದ್ರು. ಶೇಂಗ ಮಾರಿದ ಪಟ್ಟಿ ಬೇಗ ಆಗ್ಲೇ ಇಲ್ಲ. ತುಂಬ ತಡವಾಗಿ ಪಟ್ಟಿ ಹಣ ಸಿಗುವ ಹೊತ್ತಿಗೆ ಮದ್ರಾಸಿಗೆ ಹೋಗೋ ಟ್ರೇನು ಮಿಸ್‌ಆಗಿತ್ತು. ಇದರಿಂದಾಗಿ ಮರುದಿವಸ ಮದ್ರಾಸ್‌ತಲುಪುವ ಹೊತ್ತಿಗೆ ಪ್ರೊಕ್ಲಮೇಷನ್‌ಗೆ ಸಂಬಂಧಿಸಿದ ಮೀಟಿಂಗ್‌ಮುಗಿದು ಸೊಂಡೂರು ಪ್ರಜೆಗಳಿಂದ ಯಾವುದೇ ತಕರಾರಿಲ್ಲ ಹಿಂದಿನ ಪ್ರೊಕ್ಲಮೇಷನ್ನೇ ೧೯೪೮ರ ಸ್ಟೇಟ್‌ಆಕ್ಟ್ ಎಂದು ಘೋಷಿಸಬಹುದೆಂದು ಮದ್ರಾಸ್‌ಪ್ರೆಸಿಡೆನ್ಸಿ ಅನುಮತಿ ನೀಡಿಯಾಗಿತ್ತು. ಆ ಮೀಟಿಂಗಿನ ದಿನವೇನಾದ್ರೂ ನಮ್ಮ ತಂದೆ ಸೊಂಡೂರು ರಾಜರ ದಬ್ಬಾಳಿಕೆಯನ್ನು, ದಮನಕಾರಿ ಆಡಳಿತವನ್ನು ಪ್ರೆಸಿಡೆನ್ಸಿ ಮೀಟಿಂಗ್‌ನಲ್ಲಿ ಬಹಿರಂಗ ಪಡಿಸಿದ್ರೆ, ೧೯೪೮ರ ಸ್ಟೇಟ್‌ಆಕ್ಟ್ ಜಾರಿಯಾಗೋದು ಅಷ್ಟು ಸುಲಭವಾಗಿರಲಿಲ್ಲ. ಈ ನೋವು ನಮ್ಮ ತಂದೆಯವರಿಗೆ ತುಂಬಾ ಕಾಡಿತ್ತು. ಇದರ ಬಗ್ಗೆ ನಮ್ಮತ್ರ ಹೇಳ್ತಾ ಇದ್ರು.*

ಈ ವಿವರದಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಸೊಂಡೂರಿನ ಜನತೆ ಶೈಕ್ಷಣಿಕವಾಗಿ ತುಂಬಾ ಹಿಂದುಳಿದವರಾಗಿದ್ದರು. ರಾಜರ ವಿರುದ್ಧ ಪ್ರತಿಭಟಿಸುವಂತಹ ಪ್ರಜ್ಞೆ ಬಹುತೇಕರಿಗೆ ಇರಲಿಲ್ಲ. ಅಕ್ಷರವಂತ ಅಲ್ಪಸಂಖ್ಯಾತರ ಪ್ರತಿಭಟನೆಗಳಿಗೂ ಇವರ ಸಹಕಾರ ದೊರೆಯುತ್ತಿರಲಿಲ್ಲ. ಮದ್ರಾಸ್‌ಪ್ರೆಸಿಡೆನ್ಸಿ ಸಹ ಸೊಂಡೂರು ಸಂಸ್ಥಾನಕ್ಕೆ ಸಂಬಂಧಿಸಿದ ಯಾವುದೇ ಕಾಯ್ದೆ ಕಾನೂನುಗಳನ್ನು ರಾಜರ

ಹಿತಾಸಕ್ತಿಗೆ ಪೂರಕವಾಗಿ ಜಾರಿಗೊಳಿಸುತ್ತಿತ್ತು. ಎಲಿಗಾರ ತಿಮ್ಮಪ್ಪ ನವರಿಗೆ ಪ್ರೆಸಿಡೆನ್ಸಿಯಲ್ಲಿ ರಾಜರ ದುರಾಡಳಿತದ ಬಗ್ಗೆ ದೂರಿದರೂ ಒಬ್ಬರ ಅಭಿಪ್ರಾಯ ಶಕ್ತಿಯುತವಾಗಿ ಪರಿಣಮಿಸಿದೇ ಹೋಗುತ್ತಿತ್ತು. ಗುರುಶಾಂತಯ್ಯನಂತಹ ಶಿಕ್ಷಕರು ಪ್ರಜ್ಞಾವಂತರಾಗಿದ್ದರೂ ತಾವೊಬ್ಬ ಸರ್ಕಾರಿ ನೌಕರರಾಗಿ ಸಂಸ್ಥಾನವನ್ನು ಎದುರು ಹಾಕಿಕೊಳ್ಳುವಲ್ಲಿ ಹಿಂಜರಿಯುತ್ತಿದ್ದರು. ಈ ಕಾರಣಗಳೇ ೧೯೪೮ರ ಸ್ಟೇಟ್‌ಆಕ್ಟ್ ಜಾರಿಗೊಳ್ಳಲು ಸಹಾಯಕವಾದವು.

ಸೊಂಡೂರು ಸಂಸ್ಥಾನದ ಮಹಾರಾಜರ ಆಡಳಿತದ ಒಟ್ಟು ಚಿತ್ರಣವನ್ನು ೧೯೪೮ರ ಸ್ಟೇಟ್‌ಆಕ್ಟ್ ಒಳಗೊಂಡಿದೆ. ಇಲ್ಲಿ ಒಂದು ರಾಜಶಾಹಿ ಮನೆತನ ಪ್ರಜಾಪ್ರಭುತ್ವ ಮಾದರಿಯನ್ನು ಅನುಸರಿಸುವಂತೆ ಕಾಣುತ್ತಲೇ ಒಳ ತಂತ್ರಗಳ ಮೂಲಕ ನಿರಾಕರಿಸುವ ಧೋರಣೆಗಳು ಇವೆ. ಸೊಂಡೂರು ಜನರ ಪ್ರತಿಕ್ರಿಯೆಗಳು ಜನಾಭಿಪ್ರಾಯವನ್ನು ಗಮನಿಸಿದರೆ ಈ ಆಕ್ಟಿನೊಳಗಿನ ಜನಪರವಾದ ಅಂಶಗಳು ಕೇವಲ ಕಾನೂನಿನಲ್ಲಿ ಮಾತ್ರ ಉಳಿದಂತಿತ್ತು. ೧೯೪೮ರ ಪ್ರೊಕ್ಲಮೇಷನ್ ಒಳಗೊಂಡ ಕೆಲವು ಪ್ರಮುಖ ಅಂಶಗಳನ್ನು ಗಮನಿಸಬಹುದು.

ಒಟ್ಟು ಒಂಬತ್ತು ಅಧ್ಯಾಯದಲ್ಲಿ ವಿಷಯಗಳನ್ನು ವಿಭಾಗಿಸಲಾಗಿದೆ. ಮೊದಲ ಅಧ್ಯಾಯ ಸಂಸ್ಥಾನದ ಸಾಮಾನ್ಯ ವಿವರಗಳನ್ನು ಒಳಗೊಂಡಿದೆ. ಸೊಂಡೂರು ಭಾರತೀಯ ಸ್ವತಂತ್ರ ರಾಜ್ಯಗಳಲ್ಲಿ ಒಂದು. ಬೆಟ್ಟಗುಡ್ಡಗಳ ರುದ್ರಮನೋಹರ ಸ್ಥಳ ಇದಾಗಿದೆ. ೧೮೮೯ರಲ್ಲಿ ಬ್ರೂಸ್‌ಫ್ರೂಟ್‌ಭೌಗೋಳಿಕ ಸರ್ವೇಕ್ಷಣೆ ಮಾಡಿ `Sandur territory is One of the richest iron yielding Center in the whole world' ಎಂದು ಉದ್ಗರಿಸಿದ ಉಲ್ಲೇಖವಿದೆ. ಇಲ್ಲಿನ ದಟ್ಟವಾದ ಕಾಡಿನಲ್ಲಿ ಶ್ರೀಗಂಧದ ಮರಗಳು ಇವೆ. ಬೆಲೆಬಾಳುವ ಗಿಡಮೂಲಿಕೆಗಳು ಅಪಾರವಾಗಿವೆ. ಇಂತಹ ಭೌಗೋಳಿಕ ವಿವರಗಳೆಲ್ಲ ಒಂದು ಸಂಪದ್ಭರಿತ ರಾಜ್ಯವನ್ನು ಪ್ರತಿನಿಧಿಸುವ ರೀತಿಯಲ್ಲಿ ಮುಂದುವರೆಯುತ್ತವೆ. ಹಾಗೆಯೇ ಪರೋಕ್ಷವಾಗಿ ಈ ಎಲ್ಲಾ ನೈಸರ್ಗಿಕ ಸಂಪತ್ತು ರಾಜವಂಶದ ಅಧೀನದಲ್ಲೇ ಬರುತ್ತದೆ ಎನ್ನುವ ಸೂಚನೆಗಳಿವೆ.

ಜಾಹಿರುನಾಮೆಯಲ್ಲಿ ಉಲ್ಲೇಖಗೊಂಡಂತೆ ಆಗ ಸೊಂಡೂರಿನಲ್ಲಿ ೧೬ ಸಾವಿರ ಜನ ಸಂಖ್ಯೆಯಿತ್ತು. ಹೆಚ್ಚಿನವರು ಕೃಷಿಯಾಶ್ರಿತರು. ಮಳೆ ಪ್ರಮಾಣ ಸರಾಸರಿ ೩೪.೩೭°ನಷ್ಟಿತ್ತು. ಆಗಸ್ಟ್, ಸೆಪ್ಟಂಬರ್ ನಲ್ಲಿ ಉತ್ತಮ ಮಳೆ ಬೀಳುತ್ತದೆ. ಜನಸಂಖ್ಯೆಯ ೧೭%ರಷ್ಟು ಮುಸ್ಲಿಮರಿದ್ದಾರೆ. ಹರಿಜನ, ನಾಯಕರು, ಕುರುಬರು, ಲಿಂಗಾಯತರು, ಮರಾಠರು, ಬ್ರಾಹ್ಮಣರು ಪ್ರಮುಖ ಜಾತಿಸಮುದಾಯಗಳಾಗಿವೆ. ಈ ಎಲ್ಲಾ ಜಾತಿಸಮುದಾಯಗಳನ್ನು ಮಹಾರಾಜರು ಸಮಾನ ದೃಷ್ಟಿಯಿಂದ ಕಾಣುತ್ತಾರೆ. ಮಹಾರಾಜನು ಸಂಸ್ಥಾನದ ಸರ್ವಾಧಿಕಾರಿಯಾಗಿದ್ದು, ಸಂಸ್ಥಾನದ ಎಲ್ಲಾ ಬಗೆಯ ನಿರ್ಧಾರಗಳ ಮೇಲೆ ಆತನಿಗೆ ಅಧಿಕಾರವಿರುತ್ತದೆ. ಪ್ರಜೆಗಳು ಅದನ್ನು ಗೌರವಿಸಬೇಕು. ಸೊಂಡೂರು ಸಂಸ್ಥಾನದಲ್ಲಿ ಒಟ್ಟು ೨೫, ೭೭೬ ಎಕರೆ ಕೃಷಿಯೋಗ್ಯ ಭೂಮಿ ಇದೆ. ಇದು ೧೯೦೫ರ ಸರ್ವೆಯಾಗಿದ್ದು. ಇದು ಕೃಷಿಯೋಗ್ಯವಾದ ಎಲ್ಲ ಭೂಮಿಯನ್ನು ಪರಿಗಣಿಸಿಲ್ಲ. ಸಂಸ್ಥಾನ ರೈತರಿಂದ ವಶಪಡಿಸಿಕೊಂಡ ಒಟ್ಟು ಭೂಮಿ ೧೫, ೮೪೩ ಎಕರೆ. ಇದರಲ್ಲಿ ಕೃಷಿಗೆ ಸಾಗುವಳಿಯಾಗುತ್ತಿರುವ ಭೂಮಿ ೧೩, ೦೪೧ ಎಕರೆ.

ಭೂಮಿಯ ಗೇಣಿ ಪದ್ಧತಿಯಲ್ಲಿ ಮೂರು ವಿಧಾನಗಳಿವೆ. ರೈತವಾರಿ, ಹಜೂರ್ ಭೂಮಿ ಗೇಣಿದಾರ, ಇನಾಂದಾರ. ರೈತವಾರಿ ಸರ್ಕಾರಕ್ಕೆ ತನ್ನ ಕೃಷಿಯೋಗ್ಯ ಭೂಮಿಯ ಒಂದನೇ ಮೂರು ಭಾಗದಷ್ಟು ಕಂದಾಯವನ್ನು ಮುಂಚಿತವಾಗಿಯೇ ಪಾವತಿ ಮಾಡಬೇಕು. ಇವರು ಉತ್ತಮ ವರ್ಗದ ರೈತರಾಗಿದ್ದರು. ರೈತವಾರಿಗೆ ೮, ೦೭೯ ಎಕರೆ ನೀಡಲಾಗಿತ್ತು. ಒಬ್ಬ ರೈತವಾರಿ ೪ ಎಕರೆ ಪಡೆಯಬಹುದಿತ್ತು. ಹಜೂರ್ ಭೂಮಿ ಗೇಣಿದಾರ ಮಧ್ಯಮವರ್ಗದ ರೈತನಾಗಿದ್ದು, ಫಲವತ್ತಾದ ಭೂಮಿಗೆ ಇಂತಿಷ್ಟು ಎಂದು ನಿಗದಿಪಡಿಸಿದ ಹಣವನ್ನು ಕಟ್ಟಬೇಕಿತ್ತು. ಅಥವಾ ಭೂಮಿಯನ್ನು ಒತ್ತೆ ಇಡುವಲ್ಲಿ, ಲೀಜ್ ಕೊಡುವಲ್ಲಿ ಸೀಮಿತ ಹಕ್ಕುಗಳಿದ್ದವು. ೧,೬೩೦ ಎಕರೆ ಹಜೂರ್ ಭೂಮಿ ಗೇಣಿದಾರರಿಗೆ ನೀಡಲಾಗಿತ್ತು. ಸಾಮಾನ್ಯ ಬಡ ರೈತರು, ಸಂಸ್ಥಾನದ ಸೇವೆಯಲ್ಲಿ ಇದ್ದರು. ಇನಾಂದಾರರಾಗಿದ್ದ ಇವರಿಗೆ ೫,೪೮೨ ಎಕರೆ ನೀಡಲಾಗಿತ್ತು. ಇವರಿಗೆ ಗೇಣಿದರ ಕಡಿಮೆ ಇತ್ತು. ಇದನ್ನು ಹಣ ಅಥವಾ ದವಸಧಾನ್ಯಗಳ ರೂಪದಲ್ಲಿ ಕೊಡಬಹುದಾಗಿತ್ತು. ಹೀಗೆ ಮೂರು ಬಗೆಯ ಗೇಣಿದಾರರಲ್ಲಿಯೇ ಉತ್ತಮ, ಮಧ್ಯಮ, ಸಾಮಾನ್ಯ ರೈತರ ಶ್ರೇಣೀಕರಣವಿತ್ತು. ತಂಬಾಕು ಕಂಪನಿಗಾಗಿ ನಂದಿಹಳ್ಳಿ ಬಳಿ ೧೫೦೦ ಎಕರೆ ನೀಡಲಾಗಿತ್ತು.

೧೯೪೮ರ ಸೊಂಡೂರು ಸಂಸ್ಥಾನದ ಈ ಜಾಹಿರುನಾಮೆ ಸಂಸ್ಥಾನದ ಸಕಲ ಅಧಿಕಾರಗಳನ್ನು ತಿಳಿಸುತ್ತದೆ. ಪ್ರಜೆಗಳು ಸಂಸ್ಥಾನಕ್ಕೆ ವಹಿಸಬೇಕಾದ ಕರ್ತವ್ಯ ಮತ್ತು ವಿಧೇಯತೆ, ಸಂಸ್ಥಾನ ಹೊಂದಿರುವ ಸಂಪನ್ಮೂಲಗಳು. ರಾಜಕೀಯ ಪದ್ಧತಿ. ಸಂಸ್ಥಾನದ ರಕ್ಷಣೆ ವಿಧಾನ, ಕಾನೂನು, ನಿಯಮ, ಇವುಗಳನ್ನೆಲ್ಲಾ ಪರಚಯಿಸುತ್ತ ೧೯೪೮ರಲ್ಲಿಯೂ ಸೊಂಡೂರು ಸ್ವತಂತ್ರ ಸಂಸ್ಥಾನ, ಭಾರತದ ಒಕ್ಕೂಟದಲ್ಲಿ ಸೇರಿಲ್ಲ, ಪ್ರಜೆಗಳು ಇದನ್ನು ಗಮನಿಸಬೇಕು. ಸಂಸ್ಥಾನದ ನಿಯಮಗಳನ್ನು ಮೀರಿ ನಡೆದುಕೊಂಡವರನ್ನು ಸ್ಟೇಟ್ ಸೆಲ್ಲಿನಲ್ಲಿ ಶಿಕ್ಷಿಸಲಾಗುವುದು. ಈ ಬಗೆಯ ಸಂಸ್ಥಾನದ ಅಧಿಕಾರವನ್ನು ಜಾಹಿರುನಾಮೆಯಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿತ್ತು.

## ೪. ಕುಮಾರಸ್ವಾಮಿ ದೇವಸ್ಥಾನ

ಅಂದು ಸೊಂಡೂರಿನ ಹಳೆ ಬಸ್‌ಸ್ಟಾಂಡಿನಿಂದ ಕುಮಾರಸ್ವಾಮಿ ದೇವಸ್ಥಾನಕ್ಕೆ ಹೋಗಲು ಬಸ್ಸಿಗಾಗಿ ಕಾಯುತ್ತಿದೆ. ಇರುವ ಒಂದು ಬೆಳಗಿನ ಬಸ್ಸು ಹೋಗಿದೆ ಎಂದು ಪಕ್ಕದ ಅಂಗಡಿಯರು ಹೇಳಿದರು. ಟೆಂಪೋಗಳು ಹೋಗುತ್ತವೆ ಕೇಳಿ ಎಂದರು. ಒಂದು ಟೆಂಪೋ ದೇವಸ್ಥಾನಕ್ಕೆ ಹೊರಟಿತ್ತು. ಹತ್ತಿ ಕುಳಿತೆ. ದೇವಸ್ಥಾನಕ್ಕಾಗಿ ಗದಗ್‌ನಿಂದ ಬಂದಿದ್ದ ಒಂದು ಕುಟುಂಬ ಆ ಟೆಂಪೋದಲ್ಲಿ ಇತ್ತು. ಕುಟುಂಬದ ಹಿರಿಯ ತಾನು ಹೊಸದಾಗಿ ಮದುವೆಯಾದ ವರ್ಷ ಬಂದದ್ದನ್ನು ನೆನಪಿಸಿಕೊಂಡು, ೨೦ ವರ್ಷ ಹಿಂದಿನ ನಿಸರ್ಗದ ರಮ್ಯತೆಯ ಕಥೆ ಹೇಳಿದರು. ಹಾಗೆಯೇ ಇಂದು ಹಾಳಾಗಿ ದೂಳಾಗುತ್ತಿರುವ ಪರಿಸರ ನಾಶದ ಬಗ್ಗೆ ವಿಷಾದಿಸಿದರು. ಟೆಂಪೋ ಹೊರಟಿತು. ರಸ್ತೆಗೆ ಜೋತು ಬಿದ್ದಂತೆ ಲಾರಿಗಳ ಸಾಗಾಟ ನಡೆದಿತ್ತು. ಕೊರಕಲು ಗುಂಡಿಗಳಲ್ಲಿ ಟೆಂಪೋ ಮೇಲೆ ಕೆಳಗೆ ಮಾಡುತ್ತಿದ್ದರೆ ಕುಳಿತ ನಾವುಗಳು ಕುಡಿದ ಅಮಲಿನಲ್ಲಿ ವಾಲಾಡುವವರಂತೆ ವಾಲಾಡುತ್ತಿದ್ದೆವು. ಉಸಿರಾಟ ಕಷ್ಟವಾಗುವಂತೆ ಧೂಳು ಮುತ್ತಿತು. ರಸ್ತೆಯ ಪಕ್ಕದಲ್ಲೇ ಮೈನಿಂಗ್ ಕೆಲಸಕ್ಕಾಗಿ ಬಂದವರ ಚಿಕ್ಕ ಚಿಕ್ಕ ಟೆಂಟುಗಳಿದ್ದವು. ಈ ಟೆಂಟುಗಳು ಎಷ್ಟು ಚಿಕ್ಕವೆಂದರೆ ಇಬ್ಬರು ಮಾತ್ರ ಒಳಗೆ ಕೂರಬಹುದು. ಅವರೆಲ್ಲ ಕೆಂಪು ಧೂಳಿನಲ್ಲಿ ಮುಳುಗಿ ಈಸ್ಟ್‌ಮನ್ ಕಲರ್‌ನಲ್ಲಿ ತೆಗೆದ ಫೋಟೋದಂತಿದ್ದರು. ಆ ಟೆಂಟುಗಳ ಎದುರಿಗೆ ಮೈನಿಂಗ್ ಕಲ್ಲುಗಳ ರಾಶಿಯಲ್ಲಿ, ದೊಡ್ಡ ಕಲ್ಲುಗಳನ್ನು ಒಡೆದು ಚಿಕ್ಕ ಚೂರುಗಳನ್ನು ಮಾಡುವ ಕೆಲಸ ನಡೆದಿತ್ತು. ಚಿಕ್ಕ ಚಿಕ್ಕ ಮಕ್ಕಳೆಲ್ಲಾ ಆ ಕಲ್ಲುಗಳ ರಾಶಿಯ ಮಧ್ಯೆಯೇ ಆಟ ಆಡುತ್ತಿದ್ದರು. ಮಕ್ಕಳೂ ಸಹ ಪುಟ್ಟಿಯಲ್ಲಿ ಕಲ್ಲು ಹೊರುವ ಜರಡಿ ಹಿಡಿಯುವ ಕೆಲಸದಲ್ಲಿ ಮುಳುಗಿದ್ದವು. ಈ ಮಧ್ಯೆಯೇ ಟೆಂಪೋ ಡ್ರೈವರ್ 'ಕುಮಾರಸ್ವಾಮಿ ದೇವಸ್ಥಾನ ಬಂತು ಇಳ್ಕೊಳ್ಳಿ' ಎಂದಾಗಲೆ ಎಚ್ಚರಗೊಂಡು ಇಳಿದೆವು. ಹಳೆಯದಾದ ದೇವಸ್ಥಾನ. ಎದುರಿಗೆ ಸಂರಕ್ಷಿಸಲ್ಪಟ್ಟ ಸ್ಮಾರಕದ ಪುರಾತತ್ವ ಇಲಾಖೆಯವರ ನಾಮಫಲಕದಲ್ಲಿ 'ಈ ಸ್ಮಾರಕವು ಭಾರತ ಸರ್ಕಾರದ ೧೯೫೮ರ ಪ್ರಾಚೀನ ಸ್ಮಾರಕ ಮತ್ತು ಪುರಾತನ ವಾಸ್ತು ಇರುವ ಸ್ಥಳಗಳಿಗೆ ಸಂಬಂಧಿಸಿದೆ. ಶಾಸನದ ೨೪ನೆಯ ವಿಧಿಗನುಗುಣವಾಗಿ ರಾಷ್ಟ್ರೀಯ ಪ್ರಮುಖ ಸ್ಮಾರಕ ಎಂದು ಘೋಷಿಸಲ್ಪಟ್ಟಿದೆ. ಇದನ್ನು ನಾಶಪಡಿಸಿದಲ್ಲಿ ೫೦೦೦ ರೂ ಜುಲ್ಮಾನೆ ಅಥವಾ ೩ ತಿಂಗಳ ಸಹಜ ಜೈಲು ಶಿಕ್ಷೆ ವಿಧಿಸಲಾಗುವುದು' ಎಂದಿದೆ. ೧೯೫೮ರ ಹೊತ್ತಿಗೆ ನೆಡಲಾದ ಈ ನಾಮಫಲಕ ಕುಮಾರಸ್ವಾಮಿ ದೇವಸ್ಥಾನದ ಹಕ್ಕುಗಳಿಗಾಗಿ ನಡೆದ ಜನಗಳ ಪ್ರತಿಭಟನೆಗಳಿಗೆ ಸಾಕ್ಷಿ ಎಂಬಂತಿದೆ. 'ಮಾಜಿರಾಜರ ಹಿಡಿತ ತಪ್ಪಿಸಿ ಕುಮಾರಸ್ವಾಮಿಯನ್ನು ಬಂಧನದಿಂದ ಮುಕ್ತಿಗೊಳಿಸಬೇಕು' ಎಂಬ ಹೋರಾಟದ ಕಾಲವನ್ನು ನೆನಪಿಸಿಕೊಂಡರೆ ಈ ನಾಮಫಲಕದ 'ಕಠಿಣ ಜೈಲು ಶಿಕ್ಷೆ, ಜುಲ್ಮಾನೆ' ಪದಗಳು ವ್ಯಂಗ್ಯದಂತೆ ಕಾಣುತ್ತವೆ.

ದೇವಸ್ಥಾನದಲ್ಲಿ ಕಡಿಮೆ ಜನರಿದ್ದ ಕಾರಣ ಬ್ರಾಹ್ಮಣ ಪೂಜಾರಿಯನ್ನು ಮಾತನಾಡಿಸಲಾಯಿತು. 'ಈಗ ಜನರಿಗೆ ಭಕ್ತಿ ಕಡಿಮೆಯಾಗಿದೆ. ಮೈನಿಂಗ್ ಪ್ರಾರಂಭವಾದಾಗಿನಿಂದ ಕಾಣಿಕೆ ಹೆಚ್ಚು ಸಿಗುತ್ತಿದೆ' ಎಂದು ಒಂದಷ್ಟು ಖುಷಿಯಿಂದಲೇ ಹೇಳಿದರು. ಮಾತನಾಡುತ್ತ ೧೯೭೩ರ ಭೂ ಸಂಬಂಧಿ ಹೋರಾಟದ ಬಗ್ಗೆ ಕೇಳಿದೆ.' 'ಅದು ಇಲ್ಲಿಯವರು ಮಾಡಿದ್ದಲ್ಲ ಬೆಂಗಳೂರಿನವರು ಇಲ್ಲಿಗೆ ಬಂದು ಮಾಡಿಸಿದ್ದು. ಇಲ್ಲಿನ ಜನ ಯಾರೂ ಭಾಗವಹಿಸಿರ್ಲಿಲ್ಲ ಬಿಡ್ರಿ' ಎಂದರು. 'ಈಗ ದೇವರ ಭೂಮಿ ಅಂತ ಹೆಚ್ಚು ಕಡಿಮೆ ಒಂದು ಐವತ್ತೋ.. ನೂರು ಎಕರೆ ಇರಬೇಕು. ಮೊದ್ಲೆಲ್ಲ ಬಾಳ ಭೂಮಿ ಇತ್ತು. ಎಲ್ಲ ರೈತರಿಗೆ ಸೇರ್ತು' ಎಂದು ವಿಷಾದದಿಂದ ಹೇಳಿದರು. ಅವರ ಮಾತಿನಲ್ಲಿ 'ಶ್ರೀಮಂತ ದೇವರು ಬಡವಾದ' ಎಂಬ ನೋವು ಇದ್ದಂತಿತ್ತು ಈಗಲೂ ಮಹಾರಾಜರ ಒಡೆತನದಲ್ಲಿಯೇ ದೇವಸ್ಥಾನವಿದೆ. ಸರ್ಕಾರದ ವಾರ್ಷಿಕ ಧನವೂ ಬರುತ್ತಿದೆ. ಇಲ್ಲಿಯ ಸೆಕ್ಯುರಿಟಿ ಗಾರ್ಡ್ 'ನಮ್ಮದು ಕುಮಾರಸ್ವಾಮಿ ಭೂಮಿ ಇದೆ ಸಾರ್. ಈಗ್ಲೂ ನಮ್ಮ ಹೆಸರಿಗೆ ಪಟ್ಟ ಮಾಡಿಸಿಕೊಂಡಿಲ್ಲ.

ಹಂಗೆ ಮಾಡ್ಕೊಂಡು ಹೋಗ್ತೀವಿ... ಬೆಳೆದ ಬೆಳೆಯಲ್ಲಿ ಇಂತಿಷ್ಟು ಅಂತ ಕಾಣಿಕೆ ದೇವಸ್ಥಾನಕ್ಕೆ ಕೊಡ್ತೀವಿ' ಎಂದರು. ದೇವಸ್ಥಾನದ ಕೆಲಸಕ್ಕೆಂದು ಐದಾರು ಜನರಿದ್ದರು. ಅವರಲ್ಲಿ ಒಬ್ಬಾತ 'ಈ ದೇವಸ್ಥಾನವೇ ನಮಿಗೆ ಮನಿ ಮಠ ಅಂದನು...' ಮಠದ ಸುತ್ತ ಹುಲ್ಲು, ಹೂವಿನ ಗಿಡಗಳ ಪಾರ್ಕ್ ಮಾಡಲಾಗಿದೆ. ದಕ್ಷಿಣ ದ್ರಾವಿಡ ಶೈಲಿಯ ಕೆತ್ತನೆಯಿಂದ ದೇವಾಲಯದ ವಾಸ್ತು ಕಲಾತ್ಮಕವಾಗಿದೆ. ಸಮುದ್ರದ ಮಟ್ಟಕ್ಕಿಂತ ೧,೪೦೦ ಅಡಿಗಳ ಎತ್ತರದಲ್ಲಿದೆ. ಕ್ರಿ.ಶ. ೮೯೩ಕ್ಕಿಂತ ಮೊದಲೇ ಕಟ್ಟಲ್ಪಟ್ಟಿದೆಂಬ ದಾಖಲೆಗಳಿವೆ. ರಾಷ್ಟ್ರಕೂಟರು ಈ ದೇವಾಲಯವನ್ನು ಕಟ್ಟಿಸಿದ್ದರು, ಮುಂದೆ ಚಾಲುಕ್ಯರ ಅದನ್ನು ಪೋಷಿಸಿಕೊಂಡು ಬಂದರೆಂದು ಶಾಸನಗಳಿಂದ ತಿಳಿಯುತ್ತದೆ. ಹೊಯ್ಸಳರ ರಾಜ ಇಮ್ಮಡಿ ಬಲ್ಲಾಳನ ಕಾಲದ ೧೨೦೭ರ ಶಾಸನ ಪ್ರಾಚೀನ ಶಾಸನಗಳಲ್ಲಿ ಒಂದು. ಕುಮಾರಸ್ವಾಮಿಯನ್ನು ಸ್ಕಂಧ, ಕಾರ್ತೀಕೇಯ, ಷಣ್ಮುಖ, ಸುಬ್ರಹ್ಮಣ್ಯನೆಂದು ಹಲವು ಹೆಸರುಗಳಿಂದ ಕರೆಯಲಾಗುತ್ತದೆ.

ಈ ದೇವಾಲಯ ೧೯೭೩ರ ಚಳವಳಿಗೆ ಪ್ರಬಲ ಕಾರಣಗಳಲ್ಲಿ ಒಂದು. ಕುಮಾರಸ್ವಾಮಿ ದೇವಾಲಯದ ಹೆಸರಲ್ಲಿ ೮,೦೦೦ ಎಕರೆಗಳಷ್ಟು ಇನಾಮು ಭೂಮಿ ಇತ್ತು. ಮಹಾರಾಜರು ೧೯೩೭ರ ಸೊಂಡೂರು ಇನಾಮು ರೆಗುಲೇಷನ್ ಆಕ್ಟ್ ತಂದರು. ಇದರ ೧೫ನೇ ಸೆಕ್ಷನ್ ಪ್ರಕಾರ ದೇವಸ್ಥಾನದ ಜಮೀನು ಅರಮನೆಗೆ ಸೇರಿತು. ೧೯೪೭ರ ಸೊಂಡೂರು ಸ್ಟೇಟ್ ಯಾಕ್ಟ್ ಕಲಂ ೪೮ರ ಪ್ರಕಾರ ದೇವಸ್ಥಾನದ ಜಮೀನು ರಾಜರ ಸ್ವಂತ ಆಸ್ತಿಯಾಯಿತು. ೧೯೪೮ರ ಸೊಂಡೂರು ಟೆಂಪಲ್ ಪ್ರೊಕ್ಲಮೇಷನ್‌ನಲ್ಲಿ ದೇವಾಲಯದ ವಂಶಾನುಗತಿ ಟ್ರಸ್ಟಿ ತಾವೇ ಎಂದು ರಾಜರು ಘೋಷಿಸಿಕೊಂಡರು. ಹೀಗೆ ಸಾರ್ವಜನಿಕ ಆಸ್ತಿಯಾಗಿದ್ದ ದೇವಾಲಯವು ಸಂಪೂರ್ಣ ಮಹಾರಾಜರ ಅಧೀನವಾಯಿತು. ರಾಜರು ತಮ್ಮ ಆಡಳಿತ ನಿಯಂತ್ರಣಕ್ಕೆ 'ಕುಮಾರಸ್ವಾಮಿ'ಯನ್ನು ಒಂದು ಧಾರ್ಮಿಕ ಅಸ್ತ್ರದಂತೆ ಬಳಸಿಕೊಂಡರು. ಇದನ್ನು ಮತ್ತೆ ಸಾರ್ವಜನಿಕಗೊಳಿಸಬೇಕೆಂದು ೫೦ರ ದಶಕದಿಂದಲೂ ಸಾರ್ವಜನಿಕ ಪ್ರತಿಭಟನೆಗಳಾದವು.

ಕುಮಾರಸ್ವಾಮಿ ಕುರಿತಂತೆ ಬಂದ ಪುಸ್ತಕ, ಚರಿತ್ರೆಯ ರಚನೆಗಳನ್ನು ಗಮನಿಸಬಹುದು. ಕೂಡ್ಲಿಗಿಯ ಬೋರ್ಡ್ ಪ್ರೌಢಶಾಲೆಯ ಕನ್ನಡ ಪಂಡಿತ ವಿದ್ವಾನ್ ಕೆ. ರಾಮರಾವ್ ಅವರು 'ಶ್ರೀ ಕುಮಾರಸ್ವಾಮಿಯ ಸಿಕ್ಕಿದ್ದು' ಎಂಬ ಕೃತಿಯನ್ನು ೧೯೪೮ರಲ್ಲಿ ಪ್ರಕಟಿಸಿದರು. ದೇವತೆಗಳ ಬಳಕೆಯಲ್ಲಿದ್ದ ಶ್ರೀ ಕುಮಾರಸ್ವಾಮಿಯು ನರರ ವಶಕ್ಕೆ ಬಂದ ಬಗ್ಗೆ ಪುರಾಣ ಮತ್ತು ಸಮಕಾಲೀನ ಚಿತ್ರಣವಿದೆ. ಇವರು ಕೊಡುವ ಸೊಂಡೂರಿನ ವಿವರ ಹೀಗಿದೆ:

*ಸೊಂಡೂರು ಸಂಸ್ಥಾನದ ಈಗಿನ ಅರಸರಾದ ಶ್ರೀಮಂತ ಮಹಾರಾಜ ಯಶವಂತರಾವ್ ಹಿಂದೂರಾವ್ ಘೋರ್ಪಡೆ ಮಮಲಕತ್ತು ಮದಾರು ಸೇನಾಪತಿ ಸೊಂಡೂರು ಇವರು ಅನೇಕ ಸ್ತುತ್ಯ ಕಾರ್ಯಗಳನ್ನು ಯಶಸ್ಸನ್ನು ಪಡೆದಿರುತ್ತಾರೆ. ಇತರ ಪ್ರಾಂತದಲ್ಲಿ ಅನ್ನಬಟ್ಟೆಗಳ ಕೊರತೆ ಇಲ್ಲ. ಪ್ರಜರು ನಿಶ್ಚಿಂತರಾಗಿ ಸುಖವಾಗಿ ಇರುತ್ತಾರೆ. ರಾಜ್ಯದ ಆಡಳಿತವನ್ನು ನಿರ್ವಹಿಸುವ ಜನಪ್ರಿಯ ಪ್ರಧಾನಿಯ ಮನೆಯಲ್ಲಿ ಎಷ್ಟು ವಸ್ತುಗಳು, ಎಷ್ಟು ಆಹಾರ ಸಂಗ್ರಹಣಾ ಇರುತ್ತದೆಯೊ ಅಷ್ಟೇ, ಕೂಲಿಕಾರನ ಮನೆಯಲ್ಲಿಯೂ ಕಾಣಬಹುದು. ಒಬ್ಬರ ಮನೆಯಲ್ಲಿ ಹೆಚ್ಚಾಗಲಿ, ಇನ್ನೊಬ್ಬರ ಮನೆಯಲ್ಲಿ ಇಲ್ಲದಿರುವುದನ್ನಾಗಲಿ ಕಾಣುವುದಿಲ್ಲ. ಹಾಗೂ ಒಬ್ಬರು ತುಪ್ಪಸಕ್ಕರೆಯನ್ನುಂಡು ಕಕ್ಕಸ ಬಟ್ಟು ಅಜೀರ್ಣ ರೋಗದಿಂದ ಬಳಲುವುದನ್ನಾಗಲಿ, ಮತ್ತೊಬ್ಬರು ಅನ್ನವಿಲ್ಲದೆ ಕಂಗಾಲಾಗಿ ಕಣ್ಣು ಕಣ್ಣು ಬಿಡುತ್ತಿರುವುದನ್ನಾಗಲಿ ಈ ರಾಜ್ಯದಲ್ಲಿ ಕಾಣುವುದು ದುರ್ಲಭವಿರುತ್ತದೆ. ಬಂದದ್ದನ್ನು ಬಚ್ಚಿಡದೆ ಎಲ್ಲರು ಸಮನಾಗಿ ಉಪಯೋಗಿಸಿ ಕೊಳ್ಳುವುದರಿಂದ ರಾಜ್ಯದಲ್ಲಿ ಶಾಂತಿಯು ನೆಲೆಸಿರುತ್ತದೆ.*

ಇಲ್ಲಿನ ಉಲ್ಲೇಖವನ್ನು ಗಮನಿಸಿದರೆ ಇದೊಂದು ಸುಖೀ ರಾಜ್ಯ ' ಈ ವರ್ಣನೆ ದೇವರನ್ನೂ ಅರಸರನ್ನೂ ಒಂದೇ ತಕ್ಕಡಿಯಲ್ಲಿ ತೂಗುವಂತಿದೆ.' ' ಈ ಗ್ರಂಥದಲ್ಲಿ ಶುಷ್ಕ ಶಬ್ದಗಳಿಲ್ಲ, ಸರ್ವೋತ್ಕೃಷ್ಟವಾಗಿದೆ' ಎಂದು ಸೊಂಡೂರು ಸಂಸ್ಥಾನದ ಆಗಿನ ರಾಜ ಜೋಷಿ ನಾರಾಯಣಶಂಕರ ಶಾಸ್ತ್ರಿ ಮುನ್ನುಡಿ ಬರೆಯುತ್ತಾರೆ. ಅದೇ ಹೊತ್ತಿನಲ್ಲಿ ಸೊಂಡೂರಿನ ದೊರೆ ಸ್ವಾತಂತ್ರ್ಯ ಭಾರತಕ್ಕೆ ಸೇರದೆ ಮದ್ರಾಸ್ ಪ್ರಾಂತ್ಯದ ಸ್ವತಂತ್ರ ರಾಜ್ಯವಾಗುಳಿಯಲು ಪ್ರಯತ್ನಿಸಿದರು. ಸೊಂಡೂರನ್ನು ಭಾರತದ ಒಕ್ಕೂಟದಲ್ಲಿ ಸೇರಿಸಲು ಜನರು ಚಳವಳಿಗಳನ್ನು

ರೂಪಿಸಿದರು. ರಾಜರು ರಜಾಕಾರರನ್ನು ಕರೆಯಿಸಿ ಚಳವಳಿಗಾರರನ್ನು ಹಿಂಸಿಸಿದರು. ಆದರೆ ಇದೇ ಸಂದರ್ಭದ ಈ ಕೃತಿ ರಾಜ್ಯದಲ್ಲಿ 'ಶಾಂತಿಯು ನೆಲೆಸಿದೆ' ಎಂದು ತಿಳಿಸುತ್ತದೆ.

ತಾಳಂಕಿ ಸುಬ್ರಾಯ ಶ್ರೇಷ್ಠಿ ಎಂಬುವವರು 'ಶ್ರೀ ಕಾರ್ತಿಕೇಶ್ವರ ಸ್ವಾಮಿ ಲಾವಣಿ' ಎಂಬ ಕಿರು ಹೊತ್ತಿಗೆಯನ್ನು ೧೯೫೫ರಲ್ಲಿ ಪ್ರಕಟಿಸಿದರು. 'ಹೀನ ಗುಣಂಗಳ ಬಿಡಬೇಕು, ಹಿರಿಯರ ಹಾದಿ ಅನುಸರಿಸುತ್ತಲಿ, ದೇಶ ಸೇವಕರು ಆಗ್ಬೇಕು. ನಮ್ಮ ರಾಜ್ಯದ ಘೋರ್ಪಡೆ ವಂಶದ ಯಶವಂತರಾವು, ದತ್ತೋಜಿರಾವು, ಮುರಾರಿ ರಾಯರು ಕೇಳ್ಬೇಕು. ನಾವು ನೀವು ನೋಡಲಿಬೇಕು. ತನುಮನ ಧನದಿಂದ ಆಡಿದ ಕೂಟ ಎಲ್ಲರು ಪ್ರೋತ್ಸಾಹ ಕೊಡಬೇಕು'. ಎಂದು ಉದ್ಗರಿಸುತ್ತಾರೆ. ಹೀಗೆ 'ಕುಮಾರಸ್ವಾಮಿ' ಕುರಿತು ಬರೆದ ಪುರಾಣ ಚರಿತ್ರೆಗಳು ಮಹಾರಾಜರನ್ನು ದೈವಪರವಶತೆಯಿಂದ ಕಂಡವು. ಇದು ಆ ಕೃತಿಗಳ ಪ್ರಕಟಣೆಗೆ ಸಂಸ್ಥಾನದ ಬೆಂಬಲವೂ ಕಾರಣವಾಯಿತು. ಹೀಗೆ ಮಹಾರಾಜರನ್ನು ಆರಾಧನಾ ಭಾವದಿಂದ ಕಂಡ ಪುರಾಣಗಳು ಜನರಲ್ಲಿಯೂ ಅಂತಹ ಭಾವನೆ ತರಿಸಲು ಪ್ರಯತ್ನಿಸಿದವು. ೨೦೦೫ರಲ್ಲಿ ಡಾ. ನಿಂಗಪ್ಪ ಮುದೇನೂರು ಅವರ 'ಸೊಂಡೂರು ಕುಮಾರಸ್ವಾಮಿ' ಎಂಬ ಸಂಶೋಧನ ಕೃತಿ ಬಂದಿದೆ. ಈತನಕದ 'ಕುಮಾರಸ್ವಾಮಿ' ಯನ್ನು ಕಂಡ ಮಾದರಿಗಳಿಗಿಂತ ಭಿನ್ನವಾಗಿದೆ. ಇಲ್ಲಿಯೂ ಚರಿತ್ರೆಯನ್ನು ಆರಾಧಾನ ಭಾವದಿಂದ ಕಾಣುವ ಮನೋಧರ್ಮ ಇದೆ. ಇದಕ್ಕೆ 'ಜಾನಪದೀಯ ಅಧ್ಯಯನ' ಎಂಬ ಚೌಕಟ್ಟನ್ನು ಹಾಕಿಕೊಂಡಿದ್ದರಿಂದ ಈ ದೇಗುಲ ಸಮುದಾಯಗಳಲ್ಲಿ ಸೃಷ್ಟಿಸಿದ ಸಂಘರ್ಷವನ್ನು ದಾಖಲಿಸಲು ಸಾಧ್ಯವಾಗಿಲ್ಲ. ಹಾಗಾಗಿ ಕುಮಾರಸ್ವಾಮಿಯನ್ನು ನೋಡುವ ಏಕಮುಖದ ಚಿತ್ರವನ್ನು ಈ ತನಕದ ಅಧ್ಯಯನಗಳು ದಾಖಲಿಸಿವೆ.

೧೯೩೭ರಲ್ಲಿ ಮಹಾತ್ಮ ಗಾಂಧೀಜಿಯವರ ಮೂಲಕ ಕುಮಾರಸ್ವಾಮಿ ದೇವಾಲಯದಲ್ಲಿ ಹರಿಜನರಿಗೆ ಮಹಾರಾಜರು ಪ್ರವೇಶವನ್ನು ಕಲ್ಪಿಸಿದರು. ಗಾಂಧೀಜಿಯವರು ಈ ಕಾರ್ಯವನ್ನು ಶ್ಲಾಘಿಸಿ ದಕ್ಷಿಣ ಭಾರತದಲ್ಲಿಯೆ ಸೊಂಡೂರಿನ ಸಣ್ಣ ಸಂಸ್ಥಾನ ಹರಿಜನರಿಗೆ ದೇವಸ್ಥಾನದಲ್ಲಿ ಪ್ರವೇಶ ಕಲ್ಪಿಸಿದೆ. ಸ್ವರ್ಗವೇನು ಕಳಚಿ ಬೀಳಲಿಲ್ಲ ಎಂದಿದ್ದರು. ವಿಪರ್ಯಾಸವೆಂದರೆ, ಗಾಂಧೀಜಿಯವರು ಸೊಂಡೂರಿನಿಂದ ಮರಳಿದರು. ಮರುಳಿದ ತಕ್ಷಣ ಇತ್ತ ಕುಮಾರಸ್ವಾಮಿ ದೇವಸ್ಥಾನವನ್ನು ಶುದ್ಧಿಕರಿಸಲಾಯಿತು. ಆನಂತರ ಹರಿಜನರಿಗೆ ಪ್ರವೇಶವನ್ನು ರದ್ದುಗೊಳಿಸಿದರು. ಗಾಂಧೀಜಿಯವರು ಬಂದ ಸಮಯದಲ್ಲಿ ಹರಿಜನರಿಂದ ಬಾವಿಯೊಂದರಲ್ಲಿ ನೀರನ್ನು ಸೇದಿಸಿದ್ದರು. ಆ ಬಾವಿಯಲ್ಲಿ ಯಾರೊಬ್ಬರು ನೀರು ಸೇದದೆ ಮುಂದೆ ಅದು ಹಾಳುಬಾವಿಯಾಯಿತು ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಿತು. ಆದರೆ ಮಹಾತ್ಮಗಾಂಧಿಯವರು ಸೊಂಡೂರು ಸಂಸ್ಥಾನವನ್ನು ಉದ್ಧರಿಸಿದ್ದು ಸುದ್ದಿಯಾಯಿತು. ಅದು ಸಂಸ್ಥಾನದ ಬಹುದೊಡ್ಡ ಹಿರಿಮೆಯಾಗಿ ಪ್ರಚಾರ ಪಡೆಯಿತು. ಇದನ್ನು ಗಮನಿಸಿದರೆ ಗಾಂಧೀಜಿಯವರ ಅಸ್ಪೃಶ್ಯ ನಿವಾರಣೆಯ ಚಳುವಳಿಯ ಇನ್ನೊಂದು ಮುಖ ಗೋಚರಿಸುತ್ತದೆ. ಅವರು ದೇಗುಲಗಳಲ್ಲಿ ಬಾವಿ, ಕೆರೆಗಳಲ್ಲಿ ಹರಿಜನರಿಗೆ ಪ್ರವೇಶ ಕಲ್ಪಿಸಿ ಮುಂದಿನ ಸ್ಥಳಗಳಿಗೆ ಸಂಚರಿಸುತ್ತಿದ್ದರು. ಆದರೆ ಅವನ ವ್ಯಕ್ತಿತ್ವಕ್ಕೆ ಮಾರು ಹೋಗಿ ಅಲ್ಲಿನ ಜಮೀನ್ದಾರರು ಮೇಲ್ವರ್ಗದವರು ಗಾಂಧೀಜಿಯವರ ಎದುರಿಗೆ 'ಹರಿಜನರಿಗೆ' ಪ್ರವೇಶ ಕಲ್ಪಿಸಿದಂತೆ ಮಾಡಿ, ಅವರು ತೆರಳುತ್ತಲೇ ರದ್ದುಗೊಳಿಸಲಾಗುತ್ತಿದ್ದುದು ಚಾರಿತ್ರಿಕ ವ್ಯಂಗ್ಯ ಭಾರತದಲ್ಲಿ ಅಂತಹದ್ದೊಂದು ಪರಂಪರೆಯೇ ಬೆಳೆದುಬಂದಿದೆ. ಭಾರತಕ್ಕೆ ಅಮೆರಿಕದ ಅಧ್ಯಕ್ಷ ಬಿಲ್‌ಕ್ಲಿಂಟನ್ ಬಂದಾಗಲೂ, ಅವರು ಹೋದ ಹಳ್ಳಿಗಳ ಗ್ರಾಮ ಪಂಚಾಯ್ತಿಗಳಲ್ಲಿ ಕಂಪ್ಯೂಟರ್ ಇಟ್ಟು ತೋರಿಸಿ ಭಾರತದ ಗ್ರಾಮ ಪಂಚಾಯ್ತಿಗಳಲ್ಲಿ ಕಂಪ್ಯೂಟರ್ ಇದೆ ಎಂದು ಹೇಳಿದರು. ಬಿಲ್‌ಕ್ಲಿಂಟನ್ ಆ ಹಳ್ಳಿಯಿಂದ ತೆರಳುತ್ತಲೂ ಪಂಚಾಯ್ತಿಯಲ್ಲಿದ್ದ ಕಂಪ್ಯೂಟರ್‌ಗಳನ್ನು ಅವುಗಳ ಮೂಲಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಜಗತ್ತನ್ನು ಆಳುವ ಕನಸು ಕಾಣುತ್ತಿರುವ, ನಿಯಂತ್ರಿಸುತ್ತಿರುವ ಅಮೇರಿಕದ ಎದುರು ಭಾರತದ ಈ ನಾಟಕೀಯ ವರ್ತನೆ ಅಪಹಾಸ್ಯದಂತೆ ಕಾಣುತ್ತದೆ.

ಕುಮಾರಸ್ವಾಮಿ ದೇಗುಲದಲ್ಲಿ ಮಹಿಳೆಯರಿಗೆ ಪ್ರವೇಶವಿರಲಿಲ್ಲ. ಇದಕ್ಕೆ ಜನಪದರ ಕತೆಯೊಂದಿದೆ. ತನ್ನ ತಾಯಿಯಂತೆಯೇ ಇರುವ ಮದುವೆ ಕನ್ಯೆಯನ್ನು ತಿರಸ್ಕರಿಸಿ ತಾಯಿ ನಿಂದನೆಗೆ ಗುರಿಯಾಗುತ್ತಾನೆ. ಮುಂದೆ ಆತನ ಹೆಣ್ಣನ್ನೇ ನೋಡದ ಬ್ರಹ್ಮಚಾರಿಯಾಗುತ್ತಾನೆ. ಹೀಗಾಗಿ ಇಲ್ಲಿನ ಹೆಣ್ಣುಮಕ್ಕಳು ಕುಮಾರಸ್ವಾಮಿಯನ್ನು 'ನಿರ್ವಾಣಿ' ಎನ್ನುತ್ತಾರೆ. ಹಿಂದೊಮ್ಮೆ ಗಂಡನ ವೇಷಧರಿಸಿ ಕುಮಾರಸ್ವಾಮಿಯನ್ನು

ನೊಡಿದ ಹೆಣ್ಣೊಬ್ಬಳು ಕಲ್ಲಾಗಿದ್ದಳು ಎಂಬ ಐತಿಹ್ಯವಿತ್ತು. ಹೀಗಿರುವಾಗ ಜನವರಿ ೭, ೧೯೯೭ರಂದು ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದ ಕನ್ನಡ ಅಧ್ಯಾಪಕಿಯಾದ ಡಾ. ಮಲ್ಲಿಕಾ ಘಂಟಿಯವರು ಮೊದಲ ಬಾರಿಗೆ 'ಕುಮಾರಸ್ವಾಮಿ'ಯ ಗರ್ಭಗುಡಿ ಪ್ರವೇಶಿಸಿದರು. ಈ ದೇವಸ್ಥಾನದ ಈವರೆಗಿನ ಕಟ್ಟುಪಾಡನ್ನು ಮುರಿದಿದ್ದರಿಂದ ಉದ್ರಿಕ್ತಗೊಂಡ ಭಕ್ತರು ಪ್ರಾಣ ಬೆದರಿಕೆ ಹಾಕಿದ್ದರು. ಆ ಸಂದರ್ಭದಲ್ಲಿ ಎಂ.ವೈ.ಘೋರ್ಪಡೆಯವರು ಬೆಂಬಲಕ್ಕೆ ಬಂದು ಧೈರ್ಯ ತುಂಬಿದರು ಎಂದು ಮಲ್ಲಿಕಾಘಂಟಿಯವರು ಆ ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ.

ಬಳ್ಳಾರಿಯ ಯಜಮಾನ ಶಾಂತರುದ್ರಪ್ಪನವರು ಕುಮಾರಸ್ವಾಮಿ ದೇವಸ್ಥಾನವನ್ನು ಮಹಾರಾಜರ ಅಧೀನದಿಂದ ಬಿಡಿಸಲಿಕ್ಕೆ ಜೀವನಪೂರ್ತಿ ಹೋರಾಡಿದರು. ಕುಮಾರಸ್ವಾಮಿಯ ಪ್ರತಿ ಜಾತ್ರೆಗೂ ಯಜಮಾನರು ದರ್ಶನಕರ ವಿರೋಧಿಸಲು ಕರಪತ್ರ ಹಂಚುತ್ತಿದ್ದರು. ಮಹಾರಾಜರು ದೇವಸ್ಥಾನದ ವಂಶಾನುಗತ ಟ್ರಸ್ಟಿ ಅಲ್ಲ. ಮೂಲ ಟ್ರಸ್ಟಿ ಲಕ್ಷ್ಮೀಪುರದ ಮುದುಕನಗೌಡರ ವಂಶಸ್ಥರು ಎಂದು ಪ್ರತಿಪಾದಿಸಿದರು. ಹುಬ್ಬಳ್ಳಿಯಿಂದ ಬರುತ್ತಿದ್ದ 'ವಿಶಾಲ ಕರ್ನಾಟಕ' ಪತ್ರಿಕೆ, 'ಸೊಂಡೂರು ಕುಮಾರಸ್ವಾಮಿ ವಿಮೋಚನೆ' ಎಂಬ ಹೆಸರಲ್ಲಿ ಸರಣಿ ಲೇಖನಗಳನ್ನು ಪ್ರಕಟಿಸಿತು. ಯಜಮಾನರ ಹೋರಾಟಕ್ಕೆ ಜಾತಿಯೂ ಕಾರಣವಾಗಿತ್ತು. ಹಿಂದೊಮ್ಮೆ ಲಿಂಗಾಯಿತರ ವಶದಲ್ಲಿದ್ದ ದೇವಾಲಯ ಈಗ ಮರಾಠಿಗರ ವಶಕ್ಕೆ ಹೋಗಿದೆ. ಅದನ್ನು ಮತ್ತೆ ಲಿಂಗಾಯಿತರ ವಶಕ್ಕೆ ತೆಗೆದುಕೊಳ್ಳಬೇಕು ಎನ್ನುವುದು ಯಜಮಾನರ ಹೋರಾಟಕ್ಕಿದ್ದ ಇನ್ನೊಂದು ಮುಖ. ಮೊದಲು ದರ್ಶನಕರ ರದ್ಧತಿಗಾಗಿ ಜಾತ್ರೆಯ ಸಂದರ್ಭದಲ್ಲಿ ಧರಣಿ ಮಾಡುತ್ತಿದ್ದರು. ನಂತರ ಮಹಾರಾಜರಿಂದ ಕುಮಾರಸ್ವಾಮಿಯನ್ನು ಬಂಧನ ಮುಕ್ತಗೊಳಿಸಲಿಕ್ಕೆ ಪ್ರಯತ್ನಿಸಿದರು. ಇದು ೧೯೭೩ರ ಹೊತ್ತಿಗೆ ಕುಮಾರಸ್ವಾಮಿ ಹೆಸರಿನ ಇನಾಮು ಭೂಮಿ ರೈತರಿಗೆ ದೊರೆಯಲಿ ಎನ್ನುವ ಹಂತ ತಲುಪಿತು. ಯಜಮಾನರ ಈ ಪ್ರತಿರೋಧದ ಪರಂಪರೆಯು ಸಾರ್ವಜನಿಕ ಸ್ವರೂಪ ಪಡೆದು ೧೯೭೩ರ ಚಳುವಳಿಗೆ ಕಾರಣವಾಯಿತು.

## ೫. ೧೯೪೭ರ ನಂತರದ ಪ್ರತಿಭಟನೆಗಳು (1)

ಕೂಡ್ಲಿಗಿ ತಾಲ್ಲೂಕು ಹಾರಕನಾಳಿನಲ್ಲಿ ೧೯೯೮ರಲ್ಲಿ ನಡೆದ ಒಂದು ಘಟನೆ. ಅಂದು ಊರಿಗೆ ಲೈನ್‌ಮ್ಯಾನ್‌ಗಳ ಗುಂಪೊಂದು ಬಂದಿತ್ತು (ಕೆ.ಇ.ಬಿ ನೌಕರರು) ಬಾಕಿ ಉಳಿದ ಕರೆಂಟ್(ಎಲೆಕ್ಟ್ರಿಕಲ್) ಬಿಲ್ಲುಗಳನ್ನು ವಸೂಲಿ ಮಾಡುವುದು ಆ ದಿನದ ಉದ್ದೇಶ. ಹಣಪಾವತಿ ಮಾಡದೆ ಬಾಕಿ ಇರುವ ಮನೆಗಳ ಕರೆಂಟ್ ಕನೆಕ್ಷನ್ ಕಟ್ ಮಾಡುತ್ತಿದ್ದರು. ಹಾರಕನಾಳಿನ ಭರಮನ ಗೌಡರದು ಐದು ತಿಂಗಳ ಬಿಲ್‌ಬಾಕಿ ಇತ್ತು. ಅವರು 'ಈಗ ದುಡ್ಡು ಇಲ್ಲ ಬೆಳೆ ಬಂದಿಂದೆ ಕಟ್ತೀವಿ' ಎಂದರು. ಕೆ.ಇ.ಬಿ. ನೌಕರನೊಬ್ಬ 'ಆಯ್ತು ನಾವು ಆವಾಗ್ಲೆ ಕನೆಕ್ಷನ್ ಕೊಡ್ತೀವಿ' ಎಂದು ಲೈನ್ ಕಟ್ ಮಾಡಲು ಕರೆಂಟ್ ಕಂಬವನ್ನು ಹತ್ತಿದ. ಭರಮನ ಗೌಡರಿಗೆ ಸಿಟ್ಟು ಅವಮಾನ ಎರಡೂ ಆಗಿ ದೊಡ್ಡದೊಂದು ಕಲ್ಲು ಹಿಡಿದುಕೊಂಡು 'ಲೇ ಲೈನ್ ಬಂದ್ ಕಟ್ ಮಾಡು ಕಲ್ಲಿಲೇ ಹೊಡಿತೀನಿ….. ಸೊಂಡೂರು ರಾಜರದು ಕೋಟಿಗಟ್ಟಲೆ ಕರೆಂಟ್ ಬಿಲ್ಲು ಬಾಕಿ ಐತಿ ಅದನ್ನು ವಸೂಲಿ ಮಾಡು ನೋಡ್ತೀನಿ…. ಬಂದ್ ಬಿಟ್ಟ ನಮ್ಮಂತ ಬಡವರ ಅತ್ರ' ಎಂದು ಹೊಡೆಯಲು ಸಜ್ಜಾಗಿ ನಿಂತರು. ಕಂಬದ ಮೇಲಿನ ಲೈನ್ ಮ್ಯಾನ್ ಹೆದರಿ ಲೈನ್ ಕಟ್ ಮಾಡದೆ ಇಳಿದ. ಆತನ ಮುಖದಲ್ಲಿ ಅವಮಾನದ ಛಾಯೆಯಿತ್ತು. ಸೊಂಡುರು ಪರಿಸರದ ಮತ್ತು ಸುತ್ತಮುತ್ತಲ ತಾಲ್ಲೂಕುಗಳಲ್ಲಿ ವಿದ್ಯುತ್ ಮಂಡಳಿಯವರು ಜನರಿಂದ ಮತ್ತೆ ಮತ್ತೆ ಕೇಳುವ ಮಾತಿದು. ರೈತರ ಕೊಳವೆ ಬಾವಿಗಳಿಗೆ ಮೀಟರ್ ಅಳವಡಿಸುವ ಚರ್ಚೆ ಬಂದಾಗ ಕೂಡ್ಲಿಗಿಯಲ್ಲಿ ರೈತರ ಧರಣಿ ನಡೆಯಿತು. ಈ ಧರಣಿಯಲ್ಲಿ 'ಸೊಂಡೂರು ರಾಜರದು ಕೋಟಿಗಟ್ಟಲೆ ವಿದ್ಯುತ್ ಬಿಲ್ ಬಾಕಿ ಇದೆ. ಮೊದ್ಲು ಅದನ್ನ ಕಟ್ಟಸಿಕೊಳ್ಳಿ., ಆ ನಂತರ ನಮ್ಮ ಬೋರ್‌ವೆಲ್‌ಗಳಿವೆ ಮೀಟ್‌ರ್ ಅಳವಡಸ್ರಿ' ಎಂದು ಬರೆದ ಬಿತ್ತಿಪತ್ರವನ್ನು ಹಿಡಿದಿದ್ದರು. ವಿದ್ಯುತ್ ಮಂಡಳಿಯ ಒಬ್ಬರನ್ನು ಮಾತನಾಡಿಸಿದಾಗ ಅವರು ಅಸಹಾಯಕತೆಯಿಂದ 'ಅದೇನೋ ನಿಜ ದೊಡ್ಡೋರ್ನೆಲ್ಲ ಯಾರು ಕೇಳ್ಬೇಕು ಸಿಕ್ ಇಂಡಸ್ಟ್ರೀ ಅಂತ ಕರೆಂಟ್ ಬಿಲ್ಲನ್ನೆಲ್ಲಾ ಸರ್ಕಾರ ಮನ್ನ ಮಾಡ್ತು' ಎಂದರು. ಈ ಭಾಗದ ರೈತರು

ವಿದ್ಯುತ್ ಸಂಬಂಧಿ ಮಾತು ಬಂದಾಗಲೆಲ್ಲಾ ಸೊಂಡೂರು ರಾಜರ ಕರೆಂಟ್ ಬಿಲ್ಲಿನ ಕತೆ ಬಿಚ್ಚಿಕೊಳ್ಳುತ್ತದೆ. ಈ ತನಕದ ರೈತಸಂಘದ ಪ್ರತಿಭಟನೆಗಳಲ್ಲಿ ಅದು ಪ್ರಸ್ತಾಪವಾಗುತ್ತಿದೆ. ರಾಜರ ಜೊತೆಗಿನ ಜನತೆಯ ಪ್ರತಿರೋಧ ಇಂದು ನಿನ್ನೆಯದಲ್ಲ ನಿರಂತರ ನಡೆಯುತ್ತಲೇ ಬಂದಿದೆ.

**ಟಿ. ಶ್ರೀನಿವಾಸಚಾರ್ಯರ ದೂರು**

೧೯೩೭ ಸೊಂಡೂರು ಇನಾಂ ನಿಯಂತ್ರಣ ಕಾನೂನು ಜಾರಿಯಾಯಿತು. ಇದರ ೧೫ನೇ ನಿಬಂಧನೆಯ ಪ್ರಕಾರ ಎಲ್ಲಾ ಸಾರ್ವಜನಿಕ ದೇವಸ್ಥಾನಗಳ ಆಸ್ತಿ ರಾಜರ ಖಾಸಗಿ ಆಸ್ತಿಯಾಗಿ ಮಾರ್ಪಟ್ಟಿತು. ಈ ಬದಲಾವಣೆ ರಾಜಮನೆತನದ ಬಗೆಗೆ ಇದ್ದ ಪ್ರಶ್ನೆಗಳನ್ನು ಮತ್ತೆ ನೆನಪಿಸಿತು. ಕುಮಾರಸ್ವಾಮಿಯು ನಿಜವಾಗಲೂ ರಾಜರ ಕುಲದೈವವೇ? ರಾಜರು ವಂಶಾನುಗತ ಧರ್ಮದರ್ಶಿಗಳೆ? ಯಶವಂತರಾವ್ ಘೋರ್ಪಡೆ, ಎಂ.ವೈ.ಘೋರ್ಪಡೆಯವರು ಮೂಲ ರಾಜವಂಶಜರೇ? ಇಂತಹ ಪ್ರಶ್ನೆಗಳು ಕೆಲವರ ಮಧ್ಯೆ ಸುಳಿದವು. ಈ ಪ್ರಶ್ನೆಗಳ ಪರಿಣಾಮದಿಂದ ಬಳ್ಳಾರಿಯ ಜನಪರ ಹೋರಾಟಗಾರರಾದ ಟಿ.ಶ್ರೀನಿವಾಸಚಾರ್ಯರು ಕ್ರಿಯಾಶೀಲರಾದರು. ೧೯೩೮ರಲ್ಲಿ ಇವರನ್ನೊಳಗೊಂಡಂತೆ ಇನ್ನಿತರರು ಅಂದಿನ ರೆಸಿಡೆಂಟರಿಗೆ ಒಂದು ದೂರು ಸಲ್ಲಿಸಿದರು. ದೂರಿನಲ್ಲಿ ಸೊಂಡೂರು ಸಂಸ್ಥಾನಾಧೀಶರು ಕುಮಾರಸ್ವಾಮಿ ಮತ್ತು ಇತರೆ ದೇವಸ್ಥಾನಗಳಿಂದ ಬರುವ ವರಮಾನವನ್ನು ತಮ್ಮ ಖಾಸಗಿ ಖಜಾನೆಗೆ ಸೇರಿಸಿಕೊಂಡಿದ್ದಾರೆ ಎಂದು ಹೇಳಲಾಗಿತ್ತು. ಅಂದಿನ ರೆಸಿಡೆಂಟರಾದ ಸ.ಪಿ.ಸ್ಕ್ರೀನೋ ದಿನಾಂಕ ೧೪ ಮಾರ್ಚ್೧೯೩೮ ತಮ್ಮ ಪತ್ರದಲ್ಲಿ ಟಿ.ಶ್ರೀನಿವಾಸಾಚಾರ್ಯರಿಗೆ '೧೯೩೪ರ ಲಗಾಯ್ತು ಶ್ರೀ ಕುಮಾರಸ್ವಾಮಿ ದೇವಸ್ಥಾನದ ವ್ಯವಹಾರಗಳನ್ನು ಸೊಂಡೂರು ಸಂಸ್ಥಾನದ ಲೋಕೋಪಯೋಗಿ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆಂದು ಸಂಸ್ಥಾನಾಧೀಶರು ತಿಳಿಸಿರುತ್ತಾರೆ. ದೇವಸ್ಥಾನದ ವರಮಾನದ ಹಣವನ್ನು ಹುಜೂರು ಖಾಸಗಿ ಖಜಾನೆಗೆ ಉಪಯೋಗಿಸಿಲ್ಲವೆಂದು ದೊರೆ ಸಂಪೂರ್ಣವಾಗಿ ನಿರಾಕರಿಸುತ್ತಾರೆ. ಹಾಗೂ ಈ ದೇವಸ್ಥಾನದ ಆಡಳಿತವನ್ನು ಹೇಗೆ ನಿರ್ವಹಿಸಲಾಗುತ್ತಿದೆ ಎಂಬುದನ್ನು ಮನವಿದಾರರಿಗೆ ವಿವರಿಸಲು ಸೊಂಡೂರು ದೊರೆ ಒಪ್ಪಿಕೊಂಡು ಅವರಿಗೆ ಸಂದರ್ಶನ ಕೊಡಲೊಪ್ಪಿದ್ದಾರೆ' ಎಂದು ತಿಳಿಸಿದರು.

ಜನರ ಮನವಿ ಮತ್ತು ರೆಸಿಡೆಂಟರ ಉತ್ತರ ಬ್ರಿಟಿಷ್ ಆಡಳಿತದ ಚಿತ್ರವನ್ನು ಕೊಡುತ್ತದೆ. ಸಂಸ್ಥಾನಿಕರ ವಿರುದ್ಧದ ಆರೋಪಗಳು ಅರ್ಜಿ ರೂಪದಲ್ಲಿರುತ್ತಿದ್ದವು. ಬ್ರಿಟಿಷ್ ಸರ್ಕಾರದ ಹೊತ್ತಿನಲ್ಲಿ ರಾಜರನ್ನು ವಿರೋಧಿಸುವುದು ಸಾಮಾನ್ಯರಿಗೆ ಅಸಾಧ್ಯವಾಗಿತ್ತು. 'ಪೊಲೀಸರು ಬಂದರೆ ಮನೆಗಳಿಗೆ ಹೋಗಿ ಚಿಲಕ ಹಾಕ್ಕೊಳ್ತಿದ್ವಿ' ಎನ್ನುವ ಹಿರಿಯ ತಲೆಮಾರಿನವರು ಹೇಳುತ್ತಿದ್ದ ಮಾತನ್ನು ನೆನಪಿಸಿಕೊಳ್ಳಬಹುದು. ಇಂತಹ ಸಂದರ್ಭದಲ್ಲಿ ರಾಜರ ವಿರುದ್ಧದ ದೂರು ಅಷ್ಟು ಸಲೀಸಾಗಿರಲಿಲ್ಲ. ದೂರು ಸಲ್ಲಿಸಿದರೂ ರೆಸಿಡೆಂಟರು ಇದಕ್ಕೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವುದೂ ಮುಖ್ಯ. ಮೇಲಿನ ಘಟನೆಯನ್ನೇ ನೋಡಿ. ಟಿ.ಶ್ರೀನಿವಾಸಚಾರ್ಯರ ದೂರಿಗೆ ರೆಸಿಡೆಂಟರು ಪ್ರತಿಕ್ರಿಯಿಸಿದ್ದು ಸಂಸ್ಥಾನಾಧೀಶರು ಈ ದೂರನ್ನು ನಿರಾಕರಿಸುತ್ತಾರೆ ಎಂದು. ಅಂದರೆ ಈ ದೂರಿನ ವಾಸ್ತವವನ್ನು ಪರಿಶೀಲಿಸಲು ಯಾವ ಕಾರ್ಯಾಚರಣೆಯೂ ನಡೆಯಲಿಲ್ಲ. ಸಂಸ್ಥಾನಧೀಶರ ಗಮನಕ್ಕೆ ತಂದರು. ನಂತರ ಅವರ ಉತ್ತರವನ್ನು ಮನವಿದಾರರಿಗೆ ತಿಳಿಸಿದರು. ಇದು ರೆಸಿಡೆಂಟರ ಜವಾಬ್ದಾರಿ. ದೊರೆಗಳು ದೇವಸ್ಥಾನದ ಆಡಳಿತ ನಿರ್ವಹಣೆಯ ಬಗ್ಗೆ ಮನವಿದಾರರಿಗೆ ವಿವರಿಸಲು ಸಂದರ್ಶನಕ್ಕೆ ಆಹ್ವಾನಿಸಿದರು. ಆದರೆ ಅವರು ದೂರು ಸಲ್ಲಿಸಿದಷ್ಟು ಸುಲಭವಾಗಿ ದೊರೆಗಳೊಂದಿಗೆ ಸ್ಪಷ್ಟನೆ ಕೇಳುವ ಸ್ಥಿತಿಯಲ್ಲಿರಲಿಲ್ಲ. ಹಾಗಾಗಿ ಇರುವ ಸ್ಥಿತಿ ಬದಲಾವಣೆಯಿಲ್ಲದೆ ಉಳಿಯಿತು.

೧೯೩೯-೪೦ರ ಅವದಿ ಎರಡನೇ ಜಾಗತಿಕ ಮಹಾಯುದ್ಧದ ಸಮಯ. ಈಗ ಇಂಗ್ಲೆಂಡ್ ಬಲವನ್ನು ಹೆಚ್ಚಿಸಿಕೊಳ್ಳಲು ತನ್ನ ವಸಾಹತುಗಳಿಂದ ಹಣ ಹಾಗೂ ಸೈನ್ಯದ ಸಹಾಯ ಪಡೆಯತೊಡಗಿತು. ಇಂತಹ ಪ್ರಕ್ರಿಯೆ ಭಾರತದಾದ್ಯಂತ ಶುರುವಾಯಿತು. ಈ ಸಂದರ್ಭ ಬ್ರಿಟಿಷ್ ಸರ್ಕಾರದ ಮನವೊಲಿಸಲು ದೇಶಿಸಂಸ್ಥಾಕರಿಗೆ ಸಹಾಯಕವಾಯಿತು. ಸೊಂಡೂರು ಸಂಸ್ಥಾನದಲ್ಲೂ ಈ ಪ್ರಕ್ರಿಯೆ

ನಡೆಯಿತು. ರಾಜ ಯಶವಂತರಾವ್ ಘೋರ್ಪಡೆಯವರು ಬ್ರಿಟಿಷರ ಸೈನ್ಯಕ್ಕೆ ಸೊಂಡೂರಿನ ಬಡಜನರನ್ನು ಬಲವಂತವಾಗಿ ಭರ್ತಿಮಾಡಿದರು. ಭಾರತದ ತುಂಬಾ ಈ ಕಾರ್ಯ ನಡೆದಿದ್ದರಿಂದ ಸೊಂಡೂರು ಜನರ ಕೂಗು ಯಾರಿಗೂ ಕೇಳಿಸಲಿಲ್ಲ.

ಸಂಸ್ಥಾನದಲ್ಲಿ ಸಾರ್ವಜನಿಕ ಆಸ್ತಿಯನ್ನು ರಾಜಮನೆತನದ ಒಡೆತನಕ್ಕೆ ಮಾರ್ಪಡಿಸುವ ಕೆಲಸ ಮತ್ತೆ ಮುಂದುವರಿಯಿತು. ೧೯೪೪ರಲ್ಲಿ ಸೊಂಡೂರು ರಾಜ್ಯದ ಸಂವೈಧಾನಿಕ ಕಾನೂನು ಜಾರಿಗೆ ಬಂತು. ಈ ಕಾನೂನಿನ ೪೮ನೆಯ ವಿಧಿಯ ಪ್ರಕಾರ ದೇವಸ್ಥಾನಗಳ ಎಲ್ಲ ಸೊತ್ತು ರಾಜರ ಖಾಸಗಿ ಸೊತ್ತು ಎಂದು ಘೋಷಿಸಲಾಯಿತು. ಈ ವಿಧಿಗೆ ಜನರು ಪ್ರತಿಕ್ರಿಯಿಸಿದರೂ ರಾಜತ್ವದ ಬಲದಿಂದ ಹತ್ತಿಕ್ಕಲಾಯಿತು. ಆಗಸ್ಟ್ ೨೦.೧೯೪೪ಲರಂದು 'ಸೊಂಡೂರು ದೇವಸ್ಥಾನಗಳ ಉದ್ಘೋಷ' ಎಂಬ ಕಾನೂನನ್ನು ಸಂಸ್ಥಾನ ಜಾರಿ ಮಾಡಿತು. ದೇವಸ್ಥಾನಗಳ ಇನಾಂ ಆಸ್ತಿಗಳನ್ನು ಒಂದು ಟ್ರಸ್ಟಾಗಿ ಪರಿವರ್ತಿಸಲಾಯಿತು. ಇದರ ಅನುವಂಶಿಕ ಧರ್ಮದರ್ಶಿಗಳು ರಾಜರೇ ಆಗಿದ್ದು, 'ಕುಮಾರಸ್ವಾಮಿ' ರಾಜರ ಮನೆದೇವರು ಎನ್ನುವುದು ಈ ಉದ್ಘೋಷದ ಪ್ರಮುಖ ಅಂಶವಾಗಿತ್ತು.

ಸಾರ್ವಜನಿಕವಾದ ಭೂಮಿ ಹಾಗೂ ನಿಸರ್ಗ ಖಾಸಗಿಯಾಗಿ ರೂಪಾಂತರವಾಗುತ್ತಿರುವ ಸಂದರ್ಭದಲ್ಲಿ ನಾವಿದ್ದೇವೆ. ಈ ಹೊತ್ತಲ್ಲಿ ಸೊಂಡೂರು ಸಂಸ್ಥಾನ ಜಾರಿಗೊಳಿಸಿದ ಕಾನೂನುಗಳನ್ನು ನೋಡುವುದೆಂದರೆ, ಸಾರ್ವಜನಿಕವಾದದ್ದು ಖಾಸಗಿಯಾಗಿ ಪರಿವರ್ತನೆಗೊಳ್ಳುವ ಸಂಕ್ರಮಣ ಸ್ಥಿತಿಯ ಚರಿತ್ರೆಯಾಗಿ ಕಾಣುತ್ತದೆ. ಜನರ ಬದುಕಿನ ಭಾಗವೇ ಆಗಿದ್ದ ದೇವಸ್ಥಾನಗಳನ್ನು ರಾಜತ್ವ ಮೊದಲು ನಿಯಂತ್ರಿಸಿತು. ಈ ದೇವಸ್ಥಾನಗಳ ಮೂಲಕ ಜನರನ್ನು ನಿಯಂತ್ರಿಸುವ ರಾಜಕೀಯ ಆರಂಭಗೊಂಡಿತು. 'ಕುಮಾರಸ್ವಾಮಿ ಕುಲದೈವವಾಗಿರುವುದರಿಂದ ರಾಜಮನೆತನದ ಸಾರ್ವಭೌಮತ್ವಕ್ಕೆ ಎಂದೆಂದೂ ಒಳಪಟ್ಟಿರುತ್ತದೆ. ಈ ಪ್ರದೇಶಗಳಿಗೆ ಕಾನೂನಿನ ಮಾನ್ಯತೆ ಕೊಡಬೇಕಾಗಿರುವ ಕಾರಣದಿಂದ ಈ ಉದ್ಘೋಷವನ್ನು ಮಾಡಲಾಗಿದೆ' ಎನ್ನುವ ಸ್ಪಷ್ಟನೆಗಳು ಅಧಿಕಾರಯುಕ್ತವಾಗಿಯೇ ಇದ್ದವು. ದೇವಸ್ಥಾನಗಳಿಗೆ ಸಂಬಂಧಪಟ್ಟ ಆಸ್ತಿ ವಿವರಗಳನ್ನು ಕೊಟ್ಟಿದ್ದರೂ ಇವುಗಳ ಗಡಿಗಳನ್ನು ನಿರ್ದಿಷ್ಟವಾಗಿ ಹೇಳಿರಲಿಲ್ಲ. ಹೀಗೆ ಹಂತ ಹಂತವಾಗಿ ಜನರ ಆಸ್ತಿ ರಾಜರ ನೇರ ನಿಯಂತ್ರಣಕ್ಕೆ ಬರುವಂತಾಯಿತು. ರೈತರು ಎತ್ತುಗಳಿಗೆ ಮೂಗುದಾರ ಹಾಕಿ ಕೃಷಿ ಮಾಡುತ್ತಾರೆ. ಅಂತೆಯೇ ರಾಜರು ರೈತರಿಗೆ ಮೂಗುದಾರ ಹಾಕಿ ಕೃಷಿ ಮಾಡಿಸತೊಡಗಿದರು.

**೧೯೪೭ರ ಸ್ವಾತಂತ್ರ್ಯ ಮತ್ತು ಸೊಂಡೂರು ಸಂಸ್ಥಾನ**

ಮೇಲುನೋಟಕ್ಕೆ ಭಾರತ ಆಗಸ್ಟ್ ೧೫.೧೯೪೭ರಲ್ಲಿ ಸ್ವತಂತ್ರ ಪಡೆದಂತೆ ಕಂಡರೂ ಆಂತರಿಕವಾಗಿ ದೇಶ ವಿಚಿತ್ರ ತಲ್ಲಣಗಳನ್ನು ಎದುರಿಸುತ್ತಿತ್ತು. ಒಂದು ಕಡೆ ದೇಶ ವಿಭಜನೆ, ಇನ್ನೊಂದು ಕಡೆ ೬೦೦ಕ್ಕೂ ಹೆಚ್ಚಿನ ದೇಶಿ ಸಂಸ್ಥಾನಗಳ ಅಧಿಕಾರದ ಪ್ರಶ್ನೆ. ಕನ್ನಡ ಭಾಷಾ ಪ್ರದೇಶಗಳಲ್ಲಿ ಸುಮಾರು ೧೮ ದೇಶೀಯ ಸಂಸ್ಥಾನಗಳಿದ್ದವು. ಮೈಸೂರು, ಹೈದರಾಬಾದು ದೊಡ್ಡ ಸಂಸ್ಥಾನಗಳಾದರೆ ಸವಣೂರು, ಜತ್ತ, ಮುಧೋಳ ಮುಂತಾದವು ಸಣ್ಣಪುಟ್ಟ ಸಂಸ್ಥಾನಗಳಾಗಿದ್ದವು. ಬಳ್ಳಾರಿ ಜಿಲ್ಲೆಯ ಸೊಂಡೂರು ಸಂಸ್ಥಾನವು ಅಂತಹ ಒಂದು ಸಣ್ಣ ದೇಶೀಯ ಸಂಸ್ಥಾನ. ಸೊಂಡೂರು ವ್ಯಾಪ್ತಿಯಲ್ಲಿ ೩೩ ಹಳ್ಳಿಗಳಿದ್ದವು. ಜನಸಂಖ್ಯೆ ೧೫ ಸಾವಿರವಿತ್ತು. ಪ್ರಾಕೃತಿಕವಾಗಿ ಮನೋಹರ ಪರಿಸರವನ್ನು ಹೊಂದಿತ್ತು. ಸಂಸ್ಥಾನವನ್ನು ಪ್ರವೇಶಿಸಲು ಅಂದು ಕೇವಲ ಎರಡು ಮಾರ್ಗಗಳಿದ್ದವು. ಒಂದು ಗುಂಡಿ ನರಸಿಂಹಸ್ವಾಮಿ ಮಾರ್ಗ. ಮತ್ತೊಂದು ಬಳ್ಳಾರಿ ಮಾರ್ಗ.

[1]
ಸೊಂಡೂರಿನ ಸ್ವಾತಂತ್ರ ಹೋರಾಟಗಾರರಾದ ಟಿ.ಬಿ.ಕೇಶವರಾಯರು ಹೇಳುವಂತೆ ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಸೊಂಡೂರು ಸಂಸ್ಥಾನದಿಂದ ಹೊರಕ್ಕೆ ಅಥವಾ ಹೊರಗಡೆಯಿಂದ ಒಳಗೆ ಯಾರೂ ಪ್ರವೇಶಿಸದಂತೆ ನಿರ್ಬಂಧ ವಿಧಿಸಲಾಗಿತ್ತು. ಮಹಾರಾಜರ ಸರಕಾರ ದಮನಕಾರಿ ನೀತಿಗಳನ್ನು ಅನುಸರಿಸುತ್ತಿತ್ತು. ಸಂಸ್ಥಾನದಲ್ಲಿದ್ದ ಜನರು ಬ್ರಿಟಿಷ್‌ರ ವಿರುದ್ಧ ಕರ್ನಾಟಕದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವಂತಿರಲಿಲ್ಲ. ಹೊರಗಿನಿಂದ ಸಂಸ್ಥಾನದೊಳಗೆ ಯಾವುದೇ ಸುದ್ದಿ ಸಮಾಚಾರ ಪ್ರಸಾರವಾಗದಂತೆ

ಬಂದೋಬಸ್ತು ಮಾಡಲಾಗಿತ್ತು. ಇಲ್ಲಿಯ ದಮನಕಾರಿ ಆಳ್ವಿಕೆಯ ಸುದ್ದಿ ಹೊರಗೆ ಹೋಗುವಂತಿರಲಿಲ್ಲ. ಈ ಸಂದರ್ಭದಲ್ಲಿ ಸೊಂಡೂರಿನ ಡಾ.ಎಸ್.ಬಿ.ಷರಾಫ್ ಅವರ ನೇತೃತ್ವದಲ್ಲಿ ಮಹಾರಾಜರ ವಿರುದ್ಧ ೧೯೩೦-೩೧ರಲ್ಲಿ ಚಳವಳಿ ನಡೆದಿತ್ತು. ಇದರಿಂದಾಗಿ ಅವರು ಸಂಸ್ಥಾನದಲ್ಲಿ ಜೈಲುವಾಸ ಅನುಭವಿಸಿದರು.

೧೯೪೭ರಲ್ಲಿ ಪ್ರಾರಂಭವಾದ ಭಾರತದ ಒಕ್ಕೂಟದಲ್ಲಿ ಸೊಂಡೂರನ್ನು ವಿಲೀನಗೊಳಿಸಲು ಮಹಾರಾಜರು ನಿರಾಕರಿಸಿದರು. ಅಲ್ಲದೆ ಹೈದರಾಬಾದಿನ ರಜಾಕಾರರಿಗೂ ತಮ್ಮ ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಆಶ್ರಯಕೊಟ್ಟರು. ಕಾರಣ ಭಾರತದ ಒಕ್ಕೂಟ ಸೇರದಿರುವವರ ಸಂಘಟನೆಯನ್ನು ಬಲಗೊಳಿಸಬೇಕಿತ್ತು. ಈವರೆಗೂ ರಾಜರ ಆಡಳಿತದಿಂದ ಬೇಸರಗೊಂಡ ಜನತೆ ಭಾರತದ ಒಕ್ಕೂಟದಲ್ಲಿ ಸೊಂಡೂರನ್ನು ವಿಲೀನಗೊಳಿಸಲು ಹೋರಾಟ ನಡೆಸಿತು. ೧೯೪೮ರ ಹೊತ್ತಿಗೆ ಯಶವಂತರಾವ್ ಘೋರ್ಪಡೆಯವರು ದೇಶಿ ಸಂಸ್ಥಾನಿಕರ ಸಂಘದ ಕಾರ್ಯದರ್ಶಿಯಾಗಿದ್ದರು. ಅದೇ ಹೊತ್ತಿಗೆ ಸೊಂಡೂರಲ್ಲಿ ರಾಜರ ವರ್ತನೆಯನ್ನು ವಿರೋಧಿಸಿ ಸತ್ಯಾಗ್ರಹ ಮಾಡಿದರು. ಈ ಸತ್ಯಾಗ್ರಹದ ಬಿಸಿ ಬಳ್ಳಾರಿಗೂ ತಲುಪಿತು. ಅಂದಿನ ಬಳ್ಳಾರಿ ಕ್ಷೇತ್ರದ ವಿಧಾನಸಭಾ ಸದಸ್ಯರಾಗಿದ್ದ ಅಲ್ಲಂ ಸುಮಂಗಲಮ್ಮನವರು ಈ ಸತ್ಯಾಗ್ರಹವನ್ನು ಬೆಂಬಲಿಸಿದರು. ಸ್ವತಃ ತಾವು ಸತ್ಯಾಗ್ರಹದಲ್ಲಿ ಭಾಗವಹಿಸಲು ಸೊಂಡೂರಿಗೆ ಬಂದರು. ಇದನ್ನು ತಿಳಿದ ಮಹಾರಾಜರು ಅವರ ಕಾರನ್ನು ನಿಲ್ಲಿಸಿ ಕಾರಿನ ಮೇಲೆ ಕಟ್ಟಿದ ಭಾರತದ ಧ್ವಜವನ್ನು ಕಿತ್ತು ಬಿಸಾಡಿದರು. ರಜಾಕಾರರಿಂದ ಸತ್ಯಾಗ್ರಹಿಗಳಿಗೆ ಹಿಂಸೆಯಾಯಿತು.

ಭಾರತ ಸ್ವಾತಂತ್ರ್ಯವಾದಾಗ ಹೈದರಾಬಾದ್ ನಿಜಾಮ, ಮೀರ್ ಉಸ್ಮಾನ್ ಅಲಿಖಾನ್ ಬಹಾದ್ದರೂರ್ ಒಕ್ಕೂಟ ಸೇರಲು ನಿರಾಕರಿಸಿದ. ಹೈದರಾದ್ ಸಂಸ್ಥಾನ ಸ್ವತಂತ್ರವಾಗಿ ಉಳಿಸಿಕೊಳ್ಳುವುದಾಗಿ ಘೋಷಿಸಿದ. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಕಾಂಗ್ರೆಸ್, ಸಮಾಜವಾದಿ, ಕಮ್ಯುನಿಸ್ಟ್, ಆರ್ಯಸಮಾಜ, ಹಿಂದೂ ಮಹಾಸಭಾ ಮುಂತಾದ ಸಂಘಟನೆಗಳು ನಿಜಾಮನ ಕಾಶೀಂ ರಜ್ವಿಗೆ ಅಧಿಕಾರ ನೀಡಿದ್ದ. ಆತ ಪೊಲೀಸ್ ಹಾಗೂ ಮಿಲಟರಿಯ ಹೊರತಾದ ಖಾಸಗಿ ಸೇನೆಯನ್ನೇ ಹುಟ್ಟು ಹಾಕಿದ. ಸಮವಸ್ತ್ರವಿಲ್ಲದ ಈ ಖಾಸಗಿ ಸೇನೆಯೇ ರಜಾಕರು. ಇವರು ಚಾಕು, ಚೂರಿ, ತಲವಾರಿ, ಬಂದೂಕು ಮುಂತಾದ ಶಸ್ತ್ರಾಸ್ತ್ರಗಳನ್ನು ಹಿಡಿದು ನಿಜಾಮ ಆಡಳಿತದ ವಿರುದ್ಧ ಧ್ವನಿ ಎತ್ತುವವರನ್ನು ಮಟ್ಟಹಾಕುತ್ತಿದ್ದರು. ವಾಸ್ತವವಾಗಿ ಮೀರ್ ಉಸ್ಮಾನ್ ಅಲಿಖಾನ್ ಸಂಸ್ಥಾನದ ರಕ್ಷಣೆಯ ದೃಷ್ಟಿಯಿಂದ ಕಾಶಿಂ ರಜ್ವಿ, ನಾಯಕತ್ವದ ಸೈನ್ಯ ರೂಪಿಸಿದ್ದ. ಆದರೆ ರಜ್ವಿ, ಅಧಿಕಾರವನ್ನು ದುರುಪಯೋಗಪಡಿಸಿಕೊಂಡು 'ಹಿಂಸೆಗೆ' ಕಾರಣವಾದ. ಇವರ ಹಾವಳಿ ಹೈದರಾಬಾದ್ ಕರ್ನಾಟಕದ ತುಂಬಾ ಅಮಾನುಷವಾಗಿ ನಡೆಯುತ್ತಿತ್ತು. ಇಂತಹ ಕಾಶಿಂ ರಜ್ವಿಗೆ ಸೊಂಡೂರಿನ ದೊರೆ ಯಶವಂತರಾವ್ ಘೋರ್ಪಡೆಯವರು ಬೆಂಬಲ ಸೂಚಿಸಿದರು. ತಮ್ಮ ಆಡಳಿತವನ್ನು ವಿರೋಧಿಸುವವರನ್ನು ನಿಯಂತ್ರಿಸಲಿಕ್ಕಾಗಿ ಕೆಲವು ರಜಾಕಾರರನ್ನು ಸೊಂಡೂರಿನಲ್ಲಿ ಇಟ್ಟುಕೊಂಡಿದ್ದರು. ಭೀಕರ ಹಾವಳಿಗೆ ಹೆಸರಾದ ರಜಾಕಾರರ ಹೆಸರು ಸೊಂಡೂರು ಪರಿಸರದ ಜನಸಾಮಾನ್ಯರು ದೊರೆಯ ವಿರುದ್ಧ ನಿಲ್ಲುವುದನ್ನು ತಡೆಗಟ್ಟಿತು.

ಸಹಜವಾಗಿಯೇ ಭಾರತದ ತುಂಬ ಸಂಸ್ಥಾನಿ ಅರಸರ ಆಡಳಿತದ ವಿರುದ್ಧ ಚಳವಳಿ ಆರಂಭವಾಯಿತು. ಮೊದಮೊದಲು ಸೊಂಡೂರು ದೊರೆಯ ಭಯದಿಂದಾಗಿ ವಿರೋಧ ತೀವ್ರವಾಗಲಿಲ್ಲ. ಭಾರತದಲ್ಲಿ ನಡೆಯುತ್ತಿದ್ದ ಚಳವಳಿಯ ಪ್ರಭಾವ ಇಲ್ಲಿ ಹರಡಿತು. ಮಹಾರಾಜರ ಆಳ್ವಿಕೆಯ ವಿರುದ್ಧ ಯತ್ನಟ್ಟಿ (ತಾರಾನಗರ) ಮತ್ತು ಹೊಸಳ್ಳಿ (ಭುಜಂಗನಗರ)ಗಳಲ್ಲಿ ಜನರು ಸಿಡಿದೆದ್ದರು. ಮಹಾರಾಜರಿಗೆ ಈ ಎರಡೂ ಹಳ್ಳಿಗಳು ತಲೆನೋವಾಗಿದ್ದವು. ೧೯೩೭ರಲ್ಲಿ ಕುಮಾರಸ್ವಾಮಿ ದೇವಸ್ಥಾನದ ೧೩ ಹಳ್ಳಿಗಳಿಗೆ ಸೇರಿದ್ದ ಸುಮಾರು ೮೦೦೦ ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದರು. ಈ ಸಂದರ್ಭದಲ್ಲಿಯೇ ಯತ್ನಟ್ಟಿಯ ಎಂ.ಶರಭಯ್ಯನವರು ರೈತರನ್ನು ಸಂಘಟಿಸಿ ಆಂದೋಲನ ನಡೆಸಿದ್ದರು. ಈ ಕಾರಣಕ್ಕಾಗಿ ಅವರು ಜೈಲು ಶಿಕ್ಷೆಯನ್ನು ಅನುಭವಿಸಿದ್ದರು. ಆಗ ಸೊಂಡೂರು ರಾಜಮನೆತನದ ವಿರುದ್ಧ ಹೋರಾಟ ನಡೆಸುತ್ತಿದ್ದ ಯತ್ನಟ್ಟಿ ಮತ್ತು ಹೊಸಳ್ಳಿಯ ಮನೆತನಗಳೆಂದರೆ ಷರಾಫ್ ಮನೆತನ, ಬೋಜಮನೆತನ ಹಾಗೂ ಪೋತನೀಸ್ ಮನೆತನ. ಈ ಮನೆತನಗಳ ಹಿರಿಯರೆಲ್ಲರೂ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಕೊಟ್ಟೂರು ಕೂಡ್ಲಿಗಿಗಳಲ್ಲಿ ನಡೆಯುತ್ತಿದ್ದ ಸಭೆ,

ಸಮಾರಂಭಗಳಿಗೆ ಹೋಗುತ್ತಿದ್ದರು.[2] ಸಂಸ್ಥಾನದೊಳಗೆ ಇದ್ದ ದಮನಕಾರಿ ಆಡಳಿತಕ್ಕಿಂತ ಪ್ರಜಾಪ್ರಭುತ್ವ ಸರ್ಕಾರಕ್ಕಾಗಿ ಜನರು ಬಯಸತೊಡಗಿದರು. ರಾಜರ ದೌರ್ಜನ್ಯಕ್ಕೆ ಮಹಿಳೆಯರೂ ಬಲಿಯಾಗಿದ್ದರು. ಸಂಸ್ಥಾನಕ್ಕೆ ಪ್ರವೇಶ ಸಂಚಾರ ನಿಷೇಧವಿತ್ತು. ಹಾಗಾಗಿ ಬಳ್ಳಾರಿಯ ಜನಪರ ಹೋರಾಟಗಾರ ವಿಠಲ್ ಪ್ರೆಸ್‌ನ ಮಾಲಿಕರಾದ ಯಜಮಾನ ಶಾಂತರುದ್ರಪ್ಪನವರು ಬಳ್ಳಾರಿ ಭಾಗದಿಂದಲೇ ಹೋರಾಟ ನಡೆಸಿದರು. ಕ್ರಾಂತಿಕಾರಿ ಕರಪತ್ರಗಳನ್ನು ಹಂಚಿದರು. ಅವರನ್ನು ಒಳಗುಮಾಡಿಕೊಳ್ಳಲು ಮಹಾರಾಜರು ಪ್ರಯತ್ನಿಸದರಾದರೂ ಯಜಮಾನರು ತಮ್ಮ ಪ್ರತಿಭಟನೆಗಳಿಂದ ವಿಚಲಿತರಾಗಲಿಲ್ಲ.

ಭಾರತದ ಒಕ್ಕೂಟದಲ್ಲಿ ಸೊಂಡೂರು ಸಂಸ್ಥಾನವನ್ನು ವಿಲೀನಗೊಳಿಸಲು ೧೯೪೮ರಲ್ಲಿ ಪ್ರಜಾಪರಿಷತ್ತು ಸ್ಥಾಪನೆಯಾಯಿತು. ಯಜಮಾನ ಶಾಂತರುದ್ರಪ್ಪನವರ ನಾಯಕತ್ವದಲ್ಲಿ ರಚನೆಯಾದ ಈ ಪ್ರಜಾಪರಿಷತ್ತಿನಲ್ಲಿ ಸ್ಥಳೀಯರು ಇದ್ದರು. ಮೈಸೂರು ರಾಜ್ಯಕ್ಕೆ ಸೊಂಡೂರನ್ನು ಸೇರಿಸುವುದು ಇದರ ಗುರಿ. ಅಂದಿನ ಕೇಂದ್ರ ಸರಕಾರದ ಗೃಹಮಂತ್ರಿ ಸರದಾರ ವಲ್ಲಭಭಾಯಿ ಪಟೇಲರು ಭಾರತದ ೫೬೨ ಸಂಸ್ಥಾನಿಕರಿಗೂ ನೋಟೀಸು ಕೊಟ್ಟರು. ಕೇಂದ್ರ ಸರಕಾರದಲ್ಲಿ ವಿಲೀನಗೊಳ್ಳಬೇಕು ಇಲ್ಲವಾದಲ್ಲಿ ಸರಕಾರಿ ಪೊಲೀಸ್ ಪಡೆಯಿಂದ ವಶಪಡಿಸಿಕೊಳ್ಳಲಾಗುವುದು ಎಂದು ಅದರಲ್ಲಿತ್ತು. ಈ ನೋಟೀಸಿನ ಪರವಾಗಿ ಪ್ರಜಾ ಪರಿಷತ್ತಿನ ಅಧಿವೇಶನ ನಡೆಸಲು ತಯಾರಿ ಮಾಡಿದರು. ಆಗಲೂ ಕಾಂಗ್ರೆಸ್ ಕಾರ್ಯಕರ್ತರಿಗೂ, ಬಳ್ಳಾರಿಯ ಸೊಂಡೂರು ವಿಮೋಚನ ಸಮಯ ಸಮಿತಿಯವರಿಗೂ ಮಹಾರಾಜರು ರಜಾಕಾರರ ಬೆದರಿಕೆ ಹಾಕಿದರು. ಆದರೂ ಯತ್ನಟ್ಟಿಯಲ್ಲಿ ಪರಿಷತ್ತಿನ ಮೊದಲ ಅಧಿವೇಶನ ನಡೆಯಿತು. ರಾಜ್ಯದ ವಿವಿಧ ಭಾಗಗಳಿಂದ ಹೋರಾಟಗಾರರು ಈ ಅಧಿವೇಶನಕ್ಕೆ ಬಂದಿದ್ದರು. ಕೊಲ್ಲಾಪುರದ ರತ್ನಪ್ಪ ಕಂಬಾರ, ತಲ್ಲೂರು ರಾಮನಗೌಡ, ಶಾಂತಿನಾಥ ಇಂಗಳೆ, ಮಹದೇವಪ್ಪ ಪಟ್ಟಣ ಶಾಂತರುದ್ರಪ್ಪ ಮುಂತಾದವರು ಭಾಗವಹಿಸಿದ್ದರು. ಸೊಂಡೂರು ಸಂಸ್ಥಾನವು ಭಾರತದಲ್ಲಿ ವಿಲೀನವಾಗಬೇಕು ಎಂದು ಈ ಅಧಿವೇಶನ ನಿರ್ಣಯ ಮಾಡಿತು. ಈ ಬೆಳವಣಿಗೆಯ ನಡುವೆಯೇ ಸರ್ದಾರ್ ವಲ್ಲಭಭಾಯಿ ಪಟೇಲರ ಕಠಿಣ ನೀತಿಗನುಗುಣವಾಗಿ ಸಂಸ್ಥಾನವು ಏಪ್ರಿಲ್ ೧.೧೯೪೯ರಂದು ಭಾರತದ ಗಣರಾಜ್ಯದಲ್ಲಿ ವಿಲೀನವಾಯಿತು. ಇದಕ್ಕೆ ಶ್ರಮಿಸಿದ ಇತರ ಹೋರಾಟಗಾರರೆಂದರೆ ಅಂಗಡಿ ಶರಭಯ್ಯ, ಉಳ್ಳಾಗಡ್ಡಿ ಕರಿಯಪ್ಪ, ಬಾವಿಕಟ್ಟೆ ಮರಿಬಸಪ್ಪ, ಕೃಷ್ಣನಗರದ ಎಲಿಗಾರ ತಿಮ್ಮಪ್ಪ, ಭುಜಂಗನಗರದ ಗುರುಶಾಂತಯ್ಯ, ಅರಳುಕಲ್ ಕುಮಾರಪ್ಪ, ನಾಗಲಾಪುರದ ಸಿದ್ಧರಾಮಯ್ಯ, ಕಾಲೆ ಸುಬ್ಬಣ್ಣ, ಬೋಜ ಅಡಿವೆಪ್ಪ, ಗಿರಿಮಲ್ಲಪ್ಪ ಮುಂತಾದವರು ಇವರೆಲ್ಲಾ ಮಹಾರಾಜರ ಸೊಂಡೂರು 'ಸ್ಟೇಟ್ ಸೆಲ್'ನಲ್ಲಿ ಶಿಕ್ಷೆ ಅನುಭವಿಸಿದ್ದರು. ಜೈಲಿನಲ್ಲಿಯೇ ಅರಮನೆಯಿಂದ ಸರಬರಾಜಾಗುತ್ತಿದ್ದ ಆಹಾರವನ್ನು ಸೇವಿಸದೆ ಪ್ರತಿಭಟಿಸಿದ್ದರು. ಊರಿನ ಜನ ತರುತ್ತಿದ್ದ ಬುತ್ತಿಯನ್ನು ಊಟ ಮಾಡುತ್ತಿದ್ದರು.

ಸೊಂಡೂರು ಸಂಸ್ಥಾನ ಭಾರತದ ಒಕ್ಕೂಟದಲ್ಲಿ ವಿಲೀನಕ್ಕೆ ಒಪ್ಪಿತು. ಅಂತೆಯೇ ಮಹಾರಾಜರು ಕೇಂದ್ರ ಸರಕಾರದೊಂದಿಗೆ ಒಪ್ಪಂದ ಮಾಡಿಕೊಂಡರು. ಈ ಒಪ್ಪಂದಕ್ಕೆ ಈಗಾಗಲೇ ಇದ್ದ ರಾಜಾಧಿಕಾರವನ್ನು ಮರುಸ್ಥಾಪಿಸುವ ಉದ್ದೇಶವಿತ್ತು. ಈ ಒಪ್ಪಂದದ ಷರತ್ತುಗಳು ಹೀಗಿದ್ದವು.

ಒಂದು: ಭಾರತ ಸರಕಾರ ಸೊಂಡೂರು ಮಹಾರಾಜರಿಗೆ ೯೦.೦೦೦ ರೂಪಾಯಿಗಳ ರಾಜಧನವನ್ನು ಕೊಡಬೇಕು.
ಎರಡು: ಸಂಸ್ಥಾನದ ವಿವಿಧ ದೇವಸ್ಥಾನಗಳ ನಿರ್ವಹಣೆಗೆಂದು ೩೬.೦೦೦ ರೂಗಳ ವಾರ್ಷಿಕ ಧನ ಕೊಡಬೇಕು.
ಮೂರು: ರಾಮಗೊಳ್ಳ, ಹತ್ತಿಮರಗೊಳ್ಳ ಇತ್ಯಾದಿ ಪ್ರದೇಶಗಳಲ್ಲಿ ರಾಜರು ಮತ್ತು ಅವರ ವಂಶಜರಿಗೆ ಬೇಟೆಯಾಡುವ ಅನಿರ್ಬಂಧಿತ ಹಕ್ಕನ್ನು ನೀಡಬೇಕು.
ನಾಲ್ಕು: ಆಡಳಿತಾವಧಿಯಲ್ಲಿ ನಡೆದ ಯಾವುದೇ ಕ್ರಮಗಳ ಬಗ್ಗೆ ವಿಚಾರಣೆ ನಡೆಸಬಾರದು.

ಈ ಎಲ್ಲ ಷರತ್ತುಗಳು ಸಂಸ್ಥಾನದ ಮೂಲ ಅಧಿಕಾರವನ್ನು ಉಳಿಸಿಕೊಳ್ಳುವಂತವೇ ಆಗಿದ್ದವು. ಭಾರತ ಸರಕಾರದ ವಿಲೀನ ಒಪ್ಪಂದದಲ್ಲಿ ರಾಜರು ಕೇಳಿದ ರಾಜಧನವನ್ನು ನೀಡಲು ಒಪ್ಪಿತು. ಗೃಹಖಾತೆಯ ಕಾರ್ಯದರ್ಶಿಗಳು ಮಹಾರಾಜರಿಗೆ ಬರೆದ ಒಂದು ಪತ್ರದಲ್ಲಿ ಇನ್ನಿತರ

ಷರತ್ತುಗಳನ್ನು ಒಪ್ಪಿಕೊಂಡರು. ಒಪ್ಪಂದದಲ್ಲಿ ತಮ್ಮ ಖಾಸಗಿ ಆಸ್ತಿಗಳ ವಿವರಗಳನ್ನು ನೀಡಿದರು. ದೇವಸ್ಥಾನಗಳ ಸಾರ್ವಜನಿಕ ಆಸ್ತಿಯನ್ನು ಖಾಸಗಿ ಆಸ್ತಿಯನ್ನಾಗಿ ಪರಿವರ್ತಿಸಿದ ವಿವರ ನೀಡಲಾಯಿತು. ಜೊತೆಗೆ ಹಲವಾರು ಸರಕಾರಿ ಕಟ್ಟಡಗಳನ್ನು ತಮ್ಮ ಖಾಸಗಿ ಆಸ್ತಿಗಳ ಪಟ್ಟಿಯಲ್ಲಿ ಸೇರಿಸಿದರು. ಸ್ವಾತಂತ್ರ್ಯ ಪಡೆದು ಒಂದು ವರ್ಷವೂ ಆಗಿರದ ಭಾರತದ ಒಕ್ಕೂಟವನ್ನು ಭದ್ರಗೊಳಿಸುವ ಅನಿವಾರ್ಯತೆ ಕೇಂದ್ರ ಸರ್ಕಾರಕ್ಕಿತ್ತು. ಈ ಒತ್ತಡದಿಂದಾಗಿಯೇ ಸೊಂಡೂರು ಮಹಾರಾಜರ ಯಾವ ಷರತ್ತುಗಳನ್ನು ಪರಿಶೀಲಿಸದೆ ಒಪ್ಪಿಕೊಂಡಿತು.

ಸ್ವಾತಂತ್ರಪೂರ್ವದಲ್ಲಿಯೇ ಸಂಸ್ಥಾನ ಹೊಂದಿದ್ದ ಪರಮಾಧಿಕಾರ ಒಂದಷ್ಟು ಬದಲಾವಣೆಯೊಂದಿಗೆ ಸ್ವಾತಂತ್ರ್ಯ ನಂತರವೂ ಮುಂದುವರೆಯಿತು. ಭಾರತದ ಒಕ್ಕೂಟದ ಹೆಸರಲ್ಲಿ ದೇಶೀ ಸಂಸ್ಥಾನಗಳು ಸಾರ್ವಜನಿಕ ಆಸ್ತಿಗಳನ್ನೆಲ್ಲಾ ಖಾಸಗಿ ಆಸ್ತಿಯನ್ನಾಗಿಸಿ ವಿವರ ನೀಡಿದವು. ಸರಕಾರವೂ ಈ ವಿವರಗಳನ್ನು ಪರಿಶೀಲಿಸದೆ ಒಪ್ಪಿಕೊಂಡಿತು. ಇದರ ಪರಿಣಾಮವಾಗಿಯೇ ಮಾಜಿ ದೊರೆಗಳು ಅಪಾರ ಸಂಪತ್ತಿನ ಒಡೆಯರಾದರು. ಅಂತೆಯೇ ಇವರ ರಾಜಾಧಿಕಾರವೂ ಸಂಪತ್ತಿನ ಒಡೆತನದ ಮೂಲಕ ಮುಂದುವರಿಯಿತು. ಈ ಸಂದರ್ಭ ಮಾಜಿ ದೊರೆಗಳಿಗೆ ರೈತರ ಬಹುಪಾಲು ಭೂಮಿಯನ್ನು ವಶಪಡಿಸಿಕೊಳ್ಳಲು ಸಹಕರಿಸಿತು. 'ಆಡಳಿತಾವಧಿಯಲ್ಲಿ ಸರ್ಕಾರ ಮಧ್ಯ ಪ್ರವೇಶಿಸುವಂತಿಲ್ಲ' ಎನ್ನುವ ಷರತ್ತಿನಿಂದಾಗಿ ಮಾಜಿ ದೊರೆಗಳು ದಮನಕಾರಿ ಆಡಳಿತವನ್ನು ಪ್ರಾರಂಭಿಸಿದರು. ಒಂದು ಕಡೆ ಪ್ರಜೆಗಳು ಸ್ವಾತಂತ್ರ್ಯರಾಗಿದ್ದೇವೆ ಎಂದು ಭಾವುಕರಾದರೆ, ಇನ್ನೊಂದು ಕಡೆ ಮಾಜಿ ದೊರೆಗಳ ನಿಯಂತ್ರಣದಲ್ಲಿದ್ದರು. ಹೆಚ್ಚು ಕಡಿಮೆ ಭಾರತದ ೬೦೦ಕ್ಕೂ ಹೆಚ್ಚಿನ ದೇಶೀ ಸಂಸ್ಥಾನಗಳಲ್ಲಿ ಇಂತಹದ್ದೇ ಪರಿಸ್ಥಿತಿ ಇತ್ತು. ೧೯೪೭ರ ನಂತರದ ಭಾರತದಲ್ಲಿ ದೇಶೀ ಸಂಸ್ಥಾನಿಕರ ವಿರುದ್ಧ ಆದ ರೈತ ಚಳವಳಿಗಳೆಲ್ಲ ಇದರ ಫಲವೆ. ಇಂದು ಬಹುರಾಷ್ಟ್ರೀಯ ಕಂಪನಿಗಳಿಗೆ ಸರ್ಕಾರ ಭೂಮಿಯನ್ನು ಕೊಡುತ್ತಿದೆ. ಈ ಭೂಮಿಯ ಮೇಲೆ ಸರ್ಕಾರದ ಯಾವ ಹಿಡಿತವೂ ಇರುವುದಿಲ್ಲ. ಕಂಪನಿಯ ಸರಹದ್ದಿನಲ್ಲಿ ಯಾವ ಉತ್ಪನ್ನಗಳನ್ನಾದರೂ ಉತ್ಪಾದಿಸಬಹುದು. ಕಂಪನಿಯ ವಾದ ವಿವಾದಗಳೇನಿದ್ದರೂ ತೀರ್ಮಾನವಾಗುವುದು ನೇರವಾಗಿ ವಿಶ್ವಸಂಸ್ಥೆಯ ಮೂಲಕ. ಈಗಲೂ ಸಹ ಭೂಮಿಯ ಮೇಲಿನ ಹಕ್ಕು ಬಹುರಾಷ್ಟ್ರೀಯ ಕಂಪನಿಗಳ ವಶವಾಗುತ್ತಿರುವುದು ಚಾರಿತ್ರ್ಯಿಕ ವ್ಯಂಗ್ಯ.

ಸೊಂಡೂರು ಸಂಸ್ಥಾನವು ವಿಲೀನದ ನಂತರ ಯಾವ ಪ್ರಾಂತಕ್ಕೆ ಸೇರಬೇಕು ಎಂಬ ಪ್ರಶ್ನೆ ಉದ್ಭವವಾಯಿತು. ಇದು ಕರ್ನಾಟಕ ಏಕೀಕರಣ ಸಂದರ್ಭದ ಪ್ರಶ್ನೆಯೂ ಆಗಿತ್ತು. ಕರ್ನಾಟಕ ಪ್ರಾಂತ ರಚನೆಗೆ ಮೈಸೂರು ಸಂಸ್ಥಾನವಲ್ಲದೆ ಉತ್ತರ ಕರ್ನಾಟಕದ ಅನೇಕ ಸಂಸ್ಥಾನಗಳು ಮರಾಠಿಯವರ ಆಳ್ವಿಕೆಯಲ್ಲಿದ್ದವು. ಮತ್ತು ಆ ಮೊದಲು ಅಲ್ಲೆಲ್ಲಾ ಮರಾಠಿ ಭಾಷೆಗೆ ಹೆಚ್ಚಿನ ಪ್ರಾಧಾನ್ಯತೆ ಇದ್ದುದರಿಂದ ಅವಕ್ಕೆ ಕರ್ನಾಟಕದೊಡನೆ ಸೇರಲು ಒಪ್ಪಿಗೆಯಿರಲಿಲ್ಲ. 'ಕನ್ನಡ ನುಡಿ' ಪತ್ರಿಕೆಯಲ್ಲಿ ಮಾರ್ಚ್ ೧೯.೧೯೪೮ರಂದು ಸೊಂಡೂರು ಸಂಸ್ಥಾನ ಮೈಸೂರು ಅಥವಾ ಮರಾಠಾ ಪ್ರಾಂತ್ಯಗಳಲ್ಲಿ ಸೇರಲು ಸೊಂಡೂರು ಸರ್ಕಾರವಾಗಲಿ ಅಲ್ಲಿನ ಜನರಾಗಲಿ ಒಪ್ಪುವುದಿಲ್ಲವೆಂದು ಸೊಂಡೂರು ಸಂಸ್ಥಾನದ ಪ್ರಧಾನಿ ಡಾ. ಯು.ಬಿ.ಷರಾಫ್ ಅವರು ಒಂದು ಹೇಳಿಕೆ ಕೊಡುತ್ತಾರೆ. ಆದರೆ ರಂ.ರಾ.ದಿವಾಕರರು 'ಕರ್ನಾಟಕದ ಏಕೀಕರಣದ' ಕಥೆ (ಪುಟ ೯೧) ಕೃತಿಯಲ್ಲಿ 'ಸೊಂಡೂರಿನ ರಾಜೇಸಾಹೇಬರು ಜುಲೈ ೧.೧೯೪೬ರಂದು ಸೊಂಡೂರು ಸಂಸ್ಥಾನದ ಶಾಸನ ಸಭೆಯಲ್ಲಿ ಭಾಷಣ ಮಾಡುತ್ತ ಕರ್ನಾಟಕದ ಏಕೀಕರಣವನ್ನು ಸ್ವಾಗತಿಸಿ, ಭಾಷಾನ್ವಯ ಪ್ರಾಂತ. ರಚನೆಯ ಕಡೆಗೆ ತಮ್ಮ ಪಕ್ಷಪಾತವಿದೆ ಎಂದರು' ಎಂದು ದಾಖಲಿಸುತ್ತಾರೆ. ಇದೇ ಅಭಿಪ್ರಾಯ ೧೯೪೬ರಲ್ಲಿ ಪ್ರಕಟವಾದ ಶ್ರೀನಿವಾಸರಾವ್ ಮಂಗಳವೀಡೆ ಮತ್ತು ನಾರಾಯಣ ಸಂಗಮ ಅವರ 'ಕರ್ನಾಟಕ ಏಕೀಕರಣ' ಪುಸ್ತಕದಲ್ಲೂ ದಾಖಲಾಗಿದೆ.

ಸೊಂಡೂರು ಶಾಸನ ಸಭೆಗಳಲ್ಲಿ ಆಗಸ್ಟ್ ೧೦.೧೯೪೭ರಂದು ಚರ್ಚೆ ನಡೆಯಿತು. ನಂತರ ಸರ್ವಾನುಮತದಿಂದ ಸೊಂಡೂರು ರಾಜರು ೧೯೪೬ರ ರಾಜ್ಯ ಘಟನಾ ವಿಧಿಯಂತೆ ಸ್ವತಂತ್ರ್ಯವಾದ ಭಾರತದ ಒಕ್ಕೂಟದಲ್ಲಿ ಸೇರಲು ಆಗಸ್ಟ್ ೧೬.೧೯೪೭ರಂದು ಒಪ್ಪಂದ ಮಾಡಿಕೊಂಡರು. ೧೯೪೮ರ ಶಾಸನ ಸಭೆಯ ತೀರ್ಮಾನದಂತೆ ಮೈಸೂರು ರಾಜ್ಯದಲ್ಲಿ ವಿಲೀನವಾಗುತ್ತೇವೆ ಎಂದು ಸರ್ದಾರ್ ವಲ್ಲಭಭಾಯಿ ಪಟೇಲರಿಗೆ ತಿಳಿಸಿದರು. ಈ ವಿಲೀನಕ್ಕೆ ಕೊಟ್ಟ ಕಾರಣಗಳು ಹೀಗಿದ್ದವು.

೧. ಸೊಂಡೂರು ಮತ್ತು ಮೈಸೂರು ಸಂಸ್ಥಾನದ ಗಡಿಗಳು ಹೊಂದಿಕೊಂಡಿವೆ.

೨. ಸೊಂಡೂರು ಮತ್ತು ಮೈಸೂರು ಜನತೆಗೆ ಪರಸ್ಪರ ಭಾಷಿಕ ಮತ್ತು ಸಾಂಸ್ಕೃತಿಕ ಸಂಬಂಧವಿದೆ. ಎರಡೂ ಕಡೆ ಆಡುವ ಭಾಷೆ ಕನ್ನಡವೇ ಆಗಿದೆ.

೩. ಖನಿಜ ಸಂಪತ್ತಿಗೆ ಸಂಬಂಧಿಸಿದಂತೆ ಮೈಸೂರು ಮತ್ತು ಸೊಂಡೂರು ಸಂಸ್ಥಾನಗಳು ಪರಸ್ಪರ ಹೊಂದಿಕೊಂಡಿವೆ. ಅದರ ಪ್ರಗತಿಗೆ ಸಮಾನ ಆಸಕ್ತಿಯನ್ನು ಹೊಂದಿವೆ.

೪. ಆಡಳಿತಕ್ಕೆ ಸೊಂಡೂರು ಮೈಸೂರು ಸಂಸ್ಥಾನವನ್ನೇ ಅನುಸರಿಸಿದೆ. ಆದ್ದರಿಂದ ಅದನ್ನು ಮದ್ರಾಸ್ ಪದ್ಧತಿಗೆ ಬದಲಾಯಿಸುವುದು ಸುಲಭವಲ್ಲ.

೫. ಏಕೀಕೃತ ಭವಿಷ್ಯದ ಆಸಕ್ತಿಗಳನ್ನು ಗಮನಿಸಿ ಸೊಂಡೂರು ಸಂಸ್ಥಾನ ಮದ್ರಾಸ್‌ಗಿಂತ ಮೈಸೂರಿನ ಜೊತೆ ಸೇರಲು ಇಚ್ಛಿಸುತ್ತದೆ. ಹೇಗಿದ್ದರೂ ಮದ್ರಾಸ್ ಮುಂದೆ ಆಂಧ್ರ, ತಮಿಳುನಾಡು, ಕೇರಳ ಎಂದು ಬೇರ್ಪಡೆಯಾಗಲಿದೆ.[3]

ಹೀಗೆ ಸೊಂಡೂರು ಮಹಾರಾಜರು ಮೊದಮೊದಲು ಭಾರತದ ಗಣರಾಜ್ಯವನ್ನು ಸೇರಲು ನಿರಾಕರಿಸಿದರು. ನಂತರ ಜನರ ಪ್ರತಿಭಟನೆಗಳಿಂದಲೂ, ಸರಕಾರವನ್ನು ಎದುರಿಸಲಾಗದ ಪರಿಸ್ಥಿತಿಯ ಒತ್ತಡದಿಂದಲೂ, ಸೊಂಡೂರು ಮೈಸೂರು ಸರ್ಕಾರದಲ್ಲಿ ವಿಲೀನವಾಯಿತು.

**ಶ್ರೀಗಂಧದ ಪ್ರಕರಣ**

ಐವತ್ತರ ದಶಕದ ಸೊಂಡೂರು ಪರಿಸರದಲ್ಲಿ ಶ್ರೀಗಂಧದ ಮರಗಳಿದ್ದವು. ತಾಲ್ಲೂಕಿನ ದೇವಗಿರಿ ಮತ್ತು ರಾಮದುರ್ಗ ಸುತ್ತಲ ಕಾಡಿನಲ್ಲಿ ಅವುಗಳ ಸಂಖ್ಯೆ ಹೆಚ್ಚಾಗಿತ್ತು. ಗಂಧದ ಮರಗಳ ವಾರಸುದಾರಿಕೆ ರಾಜವಂಶದ್ದು. ಬೇಟೆಗಾಗಿ ಕಾಯ್ದಿರಿಸಿದ ಅರಣ್ಯ ಸಂಪತ್ತು ರಾಜರದು ಹೇಗಾಯಿತು? ಎನ್ನುವ ಬಗ್ಗೆ ಅರಣ್ಯ ಇಲಾಖೆ ಮತ್ತು ರಾಜವಂಶದ ನಡುವೆ ಭಿನ್ನಾಭಿಪ್ರಾಯಗಳು ಹೆಚ್ಚಾದವು. ೧೯೪೯ರ ಭಾರತ ಸರಕಾರದ ಒಪ್ಪಂದದಲ್ಲಿ ಈ ಎರಡೂ ಗ್ರಾಮಗಳ (ನಕಾಶೆ ೩,೪) ಅರಣ್ಯದಲ್ಲಿ ದೊರೆಯೂ ಆತನ ಸಂತತಿಯೂ ಬೇಟೆಯಾಡಬಹುದೆಂದು ಮಾತ್ರ ಉಲ್ಲೇಖವಿತ್ತು. ಭಾರತ ಸರ್ಕಾರವು ಪ್ರಕಟಿಸಿದ “White papers On Indian States” ಎಂಬ ಅಧಿಕೃತ ಪ್ರಕಟಣೆಯಲ್ಲಿ ಅರಣ್ಯ ಪ್ರದೇಶಗಳ ಮೇಲೆ ಸಂಸ್ಥಾನಿಕ ಅರಸರ ಹಕ್ಕುಗಳಿಗೆ ಮಿತಿಯಿದೆ. ಗುರುತಿಸಲ್ಪಟ್ಟ ಸರಹದ್ದಿನಲ್ಲಿ ಬೇಟೆಯ ಹಕ್ಕನ್ನು ಮಾತ್ರ ನೀಡಲಾಗಿದೆ. ಅರಣ್ಯ ಸಂಪತ್ತಿನ ಹಕ್ಕು ಭಾರತ ಸರ್ಕಾರದ್ದು. ಅರಣ್ಯದ ದುರ್ಬಳಕೆಗೆ ಸರಕಾರದ ಆಕ್ಷೇಪವಿದೆ. ಹೀಗಾದಲ್ಲಿ ಬೇಟೆಯ ಹಕ್ಕನ್ನು ಹಿಂದಕ್ಕೆ ಪಡೆಯುವ ಅಧಿಕಾರವೂ ಭಾರತ ಸರ್ಕಾರಕ್ಕಿದೆ ಎಂದು ತಿಳಿಸಲಾಗಿತ್ತು. ಹೀಗಿದ್ದರೂ ಸೊಂಡೂರಿನ ರಾಜವಂಶಸ್ಥರು ವಿಸ್ತಾರವಾದ ಅರಣ್ಯವನ್ನು ವಿಭಾಗಿಸಿ ಕಟ್ಟಿಗೆ ಕಂಟ್ರಾಕ್ಟರುಗಳಿಗೆ ಉರುವಲಿಗಾಗಿ ಕೊಡುತ್ತಿದ್ದರು. ಟನ್‌ಗಟ್ಟಲೆ ಗಂಧದ ಮರ ಕಡಿದು ಮುಂಬೈಗೆ ಸಾಗಿಸಲಾಗಿತ್ತು.

೧೯೫೪ರಲ್ಲಿ ಗಂಧದ ಮರ ಕಡಿಯುವುದು ‘ಅಕ್ರಮ’ ಎಂದು ಅರಣ್ಯ ಇಲಾಖೆಯು ರಾಜರಿಗೆ ಮನವಿ ನೀಡಿತು. ಇದಕ್ಕೆ ಪ್ರತಿಯಾಗಿ ೧೯೪೮ರ ಒಪ್ಪಂದದ ಪ್ರಕಾರ ತನ್ನ ಖಾಸಗಿ ಆಸ್ತಿಯ ಮೇಲೆ ಪೂರ್ಣ ಸ್ವಾಮ್ಯ ಸ್ವಾಧೀನಾನುಭವ ಇದೆ ಎಂದು ಮಹಾರಾಜರು ಉತ್ತರಿಸಿದರು. ಸೊಂಡೂರು ಸಂಸ್ಥಾನ ಸಂವಿಧಾನದ ೩೮ನೆಯ ಕಾಲಮಿನ ಪ್ರಕಾರ ಗಂಧದ ಕಟ್ಟಿಗೆ ಮೇಲೆ ಸಂಪೂರ್ಣ ಹಕ್ಕಿದೆ ಎಂದು ಸಮರ್ಥನೆ. ಈ ವಿಷಯ ಶೋಧಿಸಿ ವರದಿ ಮಾಡಲು ಅಂದಿನ ಹೊಸಪೇಟೆಯ ಅಸಿಸ್ಟೆಂಟ್ ಕಮಿಷನರ್ ಎನ್.ನರಸಿಂಹರಾವ್ ಅವರಿಗೆ ಸಕಾರ ವಹಿಸಿತು. ಅವರು ನವೆಂಬರ್ ೨೧.೧೯೫೪ರಂದು ಜಿಲ್ಲಾಧಿಕಾರಿಗೆ ವರದಿ ಒಪ್ಪಿಸಿದರು. ಮಾಜಿ ದೊರೆಗಳಿಗೆ ಸೊಂಡೂರು ಅರಣ್ಯದಲ್ಲಿರುವ ಗಂಧದ ಕಟ್ಟಿಗೆಯನ್ನು ಕಡಿಯಲು ಅಧಿಕಾರವಿಲ್ಲ ಎನ್ನುವುದು ವರದಿಯು ಮುಖ್ಯ ಅಂಶವಾಗಿತ್ತು.

ಮಹಾರಾಜರು ಈ ವರದಿಯನ್ನು ವಿರೋಧಿಸಿದರು. ಇದರಿಂದ ಬಳ್ಳಾರಿಯ ಜಿಲ್ಲಾಧಿಕಾರಿ ಅಂದಿನ ಸರಕಾರಿ ವಕೀಲರಾದ ಕೆ.ಎಂ. ದಕ್ಷಿಣಾಮೂರ್ತಿಯವರಲ್ಲಿ ಮತ್ತೊಮ್ಮೆ ಸ್ಪಷ್ಟವಾದ ವರದಿ ಸಲ್ಲಿಸಲು ಮನವಿ ಮಾಡಿದರು. ಇವರು ೧೯೫೮ರಲ್ಲಿ ಸಲ್ಲಿಸಿದ ವರದಿ ಹೀಗಿತ್ತು.

*ಸೊಂಡೂರು ಅರಣ್ಯ ಕಾಯಿದೆಯಲ್ಲಿ ಗಂಧದ ಮರವನ್ನು ರಾಜ್ಯವೃಕ್ಷ (ರಾಯಲ್ ಟ್ರೀ) ಎಂದು ಪರಿಗಣಿಸಲಾಗಿದೆ. ಅದನ್ನು ಘೋರ್ಪಡೆಯವರ ಮನೆತನದ ಸೊತ್ತೆಂದು ಘೋಷಿಸಿಲ್ಲ. ಈ ಅಭಿಪ್ರಾಯಕ್ಕೆ ಪುಷ್ಟಿ ಕೊಡದ ಇನ್ನೊಂದು ಅಂಶವೇನೆಂದರೆ ಈ ಗಂಧದ ಮರಗಳನ್ನು ಮಾರಿ ಬಂದ ಹಣವನ್ನು ರಾಜ್ಯದ ಬೊಕ್ಕಸಕ್ಕೆ ಸೇರಿಸುತ್ತಿದ್ದರು. ದೊರೆಯ ವಯಕ್ತಿಕ ಖಜಾನೆಗೆ ಈ ಹಣ ಸಂದಾಯವಾಗುತ್ತಿರಲಿಲ್ಲ. ರಾಜ್ಯದ ಬೊಕ್ಕಸವನ್ನು 'ಸ್ಟೇಟ್ ಫಂಡ್' ಎಂದೂ ತನ್ನ ಖಾಸಗೀ ಖಜಾನೆಯನ್ನು 'ಪ್ಯಾಲೇಸ್ ಫಂಡ್' ಎಂದು ಕರೆಯುತ್ತಿದ್ದರು. 'ಪ್ಯಾಲೇಸ್ ಫಂಡ್' ದೊರೆಯ ವೈಯಕ್ತಿಕ ನಿಧಿ. ಹಿಂದಿನ ರಾಜ್ಯದ ಆಯವ್ಯಯಗಳನ್ನು ನೋಡಿದರೆ, ರಾಜ್ಯದ ಬೊಕ್ಕಸಕ್ಕೆ ಬೇಕಾದ ಹಣವನ್ನು ದೊರೆ ತನ್ನ ಸ್ವಂತ ಹಣದಿಂದ ಸಾಲಕೊಡುತ್ತಿದ್ದರು. ಆ ಸಾಲವನ್ನು ರಾಜ್ಯದ ಬೊಕ್ಕಸದಿಂದ ತೀರಿಸುತ್ತಿದ್ದರು. ಅಂದ ಮೇಲೆ ಮೇ ೬.೧೯೩೮ರ ಸರ್ಕಾರಿ ಆಜ್ಞೆಯಲ್ಲಿ 'ರೂಲರ್' ಎಂಬ ಪದವು ದೊರೆ, ರಾಜ್ಯದ ಅಧಿಪತಿ ಅರ್ಥದಲ್ಲಿ ಬಳಕೆಯಾಗಿದೆ. ಸರ್ವಾಧಿಕಾರಿ ಎಂದಲ್ಲ. ಇದಲ್ಲದೆ ಆಗಸ್ಟ್ ೨.೧೯೪೯ರಲ್ಲಿ ಮದ್ರಾಸ್ ಅರಣ್ಯ ಕಾಯಿದೆಯನ್ನು ಸೊಂಡೂರು ತಾಲೂಕಿಗೆ ಅನ್ವಯಿಸಲಾಯಿತು. ಆ ನಂತರ ಗಂಧದ ಮರಗಳು ಮದ್ರಾಸ್ ಸರ್ಕಾರದ ಸ್ವತ್ತಾದವು. ೧೯೪೯ರ ಭಾರತದ ವಿಲೀನ ಒಪ್ಪಂದದಿಂದಾಗಿ ಸೊಂಡೂರು ಸಂಸ್ಥಾನದ ಸಕಲ ಸಂಪತ್ತು ಮದ್ರಾಸ್ ಮತ್ತು ಮೈಸೂರು ರಾಜ್ಯ ಸರಕಾರಗಳ ಅಧೀನವಾಯಿತು. ಹೀಗಾಗಿ ಸೊಂಡೂರು ಮಾಜಿ ದೊರೆಗಳಿಗೂ ಗಂಧದ ಮರಗಳಿಗೂ ಯಾವ ಹಕ್ಕು ಅಧಿಕಾರವೂ ಇಲ್ಲ.*

ಈ ವರದಿಯು ಮಾಜಿ ದೊರೆಗಳ ಅಧಿಕಾರವನ್ನು ಕಡಿತಗೊಳಿಸಿತು. ಇದರಿಂದ ಕೆ.ಎಂ. ದಕ್ಷಿಣಾಮೂರ್ತಿಯವರು ಸರ್ಕಾರಿ ವಕೀಲಿ ವೃತ್ತಿಯಿಂದ ಹೊರಬರುವಂತೆ ದೊರೆಗಳ ಪ್ರಭಾವವಾಯಿತು. ದೊರೆಗಳ ಸರ್ವಾಧಿಕಾರವನ್ನು ಪ್ರಶ್ನಿಸುವಲ್ಲಿ ಈ ಪ್ರಕರಣ ಜನರ ಗಮನ ಸೆಳೆಯಿತು. ಶ್ರೀಗಂಧದ ನಾಡು ಎಂಬ ಕವಿವರ್ಣನೆಯ ಕಾಲದಲ್ಲಿಯೇ ಗಂಧದ ಮರಗಳು ಮಾರುಕಟ್ಟೆಯ ಸರಕಾಗುತ್ತಿದ್ದುದು ಚರಿತ್ರೆಯ ವೈರುಧ್ಯ. ರಾಜವೃಕ್ಷ ಮಹಾರಾಜರಿಂದಲೇ ಕಣ್ಮರೆಯಾಗುವ ಸಂದರ್ಭ ಕೂಡ. ಈ ಘಟನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಎಲ್ಲವನ್ನು ಹಣಕ್ಕೆ ಪರಿವರ್ತಿಸುವ ಅಧಿಕಾರ ಎನ್ನುವ ಪ್ರಜ್ಞೆಗರಿಗಟ್ಟುತ್ತಿರುವ ಕಾಲಾವಧಿ ಇದಾಗಿದೆ. ನಿಸರ್ಗದ ಜೊತೆಗಿನ ಸಹಜ ಸಂಬಂಧದಿಂದ ವಾಸ್ತವದ ಮಾರುಕಟ್ಟೆಯ ಮನೋಸ್ಥಿತಿಗೆ ಹೊಂದಿಕೊಳ್ಳುತ್ತಿರುವ ಸಂಕ್ರಮಣ ಕಾದಘಟ್ಟವಿದು. ಅಧಿಕಾರ ಹಣದ ಜೊತೆಜೊತೆಗೆ ಪರಿಸರ ನಾಶದ ಮೊದಲ ಹೆಜ್ಜೆಗಳೂ ಕೂಡ. ೧೯೫೮ರ ಕಾಲಾವಧಿಯಲ್ಲಿ ಸರ್ಕಾರ ಮಹಾರಾಜರ ಎಲ್ಲ ಅಧಿಕಾರವನ್ನು ಬೆಂಬಲಿಸುತ್ತದೆ ಎನ್ನುವುದು ಸಾರ್ವತ್ರಿಕ ಹೇಳಿಕೆಯಾಗಿತ್ತು. ಶ್ರೀಗಂಧದ ಪ್ರಕರಣ ನೋಡಿದರೆ ಸರ್ಕಾರ ಮತ್ತು ದೊರೆಗಳ ನಡುವೆ ಒಂದು ಸಂಘರ್ಷವೂ ಇತ್ತು ಎನ್ನುವುದನ್ನು ಮರೆಯುವಂತಿಲ್ಲ. ವಾಸ್ತವವೆಂದರೆ ಗಂಧದ ಮರಗಳು ದೊರೆಗಳಿಗೆ ಸೇರಿಲ್ಲ ಎಂದು ಕಾನೂನಿನ ಮೂಲಕ ಸಾಬೀತಾದರೂ, ಅವನ್ನು ಕಡಿಯುವ, ಮುಂಬೈಗೆ ಸಾಗಿಸುವ ಕಾರ್ಯ ನಡೆದೇ ಇತ್ತು.

ಗಂಧದ ಮರದ ವಿಷಯಕ್ಕಾಗಿ ಸಣ್ಣ ಪುಟ್ಟ ಘರ್ಷಣೆಗಳು ನಡೆಯುತ್ತಲೇ ಬಂದವು. ೧೯೬೨ರಲ್ಲಿ ಸೊಂಡೂರಿಗೆ ಮೂಲ ವಾರಸುದಾರಿಣಿ ಎಂದು ಕರೆಯಲಾಗುವ ಸುಶೀಲ ರಾಜೆ ಭೇಟಿ ನೀಡಿದ್ದರು. ಆಗ ರಾಜ್ಯ ಅರಣ್ಯ ಸಚಿವ ಬಿ. ರಾಚಯ್ಯನವರು ಬಂದಿದ್ದರು. ಅವರಿಗೆ ರಾಜರಿಂದಾಗಿ ಗಂಧದ ಮರಗಳು ನಾಶವಾಗುತ್ತಿವೆ 'ಕಾನೂನು ಕ್ರಮ ತೆಗೆದುಕೊಳ್ಳಿ' ಎಂದು ಮನವಿ ಮಾಡಲಾಗಿತ್ತು. ಆಗ ರಾಚಯ್ಯನವರು "ಮದ್ರಾಸ್ ರಾಜ್ಯದ ಕಾನೂನಿನಂತೆ ಗಂಧದ ಮರದ ಮೇಲಿನ ಅಧಿಕಾರ ಸರಕಾರದ್ದು. ಈ ಬಗ್ಗೆ ಮಹಾರಾಜರಿಗೆ ಮನವಿ ಮಾಡಲಾಗುವುದು. ಈ ವಿವಾದ ಇತ್ಯರ್ಥಕ್ಕಾಗಿ ಕೇಂದ್ರದ ಸಚಿವ ಶ್ರೀ.ಬಿ.ಎನ್. ದಾತರೆಯವರು ಮಧ್ಯೆ ಪ್ರವೇಶಿಸಬೇಕಾಗಿದೆ" ಎಂದು ಹೇಳಿಕೆ ನೀಡಿ ಜವಾಬ್ದಾರಿಯಿಂದ ಕಳಚಿಕೊಂಡರು.

ಐವತ್ತರ ದಶಕದ ಸೊಂಡೂರಿನಲ್ಲಿ ಮಹಾರಾಜರ ಅಧಿಕಾರದ ಮಿತಿಗಳ ಬಗೆಗೆ ಆಲೋಚಿಸುತ್ತಿದ್ದ ಸಮುದಾಯವೆಂದರೆ ಬ್ರಾಹ್ಮಣರದು. ದೊರೆಗಳಿಗೂ ಈ ಅರಿವಿತ್ತು. ಇವರು ಯಾವುದೇ ಸಮಯದಲ್ಲಿ ದೊರೆಯ ವಿರುದ್ಧ ಜನರನ್ನು ತಯಾರಿ ಮಾಡುವ ಸಾಧ್ಯತೆಯಿತ್ತು. ಹೀಗಾಗಿ

ಬುದ್ಧಿವಂತರಾದ ಬ್ರಾಹ್ಮಣರನ್ನು ಮೊದಲು ಆರ್ಥಿಕವಾಗಿ ದುರ್ಬಲಗೊಳಿಸಬೇಕಿತ್ತು. ಇದಕ್ಕಾಗಿ ಕೆಲವು ಯೋಜನೆಗಳು ರೂಪುಗೊಂಡವು. ಬ್ರಾಹ್ಮಣರಿಗೆ ದೇವಸ್ಥಾನಗಳ ಪೂಜೆಯ ಕಾರಣಕ್ಕಾಗಿ ದತ್ತಿ ಭೂಮಿಗಳಿದ್ದವು. ಈ ಭೂಮಿ ಅವರನ್ನು ಪ್ರಬಲರನ್ನಾಗಿಸುವ ಶಕ್ತಿಯಾಗಿತ್ತು. ಇದರಿಂದಾಗಿಯೇ ೧೯೫೩ರಲ್ಲಿ ಬ್ರಾಹ್ಮಣರನ್ನು ಒಳಗೊಂಡಂತೆ ಕುಮಾರಸ್ವಾಮಿ ದೇವಸ್ಥಾನದ ಭೂಮಿಯ ಗೇಣಿದಾರರನ್ನು ಬಲತ್ಕಾರವಾಗಿ ಒಕ್ಕಲೆಬ್ಬಿಸಲಾಯಿತು. ಈ ಬಗೆಯ ಹಠಾತ್ ದಾಳಿಗೆ ತತ್ತರಿಸಿದ ಜನರು ಈ ಅನ್ಯಾಯದ ವಿರುದ್ಧ ಪ್ರತಿಭಟಿಸಿದರು. ಆಗ ಬಳ್ಳಾರಿಯ ಲೋಕಸಭಾ ಸದಸ್ಯರಾಗಿದ್ದ ಶಿವಮೂರ್ತಿ ಸ್ವಾಮಿಯವರು ಇದಕ್ಕೆ ಸ್ಪಂದಿಸಿದರು. ಭಾರತ ಸರಕಾರದ ಗೃಹಖಾತೆಗೆ ಪತ್ರ ಬರೆದು ಈ ಬಗ್ಗೆ ಸರಕಾರದ ಗಮನ ಸೆಳೆದರು. ಯಜಮಾನ ಶಾಂತರುದ್ರಪ್ಪನವರು 'ಇದ್ದ ಹಲವಾರು ಬ್ರಾಹ್ಮಣರ ಕುಟುಂಬಗಳಲ್ಲಿಯೇ ತನಗೆ ಅವರಿಂದ ಏನಾದರೂ ಮುಂದೆ ತೊಂದರೆಯಾಗಬಹುದೆಂದು ಸಂಶಯದಿಂದ ಅಂತವರ ಬಲ ಕಡಿಮೆ ಮಾಡಲು ಮೊದಲು ಸಭ್ಯರೂ 'ಅಂಜುಬುರುಕರು' ರಾಜನ ವಿರುದ್ಧ ಪ್ರತಿ ನುಡಿಯದವರ ಆಸ್ತಿಗಳನ್ನು ಕತ್ತರಿಸಿದರು. ನಂತರದಲ್ಲಿ ಕ್ರಮೇಣ ಬಲಿಷ್ಠರೆನಿಸಿಕೊಂಡ ಬ್ರಾಹ್ಮಣರ ಚಂಡಿಕೆ, ಜನಿವಾರಕ್ಕೆ ಕತ್ತರಿ ಪ್ರಯೋಗ ಪ್ರಾರಂಭಿಸಿದರು. ದೇವರ ಪೂಜಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಬ್ರಾಹ್ಮಣ ಪೂಜಾರಿಗಳ ಇನಾಮು ಜಮೀನುಗಳನ್ನು ಸೊಂಡೂರು ಸಂಸ್ಥಾನದ ಹೆಸರಿಗೆ ಸೇರಿಸಿಕೊಂಡು ಅವರಿಗೆ ಪೂಜೆಯ ಪರಿಹಾರಾರ್ಥವಾಗಿ ಕೂಲಿ ಕೊಡಲು ಆರಂಭಿಸಿದರು. ಬರುಬರುತ್ತಾ ಅವರ ಸಂಬಳವನ್ನು ನಿಲ್ಲಿಸಿದರು' ಎಂದು ಬರೆಯುತ್ತಾರೆ.

ಸೊಂಡೂರಿನಲ್ಲಿ ರಾಜವಂಶಜರನ್ನು ಪ್ರಶ್ನಿಸುವವರು ಹೆಚ್ಚಿದಂತೆ ಅವರ ನಿಯಂತ್ರಣಗಳನ್ನು ಸಂಸ್ಥಾನ ಪ್ರಾರಂಭಿಸಿತು. ಹೀಗೆ ಪ್ರಶ್ನೆ ಮಾಡಿದ ಷಣ್ಮುಖಶಾಸ್ತ್ರಿ, ಐಕಲ್ ಗುರುಸಿದ್ದಪ್ಪ, ಬಾವಿಕಟ್ಟೆ ಮರಿಬಸಪ್ಪ ಎನ್ನುವುವರನ್ನು ಗಡಿಪಾರು ಮಾಡಲಾಯಿತು. ಬ್ರಾಹ್ಮಣರ ಭೂಮಿಯನ್ನು ವಶಪಡಿಸಿಕೊಂಡಿದ್ದನ್ನು ಉಗ್ರವಾಗಿ ವಿರೋಧಿಸಿದ ಪೊತ್ನೀಸ್ ರಾಮರಾಯರಿಗೆ ಸೊಂಡೂರಿನಲ್ಲಿ ನೆಲೆಯೂ ಸಿಗದಂತೆ ಮಾಡಲಾಯಿತು. ಒಂದು ದಿನ ಬಳ್ಳಾರಿಯಲ್ಲಿ ಅನಾಮಧೇಯರಾಗಿ ಸಾವನ್ನಪ್ಪಿದರು. ಮುಸಲ್ಮಾನರಿಗೆ ಸೊಂಡೂರಿನಲ್ಲಿ ಒಂದು ಪ್ರಾರ್ಥನಾ ಮಂದಿರ ಇರಲಿಲ್ಲ. ಆಗ ಕಂಟ್ರಾಕ್ಟರ್ ಕಾಶೀಮ ಸಾಹೇಬರು ತಮ್ಮ ಸ್ವಂತ ಖರ್ಚಿನಿಂದ ದರ್ಗಾದ ಬಳಿ ಪ್ರಾರ್ಥನಾ ಮಂದಿರ ಕಟ್ಟಿಸಲು ಅನುಮತಿ ಕೇಳಿದರು. ಮಹಾರಾಜರು ಅನುಮತಿ ಕೊಡಲಿಲ್ಲ. ಕೊನೆಗೆ ಊರ ಹೊರವಲಯದಲ್ಲಿ ಕಟ್ಟಿಸಬೇಕಾಯಿತು. ಅದು ಮುಸಲ್ಮಾನರಿಗೆ ದೊರೆಯ ಬಗೆಗೆ ಅಸಮಧಾನವನ್ನು ಮೂಡಿಸಿತು. ೧೯೪೮ಕ್ಕೆ ಮುಂಚೆ ಸಂಸ್ಥಾನದ ಕಛೇರಿಗಳಾದ ಯಶವಂತ ನಿವಾಸ, ಮಹಾರಾಣಿ ನಿವಾಸ, ಮೋಹಿನಿ ಮಹಲು ಎಂಬ ಕಟ್ಟಡಗಳನ್ನು ಜೂನ್ ೧೯೪೮ರಲ್ಲಿ ಭಾರತ ಸರ್ಕಾರ ವಶಪಡಿಸಿಕೊಂಡಿತು. ಆ ನಂತರ ೧ ಏಪ್ರಿಲ್ ೧೯೫೪ರಿಂದ ಸರಿಪಡಿಸಿಕೊಂಡು ತಿಂಗಳಿಗೆ ೪೦೨ ರೂಗಳನ್ನು ಬಾಡಿಗೆ ಪಡೆಯಲಾರಂಭಿಸಿದರು. ಸೊಂಡೂರು ವಿಲೀನ ಒಪ್ಪಂದದಲ್ಲಿ ಸರಕಾರಿ ಆಸ್ತಿಗಳಾದ ಈ ಕಟ್ಟಡಗಳು ೧೯೫೪ರಲ್ಲಿ ಹೇಗೆ ಖಾಸಗಿ ಆಸ್ತಿಗಳಾದವು ಎಂದು ಕೆಲವರು ಪ್ರಶ್ನೆ ಮಾಡಿದರು. ಈ ಪ್ರಶ್ನೆಗಳು ಹಾಗೆಯೆ ಉಳಿದವು.

೧೯೫೪ರಲ್ಲಿ ಸೊಂಡೂರು ಮಹಾರಾಜರಿಗೂ ಕರ್ನಾಟಕದ ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರಿಗೂ ಗೆಳೆತನ ಉತ್ತಮವಾಗಿತ್ತು. ಇದಕ್ಕೆ ಕಾರಣ ಹೀಗಿದೆ. ಸೊಂಡೂರಿನಲ್ಲಿರುವ ಶ್ರೇಷ್ಟವಾದ ಮ್ಯಾಂಗನೀಸ್ ಅದಿರಿನ (ಜನರಲ್ ಸೊಂಡೂರ್ ಮೈನಿಂಗ್ ಕಂಪನಿ) ಗಣಿಗಳು ಪರೀಕ್ಷೆಯಲ್ಲಿ ಬೆಲ್ಜಿಯಮ್ ಕಂಪನಿಯಿಂದ ವಾಪಸಾದವು. ಮಹಾರಾಜರಿಗೆ ಈ ಗಣಿಗಳನ್ನು ವಾಪಸ್ಸು ಪಡೆಯಲು ಗಾಬರಿಯಾಯಿತು. ಏಕೆಂದರೆ ಮೈಸೂರಿನೊಡನೆ ವಿಲೀನವಾದ ಬಳ್ಳಾರಿ ಗಣಿಯ ಸಾರ್ವಭೌಮತ್ವ ನ್ಯಾಯವಾಗಿ ಮೈಸೂರು ರಾಜ್ಯಕ್ಕೆ ಸೇರಬೇಕಾಗಿತ್ತು. ಈ ಸಂದರ್ಭದಲ್ಲಿ ಆಗಲೆ ಬಳ್ಳಾರಿಯಲ್ಲಿ 'ಗಣಿ' ಸರ್ಕಾರಕ್ಕೆ ಸೇರಬೇಕು ಅದನ್ನು ಸೊಂಡೂರು ರಾಜರಿಂದ ಬಿಡಿಸಬೇಕು ಎಂದು ಸರ್ಕಾರಕ್ಕೆ ಜನರು ಮನವಿ ಸಲ್ಲಿಸಿದ್ದರು. ಈ ನಡುವೆ ಮಹಾರಾಜರು ಬೊಂಬಾಯಿಯ ಜಾಯಿಂಟ್ ಸ್ಟಾಕ್ ಕಂಪನಿಯ ಪ್ಲಾಟ್ ಮಾಡಲು ಪ್ರಯತ್ನಿಸಿದರು. ಆಗ ವಿದೇಶಿ ಕಂಪನಿಯೊಂದರ ಸೊಂಡೂರಿನ ಗಣಿಯ ಮಾಲಿಕತ್ವ ವಿರೋಧಿಸಿ ಬಳ್ಳಾರಿಯಲ್ಲಿ ಪ್ರತಿಭಟನೆಯಾಯಿತು. 'ಸೊಂಡೂರಿನ ರಾಜಸಾಹೇಬರ ಉದ್ಯಮಕ್ಕೆ ಮದ್ರಾಸಿನ ಕೈಗಾರಿಕಾ ಮಂತ್ರಿ ಸೀತಾರಾಮರೆಡ್ಡಿ ಪಾರ್ಟನರ್ ಆಗಿದ್ದಾರೆ' ಇದನ್ನು ಪರಿಶೀಲಿಸಬೇಕೆಂದು ರಾಜ ಸರ್ಕಾರದ ಮೇಲೆ ಬಳ್ಳಾರಿಯ ಸೊಂಡೂರು ವಿಮೋಚನ ಸಮರ ಸಮಿತಿಯವರು ಒತ್ತಡ ತಂದರು. ಈ ಕಂಪನಿಯು ಕೆಲಸ ಪ್ರಾರಂಭಿಸಿದರೆ ಮಹಾರಾಜರ ವಾರ್ಷಿಕ ವರಮಾನ ೩೭.೦೦೦ದಿಂದ ೩೦, ಲಕ್ಷ ರೂಗಳಿಗೆ ಹೆಚ್ಚಾಗುವ

ಸಾಧ್ಯತೆ ಇತ್ತು. ಎಂ.ವೈ. ಘೋರ್ಪಡೆಯವರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರಿಂದ ಹೆಚ್ಚಿನ ಖರ್ಚು ಇತ್ತು. ಈ ಹಿನ್ನೆಲೆಯಲ್ಲಿ ಬೆಲ್ಜಿಯಮ್ ಕಂಪನಿಗೆ ಗಣಿಯನ್ನು ಕೋಟ್ಯಂತರ ರೂಪಾಯಿಗಳಿಗೆ ಒಪ್ಪಂದ ಮಾಡಿಕೊಳ್ಳಲು ಮುಖ್ಯಮಂತ್ರಿಗಳ ನೆರವು ಬೇಕಿತ್ತು. ಹಾಗಾಗಿ ಸೊಂಡೂರಿನ ಮಹಾರಾಜರು ಕೆಂಗಲ್ ಹನುಮಂತಯ್ಯನವರೊಂದಿಗೆ ಸಖ್ಯ ಬೆಳೆಸಿದರು. ಮುಖ್ಯಮಂತ್ರಿಗಳೂ ಇದಕ್ಕೆ ಸಹಕರಿಸಿ ಬೆಂಬಲಿಸಿದರು. ಆಗ ಬೆಂಗಳೂರಿನಿಂದ ಎಂ.ಜಿ. ಕರುಣಾಳ್ ಸಂಪಾದಕತ್ವದಲ್ಲಿ ಬರುತ್ತಿದ್ದ 'ಕರ್ಮಯೋಗಿ' ಪತ್ರಿಕೆಯಲ್ಲಿ "ಹನುಮಂತಯ್ಯನವರೇ! ನೂತನ ಬಳ್ಳಾರಿ ಜಿಲ್ಲೆಯನ್ನು ಬಂಡವಾಳಶಾಹಿಯಿಂದ ಕಾಪಾಡಿ" ಎಂದು ಬಹಿರಂಗವಾಗಿ ಸವಾಲು ಹಾಕಿದರು. ಮುಖ್ಯಮಂತ್ರಿಗಳೇ ಮಹಾರಾಜರನ್ನು ಬೆಂಬಲಿಸಿದ್ದರಿಂದ ಸಾಮಾನ್ಯ ಜನರ ಅಹವಾಲುಗಳು ಮೌನವಾದವು.

---

[1] ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪು. ೧೨೨-೨೫, ೧೯೯೮

[2] ಅದೇ ಪು. ೧೨೪, ೧೯೯೮

[3] M.Y. Ggorpade, P -123, 1992

[4] ಕಾಗೋಡು ಚಳುವಳಿ ಸಮಾನ, ಸಂಪುಟ –ಪು. ೨೨೮

## ೫. ೧೯೪೭ರ ನಂತರದ ಪ್ರತಿಭಟನೆಗಳು (2)

**ಬಿ.ಡಿ.ಜತ್ತಿಯವರ ಸೊಂಡೂರ ಭೇಟಿ**

ಬಿ.ಡಿ. ಜತ್ತಿಯವರು ೧೯೫೮ರ ಹೊತ್ತಿನಲ್ಲಿ ಮೈಸೂರಿನ ಮುಖ್ಯಮಂತ್ರಿಗಳಾಗಿದ್ದರು. ಸೆಪ್ಟಂಬರ್ ೨೨ರಂದು ಸೊಂಡೂರಿಗೆ ಭೇಟಿ ನೀಡಿದರು. ಸಾಮಾನ್ಯ ಜನರು ಮುಖ್ಯಮಂತ್ರಿಯನ್ನು ಕಣ್ಣೆದುರಿಗೆ ನೋಡುತ್ತೇವೆ ಎಂದು ಸಂಭ್ರಮಿಸಿದರು. ಬಳ್ಳಾರಿಯ ಸೊಂಡೂರು ವಿಮೋಚನ ಸಮರ ಸಮಿತಿಯವರು ಈ ಸಂದರ್ಭಕ್ಕಾಗಿ ಯೋಜನೆಯೊಂದನ್ನು ರೂಪಿಸಿದರು. ಮಹಾರಾಜರ ದುರಾಡಳಿತದ ಕೆಲವು ಅಂಶಗಳನ್ನು ಪಟ್ಟಿಮಾಡಿ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಲು ತಯಾರಿ ಆಯಿತು. ಪಕ್ಷದ ದೃಷ್ಟಿಯಲ್ಲಿ ಎಲಿಗಾರ ತಿಮ್ಮಪ್ಪ ಕಾಂಗ್ರೆಸ್‌ನಲ್ಲಿದ್ದರೂ, ತನ್ನ ಸ್ಥಳೀಯ ಹಿತಾಸಕ್ತಿಯಿಂದ ಇದಕ್ಕೆ ಬೆಂಬಲಿಸಿದರು. ಈ ಯೋಜನೆ ತಿಳಿದ ದೊರೆಗಳು ಬಳ್ಳಾರಿಯ ಜಿಲ್ಲಾಧಿಕಾರಿ ಮತ್ತು ಡಿ.ಎಸ್.ಪಿ ಯವರಿಗೆ ಒಂದು ಎಚ್ಚರಿಕೆ ನೀಡಿದರು. ಯಜಮಾನ ಶಾಂತರುದ್ರಪ್ಪನವರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಲು ಬಂದರೆ ಶಾಂತಿಭಂಗವಾಗುವ ಕಾರಣದಿಂದ ಬಂಧಿಸಬೇಕೆಂದು ತಿಳಿಸಲಾಯಿತು. ಯೋಜನೆಯಂತೆ ಜತ್ತಿಯವರು ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುವ ಹೊತ್ತಿಗೆ ಯಜಮಾನ ಶಾಂತರುದ್ರಪ್ಪ ಮತ್ತು ಎಲಿಗಾರ ತಿಮ್ಮಪ್ಪ ಮನವಿ ಸಲ್ಲಿಸಲು ವೇದಿಕೆ ಕಡೆ ದಾವಿಸಿದರು. ಕೂಡಲೇ ಪೊಲೀಸರು ಇವರನ್ನು ಬಂಧಿಸಿದರು. ಜತ್ತಿಯವರು ಈ ಬಂಧನವನ್ನು ನೋಡಿದರು. ಆದರೆ ಯಾಕೆ ಬಂಧಿಸುತ್ತಿದ್ದಾರೆ, ಏನು ವಿಷಯ ಎನ್ನುವ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ.

ನಮ್ಮ ಸ್ವಾತಂತ್ರ್ಯಕ್ಕೆ ಏನು ಬೆಲೆ ಇದೆ? ಯಾರನ್ನು ಯಾವ ಕ್ಷಣವಾದರೂ ಸೆರೆಯಲ್ಲಿ ಇರಿಸಬಹುದು ಎಂದು ಹುಬ್ಬಳ್ಳಿಯಿಂದ ಬರುತ್ತಿದ್ದ 'ಪ್ರಪಂಚ' ಪತ್ರಿಕೆ ವರದಿ ಮಾಡಿತು. ವ್ಯಕ್ತಿ ಸ್ವಾತಂತ್ರ್ಯವನ್ನು ಅಧಿಕಾರ ಹೇಗೆ ಮೊಟಕುಗೊಳಿಸಬಹುದು ಎನ್ನುವುದಕ್ಕೆ ಈ ಘಟನೆ ಸಾಕ್ಷಿಯಾಯಿತು. ದೊರೆಯು ಈ ಭೇಟಿಯನ್ನು ಹೇಗೆ ಲಾಭದಾಯಕ ಮಾಡಿಕೊಂಡರೆಂದು ಕೋ. ಚನ್ನಬಸಪ್ಪನವರು ತಮ್ಮ 'ರೈತ' ಪತ್ರಿಕೆಯಲ್ಲಿ ವರದಿ ಮಾಡಿದರು.

“ಸೊಂಡೂರು ಸಂಸ್ಥಾನ ಮೈಸೂರಿನಲ್ಲಿ ವಿಲೀನವಾದ ನಂತರ ಸಂಸ್ಥಾನದ ಹೈಸ್ಕೂಲು ಕೂಡ ಬಳ್ಳಾರಿ ಜಿಲ್ಲಾ ಬೋರ್ಡಿನ ಆಧೀನಕ್ಕೆ ವರ್ಗವಾಯಿತು. ಜಿಲ್ಲಾ ಬೋರ್ಡಿನ ಮೂಲಕ ಎಲ್ಲಾ ಹೈಸ್ಕೂಲುಗಳು ನಡೆಯುವಂತಾಯಿತು. ಮುಖ್ಯಮಂತ್ರಿಗಳ ಭೇಟಿಯ ನಂತರ ಜಿಲ್ಲಾ ಬೋರ್ಡಿನಿಂದ ಸಂಸ್ಥಾನಕ್ಕೆ ವರ್ಗಾವಣೆಗೊಂಡಿತು. ‘ವಿದ್ಯಾವರ್ಧಕ ಸಂಘ’ವನ್ನು ಹೊಸದಾಗಿ ರಚಿಸಿದರು. ಟೇಕೂರು ಸುಬ್ರಮಣ್ಯ ಅದರ ಅಧ್ಯಕ್ಷರಾದರು. ಯಶವಂತರಾವ್ ಘೋರ್ಪಡೆಯವರು ಕಾರ್ಯದರ್ಶಿಗಳಾದರು. ದೊರೆ ಮನೆಯವರು ಸಮಿತಿಯ ಸದಸ್ಯರುಗಳಾದರು. ಈ ತೀವ್ರ ಬದಲಾವಣೆ ಸಂಸ್ಥಾನದ ಕೆಲವರಿಗೆ ಆಶ್ಚರ್ಯವಾಯಿತು. ಈ ಸಂಘ ಎಂದು ರಿಜಿಸ್ಟರ್ ಆಯಿತು? ಅದಕ್ಕಿರುವ ಮೂಲ ಧನವೆಷ್ಟು? ಹೀಗೆ ಯಾವುದಾದರೂ ಖಾಸಗಿ ಸಂಘಕ್ಕೆ ಜಿಲ್ಲಾ ಬೋರ್ಡು ಶಾಲೆಗಳ ಆಡಳಿತ ಕೊಡುವುದಾದರೆ ಸರ್ಕಾರದ ಜವಾಬ್ದಾರಿ ಏನು? ಎನ್ನುವಂತಹ ಪ್ರಶ್ನೆಗಳು ಜನರಲ್ಲಿ ಎದ್ದವು. ಅದಕ್ಕೆ ಉತ್ತರ ಸಿಗಲಿಲ್ಲ.

೧೯೫೫ರಲ್ಲಿ ಸೊಂಡೂರು ಕ್ಷೇತ್ರದ ಜನಪರ ಶಾಸಕರಾಗಿದ್ದ ಅರಗಿನದೋಣಿ ರಾಯನಗೌಡರು ಆಕಸ್ಮಿಕವಾಗಿ ನಿಧನರಾದರು. ತೆರವಾದ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯಿತು. ಈವರೆಗೂ ಸಂಸ್ಥಾನದ ರಾಜಾಧಿಕಾರವನ್ನಲ್ಲದೆ ಭಾರತ ಸರ್ಕಾರದ ರಾಜಕೀಯಕ್ಕೆ ಮಹಾರಾಜರು ಪ್ರವೇಶಿಸಿರಲಿಲ್ಲ. ಈ ಉಪ ಚುನಾವಣೆ ಎಂ.ವೈ. ಘೋರ್ಪಡೆಯವರು ರಾಜಕೀಯ ಪ್ರವೇಶಿಸಲು ಅನುಕೂಲವಾಯಿತು. ಮಾಜಿ ದೊರೆಗಳ ಆಡಳಿತವನ್ನು ವಿರೋಧಿಸುತ್ತ ಬಂದವರಿಗೆಲ್ಲಾ ಇದು ಗಂಭೀರ ಪ್ರಶ್ನೆಯಾಯಿತು. ದೊರೆ ತನ್ನ ಹಣ ಬಲದಿಂದ ಅಸೆಂಬ್ಲಿ ಸೀಟನ್ನು ಕೊಳ್ಳುವಂತಾದರೆ ರಾಜಕೀಯವಾಗಿಯೂ ದೊರೆತನಕ್ಕೆ ಶಕ್ತಿ ಬಂದಂತಾಗುತ್ತಿತ್ತು. ಆ ಆತಂಕ ಪ್ರಪಂಚ ಪತ್ರಿಕೆಯಲ್ಲಿ ವ್ಯಕ್ತವಾಯಿತು. ಅದರ ಒಂದು ಭಾಗ ಹೀಗಿದೆ “ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಇನ್ನೂ ಮರ್ಯಾದೆ ಇರಿಸಿಕೊಂಡಿದೆ. ಆ ಮರ್ಯಾದೆ ತನಗೇಕೆ ಎಂದು ಅಸಡ್ಡೆ ಮಾಡಿದರೆ ಅದು ಈ ಅಸೆಂಬ್ಲಿ ಸೀಟನ್ನು ಸೊಂಡೂರಿನ ರಾಜವಂಶಕ್ಕೆ ಕೊಟ್ಟರೂ ಕೊಟ್ಟೀತು. ಆದರೆ ಅದು ಅಸಾಧ್ಯ. ಕಾಂಗ್ರೆಸ್ಸು ಹಾಗೇನಾದರೂ ಸೀಟುಕೊಟ್ಟ ಪಕ್ಷದಲ್ಲಿ ಅದು ಸೊಂಡೂರು ದೊರೆಯ ಊಳಿಗದ ಆಳಾದೀತು! ಮಾಜಿ ದೊರೆ ಬಾಯಿ ದುಂಬಲಕ್ಕೆ ಕೈಚಾಚುವ ಕಾಂಗ್ರೆಸ್ಸಿಗರೇನಾದರೂ ಇದ್ದರೆ ಅವರಿಗೆ ಸಾವಿರ ಧಿಕ್ಕಾರ.”

ಸಹಜವಾಗಿ ಚುನಾವಣಾ ಬಿಸಿ ಏರುತ್ತಿದ್ದಂತೆಯೇ ಕಾಂಗ್ರೆಸ್ಸೇತರ ಪಕ್ಷಗಳು ಚುರುಕಾದವು. ‘ಐಕ್ಯರಂಗ’ವೂ ಈ ನಿಟ್ಟಿನಲ್ಲಿ ಜಾಗೃತಗೊಂಡಿತು. ಕಾಂಗ್ರೆಸ್ ಸರಕಾರದ ಜನವಿರೋಧಿ ನೀತಿಯಿಂದ ಜನತೆಯ ಜೀವನವು ಅತಂತ್ರವಾಗಿದೆ. ಈ ನೀತಿಯನ್ನು ಪ್ರತಿಭಟಿಸಲು ಮತ್ತು ಕಾಂಗ್ರೆಸ್ ನೀತಿಯನ್ನು ಖಂಡಿಸಲು ಪ್ರತಿಪಕ್ಷಗಳ ಪ್ರಜಾಪ್ರಭುತ್ವವಾದಿಗಳು ಸೇರಿ ಮುಂಬರುವ ಸೊಂಡೂರು ಕ್ಷೇತ್ರದಲ್ಲಿ ನಡೆಯಲಿರುವ ಉಪಚುನಾವಣೆಯಲ್ಲಿ ಎಲ್ಲ ವಾಮ ಪಕ್ಷಗಳ ಪರವಾಗಿ ಒಬ್ಬನೇ ಹುರಿಯಾಳನ್ನು ನಿಲ್ಲಿಸಬೇಕೆಂದು ಕರೆಯಿತ್ತರು. ೧೪ ಜನವರಿ ೧೯೫೫ರಂದು ಚೋರನೂರಿನಲ್ಲಿ ಸಭೆ ನಡೆದು ಹೆಚ್ಚಿನ ನಾಯಕರು ಬರದಿದ್ದ ಕಾರಣ ಮುಂದೂಡಲಾಯಿತು. ಕೊಟ್ಟೂರಿನ ವಿಧಾನಸಭಾ ಸದಸ್ಯರಾದ ಎಂ.ಎಂ.ಜೆ. ಸಧ್ಯೋಜಾತಪ್ಪ, ಬಳ್ಳಾರಿಯ ವಿಧಾನಸಭಾ ಸದಸ್ಯ ಎಂ. ದಾನಪ್ಪ, ಬಳ್ಳಾರಿಯ ವಕೀಲರಾದ ಡಿ.ಆರ್. ಮುನ್ನಾರ್, ಮುಂತಾದ ನಾಯಕರು ಜನವರಿ ೨೪.೧೯೫೫ರಂದು ಹೊಸಪೇಟೆಯಲ್ಲಿ ಸಭೆ ಮಾಡಿದರು. ಪ್ರಜಾಸಮಾಜವಾದಿ, ಸಮಾಜವಾದಿ, ಕಮ್ಯುನಿಸ್ಟ್ ಐಕ್ಯರಂಗ ಮುಂತಾದ ಪಕ್ಷಗಳ ಸಂಯುಕ್ತ ವಿರೋಧಿ ಸಂಘವನ್ನು ರಚಿಸಿ ತಮ್ಮ ವತಿಯಿಂದ ಎಚ್.ಎಂ. ವೀರಭದ್ರಯ್ಯನವರನ್ನು ಚುನಾವಣೆಗೆ ನಿಲ್ಲಿಸಿತು.

ಎಲಿಗಾರ ತಿಮ್ಮಪ್ಪ ಸ್ವಾತಂತ್ರ್ಯ ಹೋರಾಟದಿಂದಲೂ ಕಾಂಗ್ರೆಸ್ಸಿನ ಜೊತೆ ಇದ್ದರು. ಹಾಗಾಗಿ ಇವರಿಗೆ ಕಾಂಗ್ರೆಸ್ ಸೀಟು ಸಿಗುವ ಸಾಧ್ಯತೆ ಇತ್ತು. ಈ ಮುಂಚೆ ಕಾಂಗ್ರೆಸ್‌ನ್ನು ವಿರೋಧಿಸುತ್ತಿದ್ದ ಮಹಾರಾಜರು ಕಾಂಗ್ರೆಸ್ ಪರವಾಗಿದ್ದರು. ಮುಖ್ಯಮಂತ್ರಿ ಬಿ.ಡಿ. ಜತ್ತಿಯವರೊಂದಿಗೆ ಉತ್ತಮ ಸಂಬಂಧವಿತ್ತು. ಬದಲಾಗಿ ಸೊಂಡೂರು ತಾಲ್ಲೂಕಿನ ಬಹುಪಾಲು ಜನಸಮುದಾಯ ‘ದೊರೆಗಳ’ ಬಗೆಗೆ ಭಯ, ಭಕ್ತಿಗೌರವ ಹೊಂದಿದ್ದರು. ಈ ಎಲ್ಲಾ ಕಾರಣಗಳು ಎಂ.ವೈ. ಘೋರ್ಪಡೆಯವರಿಗೆ ಕಾಂಗ್ರೆಸ್ ಟಿಕೆಟ್ ಸಿಗಲಿಕ್ಕೆ ಬೆಂಬಲಿಸಿದವು. ಪ್ರಜಾಪ್ರಭುತ್ವದ ಬಗೆಗೆ ಓದಿಕೊಂಡಿದ್ದವರು ಸಹಜವಾಗಿ ಅರಸುತನವನ್ನು ವಿರೋಧಿಸಿದರು. ಎಂ.ವೈ. ಘೋರ್ಪಡೆಯವರಿಗೆ ಟಿಕೆಟ್ ಕೊಟ್ಟು ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷ ಢೇಬರ್ ಪಕ್ಷದ ಪ್ರತಿಷ್ಠೆಯನ್ನು ಮಾರಿಕೊಂಡಿದ್ದಾರೆ ಎಂದು ಟೀಕಿಸಿದರು. ಈ ಹಿಂದೆ ೧೯೫೭ರ ಸಾರ್ವತ್ರಿಕ ಚುನಾವಣೆ

ನಡೆದಾಗಲೂ ದೊರೆ ಮಗನಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸುವ ಯತ್ನ ನಡೆದಿತ್ತು. ಆಗ ಅರಸು ಮನೆತನದವರಿಗೆ ಕಾಂಗ್ರೆಸ್‌ನಲ್ಲಿ ಅವಕಾಶ ಕೊಡಬಾರದೆಂದು ಇಲ್ಲಿಯ ಕೆಲ ಜನ ಪ್ರತಿಭಟಿಸಿದ್ದರು. ಈ ಪ್ರತಿಭಟನೆಯಿಂದಾಗಿಯೇ ಅವಕಾಶ ತಪ್ಪಿ ಜನತೆಗೆ ಜಯವಾಗಿತ್ತು. ಇದೇ ಹೊತ್ತಿಗೆ ಮಹಾರಾಷ್ಟ್ರದ ನಾಗ್‌ಪುರದಲ್ಲಿ ಕಾಂಗ್ರೆಸ್ ಅಧಿವೇಶನ ನಡೆದು ಸಮಾಜವಾದಿ ಸಮಾಜ ರಚನೆಯ ಬಗ್ಗೆ ಗೊತ್ತುವಳಿಯನ್ನು ಸ್ವೀಕರಿಸಲಾಗಿತ್ತು. ಇಂತಹ ಸಂದರ್ಭದಲ್ಲಿಯೆ ಬಂಡವಾಳಶಾಹಿ ದೊರೆ ಮಗನನ್ನು ಬೆಂಬಲಿಸಿದ್ದು ಕಾಂಗ್ರೆಸ್ ಪರವಾಗಿದ್ದವರಿಗೆಲ್ಲ ಅಸಹನೆಯನ್ನುಂಟುಮಾಡಿತ್ತು. ಕಾಂಗ್ರೆಸ್ ಬಗೆಗೆ ನಂಬಿಕೆಯನ್ನಿರಿಸಿಕೊಂಡ ಅನೇಕರಿಗೆ ಈ ನಿರ್ಣಯ ಇಡಿಯಾದ ರಾಜಕೀಯ ವ್ಯವಸ್ಥೆಯ ಬಗೆಗೆ ನಿರಾಸಕ್ತಿ ಮೂಡಿಸಿತು. ಇದರ ನಡುವೆ ಎಂ.ವೈ. ಘೋರ್ಪಡೆಯವರು ಮಾರ್ಚ್ ೧.೧೯೫೭ರಲ್ಲಿ ನಡೆದ ಚುನಾವಣೆಯಲ್ಲಿ ೨೨.೩೩೪ ಮತ ಪಡೆದು ೧೫,೦೦೦ ಮತಗಳ ಅಂತರದಲ್ಲಿ ಜಯಗಳಿಸಿದರು. ವಾಮ ಪಕ್ಷಗಳ ಎಚ್.ಎಂ. ವೀರಭದ್ರಯ್ಯನವರು ೭,೨೬೯ ಮತ ಪಡೆದರು. ಕೋ.ಚನ್ನಬಸಪ್ಪ ತಮ್ಮ 'ರೈತ ಪತ್ರಿಕೆ'ಯಲ್ಲಿ (ಮಾರ್ಚ್, ೧೯೫೭) ಚುನಾವಣೆಗೂ ಮುಂಚೆ ಅದರ ಒಳನೋಟ ಕೊಡುತ್ತಾರೆ: "ನಾನು ಮತದಾನ ಕ್ಷೇತ್ರದಲ್ಲಿ ಅಡ್ಡಾಡಿ ಜನರ ಅಭಿಪ್ರಾಯವನ್ನು ಸಂಗ್ರಹಿಸಿದೆ. ದೊರೆಮಗನಿಗೆ ತಕ್ಕ ಹಾಗೆಯೇ ಪ್ರಚಾರವಿದೆ. ಈತನ ಪರವಾಗಿ ಪ್ರತಿಯೊಂದು ಫಿರ್ಕಾದಲ್ಲೂ ೩೦೪ ಜೀಪು, ಕರು, ವ್ಯಾನು ಕೆಲಸ ಮಾಡುತ್ತಿವೆ. ಪ್ರತಿ ಊರಲ್ಲಿ ಏಜೆಂಟರಿದ್ದಾರೆ. ಅವರಿಗೆ ಬೇಕಾಗುವ ವಾಹನ, ಧನ, ಜನ, ಮದ್ಯ ಎಲ್ಲ ಸರಬರಾಜಾಗುತ್ತಿದೆ. ಆದರೆ ಸ್ವತಂತ್ರ್ಯ ಉಮೇದುವಾರರ ಪ್ರಚಾರ ಸಪ್ಪೆ ಅವರಿಗೆ ವಾಹನ ಹಣದ ಕೊರತೆ ಇದೆ. ಇದರಿಂದಾಗಿ ದೊರೆ ಮಗನೇ ಗೆಲ್ಲಬಹುದು. ಗೆದ್ದರೆ ಜನರನ್ನು ಹಣದಿಂದ ಕೊಳ್ಳಬಹುದು ಎಂಬುದು ಸಾಬೀತಾಗುತ್ತದೆ."

ಈ ಚುನಾವಣೆ ಅರಸು ಮನೆತನಕ್ಕೆ ಹೊಸ ತಿರುವನ್ನು ತಂದಿತು. ಎಲಿಗಾರ ತಿಮ್ಮಪ್ಪ ಈವರೆಗೆ ರಾಜಮನೆತನವನ್ನು ವಿರೋಧಿಸುತ್ತಿದ್ದರು. ಅವರ ಜೊತೆ ಒಂದು ವಿರೋಧಿ ಬಣವೇ ಇತ್ತು. ಚುನಾವಣೆ ಸಂದರ್ಭಕ್ಕೆ ಕಾಂಗ್ರೆಸ್ ಟಿಕೆಟ್ ಪಡೆಯುವ ಸಾಮರ್ಥ್ಯವಿತ್ತು. ಆದರೆ ಸಿಗಲಿಲ್ಲ. ಆಗ ಅವರ ಮುಂದಿದ್ದ ಆಯ್ಕೆಗಳೆಂದರೆ ಒಂದು: ಎಂ.ವೈ. ಘೋರ್ಪಡೆಯವರನ್ನು ಬೆಂಬಲಿಸುವುದು. ಎರಡು: ಸಂಯುಕ್ತ ವಿರೋಧಿ ಸಂಘಕ್ಕೆ ಸೇರುವುದು. ಈತನಕದ ರಾಜ ಮನೆತನದ ವಿರೋಧವನ್ನು ಮರೆತು ಕಾಂಗ್ರೆಸ್‌ನಲ್ಲಿ ಉಳಿಯುವ ಕಾರಣಕ್ಕಾಗಿ ಎಂ.ವೈ. ಘೋರ್ಪಡೆಯವರಿಗೆ ಬೆಂಬಲಿಸಿದರು. ಮಾರ್ಚ್ ೩೦,೧೯೫೭ರಂದು ಸಂಯುಕ್ತ ಕರ್ನಾಟಕಕ್ಕೆ ಪ್ರಕಟಣೆಗೆಂದು ಸ್ವತಃ ತಿಮ್ಮಪ್ಪ ಘೋರ್ಪಡೆಯವರಿಗೆ ಬೆಂಬಲ ಸೂಚಿಸಿ ಪತ್ರ ಬರೆದರು. ಈ ನಿರ್ಣಯದಿಂದ ತಿಮ್ಮಪ್ಪನ ಜೊತೆಗಿನವರಿಗೆ ಆಘಾತವಾಯಿತು. ಕೆಲವರು ಜೊತೆ ಉಳಿದರೆ ಇನ್ನು ಕೆಲವರು ಎಚ್.ಎಂ. ವೀರಭದ್ರಯ್ಯನವರನ್ನು ಬೆಂಬಲಿಸಿದರು. ಕೊನೆಪಕ್ಷ ತಿಮ್ಮಪ್ಪನವರು ಕಾಂಗ್ರೆಸ್ ವಿರೋಧಿ ಬಣವನ್ನು ಬೆಂಬಲಿಸಿದ್ದರೆ ಅರಸು ಮನೆತನದ ವಿರೋಧಿ ಬಣಕ್ಕೆ ಹೆಚ್ಚಿನ ಶಕ್ತಿ ಬರುತ್ತಿತ್ತು. ಸೋಲಿನ ಅಂತರವೂ ಕಡಿಮೆಯಾಗುತ್ತಿತ್ತು. ಈ ಸಂದರ್ಭದಲ್ಲಿ ಬಹುತೇಕರಿಗೆ ಎಲಿಗಾರ ತಿಮ್ಮಪ್ಪ ಅವಕಾಶವಾದಿ ರಾಜಕಾರಣಿಯಂತೆಯೇ ಕಂಡರು. ಜನರಲ್ಲಿ ರಾಜಮನೆತನದ ಬಗೆಗಿದ್ದ ಗೌರವ 'ಕಾಂಗ್ರೆಸ್ ಮೇಲಿದ್ದ ಅಭಿಮಾನ' ತಿಮ್ಮಪ್ಪನವರ ಬೆಂಬಲ ಎಂ.ವೈ. ಘೋರ್ಪಡೆಯವರ ವಿಜಯಕ್ಕೆ ಕಾರಣವಾದವು.

ಆ ಹೊತ್ತಿಗೆ ರಾಜವಂಶದ ಜನವಿರೋಧಿ ಅಂಶಗಳನ್ನೆಲ್ಲಾ ಗುರುತಿಸುವುದು ಅವುಗಳ ಬಗ್ಗೆ ಜನರಿಗೆ ತಿಳಿ ಹೇಳುವುದಕ್ಕೆ ಎಲಿಗಾರ ತಿಮ್ಮಪ್ಪ ಪ್ರಮುಖರಾಗಿದ್ದರು. ಯಜಮಾನ ಶಾಂತರುದ್ರಪ್ಪನವರು ಬಳ್ಳಾರಿ ಭಾಗದಿಂದಲೇ ಹೋರಾಟ ಮಾಡುತ್ತಿದ್ದರಾದರೂ ಅವರ ಅಂತಿಮ ಗುರಿ ಕುಮಾರಸ್ವಾಮಿಯನ್ನು ಅರಸರ ಕೈವಶದಿಂದ ಬಿಡಿಸುವುದಾಗಿತ್ತು. ಅಷ್ಟಾಗಿ ಯಜಮಾನರಿಗೆ ಸ್ಥಳೀಯರಿಗೆ ಬಲವೆಂದರೆ ತಿಮ್ಮಪ್ಪ. ಈ ಹಿಂದಿನ ಹೋರಾಟಗಳಲ್ಲಿ ಸಕ್ರಿಯವಾಗಿದ್ದವರು. ಒಮ್ಮೆಲೇ ಎಂ.ವೈ. ಘೋರ್ಪಡೆಯವರನ್ನು ಬೆಂಬಲಿಸುತ್ತಲೂ ಅನೇಕರು ವಿಚಲಿತರಾದರು. ಮೂಲದಿಂದಲೂ ಕಾಂಗ್ರೆಸ್‌ನಲ್ಲಿ ನಿಷ್ಠೆ ಇಟ್ಟ ತಿಮ್ಮಪ್ಪನವರು ಪಕ್ಷದ ಮೇಲಿನ ನಿಷ್ಠೆಯಿಂದ ರಾಜವಂಶವನ್ನು ಬೆಂಬಲಿಸಿದರೋ, ರಾಜರ ಆಮಿಷಗಳಿಗೆ ಬಲಿಯಾಗಿ ಬೆಂಬಿಲಿಸಿದರೋ ಅಥವಾ ರಾಜವಂಶದೆದುರು ಎಲ್ಲಿಯವರೆಗೆ ಹೋರಾಡುವುದು ಎಂಬ ಸೋತ ಸ್ಥಿತಿಯಲ್ಲಿ ಬೆಂಬಲಿಸಿದರೋ? ಎನ್ನುವ ಪ್ರಶ್ನೆಗಳು ಎದುರಾಗುತ್ತವೆ. ಅಷ್ಟಕ್ಕೂ ತಿಮ್ಮಪ್ಪ ರಾಜವಂಶದ ಜೊತೆ ದೀರ್ಘಕಾಲ ಇರಲಿಕ್ಕಾಗಲಿಲ್ಲ. ಬೇಗನೆ ಹೊರಬಂದರು. ಚುನಾವಣೆ ಸಂದರ್ಭಕ್ಕೆ ತೆಗೆದುಕೊಂಡ ಅವರ ತೀರ್ಮಾನ ತುಂಬಾ ಇಕ್ಕಟ್ಟಿನದೇ ಇರಬಹುದು. ತಮ್ಮ ವೈಯಕ್ತಿಕ ಬದ್ಧತೆಗಿಂತ ಕಾಂಗ್ರೆಸ್ ಪಕ್ಷದ ಮೋಹಕ್ಕೆ ಬಿದ್ದದ್ದು ಅರವತ್ತರ ದಶಕದ ರಾಜಕೀಯ ವಾಸ್ತವ.

ಭಾರತದ ಒಕ್ಕೂಟದಲ್ಲಿ ಸೇರಿದ ಸಂಸ್ಥಾನಗಳ ವಾರಸುದಾರರಿಗೆ ರಾಜಧನ ಕೊಡುವುದಾಗಿ ಒಪ್ಪಂದವಾಗಿತ್ತು. ಸಂಸ್ಥಾನದ ಆದಾಯಕ್ಕೆ ತಕ್ಕಷ್ಟು 'ಪ್ರಿವಿ ಪರ್ಸ್' ಕೊಡುವ ನಿರ್ಣಯವಿತ್ತು. ಇದರ ನಿರ್ಧಾರಕ್ಕೆ ಕೆಲವು ನಿಯಮಾವಳಿಗಳಿದ್ದವು. ಯಾವುದೇ ರಾಜ್ಯದ ವಾರ್ಷಿಕ ಸರಾಸರಿ ವರಮಾನದ ಪ್ರಥಮ ಒಂದು ಲಕ್ಷದಲ್ಲಿ ಶೇಕಡ ೧೫ ರಷ್ಟು 'ನಂತರದ ನಾಲ್ಕು ಲಕ್ಷದಲ್ಲಿ ಶೇ ೧೦% ಐದು ಲಕ್ಷಕ್ಕೂ ಹೆಚ್ಚಿನ ವರಮಾನದಲ್ಲಿ ಶೇ. ೭ರಷ್ಟು' ಒಟ್ಟು ಹತ್ತು ಲಕ್ಷಕ್ಕೆ ಮೀರದಂತೆ ರಾಜಧನ ನೀಡುವುದಾಗಿ ಸರ್ಕಾರ ತೀರ್ಮಾನಿಸಿತು. ಸೊಂಡೂರು ಸಂಸ್ಥಾನದ ವಾರ್ಷಿಕ ಆದಾಯ ಎರಡು ಲಕ್ಷವಿತ್ತು. ಈ ಆದಾಯಕ್ಕೆ ೨೫ ಸಾವಿರ ರಾಜಧನ ಸಿಗಬೇಕು. ಆದರೆ ಯಶವಂತರಾವ್ ಘೋರ್ಪಡೆಯವರು ಪಡೆಯುತ್ತಿದ್ದ ರಾಜಧನ ೯೦ ಸಾವಿರ. ಆಗ ಯಜಮಾನ್ ಶಾಂತರುದ್ರಪ್ಪನವರು 'ಮಹಾರಾಜರು ಸರ್ಕಾರವನ್ನು ವಂಚಿಸುತ್ತಿದ್ದಾರೆ' ಎಂದು ಕರಪತ್ರ ಹಂಚಿದರು. ಕೋ. ಚೆನ್ನಬಸಪ್ಪನವರ 'ರೈತ ಪತ್ರಿಕೆ' ಒಳಗೊಂಡಂತೆ ಹಲವು ಪತ್ರಿಕೆಗಳು ಈ ವಂಚನೆಯ ವಾಸ್ತವವನ್ನು ವರದಿ ಮಾಡಿದವು. ಇದರ ಒಟ್ಟು ಸಾರ ಹೀಗಿದೆ. "೯೦ ಸಾವಿರ ರೂಗಳ ರಾಜಧನ ಪಡೆಯಬೇಕಿದ್ದರೆ ವರ್ಷ ಸೊಂಡೂರು ವಾರ್ಷಿಕ ಸರಾಸರಿ ವರಮಾನ ೧೦ ಲಕ್ಷ ಇರಬೇಕು. ಒಂದು ವೇಳೆ ಹತ್ತು ಲಕ್ಷ ರೂ.ಗಳ ವರಮಾನವಿತ್ತು ಎಂದುಕೊಳ್ಳೋಣ. ಆಗ ೧೫೮ ಚದುರ ಮೈಲು ಭೂಮಿಗೆ ೧೦ ಲಕ್ಷ ವರಮಾನ ಬರಬೇಕಾದರೆ, ಚದುರ ಮೈಲು ಭೂಮಿಗೆ ೬೩೨೯ ರೂಗಳ ವರಮಾನವಿರಬೇಕಾಗುತ್ತೆ. ಒಂದು ಚದುರ ಮೈಲು ಭೂಮಿಯಿಂದ ಇಷ್ಟು ವರಮಾನ ಬರಬೇಕಾದರೆ ಇಲ್ಲಿ ಬರಿ ಬಂಗಾರವನ್ನೇ ಬಿತ್ತಿ ಬೆಳೆಯುತ್ತಿರಬೇಕು. ಪ್ರಜೆಗಳ ಲೆಕ್ಕಚಾರದಲ್ಲಿ ಅದನ್ನು ಹೀಗೂ ನೋಡಬಹುದು. ೧೦ ಲಕ್ಷ ಕೊಡುತ್ತಿದ್ದವರು ಸೊಂಡೂರಿನ ೧೫,೦೦೦ ಪ್ರಜೆಗಳು. ಜನಸಂಖ್ಯೆಯಲ್ಲಿ ಒಬ್ಬೊಬ್ಬರು ೬೬,೬೬ರಷ್ಟು ಕಂದಾಯ ಕೊಡಬೇಕು. ವಾಸ್ತವದಲ್ಲಿ ಇದು ನಂಬಲರ್ಹವಲ್ಲದ ಸಂಗತಿ" ಈ ಮಾಹಿತಿಯನ್ನು ನೀಡಿಯೇ ಯಜಮಾನರು ಕರಪತ್ರ ಹಂಚಿದರು.

ಈ ವಿಷಯ ನಮಗೆ ಸಂಬಂಧವೇ ಇಲ್ಲವೆನ್ನುವಷ್ಟರ ಮಟ್ಟಿಗೆ ರಾಜವಂಶಜರು ಪ್ರತಿಕ್ರಿಯಿಸಲಿಲ್ಲ.

ಸೊಂಡೂರಿನಂತಹ ಒಂದು ಸಣ್ಣ ಸಂಸ್ಥಾನವೇ ತಪ್ಪು ಆದಾಯ ತೋರಿಸಿ ೯೦ ಸಾವಿರದಷ್ಟು ರಾಜಧನ ಪಡೆಯಬೇಕಾದರೆ, ಇನ್ನು ಭಾರತದ ೬೦೦ ಸಂಸ್ಥಾನಗಳು ಎಷ್ಟು ರಾಜಧನವನ್ನು ಪಡೆದಿರಲಿಕ್ಕಿಲ್ಲ? ರಾಜಧನದಿಂದಾಗಿಯೇ ಮಾಜಿ ಮಹಾರಾಜರುಗಳು ಮೊದಲಿಗಿಂತ ವೈಭವದ ಜೀವನ ಪ್ರಾರಂಭಿಸಿದರು. ಪ್ರಜೆ ಮತ್ತು ದೊರೆಯ ನಡುವೆ ಇರುವ ಅಂತರ ಮತ್ತಷ್ಟು ಹೆಚ್ಚಾಯಿತು. ಕಾಂಗ್ರೆಸ್ ಸರ್ಕಾರ ಮಹಾರಾಜರನ್ನು ಪೋಷಿಸುತ್ತದೆ ಎನ್ನುವ ಕಾರಣಕ್ಕಾಗಿಯೇ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಜೊತೆಗಿದ್ದು ಕೆಲವು ಪ್ರಗತಿಪರರು ನಂತರ ಕಾಂಗ್ರೆಸ್‌ನ್ನು ವಿರೋಧಿಸತೊಡಗಿದರು. ಈ ಅಸಹನೆಯೇ ಕಾಂಗ್ರೆಸ್ಸೇತರ ಪಕ್ಷಗಳು ಹುಟ್ಟಿ ಬೆಳೆಯಲು ಕಾರಣವಾಯಿತು.

**ವಿಗ್ರಹ ಭಂಜನೆ ಪ್ರಕರಣ**

ಸೊಂಡೂರಿನ ಪ್ರಮುಖ ನವಿಲು ಸ್ವಾಮಿ ದೇವಸ್ಥಾನದಲ್ಲಿ ಒಂದು ಘಟನೆ ನಡೆಯಿತು. ಅಕ್ಟೋಬರ್ ೨೧.೧೯೫೯ರಲ್ಲಿ ದೇವರ ವಿಗ್ರಹವನ್ನು ಒಡೆದು ಹಾಕಿದರು. ಈ ದೇವಾಲಯ ಮಾಜಿ ದೊರೆಗಳ ಟ್ರಸ್ಟಿಗೆ ಒಳಪಟ್ಟಿದ್ದರಿಂದ ತಮ್ಮ ವಿರೋಧಿಗಳೇ ಇದನ್ನು ಮಾಡಿದ್ದರೆಂದು ಊಹಿಸಿ ಮೊಕದ್ದಮೆ ಹಾಕಿದರು. ಮೊಕದ್ದಮೆಯಲ್ಲಿ ಇದ್ದವರೆಂದರೆ ಎಚ್.ಎಂ. ಗುರುಶಾಂತಯ್ಯ, ಎಲಿಗಾರ ತಿಮ್ಮಪ್ಪ, ಓಂಕಾರಪ್ಪ, ಸುಬ್ಬಣ್ಣ, ಜಿಗಿನಿಹಳ್ಳಿ ಬಸವನಗೌಡ, ಭೂಪತಿ, ತ್ರಿಯಂಬಕ ಭಟ್ಟ ಮುಂತಾದ ಹನ್ನೊಂದು ಜನರಿದ್ದರು. ಇದು ಮಾಜಿ ದೊರೆಗಳ ಪೂರ್ವನಿಯೋಜಿತ ಕಾರ್ಯ ಎಂದು ನಂತರ ತಿಳಿಯಿತು. ಈ ಪ್ರಕರಣಕ್ಕೆ ಕಾರಣ ಹೀಗಿತ್ತು. ನವಿಲು ಸ್ವಾಮಿ ದೇವಸ್ಥಾನದ ಬಳಿ ಬೆಲೆಬಾಳುವ ಲೋಹದ ಅದಿರು ಯಥೇಚ್ಚವಾಗಿತ್ತು. ಇಲ್ಲಿ ಗಣಿಯನ್ನು ನಡೆಸಲು ಗೊಗ್ಗ ಮರಿಸ್ವಾಮಿ ಎಂಬುವವರು ಸರ್ಕಾರದಿಂದ ಲೈಸೆನ್ಸ್ ಪಡೆದಿದ್ದರು. ಆದರೆ ಮಾಜಿ ರಾಜರು ಇಲ್ಲಿ ಗಣಿಯನ್ನು ಉಪಯೋಗಿಸದಂತೆ ತಡೆಯಾಜ್ಞೆ ತಂದರು. ಇದರಿಂದಾಗಿ ಮರಿಸ್ವಾಮಿಯವರು ಈ ಸೇಡು ತೀರಿಸಿಕೊಳ್ಳಲು ನವಿಲುಸ್ವಾಮಿ ದೇವಾಲಯಕ್ಕೆ ಸಂಬಂಧಿಸಿದ ಸಾಮಾನುಗಳನ್ನು ಕಳವು ಮಾಡಿ ವಿಗ್ರಹವನ್ನು ನಾಶ ಮಾಡಿದರು ಎಂದು ಆರೋಪಿಸಲಾಗಿತ್ತು. ಕೂಡ್ಲಿಗಿಯ ಸರ್ಕಲ್ ಇನ್ಸ್‌ಪೆಕ್ಟರ್ ಈ ಬಗ್ಗೆ ತಪಾಸಣೆ ನಡೆಸಿ ಖಟ್ಲೆ ಹಾಕಿದ್ದರು.

ಕೋರ್ಟಿನಲ್ಲಿ ಈ ಸಂಬಂಧಿ ವಿಚಾರಣೆ ನಡೆದಾಗ ಒಂದು ಸೋಜಿಗದ ಸಂಗತಿ ನಡೆಯಿತು. ಆರೋಪಿಗಳಲ್ಲೊಬ್ಬರಾದ ತ್ರಿಯಂಬಕ ಭಟ್ಟ ಎಂಬುವವರು ತಮ್ಮ ಆರೋಪವನ್ನು ಒಪ್ಪಿಕೊಂಡರು. ಹೀಗಾಗಿ ಅವರಿಗೆ ಮೂರು ತಿಂಗಳ ಶಿಕ್ಷೆ ವಿಧಿಸಲಾಯಿತು. ಈ ಕೇಸನ್ನು ಪ್ರತ್ಯೇಕಿಸಿ ಉಳಿದ ಆರೋಪಿಗಳ ಪರವಾಗಿ ನಾಲ್ಕುಜನ ಸಾಕ್ಷಿ ನುಡಿದರು. ಅಂತಿಮವಾಗಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಾದ ಎಲ್. ಕುಮಾರಸ್ವಾಮಿ ಇವರು ಏಪ್ರಿಲ್ ೧೧.೧೯೫೪ರಂದು ತೀರ್ಪು ನೀಡಿದರು. ಸೊಂಡೂರಿನ ಪ್ರಮುಖ ವರ್ತಕರು ಗಣಿ ಮಾಲಿಕರು ಆದ ಗೊಗ್ಗ ಮರಿಸ್ವಾಮಯ್ಯನವರನ್ನು ಒಳಗೊಂಡು ೧೧ ಜನ ಆರೋಪಿಗಳನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಿದರು. ಈ ತೀರ್ಮಾನದ ಮೇಲೆ ಮೈಸೂರು ಸರಕಾರ ಹೈಕೋರ್ಟಿನಲ್ಲಿ ತಕರಾರು ಹೂಡಿತು. ಅಲ್ಲಿಯೂ ಸಹ ನ್ಯಾಯ ಪೀಠವು ಹೊಸಪೇಟೆಯ ಮ್ಯಾಜಿಸ್ಟ್ರೇಟ್ ಕೋರ್ಟಿನ ತೀರ್ಮಾನವನ್ನೇ ಎತ್ತಿಹಿಡಿಯಿತು.

ಈ ತೀರ್ಪಿನಿಂದ ಮಹಾರಾಜರು ವಿಚಲಿತರಾದರು. ನ್ಯಾಯದೆದುರು ದೊರೆ ಪ್ರಜೆ ಎಲ್ಲರೂ ಸಮಾನರು ಎನ್ನುವುದನ್ನು ಈ ತೀರ್ಪು ಬೆಂಬಲಿಸಿತು. ಮಾಜಿ ದೊರೆಗಳ ಅಧಿಕಾರದ ದುರುಪಯೋಗವನ್ನು ಪ್ರಶ್ನಿಸುತ್ತಾ ಬಂದವರು ಇದನ್ನು ಸಂಭ್ರಮಿಸಿದರು. ಈ ತೀರ್ಪಿನ ಒಂದು ಹೀಗಿದೆ.

*ನವಿಲುಸ್ವಾಮಿ ಮೂರ್ತಿ ಭಂಜನೆ ಅಪವಿತ್ರ ಕಾರ್ಯದ ಹಿಂದೆ ಯಾರದೋ ಕೈವಾಡವಿದೆ. ಮೊದಲನೆಯ ಆಪಾದಿತನಾಗಲಿ, ಉಳಿದ ಆಪಾದಿತರಾಗಲಿ ಅಲ್ಲ. ಆಪಾದಕರು ಈ ನಿಷ್ಕಳಂಕಿತರ ಮೇಲೆ ತಪ್ಪು ಹೊರಿಸಲು ಪ್ರಯತ್ನ ಮಾಡಿದ್ದಾರೆ. ಮಾಜಿ ಸೊಂಡೂರು ರಾಜರು ಕುಮಾರಸ್ವಾಮಿ ಮತ್ತು ನವಿಲು ಸ್ವಾಮಿ ದೇವಾಲಯಗಳ ಪಾರಂಪರ್ಯ ಹಕ್ಕಿನ ಧರ್ಮದರ್ಶಿಗಳೆಂದು ಸ್ಥಾಪಿಸಿರುವ ಸರಕಾರದ ಆಜ್ಞೆಯನ್ನು ನ್ಯಾಯಸ್ಥಾನದ ಮುಂದಿಟ್ಟಿಲ್ಲ. ಆದ ಕಾರಣ ಸೊಂಡೂರು ರಾಜರು ಈ ದೇವಾಲಯಗಳ ಧರ್ಮದರ್ಶಿಗಳೆಂದು ಹೇಳುವುದು ಸಂದೇಹಾಸ್ಪದವಾಗಿದೆ. ೯ನೇ ಆಪಾದಿತನಿಗೆ ಜಮೀನೊಂದರಲ್ಲಿ ಗಣಿ ಲೈಸನ್ಸ್ ಕೊಡಲಾಗಿದೆ. ಆ ಜಮೀನು ನವಿಲು ಸ್ವಾಮಿ ದೇವಾಲಯಕ್ಕೆ ಸೇರಿದ್ದೆಂದು ತೋರಿಸಲು ಯಾವ ಆಧಾರವೂ ಇಲ್ಲ. ಆಪಾದಕರ ವಾದ ಸರಣಿಯು ಕತೆಯ ವ್ಯಾಧಿಗೊಳಗಾಗಿದೆ. ನ್ಯಾಯಸ್ಥಾನದ ಮುಂದಿರುವ ಸಾಕ್ಷ್ಯ ಸಾಹಿತ್ಯ ಇದನ್ನು ಸ್ಥಾಪಿಸುತ್ತದೆ. ಈ ಮೊಕದ್ದಮೆಯಲ್ಲಿ ಆಪಾದಕರ ನಡತೆ ಅತೃಪ್ತಿಕರವಾದದ್ದೆಂದು ನಾನು ಹೇಳದೆ ವಿಧಿ ಇಲ್ಲ. ಅಷ್ಟೇ ಅಲ್ಲ ಆಪಾದಕರು ಪಕ್ಷಪಾತಪೂರಿಗಳಾಗಿದ್ದರೆಂದು ನನ್ನ ಅಭಿಪ್ರಾಯ. ಈ ಆಪಾದಕರು ಮೊಕದ್ದಮೆಯನ್ನು ನಡೆಸಿರುವ ವಿಚಾರಣೆ ನೋಡಿದರೆ ಇವರು ನಾಟಕ ಮಾಡಿದ್ದಾರೆಂಬ ಭಾವನೆ ನನ್ನ ಮನಸ್ಸಿನ ಮೇಲೆ ಮೂಡುತ್ತದೆ. ಆಪಾದಕರ ಮೇಲೆ ತಪ್ಪು ಹೊರಿಸಬೇಕೆಂಬ ಉದ್ದೇಶದಿಂದ ಆಪಾದಿತರು ಕೆಲವು ರಿಜಿಸ್ಟಾರ್ ಗಳಲ್ಲಿ ತಿದ್ದುಪಡಿಗಳನ್ನು ಮಾಡಿದ್ದಾರೆ. ತಮ್ಮ ಉದ್ದೇಶ ಸಾಧನೆಗಾಗಿ ಕೆಲವರ ಹೆಸರುಗಳನ್ನು ಸೇರಿಸಿದ್ದಾರೆಂದು ನನಗೆ ಖಚಿತವಾಗಿದೆ.*

ಈ ತೀರ್ಪನ್ನು ಗಮನಿಸಿದರೆ ಕೆಲವು ಅಂಶಗಳು ತಿಳಿಯುತ್ತವೆ. ಗಣಿಗಾರಿಕೆ ತುಂಬಾ ಲಾಭದಾಯಕ ಎನ್ನುವುದು ಮಾಜಿ ದೊರೆಗಳಿಗೆ ತಿಳಿದಿತ್ತು. ಅದೇ ಹೊತ್ತಿನಲ್ಲಿ ಗಣಿಗಾರಿಕೆಯನ್ನು ಬೇರೆಯವರು ಮಾಡುವುದನ್ನು ನಿಯಂತ್ರಿಸಲಾಯಿತು. ಗಣಿಗಾರಿಕೆ ದೊರೆಗಳ ಏಕಸ್ವಾಮ್ಯ ಎನ್ನುವ ಅರ್ಥದಲ್ಲಿ ಅದರ ಮೇಲಿನ ಹಿಡಿತ ಸಾಧಿಸಲು ಪ್ರಯತ್ನಿಸಿದರು. ಪ್ರಜೆಗಳು ಯಾರಾದರೂ ಗಣಿಗಾರಿಕೆಯ ಲೈಸೆನ್ಸ್ ಪಡೆಯಲು ಯತ್ನಿಸಿದರೆ ದೊರೆಗಳು ವ್ಯವಸ್ಥಿತವಾಗಿ ಇದನ್ನು ತಪ್ಪಿಸುತ್ತಿದ್ದರು. ಅವರಿಗೆ ಗೊತ್ತಿತ್ತು. ಗಣಿಗಾರಿಕೆಯನ್ನು ಬೇರೆ ಯಾರೇ ಮಾಡಲಿ ಅವರು ನಮಗೆ ಎದುರಾಳಿಯಾಗಿ ನಿಲ್ಲಬಲ್ಲರೆಂದು. ಗೊಗ್ಗ ಮರಿಸ್ವಾಮಿಯವರು ಪ್ರಬಲ ವರ್ತಕರಾಗಿದ್ದರು. ಹಾಗಾಗಿಯೇ ದೊರೆಗಳ ಪ್ರಾಬಲ್ಯವನ್ನು ಕುಗ್ಗಿಸಲಿಕ್ಕಾಗಿಯೇ ಈ ವಿಗ್ರಹಭಂಜನೆ ಪ್ರಕರಣ ನಡೆಯಿತು. ರಾಜಮನೆತನದ ವಿರುದ್ಧ ಪ್ರತಿಭಟಿಸುತ್ತಿದ್ದವರನ್ನೆಲ್ಲಾ ಈ ಮೊಕದ್ದಮೆಯಲ್ಲಿ ಸೇರಿಸಲಾಯಿತು. ಒಂದು ವೇಳೆ ನ್ಯಾಯಾಲಯದ ತೀರ್ಪು ದೊರೆಗಳ ಪರವಾಗಿದ್ದರೆ ಇವರಿಗೆಲ್ಲ ಜೈಲು ಶಿಕ್ಷೆ ಆಗುತ್ತಿತ್ತು, ಈ ಘಟನೆಯಿಂದಾಗಿ ಮತ್ತಾರು ರಾಜಮನೆತನದ ವಿರುದ್ಧ ತಲೆ ಎತ್ತಲಾರರು ಎನ್ನುವುದು ದೊರೆಗಳ ಲೆಕ್ಕಚಾರ. ಈ ಲೆಕ್ಕಚಾರವನ್ನೇ ನ್ಯಾಯಾಲಯ ಬಯಲುಗೊಳಿಸಿದ್ದು ಚಾರಿತ್ರಿಕವಾಗಿ ಪ್ರಮುಖ ಅಂಶ.

ಮಾಜಿ ದೊರೆಗಳ ವಿರೋಧಕ್ಕೆ ಹಲವು ಕಾರಣಗಳಿದ್ದವು. ದೊರೆಗಳು ಕುಮಾರಸ್ವಾಮಿ ದೇವಸ್ಥಾನದ ವಂಶಾನುಗತಿ ಟ್ರಸ್ಟಿ ಅಲ್ಲ ಎನ್ನುವುದು ಒಂದು. ಸಂಸ್ಥಾನದ ಕಾನೂನುಗಳ ಮೂಲಕ ತಾವೇ ವಂಶಾನುಗತ ಟ್ರಸ್ಟಿ ಎಂದು ಕರೆದುಕೊಂಡು ದೇವಸ್ಥಾನದ ಸಂಪತ್ತುಗಳನ್ನು ಅನುಭವಿಸುತ್ತಿದ್ದಾರೆ. ಈ ಬಗ್ಗೆ 'ಪರಿಶೀಲನೆ ನಡೆಯಬೇಕು ಎಂದು ಕೆಲವರು ಸರ್ಕಾರದ ಗಮನಕ್ಕೆ ತಂದಿದ್ದರು. ಆದರೆ ಮೂಲ ಟ್ರಸ್ಟಿ ಯಾರು ಎನ್ನುವ ಬಗ್ಗೆ ಖಚಿತ ಮಾಹಿತಿ ಇರಲಿಲ್ಲ. ಸಾರ್ವಜನಿಕವಾದ' ಕುಮಾರಸ್ವಾಮಿ ದೇವಾಲಯ ದೊರೆಗಳ ಟ್ರಸ್ಟಿಗೆ ಹೇಗೆ ಸೇರುತ್ತದೆ ಎನ್ನುವುದು ರಾಜಮನೆತನವನ್ನು ವಿರೋಧಿಸುವವರ ವಾದ ಸರಣಿಯಾಗಿತ್ತು. ಯಜಮಾನ ಶಾಂತರುದ್ರಪ್ಪನವರು ಮಾರ್ಚ್ ೧೪.೧೯೭೦ರಲ್ಲಿ ಕರಪತ್ರ ಪ್ರಕಟಿಸಿ ವಂಶಾನುಗತ ಟ್ರಸ್ಟಿ ಯಾರು ಎಂಬುದನ್ನು ಖಚಿತ ಪಡಿಸಿದರು. ಅದು ಹೀಗಿತ್ತು.

*ಸೊಂಡೂರು ಮಾಜಿ ದೊರೆ ಶ್ರೀ ಕುಮಾರಸ್ವಾಮಿ ದೇವಾಲಯದ ವಂಶ ಪಾರಂಪರ್ಯ ಧರ್ಮಕರ್ತರಲ್ಲ ಎಂಬುದಕ್ಕೆ ದಾಖಲೆಗಳು ಈಗ ದೊರೆತಿವೆ. ಚಿಕ್ಕ ಸೊಂಡೂರಿನ (ಈಗಿನ ಲಕ್ಷ್ಮೀಪುರ) ದಿವಂಗತ ಮುದಕನಗೌಡರು ಎಂಬ ಓರ್ವ ವ್ಯಕ್ತಿಯು ೧೮೪೪ರಲ್ಲಿ ಕುಮಾರಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾಗಿದ್ದರು. ೧೯೮೪ರಲ್ಲಿ ಸೊಂಡೂರಿನ ಬ್ರಿಟೀಷ್ ಸರಕಾರದ ಏಜೆಂಟರಾಗಿದ್ದ ಜೆ.ಮೆಕಾರ್ಥೆ ಎನ್ನುವವರು ತಾ. ೧೮ ಡಿಸೆಂಬರ್ ನಲ್ಲಿ ನೀಡಿರುವ ರಸೀದಿ ಇದೆ. ಇದರ ಪ್ರಕಾರ ಮುದುಕನಗೌಡರೇ ಕುಮಾರಸ್ವಾಮಿ ದೇವಸ್ಥಾನದ ಭೂಮಿಗಳ ಕಂದಾಯ ವನ್ನು ವಸೂಲಿ ಮಾಡಿ, ದೇವಸ್ಥಾನದ ಧರ್ಮಕರ್ತರೆಂದು ಭೂಮಿ ಸಾಗುವಳಿದಾರರಿಗೆ ರಸೀದಿ ಕೊಟ್ಟಿದ್ದಾರೆ. ೧೮೪೪ರಲ್ಲಿ ಕೊಟ್ಟ ರಸೀದಿಗ ಳು ಈಗಲೂ ಕೆಲವರಲ್ಲಿ ಇವೆ. ಅವುಗಳು ಸುಳ್ಳೆಂದು ಹೇಳಲು ಯಾವ ಆಧಾರವೂ ಇಲ್ಲ.*

ಹೀಗೆ ಕರಪತ್ರ ಪ್ರಕಟಿಸಿದ ಯಜಮಾನ ಶಾಂತರುದ್ರಪ್ಪನವರು ಮಾಜಿ ದೊರೆಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ಮುದುಕನ ಗೌಡರು ಮೂಲ ಟ್ರಸ್ಟಿಯಾಗಿರುವಾಗ ಮಾಜಿ ದೊರೆಗಳು ವಂಶಪಾರಂಪರ್ಯ ಧರ್ಮಕರ್ತರು ಹೇಗಾದರು? ಈ ಮಾಜಿ ದೊರೆ ವಂಶಪಾರಂಪರ್ಯ, ಧರ್ಮಕರ್ತನೆಂಬುದು ನಿಜವಾದರೆ ಈ ದೊರೆ ಮುದುಕನಗೌಡರ ವಂಶದಲ್ಲಿ ಹುಟ್ಟಿರಬೇಕು. ಹಾಗಿದ್ದರೆ ಇವರು ದೊರೆಗಳು ಹೇಗಾದರು? ಇಲ್ಲದೆ ಇದ್ದರೆ ೧೮೪೪ರಲ್ಲಿ ಕೊಟ್ಟ ರಸೀದಿಗಳು ಮೆಕಾರ್ಥೆಯವರ ಅಧಿಕಾರ ಇವೆಲ್ಲ ಸುಳ್ಳಾಗಬೇಕಾಗುತ್ತದೆ. ಇವುಗಳಲ್ಲಿ ಯಾವುದು ಸತ್ಯ ಎಂದು ರಾಜವಂಶವನ್ನು ಗೇಲಿಮಾಡಿದರು. ಸೊಂಡೂರಿನ ಬಹುತೇಕರಿಗೆ ಈ ವಿಷಯ ಗೊತ್ತಿತ್ತು. ಆದರೆ ಯಜಮಾನರಂತೆ ಪುರಾವೆಗಳನ್ನು ಒದಗಿಸಿ ರಾಜರೊಂದಿಗೆ ನೇರ ಜಗಳಕ್ಕೆ ಇಳಿಯುವುದು ಅಸಾಧ್ಯವಾಗಿತ್ತು. ಆದರೆ ಮಾಜಿ ದೊರೆಗಳು ಯಜಮಾನರ ಯಾವ ಪ್ರಶ್ನೆಗಳಿಗೂ ಉತ್ತರಿಸಲಿಕ್ಕೆ ಹೋಗಲಿಲ್ಲ. ಆದರೆ ಯಜಮಾನರನ್ನು ಶಕ್ತಿ ಗುಂದಿಸುವ ಸಮಯಕ್ಕಾಗಿ ಕಾಯುತ್ತಿದ್ದರು. ಸೊಂಡೂರಿನ ರಾಜಮನೆತನದ ವಿರುದ್ಧ ಇಂತಹ ಸಣ್ಣ ಸಣ್ಣ ಸಂಘರ್ಷಗಳು ನಡೆಯುತ್ತಲೇ ಇದ್ದವು. ಮಾಜಿ ರಾಜರು ಅಧಿಖಾರ ಮತ್ತು ಸರಕಾರದ ಜೊತೆ ಇದ್ದದರಿಂದ ಇವುಗಳಿಗೆ ಸಿಗಬೇಕಾದ ತೀವ್ರ ಪರಿಣಾಮ ದೊರೆಯುತ್ತಿರಲಿಲ್ಲ.

**ಸುಶೀಲ ರಾಜೆಯವರ ಭೇಟಿ**

ಮಾಜಿ ದೊರೆ ಯಶವಂತರಾವ್ ಘೋರ್ಪಡೆ ಜೂನ್ ೨೦.೧೯೨೮ರಂದು ಸೊಂಡೂರು ರಾಜರಾಗಿ ನೇಮಕಗೊಂಡರು. ಅಲ್ಲಿನ ಜನರಿಗೆ ಯಶವಂತರಾವ್ ಮೂಲ ರಾಜವಂಶಜರಲ್ಲ ಎಂದು ತಿಳಿದಿತ್ತು. ಬ್ರಿಟಿಷ್ ರೆಸಿಡೆಂಟರೊಂದಿಗಿನ ಒಪ್ಪಂದ ಗುಪ್ತವಾಗಿ ನಡೆದು ರಾಜಗದ್ದುಗೆ ಏರಿದ್ದರು. ಈ ಕಾರಣದಿಂದ ಸೊಂಡೂರು ಜನರಲ್ಲಿ ಯಶವಂತರಾವ್ ನಿಜವಾದ ವಾರಸುದಾರರಲ್ಲ ಎನ್ನುವ ಬಗೆಗೆ ಅಸಮಾಧಾನವಿತ್ತು. ರಾಜರ ವಿರುದ್ಧ ಎತ್ತುತ್ತಿದ್ದ ಪ್ರಶ್ನೆಗಳಲ್ಲಿ ವಾರಸು ದಾರಿಕೆಯ ಪ್ರಶ್ನೆಯೂ ಒಂದು. ಈ ಹಿಂದನ ರಾಜಮನೆತನದ ಕೊನೆಯ ವಾರಸುದಾರರಾದ ವೆಂಕಟರಾವ್ ರಾವ್ ಸಾಹೇಬರು ಜುಲೈ ೨೮.೧೯೨೭ರಲ್ಲಿ ನಿಧನರಾದರು. ಅವರಿಗೆ ಒಬ್ಬಳೆ ಮಗಳಿದ್ದಳು. ಆಕೆಯೇ ಸುಶೀಲ ರಾಜೆ ಅಲಿಯಾಸ್ ಶ್ರೀಮತಿ ಅಕ್ಕಾ ಸಾಹೇಬ. ರಾವ್‌ಸಾಹೇಬ ನಿಧನ ಹೊಂದಿದಾಗ ರಾಜಕುಮಾರಿ ಸುಶೀಲ ರಾಜೆ ಮೈನರ್ ಹುಡುಗಿಯಾಗಿದ್ದಳು. ಆಕೆ ವಾಸ್ತವದಲ್ಲಿ ಸಂಸ್ಥಾನದ ರಾಣಿಯಾಗಬೇಕಿತ್ತು. ೧೪ನೇ ವಯಸ್ಸಿನಲ್ಲಿಯೇ ತಮ್ಮ ತಂದೆ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದಳು. ಯಶವಂತರಾವ್ ಘೋರ್ಪಡೆಯವರು ಸೊಂಡೂರು ಸಂಸ್ಥಾನದ ದೊರೆಯಾದ ನಂತರ ರಾಜ್ಯದ

ವಾರಸುದಾರಿಕೆಯನ್ನು ಕಳೆದುಕೊಂಡು ಒಬ್ಬ ಸಾಮಾನ್ಯ ಸ್ತ್ರೀಯಂತೆ ಮದ್ರಾಸಿನ ಆಸ್ಪತ್ರೆಯೊಂದರಲ್ಲಿ ದಾದಿಯಾಗಿ ಉಪಜೀವನ ನಡೆಸುತ್ತಿದ್ದಳು.

ಸುಶೀಲ ರಾಜೆ ತಾನು ೧೪ ವರ್ಷದವಳಿದ್ದಾಗ ಸೊಂಡೂರು ಬಿಟ್ಟು ಹೋದವಳು. ಮತ್ತೆ ನವಂಬರ್ ೨೫.೧೯೬೨ರಲ್ಲಿ ಮರಳಿದಳು. ಬರುವ ಮೊದಲೇ ಸೊಂಡೂರು ತಾಲೂಕಿನಾದ್ಯಂತ ಸುಶೀಲ ರಾಜೆಯ ಪರಿಚಯ ಮಾಡುವ ಪ್ರಚಾರ ಕೈಗೊಂಡರು. ನಿಜವಾದ ವಾರಸುದಾರಳು ಸೊಂಡೂರಿಗೆ ಬರುತ್ತಿದ್ದಾಳೆಂದು ಜನರು ಭಾವನಾತ್ಮಕವಾಗಿ ಸ್ವಾಗತ ಕೋರಲು ಉತ್ಸುಕರಾದರು. ಎಲಿಗಾರ ತಿಮ್ಮಪ್ಪ, ಯಜಮಾನ ಶಾಂತರುದ್ರಪ್ಪ ಮುಂತಾದವರು ಈಗಿರುವ ರಾಜಗಾದಿಯನ್ನು ರಾಜಕುಮಾರಿಗೆ ಕೊಡಿಸಬೇಕೆಂದೂ 'ನ್ಯಾಯವಾಗಿ ಈಗ ದೊರೆಯುತ್ತಿರುವ ರಾಜಧನ ಇವರಿಗೆ ದೊರೆಯಬೇಕೆಂದೂ' ತಮ್ಮ ರಾಜವಂಶದ ವಿರುದ್ಧದ ಹೋರಾಟಕ್ಕೆ ಹೊಸ ತಿರುವು ಪಡೆಯತೊಡಗಿದರು. ಲಕ್ಷ್ಮೀಪುರದ ನಾಗಪ್ಪ ಈ ಸಂದರ್ಭವನ್ನು ನೆನಪಿಸಿಕೊಳ್ಳುತ್ತಾ, 'ಲೇಟ್‌ಮಹಾರಾಜರ ಮಗಳು ಬರ್ತಾಳಂತೆ ಹಳ್ಳಿಗಳಿಂದ ಜನ ಬಂದಿದ್ರು ಹೆಣ್ಣು ಮಕ್ಕಳಂತು ಬಾರಿ ನೆರಿದಿದ್ರು. ನಮ್ಮ ಮಹಾರಾಣಿ ಆಗ್ಬೇಕಾದವ್ರು ನರ್ಸ್ ಆಗ್ಯಾರಲ್ಲ ಅಂತ ಕೆಲವ್ರು ಕಣ್ಣೀರು ಹಾಕಿದ್ರು, ಎನ್ನುತ್ತಾರೆ.

ಸುಶೀಲ ರಾಜೆ ಆಗ ಕರ್ನಾಟಕದ ಬ್ಲಡ್‌ಬ್ಯಾಂಕಿನ ಶಾಖಾಧ್ಯಕ್ಷೆ ಆಗಿದ್ದರು. ರಾಜ್ಯ ಅರಣ್ಯ ಸಚಿವ ರಾಚಯ್ಯನವರ ಜೊತೆ ಸೊಂಡೂರಿಗೆ ಬಂದರು. ಜನತೆ ತುಂಬಾ ತನ್ಮಯರಾಗಿ ಆಕೆಗೆ ಸ್ವಾಗತವನ್ನು ಕೋರಿದರು. ಪಾಟೀಲ ಪುಟ್ಟಪ್ಪನವರು ತಮ್ಮ 'ಪ್ರಪಂಚ' ಪತ್ರಿಕೆಯಲ್ಲಿ ಹೀಗೆ ಬರೆದರು ''ಸೊಂಡೂರಿನ ಜನತೆ ತಮ್ಮನ್ನು ಹೆತ್ತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದ ಸ್ವರ್ಗೀಯ ದೊರೆ ವೆಂಕಟರಾವ್ ಅವರ ಪುತ್ರಿ ಸುಶೀಲ ರಾಜೆ ಇವರನ್ನು ಮೊದಲ ಬಾರಿಗೆ ನೋಡುತ್ತಿದ್ದು, ತಮ್ಮ ನೆಚ್ಚಿನ ಸಹೋದರಿಯಂತಿರುವ ಅಕ್ಕಾ ಸಾಹೇಬರಿಗೆ ಭವ್ಯ ಸ್ವಾಗತವನ್ನು ಹೃತ್ಪೂರ್ವಕವಾಗಿ ನೀಡಿದರು. ಬಹುದಿನದ ನಂತರ ಬಂದ ತಮ್ಮ ಅಕ್ಕಾ ಸಾಹೇಬರ ಪಾದಕ್ಕೆ ವಂದಿಸಿ ನಮಸ್ಕರಿಸುತ್ತಿದ್ದ ಸಹೋದರಿಯರನ್ನು ಹಿಡಿದೆತ್ತಿ ಆಲಂಗಿಸಿಕೊಂಡು ರಾಷ್ಟ್ರರಕ್ಷಣೆಗಾಗಿ ಮುಂದಾಗಿ ನಿಮ್ಮ ಸೇವೆ ನೀಡಿ ಎಂದು ಕೇಳಿಕೊಳ್ಳುತ್ತಿದ್ದ ಆ ದೃಶ್ಯ ಕಂಡ ಕಣ್ಣು ಧನ್ಯ. ಈ ದೃಶ್ಯವನ್ನು ನೋಡುತ್ತಿದ್ದರೆ, ರಾಷ್ಟ್ರರಕ್ಷಣೆಗೆಂದು ಧರೆಗಿಳಿದು ಬಂದ ದೇವತೆಯೇ ಎಂಬಂತೆ ನೋಡಿದವರ ಹೃದಯ ಮನಸ್ಸಿನಲ್ಲಿ ಸಂತೋಷ ಉಕ್ಕಿ ಹರಿಯುತ್ತಿತ್ತು. ಕಣ್ಣಲ್ಲಿ ಆನಮದ ಬಾಷ್ಪ ಮೂಡಿ ಬಂದವು.''

ಸುಶೀಲ ರಾಜೆಯವರು ಛತ್ರಿಭಾಗ್‌ದಲ್ಲಿರುವ ತಮ್ಮ ತಂದೆಯ ಸಮಾಧಿಗೆ ಭಕ್ತಿಪೂರ್ವಕ ಗೌರವ ಸಲ್ಲಿಸಿ ನಂತರ ಕೃಷ್ಣನಗರಕ್ಕೆ ತೆರಳಿ ಜನತೆಯನ್ನುದ್ದೇಶಿಸಿ ಮಾತನಾಡಿದರು. ಬ್ಲಡ್‌ಬ್ಯಾಂಕಿಗೆ ಜನರು ರಕ್ತವನ್ನು ಕಾಣಿಕೆಯಾಗಿ ನೀಡಬೇಕೆಂದು ಕರೆಯಿತ್ತರು. ಹಾಗೆ ರಕ್ತದಾನ ಮಡ ಬಯಸುವವರು ಅಲ್ಲಂ ಕರಿಬಸಪ್ಪ ಎಂ.ಎಲ್.ಎ ಅವರಲ್ಲಿ ತಮ್ಮ ಹೆಸರು ಕೊಡಬೇಕೆಂದು ತಿಳಿಸಿದರು. ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಊದಿದ ಕಿತ್ತೂರ ರಾಣಿ ಚನ್ನಮ್ಮನ ನಾಡಿನವರಾದ ನಾವು ಹಿಂದೆ ಬೀಳದೆ ವೀರಾವೇಶದಿಂದ ಯಾವುದೇ ಸಂದರ್ಭವನ್ನು ಎದುರಿಸಬಲ್ಲೆವು. ದೇಶಕ್ಕಾಗಿ ಸೇವೆ ಸಲ್ಲಿಸಬೇಕೆಂದು ವಿಜಯನಗರದ ವೀರಭೂಮಿಯ ನಿವಾಸಿಗಳಾದ ನಿಮಗೆ ಸಂದೇಶ ಕೊಡುತ್ತೇನೆಂದು ಜನತೆಗೆ ಮನವಿ ಮಾಡಿದರು.

ಯಶವಂತರಾವ್ ಘೋರ್ಪಡೆಯವರಿಗೆ ಸುಶೀಲ ರಾಜೆ ಬರುತ್ತಿರುವ ವಿಷಯ ತಿಳಿದು ಸಂಸಾರ ಸಮೇತ ಪ್ರವಾಸ ಕೈಗೊಂಡಿದ್ದರು. ರಾಜೆಯವರು ಜನರಲ್ಲಿ ತಮ್ಮ ರಾಜ್ಯದ ಅಧಿಕಾರದ ಬಗೆಗೆ ಯಾವ ಪ್ರಸ್ತಾಪವನ್ನು ಮಾಡಲಿಲ್ಲ. ತಾನು ಸಾಮಾನ್ಯ ಪ್ರಜೆ ಎಂಬ ಭಾವದಲ್ಲಿಯೇ ಜನರನ್ನು ಕುರಿತು ಮಾತನಾಡಿದರೇ ಹೊರತು ತಾನು ರಾಜಕುಮಾರಿ ಎಂಬ ಅರ್ಥದಲ್ಲಿ ಅಲ್ಲ. ಯಾವುದೋ ಸಂದರ್ಭದಲ್ಲಿ ಕೈತಪ್ಪಿ ಹೋದ ರಾಜ್ಯದ ಅಧಿಕಾರವನ್ನು ಮತ್ತೆ ಮರಳಿ ಪಡೆಯಬೇಕೆಂಬ ಯಾವ ಹಂಬಲವನ್ನು ಅವರು ತಮ್ಮ ಭೇಟಿಯಲ್ಲಿ ತೋರಲಿಲ್ಲ. ರಾಜಶಾಹಿಯನ್ನು ವಿರೋಧಿಸುತ್ತಾ ಬಂದವರೆಲ್ಲ ಈ ಭೇಟಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಆದರೆ ಅವರ ಭಾಗವಹಿಸುವಿಕೆಗೆ ಕಾರಣಗಳಿದ್ದವು. ರಾಜೆಯವರಿಗೆ ನೀವೇ ನಮ್ಮ ರಾಜಕುಮಾರಿ, ಈ ರಾಜ್ಯ ನ್ಯಾಯವಾಗಿಯೂ ನಿಮ್ಮದು, ಅದನ್ನು ಪಡೆಯಿರಿ ನಾವು ಬೆಂಬಲಿಸುತ್ತೇವೆ ಎಂದು ಮನವೊಲಿಸಲು ಪ್ರಯತ್ನಿಸಿದರು. ಈ ಪ್ರಯತ್ನಕ್ಕೆ ಅವರು ಒಪ್ಪಲಿಲ್ಲ. ನಾನು ಸಾಮಾನ್ಯ ನರ್ಸ್ ಆಗಿದ್ದುಕೊಂಡೆ

ಜನತೆಯ ಸೇವೆಯನ್ನು ಮಾಡುತ್ತಿದ್ದೇನೆ. ಅಧಿಕಾರ ಸಂಪತ್ತು ಯಾವುದೂ ಬೇಡ ಎನ್ನುವ ರಾಜಕುಮಾರಿಯ ನಿರ್ಲಿಪ್ತತೆ ಅವರ ಬಗೆಗೆ ಸೊಂಡೂರಿನ ಜನರಲ್ಲಿ ಗೌರವ ಅಭಿಮಾನವನ್ನು ಮೂಡಿಸಿತು.

ರಾಜೆಯವರ ಈ ಭೇಟಿಗೆ ಯಾವುದೇ ರಾಜಕೀಯ ಉದ್ದೇಶಗಳಿರಲಿಲ್ಲ. ಅವರು ಸಾಮಾನ್ಯ ನರ್ಸ್ ಎಂದರೂ ಕರ್ನಾಟಕದ ಬ್ಲಡ್‌ಬ್ಯಾಂಕಿನ ಶಾಖಾಧ್ಯಕ್ಷೆಯೂ ಆಗಿದ್ದರು. ಆಗಿನ ರಾಜ್ಯ ಸರ್ಕಾರದ ಅರಣ್ಯ ಸಚಿವ ರಾಚಯ್ಯನವರ ಜೊತೆ ಸೊಂಡೂರಿಗೆ ಸರ್ಕಾರಿ ಸವಲತ್ತುಗಳಲ್ಲಿಯೇ ಬಂದಿದ್ದರು. ಅಂದರೆ ಒಬ್ಬ ಮಂತ್ರಿಗಳು ಕರೆದುಕೊಂಡು ಬರುವಷ್ಟು ಪ್ರಭಾವಿಯಾಗಿದ್ದರು. ಈ ಪ್ರಭಾವಿತನವೇ ಅವರ ಈ ಭೇಟಿಯನ್ನು ಸಾಧ್ಯವಾಗಿಸಿತು. ಇಲ್ಲವೆಂದರೆ ಮಹಾರಾಜರೂ ಈ ಭೇಟಿಯನ್ನು ರದ್ದುಗೊಳಿಸುವ ಸಾಧ್ಯತೆಯಿತ್ತು. ಬಾಲ್ಯದಿಂದಲೇ ರಾಜ್ಯವನ್ನು ತೊರೆದದ್ದರಿಂದ ಅದರ ಸಂಪತ್ತಿನ ಮೋಹ ರಾಜೆಯವರಿಗೆ ಇಲ್ಲವಾಗಿತ್ತು. ಒಂದು ವೇಳೆ ಅವರು ಸೊಂಡೂರು ಸಂಸ್ಥಾನವನ್ನು ಮರಳಿ ಪಡೆಯುವ ಯತ್ನ ಮಾಡಿದ್ದರೆ ಅರಸು ಮನೆತನವನ್ನು ವಿರೋಧಿಸುತ್ತಿದ್ದವರ ಹೋರಾಟಕ್ಕೆ ಹೊಸ ಕಳೆ ಬರುತ್ತಿತ್ತು. ಮಹಾರಾಜರಿಗೆ ಇದನ್ನು ಎದುರಿಸುವುದು ಕಷ್ಟವಾಗುತ್ತಿತ್ತು. ಈ ಕಾರಣಕ್ಕಾಗಿಯೇ ಮಾಜಿ ಮಹಾರಾಜರನ್ನು ಬೆಂಬಲಿಸುತ್ತಿದ್ದ ಕಾಂಗ್ರೆಸ್, ಮಂತ್ರಿ ರಾಚಯ್ಯರವರನ್ನು ಕಳಿಸಿರಬಹುದೇ ಎಂಬ ಅನುಮಾನ ಬರುತ್ತದೆ. ಈ ಸಂದರ್ಭವನ್ನು ಮಾನವೀಯ ನೆಲೆಯಿಂದ ನೋಡುವುದಾದರೆ ಸೊಂಡೂರಿನ ಜನರು ತುಂಬಾ ಆತ್ಮೀಯವಾಗಿ ಭಾವನಾತ್ಮಕಾಗಿ ರಾಜೆಯವರನ್ನು ಆರಾಧನಾ ಭಾವದಿಂದ ಕಂಡರು. ರಾಣಿಯಾಗಿರಬೇಕಿದ್ದ ರಾಜಕುಮಾರಿ ನರ್ಸ್ ಆಗಬೇಕಾಯಿತು ಎಂದು ವಿಷಾದಿಸಿದರು. ಅವರ ಅರಮನೆ ಈಗ ಮತ್ತಾರದೋ ಒಡೆತನದಲ್ಲಿದೆ. ಸುಶೀಲ ರಾಜೆಯವರು ನತದೃಷ್ಟರು ಎಂದು ಅನುಕಂಪ ವ್ಯಕ್ತವಾಯಿತು. ಆದರೆ ರಾಜೆಯವರಿಗೆ ಸಂಪತ್ತನ್ನು ಕಳೆದುಕೊಂಡದ್ದಕ್ಕೆ ಸ್ವಲ್ಪವೂ ದುಃಖವಿರಲಿಲ್ಲ. ಜನರಿಗೆ ರಕ್ತದಾನ ಮಾಡಿ ಎಂದು ಕರೆಕೊಟ್ಟಿದ್ದು ಕೂಡ ಒಬ್ಬ ಸಾಮಾನ್ಯ ಸ್ತ್ರೀಯಂತೆ. ಈ ಭೇಟಿಯಿಂದ ಸೊಂಡೂರು ಜನತೆಗೆ ಈಗಿರುವ ಯಶವಂತರಾವ್ ಘೋರ್ಪಡೆಯವರು ಮೂಲ ರಾಜವಂಶಜರಲ್ಲ ಎನ್ನುವುದು ಮಾತ್ರ ಖಚಿತವಾಯಿತು. ಯಜಮಾನ ಶಾಂತರುದ್ರಪ್ಪ, ತಿಮ್ಮಪ್ಪ ಮೊದಲಾದವರು ತಮ್ಮ ಹೋರಾಟಕ್ಕೆ ರಾಜೆಯವರನ್ನು ಶಕ್ತಿಯನ್ನಾಗಿಸಿಕೊಳ್ಳಬೇಕು ಎಂದುಕೊಂಡಿದ್ದರು. ಸುಶೀಲರಾಜೆ ಇದಕ್ಕೆ ಸ್ಪಂದಿಸದಿದ್ದ ಕಾರಣ ಈ ಭೇಟಿ ಅವರಿಗೆಲ್ಲಾ ನಿರಾಸೆಯಾಯಿತು. ಇದೇ ಹೊತ್ತಿಗೆ ಕಾಕತಾಳೀಯವೆಂಬಂತೆ ಮಧ್ಯಪ್ರದೇಶದ ಇಂದೋರ್‌ನ ಮಹಾರಾಣಿಯ ಆಯ್ಕೆಯಾಯಿತು. ಇಲ್ಲಿಯ ಅರಸು ಗದ್ದಿಗೆಗೆ ಯಶವಂತರಾವ್ ಹೋಳ್ಕರರ ಉತ್ತರಾಧಿಕಾರಿ, ಅವರ ಪುತ್ರಿ ರಾಜಕುಮಾರಿ ಉಷಾ ರಾಜೆಯವರನ್ನು ರಾಷ್ಟ್ರಪತಿಯವರು ಮಾನ್ಯ ಮಾಡಿದರು. “ಅವರನ್ನು ಇನ್ನುಮುಂದೆ ಇಂಧೋರಿನ ಮಹಾರಾಣಿ ಉಷಾದೇವಿಯವರೆಂದು ಕರೆಯಲಾಗುವುದು. ವರ್ಷಕ್ಕೆ ೫ ಲಕ್ಷ ರಾಜಧನ ನೀಡಲಾಗುವುದು. ಈ ಮಾನ್ಯತೆ ವಿಶೇಷ ಅಧಿನಿಯಮಕ್ಕೆ ಒಳಪಟ್ಟಿದ್ದು ಉಷಾರಾಜೆಯವರ ಜೀವಪರ್ಯಂತ ಮಾತ್ರ ಅನ್ವಯಸಿಸುವುದು” ಎಂಬುದಾಗಿ ಕೇಂದ್ರಗೃಹ ಮಂತ್ರಿ ಶಾಕೆ ಪ್ರಕಟಣೆ ಹೊರಡಿಸಿತು. ಈ ಪ್ರಕಟಣೆಯು ರಾಜಮನೆತನವನ್ನು ವಿರೋಧಿಸುತ್ತಿದ್ದವರನ್ನು ಪ್ರಭಾವಿಸಿತು. ಕಾರಣ ಸುಶೀಲ ರಾಜೆಗೂ ರಾಜಗಾದಿಯನ್ನು ಕೊಡಿಸಬೇಕೆಂದು ಆಲೋಚಿಸಿದರು. ಆದರೆ ಸುಶೀಲ ರಾಜೆಯವರು ಈ ವಿಷಯದಲ್ಲಿ ನಿರ್ಲಿಪ್ತರಾದರು.

**೧೯೭೭ರ ಸತ್ಯಾಗ್ರಹ**

ಈವರೆಗೂ ಪತ್ರಿಕೆಗಳಲ್ಲಿ ಯಶವಂತರಾವ್ ಘೋರ್ಪಡೆಯವರ ಆಡಳಿತ ಮತ್ತು ಸಂಪತ್ತಿನ ದುರುಪಯೋಗವನ್ನು ಬರೆಯುವ ಹಂತಕ್ಕೆ ಪ್ರತಿಭಟನೆ ಇತ್ತು. ಈ ಹಂತವೇ ೧೯೭೭ರ ಸತ್ಯಾಗ್ರಹಕ್ಕೆ ಕಾರಣವಾಯಿತು. ನವೆಂಬರ್ ೨೮.೧೯೭೭ರಂದು ನಡೆಯಲಿರುವ ಕುಮಾರಸ್ವಾಮಿ ಮಹಾಯಾತ್ರೆಯ ದಿನದಂದು ಸತ್ಯಾಗ್ರಹ ನಡೆಸಲು ನಿರ್ಧಾರವಾಯಿತು. ಸೊಂಡೂರು ವಿಮೋಚನಾ ಸಮರ ಸಮಿತಿಯ ಅಧ್ಯಕ್ಷರಾದ ಯಜಮಾನ ಶಾಂತರುದ್ರಪ್ಪ ಕರಪತ್ರ ಹೊರಡಿಸಿದರು. ಈ ಸತ್ಯಾಗ್ರಹಕ್ಕೆ ಮೂರು ಮುಖ್ಯ ಕಾರಣಗಳಿದ್ದವು. ಒಂದು: ಸರ್ಕಾರದಿಂದ ವಾರ್ಷಿಕ ೩೭ ಸಾವಿರ ಪಡೆದರೂ ಮೊದಲಿನಿಂದ ನಡೆಯುತ್ತಿದ್ದು ಅನ್ನ ಛತ್ರವನ್ನು ಮುಚ್ಚಲಾಗಿದೆ. ಎರಡು: ಕುಮಾರಸ್ವಾಮಿ ದೇವಸ್ಥಾನ ಸಾರ್ವಜನಿಕವಾದದ್ದು ಇದನ್ನು ರಾಜರು ತಮ್ಮ ಧರ್ಮದರ್ಶಿತ್ವಕ್ಕೆ ವಶಪಡಿಸಿಕೊಂಡು ದೇವಸ್ಥಾನದ ಹಣ ಆಸ್ತಿಯನ್ನು ಕೊಳ್ಳೆ

ಹೊಡೆಯುತ್ತಿದ್ದಾರೆ. ಮೂರು: ಸಾರ್ವಜನಿಕ ಝುಂಡಾ ಹಾರಿಸುವ ಪದ್ಧತಿಯನ್ನು ರಾಜರೇ ನೆರವೇರಿಸುತ್ತಿದ್ದಾರೆ. ಒಟ್ಟಾರೆ ಸತ್ಯಾಗ್ರಹದ ಉದ್ದೇಶ ಕುಮಾರಸ್ವಾಮಿ ದೇವಸ್ಥಾನದ ಹಕ್ಕಿಗಾಗಿ ವಿಮೋಚನಾ ಹೋರಾಟವಾಗಿತ್ತು.

ಈ ಸತ್ಯಾಗ್ರಹದ ಮುನ್ನವೇ ಸಾಕಷ್ಟು ಪ್ರಚಾರ, ಕರಪತ್ರ ಹಂಚಿಕೆ, ಪತ್ರಿಕಾ ಪ್ರಕಟಣೆ ನಡೆಯಿತು. ತೆಲುಗು ಭಾಷೆಯಲ್ಲಿ ಪ್ರಕಟವಾದ ಕರಪತ್ರಗಳು ಆಂಧ್ರದ ಕುಮಾರಸ್ವಾಮಿ ಭಕ್ತರಿಗೆ ಹಂಚಲಾಯಿತು. 'ಆಂದ್ರಪ್ರಭ' ತೆಲುಗು ಪತ್ರಿಕೆಯಲ್ಲಿಯೂ ಸತ್ಯಾಗ್ರಹದ ಸುದ್ದಿಯಾಯಿತು. ಮೊದಲ ಬಾರಿಗೆ ಶಾಂತರುದ್ರಪ್ಪನವರು ವೈಯಕ್ತಿಕ ಹೋರಾಟದ ಸೀಮಿತತೆಯನ್ನು ಮೀರಿ ಸಾಮೂಹಿಕ ಹೋರಾಟಕ್ಕೆ ಕರೆ ನೀಡಿದರು. ಇಷ್ಟೆಲ್ಲಾ ಆದರೂ ಈ ಸತ್ಯಾಗ್ರಹ ನಡೆದ ಬಗೆಗೆ ಯಾವುದೇ ಮಾಹಿತಿಯಿಲ್ಲ. ಲಕ್ಷ್ಮೀಪುರದ ನಾಗಪ್ಪ 'ಸತ್ಯಾಗ್ರಹ ಅಗೋದಿಕ್ಕಿಂತ ಮುಂಚೆನೇ ಯಜಮಾನರನ್ನು ಬಂಧಿಸಲಾಯ್ತು. ಹಾಗಾಗಿ ನಡೀಲಿಲ್ಲ' ಎಂದು ಹೇಳುತ್ತಾರೆ. ಯಜಮಾನರ ಬಹುತೇಕ ಚಳುವಳಿಗಳ ಮುಕ್ತಾಯ ಪೋಲೀಸರ ಬಂಧನವೇ ಆಗಿತ್ತು. ಮಹಾರಾಜರಿಗೂ ಇದು ಸುಲಭದ ವಿಧಾನ. ಸ್ವತಂತ್ರ್ಯ ಹೋರಾಟದ ಮಾದರಿಗಳಲ್ಲಿ ಚಳುವಳಿ ಮಾಡುತ್ತಿದ್ದ ಯಜಮಾನರು ಅಹಿಂಸಾಮಾರ್ಗದಲ್ಲಿ ಬಲವಾದ ವಿಶ್ವಾಸವಿರಿಸಿದ್ದರು. ಈ ಮಂದಗತಿಯಿಂದಾಗಿಯೇ ಯುವಕರು ಯಜಮಾನರೊಂದಿಗೆ ಹೆಚ್ಚಾಗಿ ಕೈ ಜೋಡಿಸಲಿಲ್ಲ.

೧೯೬೮ರಲ್ಲಿ ರಾಜಧನ ರದ್ಧತಿಯ ವಿಷಯ ದೇಶವ್ಯಾಪಿ ಚರ್ಚೆಯಾಯಿತು. ಕಾಂಗ್ರೆಸ್ ಸರ್ಕಾರದ ಪ್ರಧಾನಿ ಇಂದಿರಾಗಾಂಧಿಯವರು ರಾಜಧನ ರದ್ದುಗೊಳಿಸುವುದಾಗಿ ಘೋಷಿಸಿದರು. ಇದು ಭಾರತದಾದ್ಯಂತ ಇದ್ದ ರಾಜಮಹಾರಾಜರುಗಳನ್ನು ಧ್ವನಿ ಎತ್ತುವಂತೆ ಮಾಡಿತು. ಅವರೆಲ್ಲ ಸಂಘಟಿತರಾಗಿ ಈ ನಿಯಮವನ್ನು ವಿರೋಧಿಸಿದರು. 'ಕೇಂದ್ರ ಸರ್ಕಾರದ ಇಂತಹ ಕ್ರಮವು ಗಡಿಯಾಚೆಯಿರುವ ನಮ್ಮ ಶತೃಗಳಿಗೆ ಪರಿಣಾಮಕಾರಿ ಆಯುಧವಾಗುವುದಷ್ಟೇ ಅಲ್ಲದೆ ಈಗಾಗಲೇ ಅನೇಕ ಅಪಾಯಗಳನ್ನೆದುರಿಸುತ್ತಿರುವ ರಾಷ್ಟ್ರದ ಮುಂದೆ ಇನ್ನೂ ಅನೇಕ ಹೊಸ ಸಮಸ್ಯೆಗಳಿಗೆ ಕಾರಣವಾಗಬಹುದು' ಎಂದು ನವದೆಹಲಿಯಲ್ಲಿ ಅಕ್ಟೋಬರ್ ೪,೧೯೬೮ರಂದು ನಡೆದ ಸಭೆಯಲ್ಲಿ ಮಾಜಿ ರಾಜರುಗಳು ಸರ್ಕಾರವನ್ನು ಎಚ್ಚರಿಸಿದರು. ಈ ಬಗೆಯ ಎಲ್ಲ ವಿರೋಧಗಳನ್ನು ಲೆಕ್ಕಿಸದೆ ರಾಜಧನವನ್ನು ರದ್ಧತಿಗೊಳಿಸಿ ಇಂತಿಷ್ಟು ಪರಿಹಾರ ನಿಧಿಯನ್ನು ಬಿಡುಗಡೆ ಮಾಡಲಾಯಿತು. 'ಮಾಜಿ ರಾಜರುಗಳು ಇನ್ನು ಮಾನವಂತರಂತೆ ಬಾಳಿರಿ' ಎಂದು ಇಂದಿರಾಗಾಂಧಿಯವರು ಕರೆ ನೀಡಿದರು. ಈ ಹೊತ್ತಲ್ಲಿ ಸೊಂಡೂರಿನ ಮಾಜಿ ದೊರೆಗಳು ರಾಜಧನ ರದ್ಧತಿಯ ವಿರೋಧಿ ಬಣದಲ್ಲಿದ್ದರು. ಆಗ ಯಜಮಾನ ಶಾಂತರುದ್ರಪ್ಪನವರು 'ರಾಜಧನ ರದ್ಧತಿಯು ಸರ್ಕಾರದ ಶ್ಲಾಘನೀಯ ಕಾರ್ಯ' ಎಂದು ಕರಪತ್ರ ಹಂಚಿದರು. ಸೊಂಡೂರಿನಲ್ಲಿ ರಾಜಧನ ರದ್ಧತಿಯು ಬೆಂಬಲಿಸುವ ಜನಸಭೆ ಮಾಡಲು ಪ್ರಯತ್ನಿಸಿದರು. ಆದರೆ ಇದು ಸಾಧ್ಯವಾಗಲಿಲ್ಲ.

ಸೊಂಡೂರು ಮ್ಯಾಂಗನೀಸ್ ಮತ್ತು ಅದಿರಿನ ಕಂಪನಿಯು (ಎಸ್.ಎಂ ಆಂಡ್ ಐ.ಓ) ಯಶವಂತರಾವ್ ಅವರ ಶೋಷಣೆಯ ಮತ್ತೊಂದು ಸಾಧನ. ೧೯೫೩ರಲ್ಲಿ ಮೈಸೂರು ಸರ್ಕಾರದಿಂದ ೧೦ ಚದರ ಮೈಲಿಗಿಂತ ಹೆಚ್ಚಿನ ಪ್ರದೇಶವನ್ನು ಯಾವ ಮ್ಯಾಂಗನೀಸ್ ಕಂಪನಿಗೂ ಕೊಡಬಾರದೆಂಬ ಕಾನೂನನ್ನು ಉಲ್ಲಂಘಿಸಿ ೨೯ ಚದರ ಮೈಲು ಮ್ಯಾಂಗನೀಸ್ ಅದಿರು ಪ್ರದೇಶವನ್ನು ೨೦ ವರ್ಷಗಳ ಅವಧಿಗೆ ಗುತ್ತಿಗೆ ಪಡೆದರು. ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಎಂಬ (ಎನ್.ಎಂ.ಡಿ.ಸಿ.) ಸರ್ಕಾರಿ ಸಂಸ್ಥೆ ಇದ್ದರೂ ಈ ಪ್ರದೇಶದ ಗುತ್ತಿಗೆಯನ್ನು ತಮ್ಮ ಎಸ್.ಎಂ. ಆಂಡ್ ಐ.ಓ ಕಂಪನಿಗೆ ಗಿಟ್ಟಿಸಿಕೊಂಡಿದ್ದರು. ಗುತ್ತಿಗೆಯ ಕರಾರಿನ ಪ್ರಕಾರ ಮ್ಯಾಂಗನೀಸ್ ಫೆರೋ ಕಾರ್ಖಾನೆಯನ್ನು ಸ್ಥಾಪಿಸಬೇಕಿತ್ತು. ೧೯೭೩ರ ಡಿಸೆಂಬರ್ ನಲ್ಲಿ ಕೊನೆಗೊಂಡ ಈ ಗುತ್ತಿಗೆಯನ್ನು ನವೀಕರಿಸಲು ತಮ್ಮ ಅಧಿಕಾರ ಪ್ರಭಾವ ಬೀರತೊಡಗಿದರು. ತಮ್ಮ ಖಾಸಗಿ ಸಂಸ್ಥೆಯೇ 'ಪಬ್ಲಿಕ್ ರಿಲೇಷನ್ಸ್ ಡೆವಲಪ್ ಮೆಂಟ್ ಡಿಪಾರ್ಟ್‌ಮೆಂಟ್' (ಪಿ.ಆರ್.ಡಿ.ಡಿ). ಈ ಸಂಸ್ಥೆಯ ಅಧಿಕಾರಿಗಳು ಸರ್ಕಾರಿ ಅಧಿಕಾರಿಗಳೆಂದು ಪ್ರಜೆಗಳನ್ನು ವಂಚಿಸತೊಡಗಿದರು. ಸರ್ಕಾರದ ಹೆಚ್ಚು ಬೆಳೆ ಬೆಳೆಯುವ ಯೋಜನೆಯನ್ನು ನೆಪವಾಗಿಟ್ಟುಕೊಂಡು ರಾಜರು ೧೯೫೩ರಲ್ಲಿ 'ಸ್ಕಂದ ಉದ್ಯಮ'ವನ್ನು ರಚಿಸಿ ಸರ್ಕಾರದ ೧೫೩ ಎಕರೆ ಭೂಮಿಯನ್ನು ಪಡೆದರು.

[4] ಈ ಎಲ್ಲಾ ಅಂಶಗಳ ಬಗ್ಗೆ ಜನರ ಅಸಹನೆ ಪ್ರತಿರೋಧ ಕಂಡೂ ಕಾಣದಂತೆ ಪ್ರವಹಿಸುತ್ತಿತ್ತು.

ಈ ಮೇಲಿನ ಎಲ್ಲ ವಿವರ ಹಲವು ಚಿತ್ರಗಳನ್ನು ಮುಂದಿಡುತ್ತದೆ. ಒಂದು ಕಾಲದ ಪ್ರಭುತ್ವ ನಿರಂತರ ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಮಾಡುವ ಪ್ರಯತ್ನ. ೧೯೪೭ರ ನಂತರ ಈ ಹಿಂದೆ ಆಳುತ್ತಿದ್ದ ಅದೇ ರಾಜರೊಂದಿಗೆ ಜನರು ಉಳಿಸಿಕೊಳ್ಳಬೇಕಾದ ಸಂಬಂಧ, ಬೆಳೆಸಿಕೊಳ್ಳುವ ಸಂಘರ್ಷ. ವ್ಯಕ್ತಿ ಸ್ವಾತಂತ್ರ್ಯದ ಪ್ರಜ್ಞೆಯಿಂದಾಗಿ ರಾಜಶಾಹಿಯನ್ನು ವಿರೋಧಿಸುವ ಮತ್ತು ಒಪ್ಪಿಕೊಳ್ಳುವಿಕೆಯ ನಡುವಿನ ತಾಕಲಾಟ. ಪ್ರಜಾಪ್ರಭುತ್ವವೂ 'ರಾಜರ' ಕೈವಶವಾಗಿ ಸ್ವಾತಂತ್ರ್ಯಪೂರ್ವದ ವ್ಯವಸ್ಥೆಯೇ ಇನ್ನೊಂದು ರೂಪದಲ್ಲಿ ಕಾಣಿಸಿಕೊಂಡದ್ದು. ಈ ಎಲ್ಲಾ ಬಗೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಕೃತಿಗಳನ್ನು ೧೯೪೭ರ ನಂತರದ ಸೊಂಡೂರು ಜನರ ಪ್ರತಿಭಟನೆಗಳಲ್ಲಿ ಕಾಣಬಹುದು.

## ೬. ಶಾಂತರುದ್ರಪ್ಪನವರ ಕಾದಂಬರಿಯ ಒಂದು ಭಾಗ

ಬಳ್ಳಾರಿಯ ಯಜಮಾನ ಶಾಂತರುದ್ರಪ್ಪನವರು ಬದುಕಿನ ಬಹುಭಾಗವನ್ನು ಸೊಂಡೂರಿನ ರಾಜಮನೆತನದ ವಿರುದ್ಧ ಹೋರಾಡುವುದರಲ್ಲೆ ಕಳೆದರು. ಅವರ ಹೋರಾಟದ ತೀವ್ರತೆಯನ್ನು ಸೊಂಡೂರು ಸಂಸ್ಥಾನದ ವಿರುದ್ಧವಾಗಿ ಹೊರಡಿಸುತ್ತಿದ್ದ ಕರಪತ್ರಗಳಲ್ಲಿ ಕಾಣಬಹುದು. ಇದಕ್ಕಿಂತ ಮುಖ್ಯವಾಗಿ ಅವರೇ ಬರೆದ ಕಾದಂಬರಿ 'ಹಸಿದ ಮಾನವ ಹುಸಿ ನುಡಿದು ಹದಗೆಡಸಿದ ಸೊಂಡೂರು ನಾಡು' ಅಥವಾ 'ಸೊಂಡೂರಿನ ಮಾಜಿ ರಾಜ ಹಾಗೂ ಯುವರಾಜ ಭಯಂಕರ ಒಳಸಂಚು' ಎಂಬ ಪತ್ತೇದಾರಿ ಕಾದಂಬರಿಯಲ್ಲಿ ಯಜಮಾನರ ಧಾರ್ಷ್ಟ್ಯ ನೇರವಂತಿಕೆಯನ್ನು ಗುರುತಿಸಬಹುದು. ಯಜಮಾನರೇ ಇದನ್ನೊಂದು ಕಾದಂಬರಿ ಎಂದಿದ್ದಾರೆ. ಆದರೆ ಕ್ರೈಮ್ ಪತ್ರಿಕೆಯ ರೋಚಕ ವರದಿಯಂತೆ ಇದೆ. ಇದು ಬಳ್ಳಾರಿ ಜಿಲ್ಲೆಯ ಚರಿತ್ರೆಯಲ್ಲಿ ಗಮನಿಸಬೇಕಾದ ಪಠ್ಯ. ಈ ಕಾದಂಬರಿ ರಾಜ್ಯಪತ್ರಗಾರ ಇಲಾಖೆಯು ಸಂಗ್ರಹಿಸಿದ ಯಜಮಾನ ಶಾಂತರುದ್ರಪ್ಪನವರ ವೈಯಕ್ತಿಕ ಸಂಗ್ರಹದಲ್ಲಿ ದೊರೆತಿದೆ. ಸೊಂಡೂರು ಭೂ ಹೋರಾಟಕ್ಕೆ ಪೂರಕವಾಗಿ ಈ ಕಾದಂಬರಿಯನ್ನು ಅವಲೋಕಿಸಬಹುದು. ಆ ಕಾರಣಕ್ಕಾಗಿ ಕಾದಂಬರಿಯ ಆಯ್ದ ಭಾಗವನ್ನು ಇಲ್ಲಿ ಕೊಡಲಾಗಿದೆ. ಇದು ಹಸ್ತಪ್ರತಿಯಾಗಿದ್ದು ಅಪ್ರಕಟಿತ ಬರಹವಾಗಿದೆ.

*ಅಧ್ಯಾಯ : ೩*

*ನೂಲಿನಂತೆ ಸೀರೆ ತಂದೆಯಂತೆ ಮಗ*

*ಯಶವಂತರಾವ್ ಘೋರ್ಪಡೆಯ ಅಚ್ಚುಪಡೆಯಲ್ಲಿ ಸಿದ್ಧವಾದ ದೇಹ ಎಂ.ವೈ. ಘೋರ್ಪಡೆಯವರದು. ಈ ದೇಹದಲ್ಲಿಯೂ ಅದೇ ರಕ್ತ. ಅದೇ ದುಷ್ಟ ಶಕ್ತಿ ಸಂಚರಿಸುತ್ತಲಿದೆ. ಬುದ್ಧಿಯಲ್ಲಿ ವಿಚಾರದಲ್ಲಿ ತಂದೆಗಿಂತಲೂ ಒಂದು ತೂಕ ಕೀಳ್ತನ ಜಾಸ್ತಿ ಎಂದೇ ಹೇಳಬಹುದು. ಈ ಮಾಜಿ ಯುವರಾಜ ಸದ್ಯದ ಎಂ.ಎಲ್.ಎ. (ಮೈಸೂರು ರಾಜ್ಯ) ಕಾರ್ಯ ಸಾಧನೆಗಾಗಿ ದೊಡ್ಡ ಅಧಿಕಾರಿಗಳನ್ನಷ್ಟೇ ಅಲ್ಲ. ಆಫೀಸರುಗಳ, ಜವಾನರ ಕಾಲನ್ನೂ ಹಿಡಿದುಕೊಳ್ಳುತ್ತಾರೆ. ಕೆಲಸ ತೀರಿದ ಬಳಿಕ ಆ ಜವಾನರ ಕೆನ್ನೆಗೆ ಏಟು ಹಾಕಿ ಬರುತ್ತಾರೆ. ಇಂತಹ ಭಂಡತನ ಈತನದು. ಜವಾನರು ಪ್ರತಿ ನುಡಿದರೆ ತನ್ನ ಎಂ.ಎಲ್.ಎ ತನದ ದರ್ಪ ತೋರಿಸಿ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಿಟ್ಟಂತೆ ಜವಾನರನ್ನು ಕೆಲಸದಿಂದ ಬಿಡುಗಡೆ ಮಾಡಿಸುತ್ತಾರೆ. ತಂದೆ ಮಗ ಇಬ್ಬರೂ ಕಾಂಗ್ರೆಸ್ ವಿರೋಧಿಗಳಾಗಿದ್ದರೂ ಸಹಿತ ೧೯೬೦-೬೧ರಲ್ಲಿ ಎಂ.ವೈ. ಘೋರ್ಪಡೆ ತಾನಿನ್ನು ಕಾಂಗ್ರೆಸ್ ಸೇರದಿದ್ದರೆ, ತಮ್ಮ ಕುಟುಂಬ ರಕ್ಷಿಸಿಕೊಳ್ಳುವುದು ಕಷ್ಟವಾದೀತೆಂದು ಬಗೆದು ಎ.ಐ.ಸಿ.ಸಿ ಯವರ ಬಾಲ ಬಡಿದು ಕಾಂಗ್ರೆಸ್‌ಗೆ ಸೇರಿ, ಅದೇ ವರ್ಷ ಕಾಂಗ್ರೆಸ್ಸಿನ ಟಿಕೆಟ್ ಪಡೆದುಕೊಂಡು ಸೊಂಡೂರು ವಿಧಾನಸಭಾ ಕ್ಷೇತ್ರದಿಂದ ಎಂ.ಎಲ್.ಎ ಆದೊಡನೆಯೇ ಈತನ ತಲೆಯ ಮೇಲೆ ಎರಡು ಹದವಾದ ಕೋಡುಗಳು ಚಿಗುರಿದವು. ಜನರನ್ನು ಅಧಿಕಾರಿಗಳನ್ನು ಇರಿದು ಗಾಯಗೊಳಿಸಲಿಕ್ಕೆ.*

*ಎಂ.ಎಲ್.ಎ ಅದರಲ್ಲಿಯೂ ಆಳುವ ಪಕ್ಷದವ ಕೇಳುವುದೇನು ಈತನು ಮಾಡಿದ ಬಾರಾ ಖೂನ್ ಮಾಫ್. ಸರಕಾರಿ ಅರಣ್ಯದೊಳಗಿನ ಗಂಧದ ಮರ, ಇಮಾರತಿನ ಕಟ್ಟಿಗೆ ಕಡಿಸಿ ಮಾರತೊಡಗಿದರು. ಈ ಕಾರ್ಯದಲ್ಲಿ ಫಾರೆಸ್ಟ್ ಖಾತೆಯ ಜಿಲ್ಲಾಧಿಕಾರಿಗಳನ್ನು*

ಸರಿಪಡಿಸಿಕೊಂಡು ಅವರಿಗೂ ತಿನ್ನಿಸಿ, ತಾನೂ ಹಣಗಳಿಸತೊಡಗಿದ. ಈ ಅರಣ್ಯಾಧಿಕಾರಿಗಳು ಘೋರ್ಪಡೆಗೆ ಸಹಾಯ ಮಾಡಿದಂತೆಯೇ ಇನ್ನಿತರ ಶ್ರೀಮಂತರಿಗೂ ಮಂತ್ರಿಗಳ ಹಾಗೂ ದೊಡ್ಡ ಸರಕಾರಿ ಅಧಿಕಾರಿಗಳ ಸಂಬಂಧಿಕರಿಗೂ ಲಂಚ ತಿಂದು ಅರಣ್ಯ ಸಂಪತ್ತು ವಿಲೇವಾರಿ ಮಾಡತೊಡಗಿದರು. ಇದನ್ನು ಸಹಿಸಲಾಗದೆ ಎಂ.ವೈ.ಘೋರ್ಪಡೆ ಎಂ.ಎಲ್.ಎ ತನದಿಂದ ಮಂತ್ರಿಗಳ ಕಿವಿಯೂದಿ ವಿಜಿಲನ್ಸಿ ಮತ್ತು ಲಂಚ ನಿರ್ಮೂಲನ ಖಾತೆಯವರಿಗೆ ತಿಳಿಸಿ, ಫಾರೆಸ್ಟ್ ಅಧಿಕಾರಿಗಳ ಮೇಲೆ ಕಾನೂನಿನ ಕಾರ್ಯಾಚರಣೆ ನಡೆಸಿದರು. ತನಗೆ ಮಾತ್ರ ಸಹಾಯ ಮಾಡಬೇಕು ಎನ್ನುವಂತಹ ಸ್ವಾರ್ಥಿ ಈತ. ಈತನಲ್ಲಿ ಯಾವ ತೆರವಾದ ದೇಶಭಕ್ತಿ ಇದೆ ನೋಡಿರಿ. ಗಾಂಧಿ ತತ್ವ, ಕಾಂಗ್ರೇಸ್ ನಿಯಮಗಳು ಒಂದೂ ಅರ್ಥವಾಗದ ಈ ಮಂಕು ದಿಣ್ಣೆಗೆ ಕಾಂಗ್ರೆಸ್ ಸದಸ್ಯತ್ವ ಸಿಕ್ಕುಬಿಟ್ಟರೆ, ಈತನು ದೇಶಭಕ್ತನಾದನೆ? ಖಾದಿ ಬಟ್ಟೆಗಳನ್ನು ಯಾರೂ ಹಾಕಿಕೊಳ್ಳಬಹುದು. ಖಾದಿ ಧರಿಸಿದವರೆಲ್ಲಾ ಕಾಂಗ್ರೆಸಿಗರಲ್ಲ. ಕಾಂಗ್ರೇಸ್ಸಿಗರು ತಾತ್ವಿಕವಾಗಿ ಗಾಂಧಿ ಸಿದ್ಧಾಂತಕ್ಕನುಗುಣವಾಗಿ ಖಾದಿ ಧರಿಸುತ್ತಿದ್ದರು. ಈ ಮಾತಿನ ತಾರತಮ್ಯವನ್ನು ತಿಳಿಯಬೇಕು. ಮಾಜಿ ರಾಜ, ಯುವರಾಜರ ಹಿನ್ನೆಲೆ ಈಗಾಗಲೇ ಓದಿ ತಿಳಿದಿದ್ದೀರಿ. ಎಂ.ವೈ.ಘೋರ್ಪಡೆ ಎಂ.ಎಲ್.ಎ ಆದ ಎರಡು ವರ್ಷದ ಬಳಿಕ ಎಸ್.ನಿಜಲಿಂಗಪ್ಪನವರ ಮಂತ್ರಿ ಮಂಡಳ ಉರುಳಿ ಶ್ರೀಮಾನ್ ಬಿ.ಡಿ.ಜತ್ತಿಯವರು ಮುಖ್ಯಮಂತ್ರಿಗಳಾದರು. ಜತ್ತಿಯವರು ಮುಖ್ಯಮಂತ್ರಿಗಳಾಗಲಿಕ್ಕೆ ಎಂ.ವೈ. ಘೋರ್ಪಡೆಯವರದೂ ಕೈವಾಡವಿತ್ತು. ಯಾಕೆಂದರೆ ಎಸ್.ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಈತನ ಕಪಟತನ ನಡೆಯುತ್ತಿರಲಿಲ್ಲ. ಸೊಂಡೂರಿನ ಅರಣ್ಯ ಸಂಪತ್ತನ್ನು ಅಪಹರಿಸಲಿಕ್ಕೆ ಅಷ್ಟೊಂದು ಅವಕಾಶ ಸಿಕ್ಕಿರಲಿಲ್ಲ. ಆದ್ದರಿಂದ ಅವರ ವಿರುದ್ಧ ಗುಂಪಿನವರೊಡನೆ ಸೇರಿಕೊಂಡು ಜತ್ತಿಯವರಿಗೆ ಬೆಂಬಲವಾಗಿ ನಿಂತು ತನ್ನ ಬೇಳೆ ಬೇಯಿಸಿಕೊಳ್ಳತೊಡಗಿದರು. ಜತ್ತಿಯವರು ಮುಖ್ಯಮಂತ್ರಿಗಳಾದೊಡನೆ ಅವರನ್ನು ತನ್ನ ಮಾಜಿ ಸಂಸ್ಥಾನಕ್ಕೆ ಬಲವಂತ ಮಾಡಿ ಕರೆತಂದರು. ಈ ಸಂದರ್ಭದಲ್ಲಿ ನಡೆದ ಒಂದು ಅಚಾತುರ್ಯವನ್ನು ನೋಡೋಣ. ಸೊಂಡೂರು ವಿಮೋಚನೆ ಸಮರ ಸಮಿತಿ ಬಳ್ಳಾರಿ ಇವರಿಗೆ ಮಾನ್ಯ ಬಿ.ಡಿ.ಜತ್ತಿಯವರು ಸೊಂಡೂರಿಗೆ ಬರಲಿದ್ದಾರೆಂದು ತಿಳಿದು, ಸಮಿತಿಯ ಅಧ್ಯಕ್ಷರಾದ ಯಜಮಾನ ಶಾಂತರುದ್ರಪ್ಪನವರು ಒಂದು ಮನವಿ ಅರ್ಪಿಸಲು ಅಣಿಯಾದರು. ಆದರೆ ಎಂ.ವೈ.ಘೋರ್ಪಡೆ ಸಮತ ಸಮಿತಿಯವರು ತನ್ನ ವಿರುದ್ಧವಾಗಿ ಮತ್ತು ಇಲ್ಲಿಯವರೆಗೆ ಅಕ್ರಮವಾಗಿ ಸರಕಾರಿ ಆಸ್ತಿಯನ್ನು ಲೂಡಿ ಮಾಡಿದ್ದನ್ನು ತಿಳಿಸಬಹುದೆಂದು ಹೆದರಿ, ಯಜಮಾನ ಶಾಂತರುದ್ರಪ್ಪನವರು ಮನವಿ ಅರ್ಪಿಸಲಿಕ್ಕೆ ಬರದಂತೆ ನೋಡಿಕೊಳ್ಳಿ, ಒಂದು ವೇಳೆ ಬಂದರೆ ಅವರನ್ನು ಬಂಧಿಸಬೇಕೆಂದು ಒಳಗಿಂದೊಳಗೆ ಬಳ್ಳಾರಿ ಜಿಲ್ಲಾಧಿಕಾರಿಗಳೊಡನೆಯೂ, ಡಿ.ಎಸ್.ಪಿ. ಯವರೊಡನೆಯೂ ಸಂಪರ್ಕ ಬೆಳೆಸಿ ಅಧಿಕಾರಿಗಳ ಕಿವಿಯೂದಿ, ಸಮರ ಸಮಿತಿಯವರು ಮುಖ್ಯಮಂತ್ರಿಗಳ ಕಾರ್ಯಕ್ರಮಕ್ಕೆ ಆತಂಕ ಪಡಿಸಿ ಗೊಂದಲ ಮಾಡುವ ಸಂಭವವಿದೆ ಎಂದು ಹೇಳಿಬಿಟ್ಟದ್ದರು. ಇದೆಲ್ಲಾ ಅವರ ಮಾನಸಿಕ ಕುಹುಕ ಕಲ್ಪನೆ. 'ಕಳ್ಳನ ಜೀವ ಹುಳ್ಳಗೆ' ಆದ್ದರಿಂದ ಸಮಿತಿಯವರು ಯಾವ ಗೊಂದಲ ಮಾಡದಿದ್ದರೂ ಮಾಡುತ್ತಾರೆಂಬ ಭೀತಿ ಅವರಲ್ಲಿ ಬರಲಿಕ್ಕೆ ಆತನ ಕೃತಿಗಳೇ ಸಾಕ್ಷಿ.

ಮಾನ್ಯ ಮಂತ್ರಿಗಳು ಬಂದರು. ಯಜಮಾನ ಶಾಂತರುದ್ರಪ್ಪನವರು ಮುಖ್ಯಮಂತ್ರಿಗಳ ಭೇಟಿಗೆ ಹೋದರು. ಆದರೆ ಮಂತ್ರಿಗಳ ಭೇಟಿಗೆ ಮುನ್ನವೇ ಎಂ.ಎಲ್.ಎ ಘೋರ್ಪಡೆಯ ಸೂಚನೆಯ ಪ್ರಕಾರ ಜಿಲ್ಲಾ ಪೊಲೀಸ್ ಅಧಿಕಾರಿಗಳು ಶಾಂತರುದ್ರಪ್ಪನವರನ್ನು ಸುರಕ್ಷಿತ ಕಾಯಿದೆಗನುಗುಣವಾಗಿ ಬಂಧಿಸಿದರು. ಜತ್ತಿಯವರು ಈ ಅನ್ಯಾಯದತ್ತ ಹೊರಳಿ ಕೂಡಾ ನೋಡಲಿಲ್ಲ. ಇವರು ಜನನಾಯಕರೆ? ಇವರು ಬಂಡವಾಳ ಶಾಹಿಯ ಬಾಲ ಬಡುಕ ನಾಯಕರು. ಸೊಂಡೂರು ವಿಮೋಚನ ಸಮರ ಸಮಿತಿಯವರು ಬಂಡೆಬ್ಬಿಸಿ ಜತ್ತಿಯವರನ್ನು ಅಪಮಾನಗೊಳಿಸಲು ಯತ್ನಿಸುತ್ತಿರಲಿಲ್ಲ. ಕೇವಲ ಮಾಜಿ ದೊರೆ ಮತ್ತು ಎಂ.ವೈ.ಘೋರ್ಪಡೆ ಎಂ.ಎಲ್.ಎ ಇವರು ಜನರ ಶೋಷಣೆ, ದೇವರ ಶೋಷಣೆ, ಸರಕಾರದ ಶೋಷಣೆಯನ್ನು ಹೇಗೆ ಕುತಂತ್ರಗಳ ಮೂಲಕ ಮಾಡುತ್ತಿದ್ದಾರೆಂಬುದನ್ನು ತಿಳಿಸುವುದಾಗಿತ್ತು. ಇಷ್ಟಕ್ಕೇನೆ ಬಂಧಿಸಿ ಕಾರಾಗೃಹದಲ್ಲಿಡುವ ಪ್ರಮೇಯವೇನಿತ್ತು? ಇದು ಪ್ರಜಾ ಪ್ರಭುತ್ವವೇ? ಅಲ್ಲ ಇದು ಅಧಿಕಾರ ದರ್ಪದ ರಾಜ್ಯ. ಜನರ ಪ್ರೀತಿಯಿಲ್ಲದ ಸರಕಾರ ಎಂದೂ ಉಳಿಯಲಾರದು. ಈಗ ಅದೇ ಜತ್ತಿಯವರು ನಾಯಿ ಹೊಡೆಯುವ ಕೋಲಿಗಿಂತಲೂ ಕಡೆಯಾಗಿದ್ದಾರೆ. ಜನರ ಶಕ್ತಿಯೇ ಈ ಶಶಕ್ತಿಯಾಗಿರುವಾಗ ಮಂತ್ರಿಗಳು ಅಧಿಕ ಪ್ರಮಾಣದಲ್ಲಿ ಜನರ ಪ್ರೀತಿಗೆ ಪಾತ್ರವಾಗಬೇಕೆ ವಿನಃ ಒಬ್ಬ ಶ್ರೀಮಂತನನ್ನು ಮೆಚ್ಚಿಸಲಿಕ್ಕೆ ಪ್ರಯತ್ನಿಸಬಾರದು. ಎಂ.ಎಲ್.ಎ ಘೋರ್ಪಡೆ ಈ ಹತ್ತು ವರ್ಷಗಳ ಅವಧಿಯಲ್ಲಿ ರಾಜಕೀಯ ಚದುರಂಗದಾಟವನ್ನು ಮೋಸದ ಹಾಗೂ ಲಂಚದ ಬಲದ ಮೇಲೆ ಆಡುತ್ತಾ ಬಂದಿದ್ದಾರೆ.

*ಪಂಚಾಯಿತಿಗಳಲ್ಲಿ ಈತನ ಕುತಂತ್ರ :*

*ಸೊಂಡೂರು ಮತಕ್ಷೇತ್ರಗಳಲ್ಲಿರುವ ಎಲ್ಲ ಪಂಚಾಯಿತಿಗಳಲ್ಲಿಯೂ ಈತ ತನ್ನ ಕೈಗೊಂಬೆಯಾಗಿರುವ ಅತಿ ದೊಡ್ಡ ಹಾಗೂ ಹುಂಬ ಮತ್ತು ಅಜ್ಞಾನಿಗಳನ್ನು ಸರಪಂಚರನ್ನಾಗಿ ಮಾಡಿಸಿಟ್ಟಿದ್ದಾನೆ. ಬುದ್ಧಿವಂತರು ಬಂದರೆ ತನ್ನ ಅಕೃತ್ಯಗಳ ಗುಟ್ಟು ಬಯಲಾಗಬಹುದೆಂಬ ಭಯ ಈತನದಾಗಿದೆ. ಈತ ತಿಳಿದಂತೆ ಆ ಸರಪಂಚರೂ ದಡ್ಡರಲ್ಲ. ಅವರೂ ಬಹು ಜಾಣರು. ಕೈ ಬಲ ಬೆಳೆಯಲಿ ಎಂದು ಸುಮ್ಮನಿದ್ದಾರೆ. ಕಾಲ ಬಂದಾಗ ಈತನಿಗೆ ಕೈಕೊಡದೆ ಇರುವುದಿಲ್ಲ.*

*ಹಳ್ಳಿಗಳಲ್ಲಿ ಇವರು ಮಾಡುವ ಆಟ ಇನ್ನೊಂದು ತೆರವಾಗಿದೆ. ಬಡವರ ಗುಡಿಸಲಿಗೆ ಬೆಂಕಿ ಹಚ್ಚಿಸಿ ಸುಡಿಸಿ ಅವರ ಬಳಿ ಪುನಃ ತಾನೇ ಖುದ್ದಾಗಿ ಹೋಗಿ ಅಯ್ಯೋ ಯಾರೋ ಪಾಪಿಗಳು ಹೊಟ್ಟೆಯ ಮೇಲೆ ಕಲ್ಲು ಹಾಕಿದ್ದಾರೆಂದು ಮರ ಮರ ಮರುಗಿದಂತೆ ಮಾಡಿ, ಮೊಸಳೆ ಕಣ್ಣೀರು ಸುರಿಸಿ ಅವರಿಗೆ ತನ್ನ ಮನೆಯಿಂದ ಕಾಳು, ಬೇಳೆ, ದನಕರುಗಳಿಗೆ ಹುಲ್ಲು ಅಲ್ಲದೆ ಅವರಿಗೆ ಬಟ್ಟೆ ಕೊಡಿಸಿ, ಎಂ.ಎಲ್.ಎ ದೊರೆಗಳು ಎಷ್ಟು ಉದಾರಿಗಳು ಕರುಣೆಯುಳ್ಳವ ರೆಂದೆನಿಸಿಕೊಂಡು, ಅವರ ಮೇಲೆ ಮಹದುಪಾಕಾರ ಮಾಡಿದವರಂತೆ ಆಪ್ಯತೆಯಿಂದ ಹಿಂದಿರುಗುತ್ತಾನೆ. ಇಲ್ಲಿ ಇತ್ತ ಸರಕಾರಕ್ಕೆ ಎಂ.ಎಲ್.ಎ ಖಾತೆಯಿಂದ ಜಿಲ್ಲಾಧಿಕಾರಿಗಳ ಮುಖಾಂತರ ಲುಕ್ಸಾನದ ಸುಳ್ಳು ವರದಿ ಮಾಡಿಸಿ ಅದರಲ್ಲಿ ಲಾಭ ಗಿಟ್ಟಿಸಿಕೊಳ್ಳುತ್ತಾನೆ. ಈತನ ಈ ತೆರನಾದ ತೆರೆಯ ಮರೆ ನಾಟಕ ಯಾರಿಗೂ ತಿಳಿದಿಲ್ಲವೆಂತಲ್ಲ, ಎಲ್ಲರಿಗೂ ತಿಳಿದಿದೆ. ಪಾಪ! ಬಡವರಿಗೆ ಈ ಕುತಂತ್ರ ಮೊದ ಮೊದಲು ತಿಳಿಯುತ್ತಿರಲಿಲ್ಲ. ಈಗೀಗ ಅವರಿಗೂ ಈತನ ಭಂಡತನ ತಿಳಿದಿದೆ. ಆದರೆ ಮಾಡುವುದೇನು? ಹೊಟ್ಟೆಯ ಸಿಟ್ಟು ರಟ್ಟೆಗಿಲ್ಲ. ಅದರಲ್ಲಿಯೂ ನಮ್ಮ ಘನ ಮೈಸೂರು ಸರಕಾರವೊಂದು ಹೇಡಿ. ಏನಾದರೂ ಕ್ರಮ ಕೈಗೊಂಡರೆ ಕಾಂಗ್ರೇಸ್ಸಿನ ಒಂದು ಸೀಟು ಕೈಬಿಟ್ಟು ಹೋಗುತ್ತದಲ್ಲವೆಂದು ಈ ಮಂತ್ರಿಗಳಿಗೆ ಚಿಂತೆ. ಅದರಲ್ಲೂ ಈ ಎಂ.ವೈ. ಘೋರ್ಪಡೆ ಮೊದಲಿಗೇನು ಕಾಂಗ್ರೇಸ್ಸಿಗಿರಲಿಲ್ಲ. ಈಗಲಾದರೂ ನಾಮ ಮಾತ್ರ ಕಾಂಗ್ರೇಸ್. ತಾತ್ವಿಕವಾಗಿ ಈತ ಕಾಂಗ್ರೇಸ್ ವಿರೋಧಿ. ವಸ್ತು ಸ್ಥಿತಿ ಹೀಗಿರುವಾಗ ಈಗ ಕಾಂಗ್ರೇಸ್ ಬಿಟ್ಟು ಹೋದರೆ ಕಾಂಗ್ರೇಸ್ ಸಂಸ್ಥೆಗೆ ಬಡತನ ಬರುತ್ತದೆಯೇ? ಇಲ್ಲ ಸೊಂಡೂರು ವಿಭಾಗದಲ್ಲಿ ಈತನನ್ನುಳಿದು ಬೇರೆ ಉತ್ತಮ ಕಾಂಗ್ರೇಸ್ ಕಾರ್ಯಕರ್ತರು ಇಲ್ಲವೆ? ಬೇಕಾದಷ್ಟು ಜನರಿದ್ದಾರೆ. ಹೀಗಿದ್ದರೂ ಸಹಿತ ನಮ್ಮ ಮೈಸೂರು ಘನ ಸರಕಾರ ಈ ಕೇಡಿ ಎಂ.ಎಲ್.ಎ, ಎಂ.ವೈ.ಘೋರ್ಪಡೆಯ ಮೇಲೆ ಕ್ರಮವೇಕೆ ಕೈಗೊಳ್ಳುತ್ತಿಲ್ಲ. ಇದು ಅಖಿಲ ಕರ್ನಾಟಕದ ಮಹಾಜನಗಳಿಗೇನೆ ಒಂದು ಬಿಡಿಸಲಾರದ ಸಮಸ್ಯೆ ಅಲ್ಲ. ಇದರಲ್ಲಿ ಅಂಥ ಹೇಳಿಕೊಳ್ಳುವಂತಹ ಸಮಸ್ಯೆ ಏನಿಲ್ಲ. ಸೀರೆ ಮೇಲೆತ್ತಿದರೆ ತನ್ನ ತೊಡೆಯೇ ಕಾಣುತ್ತದೆಂಬ ಭೀತಿ ಮೈಸೂರು ಮಂತ್ರಿ ಮಂಡಲಕ್ಕಿದೆ. ಈ ಒಂದು ರಾಜಕಾರಣ ಬಿಟ್ಟರೆ ಬೇರೇನೂ ಇಲ್ಲ ಇಲ್ಲಿ.*

*ಕುಮಾರಸ್ವಾಮಿ ಜಾತ್ರೆ ಬಂತೆಂದರೆ ಎಂ.ವೈ.ಘೋರ್ಪಡೆಗೆ ಒಂದು ದೊಡ್ಡ ಚಿಂತೆ. ಎಲ್ಲಿ ಸೊಂಡೂರು ವಿಮೋಚನ ಸಮರ ಸಮಿತಿಯವರು ವಿಧಾಯಕ ರೀತಿಯಲ್ಲಿ ಜನರನ್ನು ಪರಿವರ್ತಿಸಿ ದೇವರ ಹುಂಡಿಗೆ ಮತ್ತು ದರ್ಶನ ಪೀಜಿಗೆ ಅಡಚಣೆಯನ್ನುಂಟು ಮಾಡುತ್ತಾರೆಯೋ ಎಂದು ಹಗಲಿರುಳೂ ನಿದ್ರೆ ಬರುವುದಿಲ್ಲ. ಈತನಿಗೆ ಅಂತಲೇ ಮುಂಜಾಗ್ರತೆಗಾಗಿ ಜಿಲ್ಲಾಧಿಕಾರಿಗಳಿಗೆ ಬರೆದುಕೊಂಡು ಪೊಲೀಸ್ ಬಂದೋಬಸ್ತು ಮಾಡಿಸಿಕೊಳ್ಳುತ್ತಾನೆ. ಅಲ್ಲದೆ ಸೊಂಡೂರು ವಿಮೋಚನಾ ಸಮರ ಸಮಿತಿಯವರಿಂದ ತನಗೆ ತೊಂದರೆಯಾಗಬಹುದೆಂದು ಅವರಿಂದ ತನ್ನ ರಕ್ಷಣೆಯಾಗಬೇಕೆಂದೂ, ಪೊಲೀಸ್ ಅಧಿಕಾರಿಗಳಿಗೆ ಬಿನ್ನವಿಸಿ ಕೊಂಡು ದೂರು ಕೊಟ್ಟಿರುತ್ತಾನೆ. ಈ ಎಲ್ಲಾ ಕೃತ್ಯಗಳು ಪ್ರಜಾಪ್ರಭುತ್ವದ ಸಂವಿಧಾನಕ್ಕೆ ವಿರುದ್ಧವಾದದ್ದು. ಎಂ.ಎಲ್.ಎ ಎಂ.ವೈ.ಘೋರ್ಪಡೆಗೆ ಈ ರೀತಿ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಲಿಕ್ಕೆ ಯಾವ ಹಕ್ಕೂ ಇಲ್ಲ. ಜಾತ್ರೆ ಈತನ ಮನೆಯ ಉತ್ತಮವಲ್ಲ. ಅದು ಸಾರ್ವಜನಿಕವಾದದ್ದು. ಅಲ್ಲಿ ಬರುವ ಎಲ್ಲಾ ಭಕ್ತರಿಗೂ ಸರಿಸಮಾನ ಅಧಿಕಾರ ಪೂಜಾವ ಕಾಶವುಂಟು. ಅದನ್ನು ಕಸಿದುಕೊಂಡು ತನ್ನ ರಕ್ಷಣೆಗಾಗಿ ಭದ್ರಕೋಟೆ ಕಟ್ಟಿಕೊಳ್ಳಲಿಕ್ಕೆ ದೇವಸ್ಥಾನವಾಗಲಿ, ಸುತ್ತಮುತ್ತಲಿನ ಜಾತ್ರಾ ಸ್ಥಳವಾಗಲಿ ಈತನ ಅರಮನೆಯಲ್ಲ. ಮತ್ತು ಅದು ಈತನ ಜಹಗೀರಿಯೂ ಅಲ್ಲ. ಇನ್ನು ಮುಂದೆ ಇಂತಹ ಕುಚೋದ್ಯತನಕ್ಕೆಡೆಯಿಲ್ಲ. ಈ ಮಾತನ್ನು ಎಂ.ಎಲ್.ಎ ಘೋರ್ಪಡೆ ಸ್ಪಷ್ಟವಾಗಿ ಅರಿತಿರಲಿ.*

## *ಬುಲೆಟಿನ್ ಪತ್ರಿಕೆಯ ಪಾತ್ರ*

*೧೯೬೨ರಲ್ಲಿ ಬಳ್ಳಾರಿಯಲ್ಲಿ ಬುಲೆಟಿನ್ ಕನ್ನಡ ಪತ್ರಿಕೆ ಪ್ರಕಟವಾಗುತ್ತಿತ್ತು. ಈ ಪತ್ರಿಕೆ ಜನಜಾಗ್ರತೆ ಮಾಡುವಲ್ಲಿಯೂ, ಸೊಂಡೂರಿನ ಮಾಜಿ ದೊರೆ ಯಶವಂತರಾವ್ ಘೋರ್ಪಡೆ ಮತ್ತು ಆತನ ಮಗ ಎಂ.ವೈ. ಘೋರ್ಪಡೆ ಕೃತ್ಯಗಳು, ಇವರ ಅಮಾನುಷ ಕೃತಿ, ಸರಕಾರಿ ಸಂಪತ್ತಿನ ಅಪಹರಣ, ದೇವಸ್ಥಾನಗಳ ಆಡಳಿತಕ್ಕಾಗಿ ಸರಕಾರವು ಕೊಡುತ್ತಿರುವ ವರ್ಷಂಪ್ರತಿ ೨೬,೦೦೦ ರೂಪಾಯಿಗಳ ಅವ್ಯವಹಾರ, ಅಲ್ಲದೆ ದೇವಸ್ಥಾನಕ್ಕೆ ಬರುವ ಭಕ್ತರಿಂದ ದರ್ಶನ ಫೀ ೧.೫೦ ರೂ ಪ್ರತಿಯೊಬ್ಬರಿಂದ ಅಕ್ರಮವಾಗಿ ಪಡೆದು ತನ್ನ ಒಡಲಿಗೆ ಸೇರಿಸಿಕೊಳ್ಳುತ್ತಿರುವುದು, ಇವೇ ಮೊದಲಾದ ಇವರ ಅಸ್ವಾಭಾವಿಕ, ಅನೈತಿಕ, ದುರ್ವ್ಯಾಪಾರಗಳನ್ನು ಕುರಿತು ಲೇಖನ ಪ್ರಕಟಿಸಿ, ಈ ಸಂದರ್ಭದಲ್ಲಿ ಹತ್ತಿಪ್ಪತ್ತು ವರ್ಷಗಳಿಂದಲೂ ಸೊಂಡೂರು ವಿಮೋಚನಾ ಸಮರ ಸಮಿತಿಯವರು ಮಾಡುತ್ತ ಬಂದ ಜನಸೇವಾ ಜನಜಾಗೃತಿ ಮತ್ತಲ್ಲದೆ ಜನರಿಗೆ ರಾಜನ ಅತ್ಯದ್ಭುತ ಮೋಸಗಾರಿಕೆಯನ್ನು ಬಯಲಿಗೆ ಹಾಕಲಿಕ್ಕೆ ಮಾಡುತ್ತಿರುವ ಜನೋಪಕಾರಿ ಕಾರ್ಯವನ್ನು ಈ ಪತ್ರಿಕೆ ಪ್ರಕಟಿಸಿ, ಬಳ್ಳಾರಿ ಜಿಲ್ಲಾ ಜನತೆಯಲ್ಲಿ ವಿವೇಕೋದಯವನ್ನುಂಟು ಮಾಡುತ್ತಿತ್ತು. ಈ ಪತ್ರಿಕೆಯ ಕೆಲವು ಸಂಚಿಕೆಯಲ್ಲಿನ ವರದಿಗಳನ್ನು ನೋಡಿದರೆ ಎಂ.ವೈ.ಘೋರ್ಪಡೆಯು ತನ್ನ ಎಂ.ಎಲ್.ಎ ಪದದ ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರು ಬಳ್ಳಾರಿ ಜಿಲ್ಲಾ ಪ್ರವಾಸ ಮಾಡುತ್ತಿರುವಾಗ ಎಂ.ಎಲ್.ಎ ಘೋರ್ಪಡೆ ಅವರ ಜೊತೆಗೆ ಇದ್ದು ಸಂಚಾರ ಕಾರ್ಯದಲ್ಲಿ ಬಿಡುವು ಸಿಕ್ಕಾಗಲೆಲ್ಲ ಸೊಂಡೂರು ವಿಮೋಚನಾ ಸಮರ ಸಮಿತಿಯವರು ತನ್ನ ಬಗ್ಗೆ ಬಳ್ಳಾರಿ ಬುಲೆಟಿನ್ ಪತ್ರಿಕೆಯಲ್ಲಿ ಅವಹೇಳನ ಮಾಡುತ್ತಲಿದ್ದಾರೆಂದೂ, ಆ ಎಲ್ಲಾ ಆಪಾದನೆಗಳೂ ನಿರಾಧಾರವಾದವುಗಳೆಂದೂ, ಶ್ರೀಮಾನ್ ನಿಜಲಿಂಗಪ್ಪನವರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಿದ್ದರಂತೆ. ಆದರೆ ಎಷ್ಟಾದರೂ ತಿಳಿದವರಾದ ನಿಜಲಿಂಗಪ್ಪನವರೂ ಈತನ ಮಾತಿಗೆ ಲಕ್ಷ್ಯ ಕೊಡದೆ ಸರಕಾರಕ್ಕೆ ಆಗುತ್ತಿರುವ ನಷ್ಟವನ್ನು ಪರಿಶೀಲಿಸಿ ಕ್ರಮಕೈಗೊಳ್ಳಲು ಸಿದ್ಧವಾದರು.*

*ಒಮ್ಮೆ ಎಂ.ಎಲ್.ಎ. ಎಂ.ವೈ. ಘೋರ್ಪಡೆ ಮಂತ್ರಿವರ್ಯ ಎಚ್.ಎಂ. ಚನ್ನಬಸಪ್ಪನವರನ್ನು ಭೇಟಿಯಾಗಲು ಹೋಗಿದ್ದ, ಆಗಲೂ ಸಹ ಯಜಮಾನ್ ಶಾಂತರುದ್ರಪ್ಪ ಮತ್ತು ಸೊಂಡೂರು ವಿಮೋಚನಾ ಸಮರ ಸಮಿತಿಯವರ ಮೇಲೆ ದೂರಿತ್ತು. ತಾನು ಯಾವ ಸರಕಾರಿ ಅರಣ್ಯದಲ್ಲಿಯೂ ಅಕ್ರಮವಾಗಿ ಗಂಧದ ಮರ ಕಡಿಸಿಲ್ಲವೆಂದೂ, ಮ್ಯಾಂಗನೀಸ್ ಅದಿರು ಮಾರಿಲ್ಲವೆಂದೂ, ಸಾಚಾವಂತನಾಗಿ ಹೇಳಹತ್ತಿದನಂತೆ. ಆಗ ಮಂತ್ರಿ ಚನ್ನಬಸಪ್ಪನವರು ಎಂ.ಎಲ್.ಎ. ಘೋರ್ಪಡೆಗೆ ಗದರಿಸಿ, ಹುಚ್ಚನ ಹಾಗೆ ಮಾತನಾಡಬೇಡ. ಸುಮ್ಮನೆ ಇನ್ನೆಂದು ಅಕ್ರಮವಾಗಿ ಸರ್ಕಾರಿ ಅರಣ್ಯ ಸಂಪತ್ತನ್ನು ಅಪಹರಿಸುವುದಿಲ್ಲ ಎಂದು ಬರೆದು ಕೊಟ್ಟು ಹೋಗು ಎಂದಾಗ ಎಂ.ಎಲ್.ಎ. ಘೋರ್ಪಡೆ ಸುಮ್ಮನೆ ಬಾಯಿ ಮುಚ್ಚಿಕೊಂಡು ಬರೆದುಕೊಟ್ಟರಂತೆ. ಈ ವಿಷಯವನ್ನೂ ಸಹ ಬುಲೆಟಿನ್ ಪತ್ರಿಕೆ ೪.೯.೬೭ರಲ್ಲಿ ಪ್ರಕಟಿಸಿದೆ.*

*ಮತ್ತೊಂದು ಸಲ ಮಂತ್ರಿ ರಾಮರಾವ್ ಬಳಿ ಹೋಗಿದ್ದ ಎಂ.ಎಲ್.ಎ. ಘೋರ್ಪಡೆ ತಾನೊಬ್ಬನೇ ಹೋಗಿರಲಿಲ್ಲ ಜೊತೆಗೆ ತನ್ನ ಅನ್ಯಾಯದ ಕತೆ ಮುಚ್ಚಿ ಹಾಕಲು ಶ್ರೀ ಟೇಕೂರು ಸುಬ್ಬಮಣ್ಯಂ ಮತ್ತು ಆರ್.ಆರ್.ದಿವಾಕರರನ್ನು ಕರೆದುಕೊಂಡು ಹೋಗಿದ್ದ. ಇವೆಲ್ಲ ಆಟಾಟೋಪಗಳೇತಕ್ಕೆ ತಪ್ಪು ಮುಚ್ಚಿಕೊಳ್ಳಲಿಕ್ಕೆ ಅಲ್ಲವೆ? ಒಂದು ವೇಳೆ ತಪ್ಪುಗಾರ ನಲ್ಲದಿದ್ದರೆ, ಈ ಎಲ್ಲಾ ಒಳಸಂಚುಗಳು ಏಕೆ? ತಾನು ಗರತಿಯಾಗಿದ್ದರೆ ಸೂಳೆಯ ಓಣಿಯಲ್ಲಿ ಮನೆ ಮಾಡು ಎಂಬ ಗಾದೆಯ ಮಾತಿನಂತೆ ಮಾಜಿ ದೊರೆ ಮತ್ತು ಆತನ ಮಗ ಎಂ.ವೈ. ಘೋರ್ಪಡೆ ಯಾವ ತಪ್ಪು ದಾರಿಯನ್ನೇ, ಅನೀತಿಯನ್ನೇ ತುಳಿಯದಿದ್ದ ಪಕ್ಷದಲ್ಲಿ ಅವರಿಗೆ ಅಂಜಿಕೆ ಏಕೆ? ಅಥವಾ ಜನರಾದರೂ ಇವರನ್ನು ದೂರುತ್ತಿದ್ದರೇಕೆ? ಬೆಂಕಿ ಇದ್ದರೆ ತಾನೆ ಹೊಗೆಯಾಡುವುದು. ಕಾರಣ ಈತ ಅನ್ಯಾಯವಾಗಿ ನಡೆಯುತ್ತಿರುವುದರಿಂದಲೇ ಜನರು ದೂರುತ್ತಿರುವುದು. ಇಲ್ಲದೆ ಹೋದರೆ ಯಾರು ದೂರುತ್ತಾರೆ?*

*ಸರಕಾರಕ್ಕೆ ಇವೆಲ್ಲ ತಿಳಿಯಲಿಕ್ಕಿಲ್ಲ. ಸರಕಾರಕ್ಕೆ ಇವೆಲ್ಲ ತಿಳಿಯುವಂತೆ ಮಾಡುವುದು ಜನರ ಕರ್ತವ್ಯವಾಗಿದೆ. ಪೊಲೀಸ್ ಖಾತೆಯವರು ಕೇಳಿಕೊಳ್ಳುವುದಿಲ್ಲವೇ? ಕೇಡಿಗಳನ್ನು ಪತ್ತೆ ಹಚ್ಚಲಿಕ್ಕೆ ಜನರನ್ನೂ ಸಹ ಕರೆಯಿಸಬೇಕೆಂದು. ಅಂದ ಮೇಲೆ ಇಂತಹ ಕೇಡಿಗಳ ದುರ್ವ್ಯಾಪಾರವನ್ನು ಕಣ್ಣಾರೆ ಕಂಡ ಜನತೆ ಸರಕಾರಕ್ಕೆ ಹೇಳುತ್ತದೆ. ಇದು ನ್ಯಾಯ ಸಮ್ಮತವಲ್ಲವೇ? ಒಂದು ವೇಳೆ ಸರಕಾರವು*

*ಕ್ರಮಕೈಗೊಳ್ಳಲು ಹಿಂಜರಿದರೆ ಸರಕಾರವನ್ನು ಒತ್ತಾಯ ಪಡಿಸುವ ಹಕ್ಕೂ ಜನತೆಗಿದೆ. ಯಾಕೆಂದರೆ ಇದು ಜನತಾ ಸರಕಾರ. ಜನರೇ ಈ ಸರಕಾರವನ್ನು ರಚಿಸಿದ್ದಾರೆ. ಕಾರಣ ಈಗ ಜನರು ಎಚ್ಚೆತ್ತು ಎಂ.ಎಲ್.ಎ ಘೋರ್ಪಡೆಯ ಅನಂತಾನಂತ ಅನ್ಯಾಯಗಳನ್ನು ಖಂಡಿಸಿ ಯೋಗ್ಯ ಕ್ರಮ ಕೈಗೊಳ್ಳುವಂತೆ ಸರಕಾರವನ್ನು ಪ್ರಾರ್ಥಿಸಬೇಕೆಂದು ತಿಳಿಸುವುದೇ ಈ ಕಾದಂಬರಿಯ ಮೂಲ ಗುರಿ.*

ಒಂದು ಕಾಲದ ವಾಸ್ತವವನ್ನು ಸಾಮಾಜಿಕ ಕಳಕಳಿ ಇರುವವರು ಗ್ರಹಿಸುವಿಕೆಯ ಸ್ವರೂಪವನ್ನು ತಿಳಿಯಲು, ಆಳುವ ದೊರೆಯ ಎದುರು ಆತನ ತಪ್ಪುಗಳನ್ನು ಹೇಳಲಿಕ್ಕಾಗದೆ, ಹೇಳಿದರೂ ಅವುಗಳನ್ನು ತಿದ್ದಲಿಕ್ಕಾಗದ ಅಸಹಾಯಕ ಸ್ಥಿತಿ ಇರುವಾಗ ಒಂದು ಭಾಷೆ ಪಡೆಯುವ ಸ್ವರೂಪವನ್ನು ಅರಿಯಲು, ಸ್ವಾತಂತ್ರ್ಯಬಂದ ನಂತರದಲ್ಲಿ ನೈತಿಕತೆಯೇ ಬದುಕು ಎಂದುಕೊಂಡ ಜನರು ಮತ್ತು ನೈತಿಕತೆಯನ್ನು ಗಾಳಿಗೆ ತೂರುತ್ತಿದ್ದ ಶಕ್ತಿ ರಾಜಕಾರಣ, ಈ ಎರಡರ ನಡುವಿನ ಮುಖಾಮುಖಿ ಹೇಗಿತ್ತು ಎಂದು ತಿಳಿಯಲು ಈ ಕಾದಂಬರಿ ನೆರವಾಗುತ್ತದೆ. ಈ ಬರಹಕ್ಕೆ ವೈಯಕ್ತಿಕ ದ್ವೇಷದ ನೆಲೆಯೂ ಇದೆ. ಈ ಕಾರಣಕ್ಕಾಗಿಯೇ ಈ ಭಾಗವನ್ನು ಅಧಿಕೃತ ಪಠ್ಯ ಎಂದು ಗ್ರಹಿಸಿಲ್ಲ. ಅಂತೆಯೇ ಸ್ವಾತಂತ್ರ್ಯ ನಂತರದ ಜನರ ಪ್ರತಿಭಟನೆಗಳಿಗೆ ಆಧಾರಸ್ತಂಭ ಎಂತಲೂ ಪರಿಗಣಿಸಿಲ್ಲ. ಅಂದ ಮಾತ್ರಕ್ಕೆ ವೈಯಕ್ತಿಕ ದೃಷ್ಟಿಯಲ್ಲಿ ಸಾಮಾಜಿಕ ಆಯಾಮವು ಇರುವುದಿಲ್ಲ ಎಂಬ ನಿಲುವೂ ಸರಿಯಲ್ಲ. ಇಲ್ಲಿನ ಬರಹ ಸಿಟ್ಟು ಆಕ್ರೋಶ ಅಸಹಾಯಕ ಸ್ಥಿತಿಯಿಂದ ರಚನೆಯಾಗಿದೆ. ಹಾಗಾಗಿ ಏಕವಚನದಲ್ಲಿ ಸಂಭೋದನೆ ಇದೆ. ಬರಹದಲ್ಲಿ ಎದ್ದು ಕಾಣುವುದು ಮುಸುಗುಡುವ ನೈತಿಕತೆ ಮತ್ತು ಗಾಂಧಿವಾದ. ಆಕ್ರೋಶವನ್ನು ವ್ಯಕ್ತಪಡಿಸುತ್ತಲೂ ಒಂದು ಭಾಷೆಗೆ ಗಡುಸುತನ ಬರುತ್ತದೆ. ವ್ಯಂಗ್ಯ ಕುಹುಕ ಆಶ್ಚರ್ಯ ಚಿನ್ಹೆ, ವಿಡಂಬನೆ ಇವುಗಳು ಭಾಷೆಯ ಏರು ಇಳುವಿನ ಸಾಧನಗಳಾಗುತ್ತವೆ. ವ್ಯಕ್ತವಾಗುವ ಸಿಟ್ಟಿಗೆ ಹೊಸ ರೂಪಕಗಳು ಬಳಕೆಯಾಗುತ್ತವೆ. ಆಗ ಬರಹಕ್ಕೆ ಕಾವ್ಯದ ಸ್ವರೂಪವೂ ಸಾಧ್ಯವಾಗುತ್ತದೆ. 'ಎಂ.ಎಲ್.ಎ ಆದೊಡನೆ ಈತನ ತಲೆಯ ಮೇಲೆ ಎರಡು ಹದನಾದ ಕೋಡುಗಳು ಚಿಗುರಿದವು, ಜನರನ್ನು ಅಧಿಕಾರಿಗಳನ್ನು ಹಿರಿದು ಗಾಯಗೊಳಿಸಲಿಕ್ಕೆ, ಎನ್ನುವಲ್ಲಿ ಪ್ರಬಲವಾದದ್ದನ್ನೇ ತಣ್ಣಗೆ ಹೇಳುವ ದಾಟಿಯಿದೆ. 'ಕಳ್ಳನ ಜೀವ ಹುಳ್ಳಗೆ' 'ನಾಯಿ ಹೊಡೆಯುವ ಕೋಲಿಗಿಂತಲೂ ಕಡೆ', 'ಹೊಟ್ಟೆಯ ಸಿಟ್ಟು ರಟ್ಟೆಗಿಲ್ಲ', 'ಗರತಿಯಾಗಿದ್ದಲ್ಲಿ ಸೂಳೆಯ ಓಣಿಯಲ್ಲಿ ಮನೆ ಮಾಡು', 'ಬೆಂಕಿ ಇದ್ದರೆ ತಾನೆ ಹೊಗೆಯಾಡುವುದು' ಈ ಬಗೆಯ ಜನಪದ ನುಡಿಗಟ್ಟುಗಳನ್ನು ಬಳಸಿಕೊಳ್ಳುವ ಮೂಲಕ ಹೇಳಬೇಕೆಂದದನ್ನು ಜನಭಾಷೆಯಲ್ಲಿ ಜನಪರವಾಗಿಸುವ ತುಡಿತವಿದೆ. ಭಾಷೆಯ ಓಘ ತೀವ್ರವಾಗಿದೆ. ಜನಸಾಮಾನ್ಯರ ಭಾಷೆಯಲ್ಲಿ ರಾಜರನ್ನು ನಿಂದಿಸುವುದೆಂದರೆ ಅವಮಾನವೇ ಸರಿ. ರಾಜ ವೈಭವವನ್ನು ವರ್ಣಿಸಲು ಹಳೆಗನ್ನಡ ಕಾವ್ಯಗಳಲ್ಲಿ ಶಾಸ್ತ್ರೀಯ ಭಾಷೆಯೊಂದು ದುಡಿದಿದೆ. ಅದೇ ರಾಜರನ್ನು ದೂಷಿಸುವಾಗ ಜನಪದ ಭಾಷೆಯ ನುಡಿಗಟ್ಟುಗಳ ಗಡುಸುತನ ಬಳಕೆಯಾಗಿದೆ. ಇದು ಭಾಷೆ ಬಳಕೆಯ ರಾಜಕಾರಣವೂ ಹೌದು.

ಬರಹದ ಧೋರಣೆ ಸಿಟ್ಟಿನ ಸ್ಫೋಟಗೊಳ್ಳುವಿಕೆ. ಬೀಸು ಹೇಳಿಕೆಗಳಿಲ್ಲದೆ ಖಚಿತ ಮಾಹಿತಿಗಳ ಮೂಲಕ ಅಧಿಕೃತವಾಗಿ ವಿಮರ್ಶಿಸುವ ಗುಣವಿದೆ. ಯಜಮಾನರಿಗೆ 'ಕಾದಂಬರಿ' ಎಂದು ಬರೆಯುವುದರ ಹಿಂದಿನ ತುಡಿತವೇನಾಗಿರಬಹುದು? 'ಪತ್ತೇದಾರಿ'ಕೆಯಲ್ಲಿ ಅಪರಾಧವನ್ನು ಗುರುತಿಸುವ ಮತ್ತು ಅದಕ್ಕೆ ಹೊಡೆಯುವ ನೇರವಂತಿಕೆ ಇದೆ. 'ಹಸಿದ ಮಾನವ ಹುಸಿನುಡಿದು ಹದಗೆಡಿಸಿದ ಸೊಂಡೂರು ನಾಡು' ಅಥವಾ ಮಾಜಿ ಮಹಾರಾಜ ಹಾಗೂ ಯುವರಾಜರ ಭಯಂಕರ ಒಳಸಂಚು ಎನ್ನುವ ಕಾದಂಬರಿಯ ಶೀರ್ಷಿಕೆಯಲ್ಲಿಯೇ ರೋಚಕತೆ ಇದೆ. ಅಧಿಕಾರ ವಿಕೇಂದ್ರಿಕರಣಕ್ಕೆ ಗ್ರಾಮ ಪಂಚಾಯಿತಿಗಳು ಆದರೂ ಭೂ ಹೊಡೆಯರು, ಉಳ್ಳವರ ಹಸ್ತಕ್ಷೇಪದಿಂದ ಅದರ ದುರುಪಯೋಗ ಹೇಗೆ ನಡೆಯುತ್ತಿತ್ತು ಎನ್ನುವುದನ್ನು ಯಜಮಾನರು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಇಲ್ಲಿ ಪ್ರಜಾಪ್ರಭುತ್ವ ಸರ್ಕಾರದ ದುರ್ಬಲತೆಯನ್ನು ಒತ್ತಿ ಹೇಳಲಾಗಿದೆ. ಇಂಗ್ಲಿಷರ ಆಡಳಿತದಿಂದ ಹೊರಬಂದ ಜನರು ಮುಕ್ತವಾದ ಸ್ವಾತಂತ್ರ್ಯ ಬದುಕನ್ನು ಕನಸು ಕಂಡಿದ್ದರು. ಆದರೆ ಆ ಮುಕ್ತತೆ ಇಲ್ಲದೆ ಇಂಗ್ಲಿಷರ ಜಾಗದಲ್ಲಿ ಮತ್ತೊಬ್ಬರು ಬಂದು ಕೂತಂತೆ 'ಪ್ರಜಾಪ್ರಭುತ್ವ' ಸರ್ಕಾರ ಜನತೆಗೆ ಕಾಣಿಸಿತು. ಹಾಗಾಗಿಯೇ ಇಂಗ್ಲಿಷರೊಂದಿಗಿನ ದೇಶಿಯರ ಸಂಘರ್ಷದಂತೆಯೇ ದೇಶಿಯರೊಂದಿಗೆ ಜನರ ಸಂಘರ್ಷಕ್ಕೆ ಯಜಮಾನರು ಜನನಾಯಕರಂತೆ ಕಾದಂಬರಿಯನ್ನು ನಿರೂಪಿಸಿದ್ದಾರೆ. ಇಂತಹ ಹಲವು ಕಾರಣಕ್ಕಾಗಿ ಈ ಬರಹವು ಮುಖ್ಯವಾಗಿದೆ.

# ೬. ಹೋರಾಟದ ೪೬ ದಿನಗಳು (1)

ಸೊಂಡೂರಿನ ಹಳೆ ತಾಲ್ಲೂಕು ಕಚೇರಿ ಕಟ್ಟಡದ ಶೈಲಿ ಬ್ರಿಟಿಷ್ ಮಾದರಿಯದು. ಈಗ 'ಸೊಂಡೂರು ಕುಶಲ ಕಲಾ ಕೇಂದ್ರ'ವಿದೆ. ೧೫ ರಿಂದ ೨೦ ಮಹಿಳೆಯರು ಇಲ್ಲಿ ನೂಲುವ, ನೂಲು ತೆಗೆಯುವ ಕೆಲಸ ಮಾಡುತ್ತಿದ್ದಾರೆ. ಇಲ್ಲಿನ ಉದ್ಯೋಗಿಯೊಬ್ಬರನ್ನು ಮಾತನಾಡಿಸಲಾಯಿತು. '೧೩ ವರ್ಷದಿಂದ ಕೆಲಸ ಮಾಡ್ತೀವಿ. ಕೆಲಸ ಮಾಡಿದಷ್ಟು ಹಣ. ಒಂದು ಯುನಿಟ್ ಗೆ ೧.೨೦ ಪೈಸೆ ಕೊಡ್ತಾರೆ' ಎಂದು ಹೇಳಿದರು. ಅದೇ ಕಟ್ಟಡದಲ್ಲಿ 'ಸ್ಮಯರ್ ಬಾಲವಾಡಿ' ಇದೆ. ರಾಜರ ಕಂಪನಿಗಳಿಗೆ ಹೋಗುವವರ ಮಕ್ಕಳು ಇಲ್ಲಿರುತ್ತವೆ. ಈ ಕಟ್ಟಡದ ಮೇಲೆ ಉಡದ ರಾಜ ಚಿನ್ಹೆ ಇದೆ. ಕಟ್ಟಡದ ಒಳಗಡೆ ಚರಕ ಹಿಡಿದಿರುವ ಗಾಂಧೀಜಿ ಮತ್ತು ಶಿವಾಜಿಯ ಫೋಟೋ ಇದೆ. ಒಬ್ಬ ಶಾಂತಿಯ ದೂತ ಮತ್ತೊಬ್ಬ ಹುಟ್ಟು ಹೋರಾಟಗಾರ. ಕಟ್ಟಡದ ಒಳಗೆ ಕೈಮಗ್ಗದ ಮಿಷನ್ ಗಳನ್ನು ಅಳವಡಿಸಲಾಗಿದೆ. ರಾಜದರ್ಬಾರಿದ್ದ ಜಾಗವೀಗ ಮುರುಕಲು ಕೈಮಗ್ಗದ ಬಿಡಿ ಭಾಗಗಳಿಂದ ತುಂಬಿದೆ. ಅಲ್ಲಿ ನಿಂತು ೧೯೭೩ರ ಭೂ ಹೋರಾಟದ ಸಂದರ್ಭವನ್ನು ಕಲ್ಪಿಸಿಕೊಂಡರೆ, ಹೋರಾಟದ ಕೂಗು ಜೈಕಾರಗಳು ಮಸುಕಾಗಿ ಕೇಳಿ ಮರೆಯಾದದಂತೆ ಅನಿಸುತ್ತದೆ. ಈಗ ಕೈಮಗ್ಗವಿರುವ ಗಾಂಧಿ ಕನಸಿನ ದೇಶೀ ಕುಡಿ ಕೈಗಾರಿಕೆಯ ಈ ಹಳೆ ತಾಲ್ಲೂಕು ಆಫೀಸಿನ ಮುಂದೆ ೧೯೭೩ರಲ್ಲಿ ೪೬ ದಿನಗಳ ಕಾಲ ರೈತರು ಭೂಮಿಗಾಗಿ ಹೋರಾಟ ಮಾಡಿದರು.

ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರಿಗೆ ಮಾರ್ಚ್ ೨೩. ೧೯೭೩ರಂದು ಸಮಾಜವಾದಿ ಪಕ್ಷ ಹಾಗೂ ಸೊಂಡೂರು ರೈತ ಸಂಘದ ಒಂದು ನಿಯೋಗವು ರಾಜಮನೆತನ ನಡೆಸುತ್ತಿರುವ ಸುಲಿಗೆ ವಿಧಾನಗಳನ್ನು ತಿಳಿಸಿ ಒಂದು ಮನವಿಯನ್ನು ಸಲ್ಲಿಸಿತು. ಅರಸು ಅವರು ಹೀಗೆ ಸಲ್ಲಿಸಿದ್ದ ಮನವಿಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಮೌನವಾಗಿದ್ದರು. ಈ ಮೌನಕ್ಕೆ ಅವರ ಮಂತ್ರಿಮಂಡಲದಲ್ಲಿದ್ದ ಅರ್ಥಸಚಿವರಾದ ಎಂ.ವೈ. ಘೋರ್ಪಡೆಯವರ ಪ್ರಾಬಲ್ಯವೇ ಕಾರಣದಂತೆ ಕಂಡಿತು. ಹೀಗಾಗಿ ಈ ಮೊದಲು ನಿರ್ಧರಿಸಿದಂತೆ ಹೋರಾಟವನ್ನು ಸೆಪ್ಟಂಬರ್ ೧೦.೧೯೭೩ರಂದು ಸೊಂಡೂರಿನಲ್ಲಿ ಆರಂಭಿಸಲಾಯಿತು.ಜ

ರಾಜ್ಯ ಸಮಾಜವಾದಿ ಪಕ್ಷ ಹಾಗೂ ಸೊಂಡೂರು ರೈತ ಸಂಘಟನೆಗಳ ಜಂಟಿ ನೇತೃತ್ವದಲ್ಲಿ ಅಂದಿನ ಬೆಳಿಗ್ಗೆ ಮೆರವಣಿಗೆ ನಡೆಯಿತು. ಕೆ.ಜಿ. ಮಹೇಶ್ವರಪ್ಪ ಈ ಸಂದರ್ಭವನ್ನು ನೆನಪಿಸಿ ಕೊಳ್ಳುತ್ತ "ಸೊಂಡೂರಿನ ಬಸ್ ಸ್ಟ್ಯಾಂಡ್ ನಲ್ಲಿ ಒಂದು ಬಹಳ ದೊಡ್ಡ ಬಹಿರಂಗ ಸಭೆ ಮಾಡಿದ್ವಿ ಇಲ್ಲಿ ಸಾರ್ವಜನಿಕ ಸಭೆಗಳು ಆಗ್ತಾ ಇರಲ್ಲ. ಆ ರಾಜರದು ಎಷ್ಟರ ಮಟ್ಟಿಗೆ ದಬ್ಬಾಳಿಕೆ ಅಂದ್ರೆ ಒಂದು ಸಾರ್ವಜನಿಕ ಸಭೆ ಆಗ್ಲಿ ಅವರ ವಿರುದ್ಧ ಮತಾಡೋದಾಗ್ಲಿ ಇಲ್ಲಿ ಸಾಧ್ಯ ಇರ್ಲ್ಲ. ನಮ್ಮ ಬಹಿರಂಗ ಸಭೆ ಪ್ರಾರಂಭವಾಗುತ್ತಲೂ ಘೋರ್ಪಡೆ ಕಡೆಯವರು, ಈ ಸಭೆಗೆ ಯಾರು ಪರ್ಮಿಷನ್ ಕೊಟ್ರು ಅಂತೇಳಿ.. ಅದೆಂಗೆ ಮಾಡ್ತೀರಿ ಮಾಡ್ರಿ.. ಎಂದು ಧಮಕಿ ಹಾಕಿದ್ರು. ಇದ್ಯಾವುದನ್ನು ಲೆಕ್ಕಿಸದೆ ನಾವು ಸಭೆಯನ್ನು ಮಾಡಿದ್ವಿ" ಎನ್ನುತ್ತಾರೆ. ಸೆಪ್ಟಂಬರ್ ೧೭ರಂದು ಚಳವಳಿಯ ಏಳನೇ ದಿನ 'ಕನ್ನಡ ಪ್ರಭ'ದಲ್ಲಿ ಚಳುವಳಿ ಪ್ರಾರಂಭವಾದ ಒಂದು ಫೋಟೊ ಇದೆ. ಈ ಪೋಟೊವನ್ನು ತುಂಬಾ ಎತ್ತರದ ಸ್ಥಳದಿಂದ ತೆಗೆಯಲಾಗಿದೆ. ಚಿತ್ರದಲ್ಲಿ ಎಣಿಕೆಗೆ ಸಿಗುವುದು ೧೮೦ ಜನ. ಒಂದು ಜೀಪು ನಿಂತಿದೆ. ಅದರ ಸುತ್ತಮುತ್ತ ನಾಲ್ಕೈದು ಜನ ಪೊಲೀಸರು ನಿಂತಿದ್ದಾರೆ. ಜೀಪಿನ ಬಳಿ ನಾಲ್ಕು ಮಂದಿ ಜನರಿಗೆ ಎದುರು ನಿಂತು ಮಾತನಾಡುತ್ತಿರುವಂತೆ ಮಸುಕು ಮಸಕಾಗಿ ಕಾಣಿಸುತ್ತಿದೆ. ಇಡಿಯಾದ ಚಿತ್ರ ಒಂದು ಅತ್ಯಂತ ಕುತೂಹಲಭರಿತವಾದ ಸಭೆ ನಡೆಯುತ್ತಿದೆ, ಜನರೆಲ್ಲಾ ಉತ್ಸುಕರಾಗಿ ನಿರೀಕ್ಷೆಗಳಿಂದ ಮಾತನಾಡುವವರನ್ನು ನೋಡುತ್ತಿದ್ದಾರೆ ಎನ್ನುವಂತದೆ. ಬಹುತೇಕರು ಕಚ್ಚೆ ಪಂಚೆ, ಲುಂಗಿ ಮೈಯಂಗಿ (ಬನಿಯನ್)ಧರಿಸಿದ್ದಾರೆ. ತಲೆಗೆ ಕೆಲವರು ಟವಲ್ ಸುತ್ತಿದ್ದಾರೆ. ತರುಣರಿಗಿಂತ ಮಧ್ಯವಯಸ್ಸಿನವರೇ ಹೆಚ್ಚಾಗಿದ್ದಾರೆ. ಚಿತ್ರದಲ್ಲಿ ಮಹಿಳೆಯರು ಕಾಣುವುದಿಲ್ಲ. ಬಿಗಿಯಾಗಿ ವಾತಾವರಣ ಬಹಿರಂಗ ಸಭೆಯೊಂದರ ಗಂಭೀರತೆಯನ್ನು ಸೂಚಿಸುತ್ತಿದೆ. ಕೆಲವರು ಹಿಂದೆ ಕೈಕಟ್ಟಿಕೊಂಡರೆ ಕೆಲವರು ಮುಂದೆ ಕೈಕಟ್ಟಿಕೊಂಡಿದ್ದಾರೆ. ಪ್ರತಿಭಟನೆಯ ಸಂಕೇತವಾಗಿ ಒಬ್ಬರೂ ಕೈ ಮೇಲಕ್ಕೆತ್ತಿಲ್ಲ. ಈಗಿನ ನಮ್ಮ ಬಹಿರಂಗ ಸಭೆಗಳ ಕಲ್ಪನೆಯನ್ನು ಹೋಲಿಕೆ ಮಾಡಿದರೆ ಇಲ್ಲಿ ಮುಗ್ಧತೆ ಎದ್ದುಕಾಣುತ್ತದೆ. ಈ ಚಿತ್ರವು ಚಳುವಳಿಯ ಲಿಖಿತ ದಾಖಲೆಗಳ ಹಲವು ವಿವರಗಳಿಗಿಂತ ಶಕ್ತವಾದ ಒಂದು ಕಲ್ಪನೆಯನ್ನು ಕಟ್ಟಿಕೊಡುತ್ತದೆ.

ಮೊದಲ ದಿನದ ಮೆರವಣಿಗೆಯಲ್ಲಿ ಎರಡು ನೂರಕ್ಕೂ ಹೆಚ್ಚು ಜನ ಪ್ರದರ್ಶನಕಾರರನ್ನು ಕುರಿತು ಶಿವಮೊಗ್ಗ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷದಿಂದ ಗೆದ್ದು ಲೋಕಸಭೆಯ ಸದಸ್ಯರಾಗಿದ್ದ ಜೆ.ಎಚ್. ಪಟೇಲ್. ಹೋರಾಟದ ನಿರ್ದೇಕರಾಗಿದ್ದ ಕೆ.ಜಿ. ಮಲ್ಲೇಶ್ವರಪ್ಪ, ರಾಜ ಸಮಾಜವಾದಿ ಪಕ್ಷದ ಕಾರ್ಯದಶಿಗಳಾಗಿದ್ದ ಎಸ್. ವೆಂಕಟರಾಮ್, ಸಹ ಕಾರ್ಯದರ್ಶಿಗಳಾಗಿದ್ದ ಎಸ್.ಎಸ್. ಕುಮಟ, ಸೊಂಡೂರು ರೈತ ಸಂಘದ ಅಧ್ಯಕ್ಷರಾಗಿದ್ದ ಎಲಿಗಾರ ತಿಮ್ಮಪ್ಪ ಮೊದಲಾದವರು ಮಾತನಾಡಿದರು. ಮಾಜಿ ಮಹಾರಾಜರು. ಮಾಜಿ ಮಹಾರಾಜರ ೧೯೪೮ರ ಸೊಂಡೂರತು ಪ್ರೊಕ್ಲಮೇಷನ್ ನ (ಜಾಹಿರುನಾಮೆ) ಒಂದು ಪ್ರತಿಯನ್ನು ಜನತಾ ಪ್ರತಿಭಟನೆಯ ಸಂಕೇತವಾಗಿ ಸಭೆಯಲ್ಲಿ ಸುಡಲಾಯಿತು. ೨೨ ಸತ್ಯಾಗ್ರಹಿಗಳು ತಾಲೂಕು ಕಛೇರಿಯ ಮುಂದೆ ಪಿಕೆಟಿಂಗ್ ನಡೆಸಿದಾಗ ಪೊಲೀಸರು ಬಂಧಿಸಿದರು. ಬಂಧನಕ್ಕೊಳಗಾದವರಲ್ಲಿ ಬೆಂಗಳೂರಿನ ಸಮಾಜವಾದಿ ಪಕ್ಷದ ಪ್ರಮುಖ ಕಾರ್ಯಕರ್ತರಾದ ಟಿ.ಮರಿಯಪ್ಪ, ಸೊಂಡೂರು ಪುರಸಭಾ ಸದಸ್ಯ ಲಿಂಗಾರೆಡ್ಡಿ, ಲಕ್ಷ್ಮೀಪುರದ ಗ್ರಾಮ ಪಂಚಾಯ್ತಿ ಸದಸ್ಯ ನಾಗಪ್ಪ ಮೊದಲಾದವರು ಸೇರಿದ್ದರು. ಮೊದಲೇ ಹೇಳಿದಂತೆ ಬಹಿರಂಗ ಸಭೆಯಲ್ಲಿ ೨೦೦ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಪಿಕೆಟಿಂಗ್ ನಂತಹ ಸಂದರ್ಭದಲ್ಲಿ ಜನತೆ ಹೆಚ್ಚಾಗಿ ಭಾಗವಹಿಸಲಿಲ್ಲ. ಕಾರ್ಯಕರ್ತರನ್ನೊಳ ಗೊಂಡಂತೆ ಮೊದಲ ದಿನ ಅರೆಸ್ಟ್ ಆದವರು ೨೨ ಜನ ಮಾತ್ರ. ಈ ದಿನ ಚಳವಳಿಯಲ್ಲಿ ಭಾಗವಹಿಸಿದವರ ಪಟ್ಟಿ ನೋಡಿದರೆ ಎಲ್ಲರೂ ಭೂಮಾಲಿಕ ಕುಟುಂಬಗಳಿಂದಲೇ ಬಂದವರು. ಜೆ.ಎಚ್. ಪಟೇಲ್, ಕೆ.ಜಿ.ಮಹೇಶ್ವರಪ್ಪ, ಎಲಿಗಾರ ತಿಮ್ಮಪ್ಪ ಇವರುಗಳೆಲ್ಲ ಹೆಚ್ಚು ಕಡಿಮೆ ಸ್ವತಃ ಭೂಮಾಲಿಕರು. ಹೋರಾಟ ಮಾತ್ರ ಬಡವರಿಗೆ ಭೂಮಿ ಕೊಡಿಸುವ ಬಗ್ಗೆ. ಭೂಮಿಯನ್ನು ಪಡೆಯಬೇಕಾಗಿದ್ದ ರೈತರು ಅಷ್ಟಾಗಿ ಭಾಗವಹಿಸಲಿಲ್ಲ. ಭೂಮಾಲಿಕರು ಮಾತ್ರ ಭೂಮಾಲಿಕರನ್ನು ಎದುರಿಸುವ 'ಮುಳ್ಳನ್ನು ಮುಳ್ಳಿನಿಂದಲೆ ತೆಗೆ' ಎನ್ನುವ ಅರ್ಥದಲ್ಲಿ ಈ ಹೋರಾಟ ಆರಂಭವಾಯಿತು.

ಚಳುವಳಿ ಪ್ರಾರಂಭವಾಗುತ್ತಲೂ ರಾಜವಂಶದ ಪರವಾಗಿದ್ದವರು ಇದನ್ನು ವಿರೋಧಿಸುವಂತೆ ಮನವಿ ಮಾಡಿಕೊಂಡರು. ಸೆಪ್ಟಂಬರ್ ೧೧ರಂದು 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಯಲ್ಲಿ ಪ್ರಕಟವಾದ ವರದಿಯಲ್ಲಿ ಮನವಿ ಮಾಡಿಕೊಂಡವರನ್ನು ಹೆಸರಿಸಿಲ್ಲ. 'ಸಮಾಜವಾದಿ ಪಕ್ಷ ಸಂಘಟಿಸಿರುವ ರೈತ ಹೋರಾಟವೆನ್ನಲಾದ ಚಳವಳಿಯಿಂದ ಜನರು ತಪ್ಪು ಮಾರ್ಗ ಹಿಡಿಯದೆ ಸೊಂಡೂರು ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಐಕ್ಯ ಕಾಪಾಡಿಕೊಳ್ಳಬೇಕು' ಎಂದು ಇಲ್ಲಿಯ ಪ್ರಮುಖರು ಸಮಾಜದ ಜನತೆಗೆ ಮನವಿ ಮಾಡಿದ್ದರೆ. ಈ ಬಗ್ಗೆ ಹೊರಡಿಸಿದ ಕರಪತ್ರದಲ್ಲಿ ಅವರು ಪ್ರಸ್ತುತ ಚಳವಳಿಗೆ ಜನತೆಯ ಬೆಂಬಲವೇನೂ ಇಲ್ಲವೆಂದೂ, ಅದು ಅಭಿವೃದ್ಧಿ ಕಾರ್ಯಗಳಿಗೆ ಆತಂಕಕಾರಿಯಾಗಿದೆಯಲ್ಲದೆ ತಾಲೂಕಿನಲ್ಲಿ ಶಾಂತ ಪರಿಸ್ಥಿತಿಯನ್ನು ಕದಡುವಂತಾಗಿದೆ ಎಂದೂ, ತಮಗೆ ಹಿತವಾದದ್ದನ್ನು ತಾಲೂಕಿನ ಜನರು ನಿರ್ಧರಿಸಬೇಕಲ್ಲದೆ ಹೊರಗಿನವರು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲವೆಂದೂ, ತಾಲ್ಲೂಕಿನ ಜನತೆಯ ಶೋಷಣೆ ನಡೆದಿದೆ ಎನ್ನುವ ಸಮಾಜವಾದಿ ಪಕ್ಷದ ಪ್ರಕಟಣೆಯು ಸತ್ಯಕ್ಕೆ ದೂರವಾಗಿದೆ ಎಂದೂ, ಇಲ್ಲಿ ರಾಜಶಾಹಿಯಿಲ್ಲ ಅದರ ಬದಲು ಪ್ರಜಾಪ್ರಭುತ್ವವಿದೆಯೆಂದು ಹೇಳಲಾಗಿತ್ತು.

ಈ ವರದಿಯ ಚಳುವಳಿಯನ್ನು ನಿಲ್ಲಿಸುವ ಪ್ರಯತ್ನವಾಗಿ ಕಾಣುತ್ತಿದೆ. ಹಾಗೆಯೇ ಒಂದು ವರ್ಗದ ಜನಾಭಿಪ್ರಾಯ ಕೂಡ. ಇನ್ನು ಈ ವರದಿ ಅದೇ ದಿನ 'ಪ್ರಜಾವಣಿ', 'ಕನ್ನಡ ಪ್ರಭ' ಪತ್ರಿಕೆಗಳಲ್ಲಿ ಪ್ರಕಟವಾಗಲಿಲ್ಲ. 'ಸಂಯುಕ್ತ ಕರ್ನಾಟಕ' ಮಾತ್ರ ಇದನ್ನು ಮುಖ್ಯ ವರದಿ ಎಂಬಂತೆ ಬಿಂಬಿಸಿತು. 'ಸಮಾಜವಾದಿಗಳಿಂದ ಸೊಂಡೂರಲ್ಲಿ ಚಳವಳಿ ಆರಂಭ' ಎಂಬ ಒಂದು ಕಲಮಿನ ವರದಿ ಪ್ರಕಟಿಸಿದ 'ಸಂಯುಕ್ತ ಕರ್ನಾಟಕ'ಕ್ಕೆ ಚಳವಳಿಯನ್ನು ನಿಲ್ಲಿಸುವ ವರದಿಯೇ ಮುಖ್ಯವಾದದ್ದರ ಹಿಂದಿನ ಧೋರಣೆಯನ್ನು ಊಹಿಸಬಹುದು. ಈ ವರದಿಯು ನಯವಾಗಿ ರಾಜಶಾಹಿಯ ದರ್ಪವನ್ನು ಮನವಿ ರೂಪದಲ್ಲಿ ವಿಸ್ತರಿಸುವ ಪ್ರಯತ್ನ ಮಾಡುತ್ತಿದೆ. ಲಕ್ಷ್ಮೀಪುರದ ನಾಗಪ್ಪ 'ಮೊದಲ ದಿನ ಯಾರು ಯಾರು ಭಾಗವಹಿಸಿದ್ರೊ ಅವರ ಮನೆಗೆ ರಾಜರ ಕಡೆಯವರು ಬಂದು ನಾಳೆ ಏನಾದ್ರು ನೀವ್ ಭಾಗವಹಿಸಿದ್ರೆ ನಿಮ್ಮ ಗತಿ ಮುಗಿದಂತೆ.. ಅವ್ರೇನು ಈಗ ಇರ್ತಾರೆ.. ನಾಳೆ ಹೋಗ್ತಾರೆ.. ಆಮೇಲೆ ಸೊಂಡೂರಿನ್ಯಾಗೆ ಬದುಕೋರು ನೀವು.. ಅಂತ ಹೆದರಿಸ್ತಾ ಇದ್ರು'..; ಎಂದು ಹೇಳುತ್ತಾರೆ. ಹಾಗಾಗಿ ಬಹಿರಂಗವಾಗಿ ಮನವಿ ಸಲ್ಲಿಸಿ ಜನರನ್ನು ಚಳವಳಿಯಿಂದ ದೂರವಿರಿಸುವ ಯತ್ನ ನಡೆದರೆ, ರಾತ್ರೋ ರಾತ್ರಿ

ರೈತರ ಮನೆಗಳಿಗೆ ಹೋಗಿ ಚಳವಳಿಯಲ್ಲಿ ಭಾಗವಹಿಸದಂತೆ ತಡೆಯುವ ಪ್ರಯತ್ನಗಳು ನಡೆದವು. ಇದು ಚಳವಳಿಗಾರರ ಮೇಲೆ ಪ್ರಭಾವ ಬೀರಲಿಲ್ಲ. ಸೊಂಡೂರಿನ ಸ್ಥಳೀಯರು ಹೋರಾಟದಲ್ಲಿ ಭಾಗವಹಿಸುವುದನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸಲಾಯಿತು.

**ಸಂಡಪ್ಪಾ ಮಟ್ಟಿಯವರ ಭೂ ವಿವರ**

ಸೆಪ್ಟಂಬರ್ ೧೦ ರಂದು ಭೂ ಹೋರಾಟ ಪ್ರಾರಂಭವಾಗುತ್ತಲೂ ಆಗಿನ ತಾಲೂಕಿನ ತಹಶೀಲ್ದಾರ ಸಂಡಪ್ಪಾ ಮಟ್ಟಿಯವರು ಜಾಗೃತರಾದರು. ಸೆಪ್ಟಂಬರ್ ೧೧ರಂದು ನಂದಿಹಳ್ಳಿಗೆ ತೆರಳಿ ಅಲ್ಲಿನ ಪದವಿಯೋತ್ತರ ತಾಂತ್ರಿಕ ಕೇಂದ್ರಕ್ಕಾಗಿ ಸ್ಥಳ ಪರಿಶೀಲನೆ ನಡೆಸಿದರು. ಸೆಪ್ಟಂಬರ್ ೧೧ರ 'ಸಂಯುಕ್ತ ಕರ್ನಾಟಕ'ದಲ್ಲಿ ಪ್ರಕಟವಾದ ವರದಿಯಲ್ಲಿ ಮಟ್ಟಿಯವರು ನೀಡಿದ ವಿವರಗಳನ್ನು ಗಮನಿಸಬಹುದು:" ನಂದಿಹಳ್ಳಿಯಲ್ಲಿ ಪದವಿಯೋತ್ತರ ತಾಂತ್ರಿಕ ಕೇಂದ್ರಕ್ಕಾಗಿ ೨೪೩ ಎಕರೆ ಭೂಮಿಯನ್ನು, ರಾಘಾಪುರದಲ್ಲಿ ಸರ್ಕಾರದ ವಶದಲ್ಲಿರುವ ೧೫೨ ಎಕರೆ ಭೂಮಿಯನ್ನು ತೋಟಗಾರಿಕೆ ಫಾರ್ಮ ಮತ್ತು ತರಬೇತಿ ಕೇಂದ್ರಕ್ಕಾಗಿ ಕಾಯ್ದಿರಿಸಲಾಗಿದೆ. ಇದಕ್ಕೆ ೧೦ ಲಕ್ಷ ರೂ ವೆಚ್ಚವಾಗಲಿದೆ ಎಂದರು. ಈ ಭೂಮಿಯನ್ನು ಯಾರೂ ಸಾಗುಮಾಡಿಲ್ಲ. ಸೊಂಡೂರಿನ ರಾಜಮನೆತನದ ೬ ಕುಟುಂಬಗಳಿಗೆ ಒಟ್ಟು ೧೯೮ ಎಕರೆ ಭೂಮಿ ಇದೆ ಎಂದು ತಿಳಿಸಿದ ತಹಶೀಲ್ದಾರರು ಕುಮಾರಸ್ವಾಮಿ ದೇವಸ್ಥಾನಕ್ಕೆ ಸಂಬಂಧಿಸಿದ ೮೦೨೯ ಎಕರೆ ಭೂಮಿಯ ವ್ಯವಸ್ಥೆ ಸರಕಾರದ ವಶದಲ್ಲಿದೆ. ಸರಕಾರ ದೇವಸ್ಥಾನದ ವ್ಯವಸ್ಥೆಗೆ ಪ್ರತಿವರ್ಷ ೩೬ ಸಾವಿರ ರೂಗಳನ್ನು ಕೊಡುವುದು."

ಚಳವಳಿ ಪ್ರಾರಂಭವಾಗುವುದಕ್ಕೂ ಮುಂಚೆ ೮ ತಿಂಗಳು ಇರುವಾಗಲೇ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು. ಹೋರಾಟದ ಪ್ರಾರಂಭದ ಹಂತದವರೆಗೂ ಮೌನವಹಿಸಿದ ತಹಶೀಲ್ದಾರರು ದಿಢೀರನೆ ಸೆಪ್ಟಂಬರ್ ಹತ್ತರಂದು ಭೂ ವಿವರ ಕೊಡುವ ತರಾತುರಿಗೆ ಬಿದ್ದರು. ಒಂದು ಕಡೆ ಚಳವಳಿಗಾರರು ತಾಲೂಕು ಕಛೇರಿಯ ಮುಂದೆ ಪಿಕಿಟಿಂಗ್ ಮಾಡುತ್ತಿದ್ದರೆ, ಇನ್ನೊಂದೆಡೆ ನಂದಿಹಳ್ಳಿ ಬಳಿ ಪತ್ರಕರ್ತರೊಂದಿಗೆ' ಸ್ಥಳ ಪರಿಶೀಲನೆ ನೆಪದಲ್ಲಿ ಭೂ ವಿವರ ಕೊಟ್ಟರು. ಪತ್ರಕರ್ತರಿಗೆ ತಾಲ್ಲೂಕು ಕಛೇರಿಯ ಮುಂದೆ ಮಾಡುತ್ತಿದ್ದ ಚಳವಳಿಯ ವರದಿಗಿಂತ ತಹಶೀಲ್ದಾರರ ಭೂ ವಿವರದ ವರದಿಯೇ ಮುಖ್ಯವಾಗಿತ್ತು. ಸೆಪ್ಟಂಬರ್ ೧೧ರಂದು ವರದಿಯನ್ನು ಪ್ರಕಟಿಸಿದವು. ಇದರ ದೋರಣೆ ಚಳವಳಿ ವಿನಾಕಾರಣ ನಡೆಯುತ್ತಿದೆ ಎಂಬಂತಿತ್ತು. ಇಲ್ಲಿ ಸಹ ಸಂಯುಕ್ತ ಕರ್ನಾಟಕವೇ ಉಳಿದೆಲ್ಲ ಪತ್ರಿಕೆಗಳಿಗಿಂತ ಈ ವರದಿಯನ್ನು ಢಾಳಾಗಿ ಬಿಂಬಿಸಿತು. ಈ ಭೂ ವಿವರ ಘೋರ್ಪಡೆ ಕುಟುಂಬದವರು ತಪ್ಪಿತಸ್ಥರಲ್ಲ ಎಂಬುವುದನ್ನು ಸಾಬೀತು ಪಡಿಸುವಂತಿತ್ತು. ನಂಬಲರ್ಹ ದಾಖಲೆಗಳಿಲ್ಲದೆ ಮೌಖಿಕವಾಗಿ ಮಂಡಿಸಿದ ವಿವರಗಳು ಸತ್ಯಕ್ಕೆ ಹತ್ತಿರವಿರಲಿಲ್ಲ. ಬಹುಶಃ ಈ ವಿವರಗಳು ಅಧಿಕೃತ ಎನ್ನುವುದಾದರೆ ತಾಲೂಕು ಕಛೇರಿಯ ಮುಂದೆ ಪಿಕೆಟಿಂಗ್ ಮಾಡುತ್ತಿರುವ ಚಳವಳಿ ಗಾರರೆದುರು ಮಂಡಿಸಬಹುದಿತ್ತು. ತಹಶೀಲ್ದಾರರು ಭೂವಿವರ ನೀಡಿದ್ದಕ್ಕೆ ಮೂರು ಕಾರಣ ಗಳಿದ್ದವು. ಮೊದಲನೆಯದಾಗಿ: ಸರ್ಕಾರದ ಪರವಾಗಿ ತಹಶೀಲ್ದಾರರೇ ಭೂ ವಿವರ ನೀಡಿ ಘೋರ್ಪಡೆಯವರದು ಅಥವಾ ರಾಜಮನೆತನದ ಯಾವ ತಪ್ಪು ಇಲ್ಲ ಎನ್ನುವುದನ್ನು ಖಚಿತ ಪಡಿಸುವುದು. ಎರಡು: ತಹಶೀಲ್ದಾರರ ಮೇಲೆ ಅರ್ಥಸಚಿವರಾಗಿದ್ದ ಎಂ.ವೈ.ಘೋರ್ಪಡೆ ಯವರು ಭೂವಿವರ ನೀಡಲು ಒತ್ತಡ ತಂದಿರುವುದು. ಮೂರು: ರಾಜವಂಶದ ಪರವಾಗಿ ಜನಾಭಿಪ್ರಾಯವನ್ನು ತಿರುಗಿಸುವ ಮೂಲಕ ಚಳವಳಿಯನ್ನು ದುರ್ಬಲಗೊಳಿಸುವುದು.

ಚಳವಳಿಯ ಎರಡನೆಯ ದಿನ ಹರಿಜನ ನಾಯಕಿ ಬುಡ್ಡಮ್ಮನವರಿಂದ ಸಿದ್ದಾಪುರದಲ್ಲಿ ಭೂ ಆಕ್ರಮಣ ಚಳವಳಿಯನ್ನು ಉದ್ಘಾಟಿಸಲಾಯಿತು. ಚಳವಳಿಯಲ್ಲಿ ಹರಿಜನರ ಭಾಗವಹಿಸಿದ್ದು ತುಂಬಾ ಕಡಿಮೆ. ಬುಡ್ಡಮ್ಮ ತನ್ನ ಗಟ್ಟಿತನದಿಂದಾಗಿಯೇ ಚಳುವಳಿಗಾರನ್ನು ಆಕರ್ಷಿಸಿದ್ದಳು. 'ಬುಡ್ಡಮ್ಮ ಸೆರೆ ಕುಡಿದ ಮತ್ತಿನಲ್ಲಿ ಚಳವಳಿಯಲ್ಲಿ ಒಮ್ಮೊಮ್ಮೆ ಕೂಗುತ್ತಿದ್ದಳು' ಎಂದು ಸೀನಪ್ಪ ಹೇಳುತ್ತಾರೆ. ಚಳವಳಿಯ ಎರಡನೆಯ ದಿನದ ನಂತರವೇ ವಿಧಾನ ಸಭೆಯಲ್ಲಿ ಇನಾಂ ರದ್ದತಿ ಮಸೂದೆಯನ್ನು ಆಗಿನ ಕಂದಾಯ ಸಚಿವರಾಗಿದ್ದ ಹುಚ್ಚು ಮಾಸ್ತಿ ಗೌಡರು ಮಂಡಿಸಿದರು. ಭೂ ಹೋರಾಟದ ಮೊದಲ ಹಂತವಾಗಿ ಮಾರ್ಚ್ ૩. ೧೯೭೩ ರಲ್ಲಿಯೇ ಬೆಂಗಳೂರಿನಲ್ಲಿ ಸೋಷಿಯಲಿಸ್ಟ್ ಪಾರ್ಟಿ ಮತ್ತು ಸೊಂಡೂರು ರೈತ ಸಂಘದ ಸದಸ್ಯರು ಮೆರವಣಿಗೆ ಮಾಡಿ ಇನಾಂ ರದ್ದತಿಯನ್ನು ಒಳಗೊಂಡ ಹಲವು ಬೇಡಿಕೆಯ ಮನವಿಯನ್ನು ಸಲ್ಲಿಸಿದ್ದರು. ಈ ಮನವಿಗೆ ದೇವರಾಜ ಅರಸು ಪ್ರತಿಕ್ರಿಯಿಸಲಿಲ್ಲ. ಆದರೆ ಇನಾಂ ರದ್ದತಿಗಾಗಿ ಕಾನೂನು ರೂಪಿಸುವ ಆಡಳಿತಾತ್ಮಕ ಪ್ರಕ್ರಿಯೆ ನಡೆದಿತ್ತು.

ಸದನದ ಕಲಾಪಗಳನ್ನು ಈ ಬಗೆಗೆ ಚರ್ಚೆಗಳು ನಡೆಯುತ್ತಿದ್ದವು. ಜೂನ್ ೭, ೧೯೭೩ ವಿಧಾನಸಭಾ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಬೇಕೆಂದು ಶ್ರೀ ಕೋಣಂದೂರು ಲಿಂಗಪ್ಪನವರು ಪ್ರಶ್ನಿಸಿದ್ದರು. ಕಾಗೋಡು ತಿಮ್ಮಪ್ಪನವರೂ ದನಿಗೂಡಿಸಿದರು. ಇವರಿಬ್ಬರ ಮಾತಿಗೆ ಉತ್ತರಿಸುತ್ತ ಸಚಿವ ಎನ್. ಹುಚ್ಚಮಾಸ್ತಿಗೌಡರು ಪೂರ್ಣವಾಗಿ ಮಸೂದೆ ತಯಾರಾಗಿರುವ ಕಾರಣ ಸದ್ಯದ ಅಧಿವೇಶನದಲ್ಲಿ ಮಂಡಿಸುವ ಬಗ್ಗೆ ತಿಳಿಸಿದರು.

ಈ ನಡುವೆ ಸೆಪ್ಟಂಬರ್ ೧೨, ೧೯೭೩ರಂದು ಸದನದಲ್ಲಿ ವಿವರವಾಗಿ ಇನಾಂ ರದ್ದಿಯಾಗಿ ಮಸೂದೆಯು ಮಂಡಿಸಲ್ಪಟ್ಟಿತು. ಈ ಮಸೂದೆ ಸೊಂಡೂರಿನಲ್ಲಿ ನಡೆಯುತ್ತಿದ್ದ ಚಳವಳಿಯ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಕಾರಣವೆಂದರೆ ಚಳವಳಿಯ ಬೇಡಿಕೆಯ ಒಂದು ಅಂಶದ ಮೇಲೆ ಮಾತ್ರ ಮಸೂದೆ ಪರಿಹಾರದಂತಿತ್ತು. ಇದು ಕಾನೂನಿನಲ್ಲಿ ಮಾತ್ರ ಜೀವತಳೆ ಯದೆ ಪ್ರಾಯೋಗಿಕವಾಗಿಯೂ ಅದರ ಯಶಸ್ಸನ್ನು ನಿರ್ಧರಿಸಬೇಕಿತ್ತು. ಚಳವಳಿಗಾರರು ಈ ಮಸೂದೆಯನ್ನು ಸ್ವಾಗತಿಸಿ ಹೋರಾಟವನ್ನು ಮುಂದುವರಿಸಿದರು. ಉತ್ತರ ಭಾರತದ ಪ್ರಮುಖ ಸಮಾಜವಾದಿ ಮಧುಲಿಮಯೆ ರಾಷ್ಟ್ರಪತಿ ವಿ.ವಿ. ಗಿರಿಯವರಿಗೆ ಪತ್ರ ಬರೆದರು. ಅದರಲ್ಲಿ ಈ ಮಸೂದೆಯನ್ನು ವಿಮರ್ಶಿಸುತ್ತ "ಸ್ಥಳೀಯ ರೈತ ಸಂಘ ಮತ್ತು ರಾಜ್ಯ ಸೋಷಲಿಸ್ಟ್ ಪಾರ್ಟಿಯು ೧೯೭೩ ಸೆಪ್ಟಂಬರ್ ೧೦ನೇ ತಾರೀಕಿನಿಂದ ಹೋರಾಟವನ್ನು ಪ್ರಾರಂಭಿಸಲು, ರಾಜ್ಯ ಸರ್ಕಾರವು ಒಂದು ಪ್ರತಿಗಾಮಿ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿತು. ಈ ಮಸೂದೆಯು ರಾಜ ಮನೆತನದ ಹಿತಾಸಕ್ತಿಗಳನ್ನೆಲ್ಲಾ ಕಾಪಾಡುತ್ತದೆ. ಗೇಣಿ ರೈತರಿಂದ ಭಾರಿ ಮೊತ್ತದ ಹಣವನ್ನು ಹೀರಿ ಅವರಿಗೆ ಪಟ್ಟಾ ಹಕ್ಕನ್ನು ನೀಡುತ್ತದೆ. ರೈತರ ಹಿತದೃಷ್ಟಿಯಿಂದ ಇದು ತಿದ್ದುಪಡಿಯಾಗಬೇಕೆಂದು" ಹೇಳಲಾಗಿತ್ತು.

**ಜಾರ್ಜ್ ಫರ್ನಾಂಡಿಸ್ ಪತ್ರಿಕಾ ಹೇಳಿಕೆ**

ಸೊಂಡೂರು ಹೋರಾಟದ ರಾಷ್ಟ್ರೀಯ ಉಪಸಮಿತಿಯ ಅಧ್ಯಕ್ಷರು ಜಾರ್ಜ್ ಫರ್ನಾಂಡಿಸ್ ಆಗಿದ್ದರು. ಇಲ್ಲಿ ಚಳವಳಿ ಪ್ರಾರಂಭವಾಗಿ ಮೂರನೆಯ ದಿನ ಬೆಂಗಳೂರಿನಲ್ಲಿ ಪತ್ರಿಕಾ ಹೇಳಿಕೆ ನೀಡಿದರು. ಆ ಮೂಲಕ ಇದನ್ನೊಂದು ರಾಷ್ಟ್ರೀಯ ಹೋರಾಟವನ್ನಾಗಿ ರೂಪಿಸಬಹುದಾದ ಮಾಹಿತಿಯನ್ನು ಒದಗಿಸಿದರು. ೭೦ರ ದಶಕದಲ್ಲಿ ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಆಡಳಿತ ಕಾಂಗ್ರೆಸಿನ ಪ್ರಧಾನಿ ಇಂದಿರಾಗಾಂಧಿಯವರಿಗೆ ಸಿಂಹಸ್ವಪ್ನ ದಂತಿದ್ದರು. ಈ ಮಾತಿಗೆ ಸೆಪ್ಟಂಬರ್ ೧೩ರಂದು ಸೊಂಡೂರು ಹೋರಾಟ ಕುರಿತಂತೆ ನೀಡಿದ ಪತ್ರಿಕಾ ಹೇಳಿಕೆ ಸಾಕ್ಷಿಯಂತಿದೆ.

*ಕರ್ನಾಟಕ ರಾಜ್ಯದ ಅರ್ಥ ಮಂತ್ರಿಗಳಾದ ಶ್ರೀ ಎಂ.ವೈ. ಘೋರ್ಪಡೆಯವರ ಅಕ್ರಮ ಸ್ವಾಧೀನದಲ್ಲಿರುವ ಸೊಂಡೂರು ಪ್ರದೇಶದ ಭೂಮಿಯನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಒತ್ತಾಯ ಮಾಡಲು ನಮ್ಮ ಪಕ್ಷವು ಹೋರಾಟವನ್ನು ಪ್ರಬಲವಾಗಿ ಮಾಡುವುದು. ಈ ತಿಂಗಳ ಮೊದಲ ವಾರ ದೆಹಲಿಯಲ್ಲಿ ಪಾರ್ಟಿಯ ಆಶ್ರಯದಲ್ಲಿ ನಡೆದ ಕಿಸಾನ್ ಖೇತ್ ಮಜದೂರ್ ಪಂಚಾಯತ್ ಸಭೆಯಲ್ಲಿ ಸೊಂಡೂರು ಹೋರಾಟಕ್ಕೆ ಹಿಂದೂಸ್ಥಾನದ ಎಲ್ಲಾ ಕಡೆಗಳಿಂದಲೂ ಸತ್ಯಾಗ್ರಹಿ ಗಳ ತಂಡಗಳನ್ನು ಕಳುಹಿಸಬೇಕೆಂದು ತೀರ್ಮಾನಿಸಲಾಯಿತು. ಬಿಹಾರದ ಮಾಜಿ ಗೃಹ ಮಂತ್ರಿ ಶ್ರೀ ರಾಮನಂದ ತಿವಾರಿ, ಮಧ್ಯ ಪ್ರದೇಶದ ಶಾಸಕ ಹಾಗೂ ಖೇತ್ ಮಜದೂರ್ ಪಂಚಾಯತ್ ಅಧ್ಯಕ್ಷ ಶ್ರೀ ಜಮುನಾ ಪ್ರಸಾದ್ ಶಾಸ್ತ್ರಿ, ಅಸ್ಸಾಂನಿಂದ ಲೋಕಸಭಾ ಸದಸ್ಯರಾಗಿರುವ ಶ್ರೀ ಗೋಪಾಲ್ ಬಾರ್ಬೊರಾ, ರಾಜಸ್ಥಾನದ ಶಾಸಕರು ಹಾಗೂ ಗಂಗಾ ನಗರದ ರೈತ ಆಂದೋಲನದ ಪ್ರಸಿದ್ಧ ನಾಯಕರೂ ಆದ ಪ್ರೊ. ಕೇದರ್ ನಾಥ್, ಕೇರಳ ಶಾಸನ ಸಭೆಯ ಸೋಷಿಯಲಿಸ್ಟ್ ಪಾರ್ಟಿಯ ಮಾಜಿ ನಾಯಕ ಶ್ರೀ. ಕೆ.ಕೆ. ಅಬುಸಾಹೇಬ್, ತಮಿಳುನಾಡಿನ ರೈತ ಹೋರಾಟದ ನಾಯಕರು ಹಾಗೂ ಮಾಜಿ ಶಾಸನ ಸಭಾ ಸದಸ್ಯರೂ ಆದ ಪಿ.ಕೆ. ನಲ್ಲಶಿವಂ ಮೊದಲಾದ ಪಾಟೀಯ ಪ್ರಮುಖರು ಈ ಹೋರಾಟದಲ್ಲಿ ಭಾಗವಹಿಸುವರು.*

*ಇತರ ಅನೇಕ ವಿಷಯಗಳಂತೆಯೇ ಸೊಂಡೂರು ಹೋರಾಟವೂ ಕೂಡ ಶ್ರೀಮತಿ ಇಂದಿರಾಗಾಂಧಿಯವರ ಕಪಟ ಸಮಾಜವಾದವನ್ನು ಬಯಲಿಗೆಳೆಯುವುದರಲ್ಲಿ ಸಹಾಯಕವಾಗಿದೆ. ಶ್ರೀಮತಿ ಇಂದಿರಾಗಾಂಧಿಯವರು ಮತ್ತು ಅವರ ಜಹಗೀರುದಾರಿ ಅನುಯಾಯಿಗಳಾದ ಎಂ.ವೈ. ಘೋರ್ಪಡೆ ಯಂಥವರು ಭಾರತೀಯ ಸಮಾಜವಾದದ ಅಗ್ರದೂತರೆಂದು ಹೇಳುವುದು ಅಪಹಾಸ್ಯ ಮಾತ್ರವಲ್ಲ ಅಸಭ್ಯತೆಯೂ ಕೂಡ. ಈ ದುರಂತ ಪರಿಸ್ಥಿತಿಯೇನೆಂದರೆ ಈ ರಾಜಶಾಹಿಗಳು ಹಾಗೂ ಮಾರುತಿ ಸಮಾಜವಾದಿಗಳ ಭೂಗ್ರ ಹಣದಿಂದಾಗಿ ದೇಶದ ಆಹಾರೋತ್ಪನ್ನದ ಮೇಲೆ ಕೆಟ್ಟ ಪರಿಣಾಮವುಂಟಾಗಿದೆ. ಪ್ರಧಾನ ಮಂತ್ರಿಗಳು ದೆಹಲಿಯ ಹೊರವಲಯದಲ್ಲಿರುವ ತಮ್ಮ ಜಮೀನಿನಲ್ಲಿ ಬೆಳೆದ ಗೋಧಿಯನ್ನು ದಾಸ್ತಾನು ಮಾಡಿದ್ದಾರೆ. ರಾಜ್ಯ ಸಂಗ್ರಹಣಾಧಿಕಾರಿಗಳಿಗೆ ಸಾಮಾನ್ಯ ರೈತ ತಾನು ಉತ್ತು ಬಿತ್ತಿ ಬೆಳೆದ ಬೆಳೆಯನ್ನು ಕ್ವಿಂಟಲಿಗೆ ೭೫ ರೂಗಳಂತೆ ಮಾರಾಟ ಮಾಡಬೇಕಾದ ಸಂದರ್ಭವಿದೆ. ಶ್ರೀಮತಿ ಗಾಂಧಿಯವರು ತಮ್ಮ ಜಮೀನಿನಲ್ಲಿ ದಮಡಿ ಕೂಲಿಕೊಟ್ಟು ಭೂಹೀನ ಕೆಲಸಗಾರರನ್ನು ದುಡಿಸಿಕೊಳ್ಳುತ್ತಿದ್ದಾರೆ. ಇವರಿಂದ ಬೆಳೆದ ಗೋಧಿಯನ್ನು ಕ್ವಿಂಟಲಿಗೆ ೩೫೦ ರೂನಂತೆ ಭಾರಿ ದರದಲ್ಲಿ ಮಾರಲು ರಾಷ್ಟ್ರೀಯ ಬೀಜ ಕಾರ್ಪೋರೇಷನ್ ನ ಜೊತೆ ಸಂಧಾನ ನಡೆಸುತ್ತಿದ್ದಾರೆ. (ಕನ್ನಡಪ್ರಭ)*

ಜಾರ್ಜ್ ರವರು ಕೊಯಮತ್ತೂರಿನಲ್ಲಿ ಯುನೈಟೆಡ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ ಕೇಂದ್ರೀಯ ಸಭೆಯಲ್ಲಿ ಭಾಗವಹಿಸಿ ಮುಂಬೈಗೆ ಹಿಂತಿರುಗುವ ಮಾರ್ಗದಲ್ಲಿ ಬೆಂಗಳೂರಿನಲ್ಲಿ ಈ ಹೇಳಿಕೆ ನೀಡಿದರು. ಜಾರ್ಜ್‌ರಿಗೆ ಸೊಂಡೂರು ಹೋರಾಟವನ್ನು ಒಂದು ರಾಷ್ಟೀಯ ಹೋರಾಟವನ್ನಾಗಿ ರೂಪಿಸುವ ಉದ್ದೇಶವಿತ್ತು. ಅಂತೆಯೇ ಇಡಿಯಾದ ಹೇಳಿಕೆ ಯಲ್ಲಿ ರೈತ ಪರವಾದ ಕಾಳಜಿ ಇದೆ. ಮುಖ್ಯವಾಗಿ ಕಾಂಗ್ರೆಸ್ ನ ರಾಜಶಾಹಿ ಪರವಾದ ನೀತಿ ಯನ್ನು ಕಟುವಾಗಿ ವಿರೋಧಿಸುವ ಅದಕ್ಕೆ ಪರ್ಯಾಯವಾಗಿ ಸಮಾಜವಾದಿ ಆಶಯದ ಚಳವಳಿಗಳನ್ನು ರೂಪಿಸುವ ಜರೂರಿತ್ತು ಇಲ್ಲಿತ್ತು. ೭೦ರ ದಶಕ ಆಹಾರದ ಸಮಸ್ಯೆ ತೀವ್ರ ವಾಗಿದ್ದ ಸಂದರ್ಭ. ಈ ಹೊತ್ತಲ್ಲಿ ಇಂದಿರಾಗಾಂಧಿಯವರ ಮೇಲಿನ ಜಾರ್ಜ್‌ರ ಆರೋಪ ರಾಜಕೀಯ ಪ್ರತ್ಯಾರೋಪದಂತೆ ಕಂಡರೂ, ಸಾಮಾಜಿಕ ವಾಸ್ತವದಲ್ಲಿ ಒಬ್ಬ ಪ್ರಧಾನಿಯವರ ಸ್ವಹಿತಸಕ್ತಿಯ ಧೋರಣೆಗಳು ಆರೋಗ್ಯಕರವಲ್ಲ. ಇಲ್ಲಿ ಜಾರ್ಜ್‌ರವರು ಸೊಂಡೂರು ಹೋರಾಟದಲ್ಲಿ ಭಾಗವಹಿಸುವವರ ಸಂಭವನೀಯ ಪಟ್ಟಿಯನ್ನು ಕೊಡುತ್ತಾರೆ. ಆದರೆ ಈ ಸಂಭವನೀಯರಲ್ಲಿ ಬಹುತೇಕರು ಸೊಂಡೂರು ಹೋರಾಟದಲ್ಲಿ ಭಾಗವಹಿಸಲಿಲ್ಲ.

ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರಲ್ಲಿ ಜೆ.ಎಚ್. ಪಟೇಲರು ಪ್ರಮುಖರು. ''ತಮ್ಮ ಪಕ್ಷದ ನಿರ್ಧಾರಕ್ಕೆ ಅನುಗುಣವಾಗಿ ಈ ತಿಂಗಳ ೧೦ರಂದು ಚಳವಳಿ ಆರಂಭವಾಗಿದ್ದು, ಹೋರಾಟದಲ್ಲಿ ಪಾಲ್ಗೊಂಡಿರುವವರು ಶೇಕಡ ೯೦ರಷ್ಟು ಆ ಭಾಗದ ರೈತರು. ಸೋಷಲಿಸ್ಟ್ ಪಾರ್ಟಿ ಕೇವಲ ನಾಯಕತ್ವ ವಹಿಸಿದೆ. ನಮ್ಮ ಪ್ರಮುಖ ಬೇಡಿಕೆಗಳನ್ನು ಕುರಿತು ಸರ್ಕಾರ ತ್ವರಿತವಾಗಿ ಅನುಕೂಲಕರ ಪ್ರತಿಕ್ರಿಯೆ ನೀಡದಿದ್ದರೆ ಸೊಂಡೂರಿನಲ್ಲಿ ಈಗಿರುವ ಶಾಂತ ಪರಿಸ್ಥಿತಿ ಉಳಿಯಲಾರದು'' ಎಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡಿದರು.

ಪಟೇಲರು ಸೆಪ್ಟಂಬರ್ ೧೯ರಂದು ನೀಡಿದ ಪತ್ರಿಕಾ ಹೇಳಿಕೆಯಲ್ಲಿದ್ದ ಪ್ರಮುಖ ಅಂಶಗಳೆಂದರೆ, ಹೋರಾಟದ ಮುಖ್ಯ ಉದ್ದೇಶ ಸೊಂಡೂರಿನ ರಾಜವಂಶದ ದಬ್ಬಾಳಿಕೆಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ತಾಲೂಕು ಕಛೇರಿಯ ಮುಂದೆ ಪಿಕೆಟಿಂಗ್ ಮಾಡುವುದು. ಎರಡನೆಯದಾಗಿ ರೈತರ ಹಕ್ಕನ್ನು ಸ್ಥಾಪಿಸಲು ಭೂ ಆಕ್ರಮಣಗಳನ್ನು ಮಾಡುವುದು. ಚಳವಳಿಯ ವಿರೋಧಿ ಪ್ರಚಾರವನ್ನು ಪ್ರಸ್ತಾಪಿಸಿ, ಚಳವಳಿ ಪ್ರಾರಂಭವಾಗುವುದಕ್ಕೂ ಮೊದಲೇ ಅರಸು ಮನೆತನದವರು ಕೈಗೊಂಡಿದ್ದ ವ್ಯಾಪಕವಾದ ವಿರೋಧ ಪ್ರಚಾರ ಮತ್ತು ಉಂಟು ಮಾಡಿದ ಭಯದ ವಾತಾವರಣಗಳು ಚಳವಳಿಯ ಯಶಸ್ಸಿನ ಮೇಲೆ ಪರಿಣಾಮ ಬೀರಿಲ್ಲವೆಂದು ಹೇಳಿದರು.

ಚಳವಳಿಯ ೫ನೇ ದಿನ ಸೆಪ್ಟಂಬರ್ ೧೪ ರಂದು ಸೋಷಲಿಸ್ಟ್ ಪಾರ್ಟಿಯ ಬಳ್ಳಾರಿಯ ಜಿಲ್ಲಾಧ್ಯಕ್ಷರಾದ ಎಂ.ಪಿ. ಪ್ರಕಾಶ ಮುಂದಾಳತ್ವದಲ್ಲಿ ಸಭೆ ನಡೆಯಿತು. ಆನಂತರ ತಾಲೂಕು ಕಛೇರಿಯ ಮುಂದೆ ಪಿಕೆಟಿಂಗ್ ಮಾಡಲಾಗಿ ಎಂ.ಪಿ. ಪ್ರಕಾಶ್, ಎಸ್. ತಿಪ್ಪಯ್ಯನವರನ್ನು ಒಳಗೊಂಡಂತೆ ೩೦ ಜನ ಸತ್ಯಾಗ್ರಹಿಗಳನ್ನು ಬಂಧಿಸಿ ಸಂಜೆಗೆ ಅವರನ್ನು ಬಿಡುಗಡೆ ಮಾಡ ಲಾಯಿತು. ಚಳವಳಿಯ ಆರನೇ ದಿನದಲ್ಲಿ ಮೂರು ಕಡೆ ಭೂ ಅಕ್ರಮಣ ಚಳವಳಿ ನಡೆಯಿತು. ಎರಡನೇ ದಿನ ಬುಡ್ಡಮ್ಮನಿಂದ ಸಿದ್ದಾಪುರದಲ್ಲಿ ಆರಂಭವಾಗಿ ನಂದಿಹಳ್ಳಿ ರಾಧಾಪುರದಲ್ಲಿ ಮುಂದುವರಿಯಿತು. ರಾಧಾಪುರದಲ್ಲಿ ತಂಬಾಕು ಕಂಪನಿಗೆ ಬಿಟ್ಟು ಕೊಟ್ಟಿದ್ದ ಭೂಮಿಯನ್ನು ರೈತರಿಗೆ ಹಂಚಬೇಕೆಂಬುದೇ ನಮ್ಮ ಬೇಡಿಕೆ

ಎಂದು ಚಳವಳಿಗಾರರು ಒಕ್ಕೊರಲಿನಿಂದ ಕೂಗಿ ಈ ಮೂರು ಗ್ರಾಮಗಳ ಕೃಷಿ ಯೋಗ್ಯ ಭೂ ವಿಸ್ತೀರ್ಣ ೧೦೦೦ ಎಕರೆಯಷ್ಟಿದೆ. ಅದು ರೈತರಿಗೆ ಹಂಚಿಕೆಯಾಗಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಸೆಪ್ಟಂಬರ್ ೨೧ ರಂದು ವಿಧಾನಸಭಾ ಚರ್ಚೆಯಲ್ಲಿ ಕೋಣಂದೂರು ಲಿಂಗಪ್ಪ ಸೊಂಡೂರು ಭೂ ಹೋರಾಟ ನಡೆಯುತ್ತಿರುವ ಬಗೆಗೆ ಪ್ರಸ್ತಾಪಿಸಿ, ಅರಸು ಮೌನವಾಗಿರುವ ಬಗೆಗೆ ಟೀಕಿಸಿದರು. ಅದಕ್ಕೆ ಅರಸು ಪ್ರತಿಕ್ರಿಯಿಸಿ 'ನಮ್ಮ ಸ್ನೇಹಿತರು ಚಳವಲಿಗೆ ತಪ್ಪು ಸ್ಥಳವನ್ನು ಆರಿಸಿಕೊಂಡಿದ್ದಾರೆ' ಎಂದಿದ್ದರು. ಸೊಂಡೂರಿನ ಚಳವಳಿಗಾರರು ಈ ಹೇಳಿಕೆಯನ್ನು ವಿರೋಧಿಸಿದರು. 'ಸೋಷಲಿಸ್ಟ್ ಪಾರ್ಟಿ ಹೋರಾಟಕ್ಕೆ ತಪ್ಪು ಸ್ಥಳವನ್ನು ಆರಿಸಿಕೊಂಡಿದೆಯೆಂದು ದೇವರಾಜ ಅರಸು ಅವರು ವಿಧಾನಸಭೆಯ್ಲಲಿ ಹೇಳಿರುವುದು ವಿಷಾದಕರ. ಈ ಸಮಸ್ಯೆಯ ಬಗ್ಗೆ ಬಹುಶಃ ಅವರನ್ನೇ ತಪ್ಪು ತಿಳುವಳಿಕೆಯಲ್ಲಿ ಇಟ್ಟಿರಲಿಕ್ಕೆ ಸಾಕು. ಮನಪೂರ್ವಕವಾಗಿ ಈ ಹೋರಾಟದ ಉದ್ದೇಶಗಳನ್ನು ಅವರು ಅರ್ಥಮಾಡಿಕೊಂಡಿದ್ದರೆ ಮತ್ತು ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಹಿಡಿಯಲು ಅಪೇಕ್ಷೆಯಿದ್ದರೆ ಅವರು ಒಂದು ದಿನದ ಮಟ್ಟಿಗೆ ಸೊಂಡೂರಿಗೆ ಬರಬೇಕಾಗಿ ಆಹ್ವಾನಿಸುತ್ತೇವೆ. ಸ್ಥಳ ಪರಿಶೀಲನೆ ಮಾಡದ ಹೊರತು ಇಲ್ಲಿಯ ರಹಸ್ಯ ಬೆಂಗಳೂರಿನಲ್ಲಿ ಅರ್ಥವಾಗದು' ಎಂದು ಕೆ.ಜಿ. ಮಹೇಶ್ವರಪ್ಪ ಪತ್ರಿಕಾ ಹೇಳಿಕೆ ನೀಡಿದರು.

ರೈತಪರ ಚಳವಳಿಯನ್ನು ಮುಖ್ಯಮಂತ್ರಿಗಳು ಲಘುವಾಗಿ ಟೀಕಿಸಿದ್ದರು. ಚಳವಳಿಯ ಕಾರ್ಯಕರ್ತರಿಗೆ ಅವಮಾನಿಸುವ ಮಾತಾಗಿತ್ತು. ಚಳವಳಿಗೆ ಯೋಗ್ಯವಾದ ಸ್ಥಳವಲ್ಲ ಎನ್ನುವ ಮಾತಿನ ಹಿಂದೆ ಸೊಂಡೂರಿನಲ್ಲಿ ರೈತರ ಶೋಷಣೆ ನಡೆದಿಲ್ಲ ಎನ್ನುವ ಧೋರಣೆಯಿತ್ತು. ಸಮಾಜವಾದಿ ಪಕ್ಷ ವಿನಾಃಕಾರಣ ಅಲ್ಲೊಂದು ಹೋರಾಟ ಮಾಡುತ್ತಿದ್ದಾರೆ ಎನ್ನುವ ಅರ್ಥದಲ್ಲಿ ಅರಸುರವರು ಪ್ರತಿಕ್ರಿಯಿಸಿದರು. ಸಮಸ್ಯೆಯ ಸ್ವರೂಪವನ್ನು ಅರ್ಥಮಾಡಿ ಕೊಳ್ಳಲು ಪ್ರಯತ್ನಿಸದ ಮುಖ್ಯಮಂತ್ರಿಗಳು ಸಮಾಜವಾದಿಗಳನ್ನು, ರೈತರನ್ನು ಅವಗಣನೆ ಮಾಡಿದರು. ವಿರೋಧ ಪಕ್ಷ ಯಾವುದಾದರೂ ತಪ್ಪನ್ನು ಹುಡುಕುತ್ತಲೇ ಇರುತ್ತದೆ ಅದರ ಬಗ್ಗೆ ಗಂಭೀರವಾಗಿ ಯೋಚಿಸುವುದೇಕೆ? ಎನ್ನುವ ಆಡಳಿತ ಪಕ್ಷದ ನಿಲುವು ದೇವರಾಜ ಅರಸು ಅವರದಾಗಿತ್ತು.

ದೆಹಲಿಯಲ್ಲಿ ಸೆಪ್ಟಂಬರ್ ೨೩ರಂದು ಸಮಾಜವಾದಿ ರಾಷ್ಟ್ರೀಯ ಮಂಡಳಿ ಸಭೆ ಸೇರಿ ಸೊಂಡೂರಿನಲ್ಲಿ ನಡೆದಿರುವ ರೈತ ಚಳವಳಿಯ ಬಗೆಗೆ ಚರ್ಚಿಸಿ 'ಸೊಂಡೂರು ತಾಲ್ಲೂಕಿನಲ್ಲಿ ತಮ್ಮ ಕುಟುಂಬದಿಂದ ರೈತರ ಶೋಷಣೆ ಆಪಾದನೆಗೆ ಗುರಿಯಾಗಿರುವ ಮೈಸೂರು ರಾಜ್ಯದ ಅರ್ಥ ಸಚಿವ ಎಂ.ವೈ. ಘೋರ್ಪಡೆಯವರು ರಾಜಿನಾಮೆ ಕೊಡಬೇಕೆಂದು ಒತ್ತಾಯಿಸಿತು. ಹೆಚ್ಚು ಭೂಮಿ ಹೊಂದಿರುವ ಅರ್ಥ ಸಚಿವರ ವಿರುದ್ಧ ಪಕ್ಷ ಕೈಗೊಂಡಿರುವ ಚಳವಳಿಯನ್ನು ಮತ್ತಷ್ಟು ತೀವ್ರಗೊಳಿಸುವ ನಿರ್ಧಾರವನ್ನು ನಿರ್ಣಯದಲ್ಲಿ ಕೈಗೊಳ್ಳಲಾಯಿತು. ಸೊಂಡೂರಿನಲ್ಲಿ ನಡೆಯುವ ಚಳವಳಿಯಲ್ಲಿ ಪಕ್ಷದ ಅಧ್ಯಕ್ಷರಾದ ಜಾರ್ಜ್ ಫರ್ನಾಂಡಿಸ್ ಅವರು ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿತು. ಸೆಪ್ಟಂಬರ್ ೨೯.೧೯೭೩ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಯಲ್ಲಿ ಮಂಡಳಿಯಲ್ಲಿದ್ದ ಸದಸ್ಯರ ಹೆಸರು ಉಲ್ಲೇಖವಾಗಿಲ್ಲ.

ಸೊಂಡೂರು ಹೋರಾಟದ ೧೨ನೆಯ ದಿನ ಸೆಪ್ಟಂಬರ್ ೨೧ರಂದು ಬಂಡ್ರಿ ಗ್ರಾಮದ ಪ್ರಮುಖ ರೈತ ಸೋಮಪ್ಪನವರ ನಾಯಕತ್ವದಲ್ಲಿ ಗ್ರಾಮದ ೩೦ ಜನ ಸತ್ಯಾಗ್ರಹಿಗಳು ಸೊಂಡೂರು ತಾಲ್ಲೂಕು ಕಛೇರಿಯ ಮುಂದೆ ಪಿಕೆಟಿಂಗ್ ನಡೆಸಿದರು. ಸತ್ಯಾಗ್ರಹಿಗಳನ್ನು ಪೊಲೀಸರು ದಸ್ತಗಿರಿ ಮಾಡಿ ನಂತರ ಬಿಡುಗಡೆ ಮಾಡಿದರು. ಆ ದಿನ ಕೆ.ಜಿ. ಮಹೇಶ್ವರಪ್ಪ ಮಾತನಾಡಿ ಹೋರಾಟದ ಬೇಡಿಕೆಗಳ ಬಗ್ಗೆ ವಿವರಿಸಿ ಅವರನ್ನು ಮೆರವಣಿಗೆಯಲ್ಲಿ ತಾಲ್ಲೂಕು ಕಛೇರಿಗೆ ಕರೆದೊಯ್ದರು. ಇದೇ ಸಮಯಕ್ಕೆ ಬೆಂಗಳೂರಿನಲ್ಲಿ ವಿಧಾನಸಭಾ ಚರ್ಚೆಯಲ್ಲಿಯೂ ಕೋಣಂದೂರು ಲಿಂಗಪ್ಪ, ಕಾಗೋಡು ತಿಮ್ಮಪ್ಪ ಸೊಂಡೂರು ಹೋರಾಟದ ಬಗೆಗೆ ಪ್ರಸ್ತಾಪಿಸಿದರು.

ಸೊಂಡೂರಿನಲ್ಲಿ ಭೂ ಹೋರಾಟ ನಡೆಯುವ ಹೊತ್ತಿಗೆ ಕರ್ನಾಟಕದಾದ್ಯಂತ ಇದರ ಪೂರ್ಣ ಮಾಹಿತಿ ದೊರೆಯಲಿಲ್ಲ. ಮಾಧ್ಯಮಗಳು ಈ ಹೋರಾಟವನ್ನು ವಿಶೇಷವಾಗಿ ಪರಿಗಣಿಸಲಿಲ್ಲ. ಈ ಕಾರಣದಿಂದ ರಾಜ್ಯದ ವಿವಿಧ ಕಡೆಗಳಲ್ಲಿ ಸೊಂಡೂರು ಚಳವಳಿ ನಡೆಯುವ ಬಗೆಗೆ ಕೆಲವರಿಗೆ ಮಾತ್ರ ತಿಳಿದಿತ್ತು. ಅವರಿಂದಲೆ ಸಣ್ಣ ಪ್ರಮಾಣದ ಟೀಕೆ, ಪ್ರತಿಕ್ರಿಯೆ ಬರಲಾರಂಭಿಸಿತು. ಮೈಸೂರಿನಲ್ಲಿ ಸೆಪ್ಟಂಬರ್ ೨೪ರಂದು

ಸಮಾಜವಾದಿ ಪಕ್ಷದ ಮಾಜಿ ಸಂಘಟನಾ ಕಾರ್ಯದರ್ಶಿಗಳಾದ ಜಿ.ವಿ. ಅಂಜಿನಪ್ಪ ಆಡಳಿತ ಕಾಂಗ್ರೇಸ್ಸನ್ನು ಕಟುವಾಗಿ ಟೀಕಿಸಿದರು. ಸಮಾಜವಾದಿ ಹೆಸರಿನಲ್ಲಿ ಅಧಿಕಾರಕ್ಕೇರಿ ರಾಜ್ಯದ ಕಾಂಗ್ರೆಸ್ ಸರಕಾರದ ಕಾರ್ಯಕ್ರಮಗಳಲ್ಲಿ ಸಮಾಜವಾದದ ಅಥವಾ ಪ್ರಗತಿಪರ ನೀತಿಯ ಗಂಧವೂ ಇಲ್ಲವೆಂದು ದೂರಿದರು. ಸೊಂಡೂರಿನಲ್ಲಿ ನಡೆಯುತ್ತಿರುವ ರೈತರ ಚಳವಳಿಯನ್ನು ಬೆಂಬಲಿಸುತ್ತ 'ಸಮಾಜವಾದದ ಬಗ್ಗೆ ಅಷ್ಟೆಲ್ಲಾ ಭಾಷಣ ಮಾಡುವ ಅರ್ಥ ಸಚಿವ ಶ್ರೀ ಘೋರ್ಪಡೆಯವರು ದೇವಾಲಯಗಳ ಸಾವಿರಾರು ಎಕರೆ ಜಮೀನನ್ನು ಇಟ್ಟುಕೊಂಡಿದ್ದಾರೆ. ಇದಲ್ಲದೆ ರಾಜ್ಯದ ವಿದ್ಯುಚ್ಛಕ್ತಿ ಮಂಡಳಿಗೆ ಅವರಿಂದ ಲಕ್ಷಾಂತರ ರೂ ಬಾಕಿ ಬರಬೇಕಾಗಿದೆ. ಇಂಥವರಿಗೆ ಸಮಾಜವಾದ ಹೇಳುವ ಕಾಂಗ್ರೇಸ್ ಸರಕಾರದಲ್ಲಿ ಸ್ಥಾನವೇ ಇಲ್ಲ' ಎಂದು ಪ್ರತಿಕ್ರಿಯಿಸಿದರು.

ಮೂರನೇ ವಾರಕ್ಕೆ ಚಳವಳಿ ಮುಂದುವರಿಯುತ್ತಲೂ ಜನರಲ್ಲಿ ಒಂದಷ್ಟು ಭರವಸೆ, ನಂಬಿಕೆ ಬರತೊಡಗಿತು. ಇದರಿಂದಾಗಿ ಸ್ಥಳೀಯ ರೈತರ ಭಾಗವಹಿಸುವಿಕೆಯೂ ಕ್ರಮೇಣ ಹೆಚ್ಚಾಯಿತು. ಸೆಪ್ಟಂಬರ್ ೧೪ರಂದು ನಾಯ್ಕರ ಹೊನ್ನೂರಪ್ಪ ಮತ್ತು ಟಿ. ಕೃಷ್ಣಯ್ಯ ಶೆಟ್ಟಿ ಸೊಂಡೂರಿನ ಪ್ರಮುಖ ರೈತನ ನಾಯಕತ್ವದಲ್ಲಿ ೩೦ ಜನ ಸತ್ಯಗ್ರಹಿಗಳ ಮತ್ತು ೧೫,೧೬ನೇ ತಾರೀಖಿನಂದು ಭುಜಂಗನಗರದಿಂದ ತಾಲ್ಲೂಕು ರೈತ ಸಂಘದ ಡೈರೆಕ್ಟರ್ ಜುಮ್ಮನಗೌಡರ ಸಣ್ಣ ಬಸಪ್ಪ ಹಾಗೂ ವಡ್ಡನಕಟ್ಟೆ ಶಾಂತಮ್ಮನವರ ನಾಯಕತ್ವದಲ್ಲಿ ತಾಲ್ಲೂಕು ಕಛೇರಿಯ ಮುಂದೆ ಚಳವಳಿ ಮಾಡಿದಾಗ ಪೊಲೀಸರು ಅವರನ್ನು ದಸ್ತಗಿರಿ ಮಾಡಿ ನಂತರ ಆಯಾ ದಿನದ ಸಂಜೆ ಬಿಡುಗಡೆ ಮಾಡಿದರು. ಪಾಟೀಲ ಪುಟ್ಟಪ್ಪನವರ ಸಂಪಾದಕತ್ವದಲ್ಲಿ ಹುಬ್ಬಳ್ಳಿ ಯಿಂದ ಬರುತ್ತಿದ್ದ 'ವಿಶ್ವವಾಣಿ' ಪತ್ರಿಕೆಯು ಸೆಪ್ಟಂಬರ್ ೧೭ ರಂದು ಚಳವಳಿಯ ವರದಿ ಮಾಡುತ್ತ "ಸತ್ಯಾಗ್ರಹ ದಿನದಿಂದ ದಿನಕ್ಕೆ ಪ್ರಬಲವಾಗುತ್ತಿದೆ. ರಾಜ್ಯ ಮಟ್ಟದ ಹೋರಾಟ ಮಾತ್ರವಲ್ಲದೆ ರಾಷ್ಟ್ರ ಸಮಾಜವಾದಿ ನಾಯಕರ ಭಾಗವಹಿಸುವಿಕೆಯೊಂದಿಗೆ ಭಾರತದಲ್ಲಿ ರಾಷ್ಟ್ರ ಮಟ್ಟದಲ್ಲಿ ಹೆಸರಾಂತ ಹೋರಾಟವಾಗಿ ಪರಿಣಮಿಸಲಿದೆ" ಎಂದು ಬರೆದರು.

## ೬. ಹೋರಾಟದ ೪೬ ದಿನಗಳು (2)

**ದೇವರಾಜ ಅರಸು ಹೇಳಿಕೆ**

ಹೋರಾಟ ಪ್ರಾರಂಭವಾಗಿ ೧೦ ನೇ ದಿನದಂದು ಅಂದರೆ ಸೆಪ್ಟಂಬರ್ ೩೦.೧೯೭೩ರಂದು ವಿಧಾನ ಸಭೆಯಲ್ಲಿ ಸೊಂಡೂರು ಹೋರಾಟ ಕುರಿತಂತೆ ಅರಸು ಅವರು ಸ್ಪಷ್ಟನೆ ನೀಡಿದರು. ಅರಸು ಅವರ ಮೌನವೇ ಹಲವು ಅನುಮಾನಗಳಿಗೆ ಕಾರಣವಾಗಿತ್ತು. ಮುಖ್ಯಮಂತ್ರಿಗಳು ಸಂದಿಗ್ಧತೆಯಲ್ಲಿದ್ದರು. ತಮ್ಮ ಕ್ಯಾಬಿನೆಟಿನ ಪ್ರಭಾವಿ ಮಂತ್ರಿ ಎಂ.ವೈ. ಘೋರ್ಪಡೆಯವರ ವಿರುದ್ಧವೇ ಪ್ರತಿಕ್ರಿಯಿಸಬೇಕಿತ್ತು. ಹಾಗಾಗಿ ಘೋರ್ಪಡೆಯವರನ್ನು ಉಳಿಸಿಕೊಳ್ಳುವತ್ತ ಗಮನ ಹರಿಸಿದರು. ಇತ್ತ ಭೂಮಿಯ ಹಕ್ಕನ್ನು ಕೇಳುತ್ತಿರುವ ಸೊಂಡೂರು ಜನತೆಯ ಪರವಾಗಿಯೂ ನಿಲ್ಲಬೇಕಿತ್ತು. ಬಹುಶಃ ಈ ಸಂದಿಗ್ಧತೆಯನ್ನು ಪರಿಹರಿಸಿಕೊಳ್ಳಲಿಕ್ಕಾಗಿಯೇ ಸ್ವಲ್ಪ ದಿನ ಅರಸು ಅವರು ಮೌನಾಗಿರಬೇಕಾಯಿತು. ಅವರ ಹೇಳಿಕೆಯ ವಿವರ ಹೀಗಿದೆ:

*ಸೊಂಡೂರಿನ ಶ್ರೀ ಕಾರ್ತಿಕೇಯ ಸ್ವಾಮಿ ಮತ್ತಿತರ ದೇವಾಲಯಗಳಿಗೆ ಸೇರಿದ ಎಂಟು ಇನಾಂ ಹಳ್ಳಿಗಳಿವೆ. ಅದನ್ನು ೧೯೪೮ರಲ್ಲೇ ಸರ್ಕಾರ ವಹಿಸಿಕೊಂಡು ಆ ದೇವಾಲಯಕ್ಕೆ ೩೬,೦೦೦ ರೂಗಳನ್ನು ವಾರ್ಷಿಕ ಗ್ರಾಂಟ್ಸ್ ಕೊಡುತ್ತಿದೆ. ಆ ಇನಾಂ ಹಳ್ಳಿಗಳ ಮೇಲೆ ಸೊಂಡೂರಿನ ಮಾಜಿ ರಾಜರಿಗೆ ಯಾವ ಹಕ್ಕೂ ಇಲ್ಲ. ಆದರೆ ಆ ಗೇಣಿದಾರರಿಗೆ ಪಟ್ಟಾ ದೊರೆತಿಲ್ಲ. ಆ ಇನಾಂಗಳ ರದ್ದಿಯಾತಿಗೆ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿದೆ. ಭೂಮಿಗುತ್ತಿಗೆ: ಸೊಂಡೂರು ಮ್ಯಾಂಗನೀಸ್ ಅಂಡ್ ಐರನ್ ಓರ್ಸ್ ಸಂಸ್ಥೆಗೆ ೨೯ ಚದರ ಮೈಲುಗಳ ಭೂಮಿ ಗುತ್ತಿಗೆಗೆ ಕೊಡಲಾಗಿದೆ. ಆ ಗುತ್ತಿಗೆ ೧೯೭೩ರ ಡಿಸೆಂಬರ್‌ಗೆ ಮುಗಿಯಲಿದೆ. ಅದನ್ನು ಇನ್ನೂ ೧೦ ವರ್ಷ ಮುಂದುವರಿಸಬೇಕೆಂದು ಆ ಸಂಸ್ಥೆ ಕೇಳಿದೆ. ಅದಕ್ಕೆ ಕೇಂದ್ರ ಸರ್ಕಾರ ಒಪ್ಪಿದೆ. ಅಲ್ಲಿ ೧೦,೦೦೦ ಕೆ.ವಿ.ವಿ. ಶಕ್ತಿಯ, ಎರಡು ಫೆರೊ ಸಿಲಿಕಾನ್ ಕುಲುಮೆಗಳನ್ನು ಆ ಸಂಸ್ಥೆ ಸ್ಥಾಪಿಸಲಿದೆ. ಸಿದ್ದಾಪುರ, ರಾಧಾಪುರ, ನಂದಿಹಳ್ಳಿಯಲ್ಲಿ ಸೊಂಡೂರು ಟುಬ್ಯಾಕೋ ಕಂಪನಿಗೆ*

*೧೯೫೬ರಲ್ಲಿ ೮೫೭ ಎಕರೆ ಭೂಮಿಯನ್ನು ಗುತ್ತಿಗೆಗೆ ಕೊಡಲಾಯಿತು. ಆ ಕಂಪನಿ ಈಗ ವಿಸರ್ಜನೆಯಾಗಿದೆ. ಭೂಮಿಯ ಬಗ್ಗೆ ಕೋರ್ಟಿನ ಡಿಕ್ರಿ ಇತ್ತು. ೧೯೭೦ರಲ್ಲಿ ಆ ಭೂಮಿಯೆಲ್ಲಾ ಸರ್ಕಾರದ ವಶಕ್ಕೆ ಬಂತು. ಈಗ ಅಲ್ಲಿ ತೋಟಗಾರಿಕೆಯ ಫಾರಂ ಒಂದರ ನಿರ್ಮಾಣ ಯೋಜನೆ ಇದೆ. ಅದಕ್ಕೆಷ್ಟು ಭೂಮಿ ಬೇಕು ಅನ್ನುವುದನ್ನು ಪರಿಶೀಲಿಸಿ ಉಳಿದ ಭೂಮಿಯನ್ನು ರೈತರಿಗೆ ಕೊಡುವ ವಿಚಾರವೂ ಇದೆ. ಆ ಭಾಗದಲ್ಲಿ ಈಗ ೯.೯೧೫ ಎಕರೆಗಳಷ್ಟು ಭೂಮಿ ಹಂಚಲು ಸಾಧ್ಯ. ಸೊಂಡೂರು ರಾಜ ಮನೆತನದ ಬೇಟೆಗಾಗಿ ದೇವಗಿರಿ, ರಾಮಘಡದಲ್ಲಿ ಸ್ವಲ್ಪ ಅರಣ್ಯ ಭೂಮಿಯನ್ನು ಮೀಸಲಿರಿಸಲಾಗಿತ್ತು. ಈಗ ಅದು ರದ್ದಾಗಿದೆ. ಆ ಅರಣ್ಯವನ್ನು ಸರಕಾರವೇ ವಹಿಸಿಕೊಂಡಿದೆ.*

ಅರಸು ಅವರ ಹೇಳಿಕೆಯಲ್ಲಿ ದ್ವಂದ್ವ ಇತ್ತು. ರಾಜಮನೆತನವನ್ನು ಸಂಪೂರ್ಣವಾಗಿ ಬಿಟ್ಟುಕೊಡುವಂತೆಯೂ ಇರಲಿಲ್ಲ. ರೈತರ ಬೇಡಿಕೆಗಳಿಗೆ ಪರಿಹಾರ ನೀಡಿದಂತೆಯೂ ಇರಲಿಲ್ಲ. ದೇವಸ್ಥಾನಕ್ಕೆ ಸೇರಿದ ಇನಾಂ ಭೂಮಿಯನ್ನು ೧೯೫೮ರಲ್ಲಿ ಸರಕಾರ ವಹಿಸಿಕೊಂಡಿದೆ ಎಂದು ಹೇಳಿದರು. ಆದರೆ ಚಳವಳಿಗಾರರ ಬೇಡಿಕೆಗಳಾದ ೧೯೩೭ರ ಇನಾಂ ನಿಯಂತ್ರಣ ಕಾನೂನು, ೧೯೫೬ರ ಸಂವಿಧಾನದ ಉದ್ಘೋಷಣೆ ಮತ್ತು ೧೯೫೮ರ ದೇವಾಲಯ ಉದ್ಘೋಷಣೆಗಳನ್ನು ರದ್ದುಪಡಿಸುವ ಬಗೆಗೆ ಸರಿಯಾದ ಮಾಹಿತಿಯನ್ನು ನೀಡಲಿಲ್ಲ. ಎಫ್.ಎಂ. ಅಂಡ್ ಪಿ.ಒ. ಕಂಪನಿಗೆ ನೀಡಲಾದ ೨೯ಚದರ ಮೈಲಿ ಗುತ್ತಿಗೆಯನ್ನು ರದ್ದು ಪಡಿಸಿ ಈ ಗುತ್ತಿಗೆಯನ್ನು ರಾಷ್ಟ್ರೀಯ ಗಣಿ ಅಭಿವೃದ್ಧಿ ನಿಗಮ ಅಥವಾ ಮೈಸೂರು ಮೆಟಲ್ಸ್ ಲಿಮಿಟೆಡ್ ಈ ಎರಡರಲ್ಲಿ ಒಂದು ಸಂಸ್ಥೆಗೆ ಕೊಡಬೇಕು ಎನ್ನುವುದು ಚಳವಳಿಗಾರರ ಬೇಡಿಕೆ ಯಾಗಿತ್ತು. ಆದರೆ ಅವರು ಹೇಳಿಕೆಯಲ್ಲಿ ಇದೇ ಕಂಪನಿ ಇನ್ನೂ ೨೦ ವರ್ಷ ಲೀಜಿಂಗ್ ಮುಂದುವರಿಸಿಕೊಂಡು ಹೋಗಲು ಕೇಂದ್ರ ಸರ್ಕಾರ ಅನುಮತಿಸಿದೆ. ನಮ್ಮ ದೇನು ಅಭ್ಯಂತರ ವಿಲ್ಲ ಎನ್ನುವ ರೀತಿಯಲ್ಲಿ ಸ್ಪಷ್ಟನೆ ನೀಡಿದರು. ಇದೂ ಸಹ ಚಳವಳಿಗಾರರ ಬೇಡಿಕೆಯನ್ನು ತಿರಸ್ಕರಿಸುವ ದಾಟಿಯಲ್ಲಿತ್ತು. ಒಟ್ಟಾರೆ ಅರಸು ಅವರ ಹೇಳಿಕೆ ಚಳವಳಿಗಾರರ ಒಂದೆರಡು ಪ್ರಮುಖ ಬೇಡಿಕೆಗಳ ಕಡೆ ಗಮನ ಹರಿಸಿತು. ಆದರೆ ಇತರೆ ಸ್ಥಳೀಯ ಬೇಡಿಕೆಗಳನ್ನು ಪ್ರಸ್ತಾಪಿಸಲಿಲ್ಲ. ಸೊಂಡೂರು ರಾಜವಂಶದ ಭೂ ವಿವರ, ದಬ್ಬಾಳಿಕೆ, ಶೋಷಿತ ಆಡಳಿತ ನೀತಿ, ಇವುಗಳ ವಿರುದ್ಧ ಸರ್ಕಾರ ತೀವ್ರ ಕ್ರಮ ಕೈಗೊಳ್ಳುವ ಬಗ್ಗೆ ಅರಸು ಯಾವ ಸುಳಿವನ್ನೂ ನೀಡಲಿಲ್ಲ. ಬಹುಶಃ ಈ ಎಲ್ಲಾ ಕಾರಣಗಳಿಂದಾಗಿ ಸೊಂಡೂರಿನಲ್ಲಿ ನಡೆಯುತ್ತಿದ್ದ ಚಳವಳಿಯ ಮೇಲೆ ಈ ಹೇಳಿಕೆ ವ್ಯತಿರಿಕ್ತ ಪರಿಣಾಮ ಬೀರಿತು. ಇಡಿಯಾದ ಹೇಳಿಕೆ ಅರಸು ಘೋರ್ಪಡೆಯವರನ್ನು ಮರೆ ಮಾಚಿಯಾದರೂ ರಕ್ಷಿಸುತ್ತಿದ್ದಾರೆ ಎನ್ನುವುದು ಗೋಚರಿಸಿತು.

ದೇವರಾಜ ಅರಸರು ಚಳವಳಿ ಬಗೆಗೆ ಪ್ರತಿಕ್ರಿಯಿಸಿದ ನಂತರ, ಮನವಿ ಪತ್ರದಲ್ಲಿ ಕಾಣಿಸಿರುವ ಅಂಶಗಳ ಬಗ್ಗೆ ಸರಕಾರ ಈಗಾಗಲೇ ಕ್ರಮ ಕೈಗೊಂಡಿರುವುದರಿಂದ ಹೋರಾಟವನ್ನು ನಿಲ್ಲಿರುವುದು ಯೋಗ್ಯವೆಂದು ಸಮಾಜವಾದಿ ಪಕ್ಷಕ್ಕೆ ಮನವಿ ಮಾಡಿಕೊಂಡರು. ತಕ್ಷಣ ಕೋಣಂದೂರು ಲಿಂಗಪ್ಪ ಪ್ರತಿಕ್ರಿಯಿಸಿ "ಸೊಂಡೂರು ಹೋರಾಟದ ಎಲ್ಲಾ ಬೇಡಿಕೆಗಳಿಗೆ ನಿಮ್ಮ ಹೇಳಿಕೆಯಲ್ಲಿ ಉತ್ತರವಿಲ್ಲ ಹಾಗಾಗಿ ಚಳವಳಿ ನಿಲ್ಲಿಸಲು ಆಗುವುದಿಲ್ಲ" ಎಂದರು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸ್ವತಃ ಅರಸು ಅವರೇ ಸೊಂಡೂರು ವಿಷಯದಲ್ಲಿ ಕೆಲ ಇಕ್ಕಟುಗಳಿಗೆ ಸಿಕ್ಕಿಹಾಕಿಕೊಂಡಿದ್ದರು. ವ್ಯಂಗ್ಯವೆಂದರೆ ಭೂಸುಧಾರಣೆ ಕಾನೂನು ಜಾರಿ ಮಾಡಿದ ಕೀರ್ತಿಗೆ ಪಾತ್ರರಾದ ಅವರಿಗೆ ಈ ಇಕ್ಕಟುಗಳಿಂದ ಹೊರಬಂದು ಚಳವಳಿಯನ್ನು ತೀವ್ರವಾಗಿ ಗಮನಿಸಲು ಸಾಧ್ಯವಾಗಲೇ ಇಲ್ಲ.

ಅರಸು ಮನವಿಯನ್ನು ಕಾಗೋಡು ತಿಮ್ಮಪ್ಪನವರು ವಿರೋಧಿಸಿರು. ಈ ವರದಿಯನ್ನು ತಿಳಿದ ಸಮಾಜವಾದಿ ಪಕ್ಷದ ಕಾರ್ಯದರ್ಶಿ ಎಸ್. ವೆಂಕಟರಾಂ ಅವರು ಮುಖ್ಯಮಂತ್ರಿಗಳಿಗೆ ಸೆಪ್ಟಂಬರ್ ೩೦ರಂದು 'ಸೊಂಡೂರು ಸತ್ಯಾಗ್ರಹ ನಿಲ್ಲುವುದಿಲ್ಲ. ಬೇಡಿಕೆಗಳ ಈಡೇರಿಕೆಗಾಗಿ ಈ ಚಳವಳಿಯನ್ನು ತೀವ್ರಗೊಳಿಸಲಾಗುವುದು' ಎಂಬ ತಂತಿ ಸಂದೇಶವನ್ನು ಕಳಿಸಿದರು. ಅದೇ ಹೊತ್ತಿಗೆ ಚಳವಳಿಯ ೧೭ನೇ ದಿನವಾದ ಸೆಪ್ಟಂಬರ್ ೨೮ರಂದು ೨೭ ಜನ, ೧೮ನೇ ದಿನವಾದ ಸೆಪ್ಟಂಬರ್ ೨೯ರಂದು ೨೫ ಜನ ಸತ್ಯಾಗ್ರಹಿಗಳು ಬಂಧಿತರಾಗಿ ಬಿಡುಗಡೆ ಹೊಂದಿದರು. ಸೆಪ್ಟಂಬರ್ ೩೦ ರಂದು ಸಂಜೆ ಸೊಂಡೂರಿನಲ್ಲಿ ಬಹಿರಂಗ ಸಭೆ ನಡೆಯಿತು. ಈ ಸಭೆಯ ಮುಖ್ಯ ಉದ್ದೇಶ ಅರಸು ಹೇಳಿಕೆಯನ್ನು

ಚಳವಳಿಗಾರರಿಗೆ ತಿಳಿಸುವುದು ಮತ್ತು ಈ ಹೇಳಿಕೆಯನ್ನು ತಿರಸ್ಕರಿಸುವುದೇ ಆಗಿತ್ತು. ಹೋರಾಟದ ನಾಯಕರ ಮುಖ್ಯ ಪ್ರತಿಕ್ರಿಯೆಗಳು ಹೀಗಿದ್ದವು:

**ಕೆ.ಜಿ. ಮಹೇಶ್ವರಪ್ಪ :** ಮಾನ್ಯ ಮಂತ್ರಿಗಳು ವಿಧಾನಸಭೆಯಲ್ಲಿ ಸೊಂಡೂರಿನ ಬಗ್ಗೆ ಕೊಟ್ಟಿರುವ ಹೇಳಿಕೆಯಲ್ಲಿ ಸಮಸ್ಯೆಯನ್ನು ಪರಿಹರಿಸುವ ಯಾವುದೇ ಸೂತ್ರವಿಲ್ಲ. ನಂದಿಹಳ್ಳಿ, ರಾಧಾಪುರ, ಸಿದ್ಧಾಪುರಗಳಲ್ಲಿ ಜಮೀನನ್ನು ಭೂಮಿ ಇಲ್ಲದವರಿಗೆ ವಿತರಣೆ ಮಾಡುವ ಬೇಡಿಕೆಯನ್ನು ತಾಲ್ಲೂಕು ರೈತ ಸಂಘ ಸರಕಾರದ ಮುಂದೆ ಮಂಡಿಸಿತ್ತು. ಪ್ರಧಾನಿ ಇಂದಿರಾ ಗಾಂಧಿಯವರಿಗೂ ಸಹ ಮನವಿ ಮಾಡಲಾಗಿದೆ. ಈ ಮಧ್ಯೆ ರಾಜ್ಯದ ಅರ್ಥ ಮಂತ್ರಿ ಘೋರ್ಪಡೆ ಈ ಭೂಮಿಯನ್ನು ತಾವು ನಡೆಸುವ ವಿವಿಧ ಸಂಸ್ಥೆಗಳಿಗೆ ಕೇಳಿದ್ದರು. ಆದರೆ ಜನರು ತಮ್ಮ ಬೇಡಿಕೆಗಳ ಬಗ್ಗೆ ಒತ್ತಾಯ ಮಾಡುತ್ತ ಬಂದ ಹಾಗೆ ಇವರು ತಮ್ಮ ಬೇಡಿಕೆಯನ್ನು ಬದಲಿಸಿ ಸ್ನಾತಕೋತ್ತರ ಶಿಕ್ಷಣ ಕೇಂದ್ರ, ತೋಟಗಾರಿಕೆ ಯೋಜನೆಗಳ ಬಗ್ಗೆ ಮಾತನಾಡುತ್ತಿದ್ದು, ಈ ಬಗ್ಗೆ ಹಿಂದೆ ಅವರು ವಿಧಾನ ಸಭೆ, ಪರಿಷತ್ತಿನಲ್ಲಿ ನೀಡಿರುವ ಹೇಳಿಕೆ ಇದೆ. ಈ ಅಂಶಗಳನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸದೆ ಇರುವುದು ವಿಷಾದನೀಯ ಸಂಗತಿ. ಹೀಗಿರುವಾಗ ತಮ್ಮ ಹೋರಾಟ ಸರಕಾರದ ಕಣ್ಣು ತೆರಸುವವರೆಗೆ ನಡೆಯಬೇಕಾದದ್ದು ಅನಿವಾರ್ಯವೆನಿಸುವತ್ತದೆ.

**ಎಲಿಗಾರ ತಿಮ್ಮಪ್ಪ :** ಶ್ರೀ ಘೋರ್ಪಡೆ ಈ ಕ್ಷೇತ್ರದ ಅರ್ಥ ಸಚಿವರು. ಅಲ್ಲದೆ ಇಲ್ಲಿನ ಮಾಜಿ ಯುವರಾಜರು ಅವರಿಗೆ ತಮ್ಮ ರೈತರ ಬಗ್ಗೆ ಅನುಕಂಪ ಇರಬೇಕು. ಈಗಲೂ ಸಮಯ ಮೀರಿಲ್ಲ. ಸರ್ಕಾರ ಸಮಸ್ಯೆಗಳನ್ನು ಇತ್ಯಾರ್ಥ ಮಾಡುವ ಮನಸ್ಸು ಮಾಡುವುದು ಒಳ್ಳೆಯದು.

**ಎಸ್. ವೆಂಕಟರಾಂ :** ಸೊಂಡೂರಿನ ರಾಜಮನೆತವು ಜನತೆಯ ನೇರ ಸುಲಿಗೆ, ಶೋಷಣೆಯನ್ನು ಇಂದು ಸಂಸ್ಥೆಗಳ ಹೆಸರಿನಲ್ಲಿ ಮುಂದುವರಿದುಕೊಂಡು ಬಂದಿದೆ. ಅದನ್ನು ವಿರೋಧಿಸಬೇಕಾದದ್ದು ಸಮಾಜವಾದಿಗಳ ಕರ್ತವ್ಯ. ಈ ಭಾಗದಲ್ಲಿ ಕುಮಾರಸ್ವಾಮಿ ಭೂಮಿ, ಬೇಟೆಯ ಅರಣ್ಯ, ಈ ಎಲ್ಲಾ ಸವಲತ್ತುಗಳನ್ನು ಹೊಂದುವ ಅಧಿಕಾರವನ್ನು ಘೋರ್ಪಡೆ ಯವರು ಹೊಂದಿದ್ದಾರೆ. ಬಂಡಿ ಹರ್ಲಾಪುರದಲ್ಲಿ ಹರಿಜನರ ಮೇಲೆ ಹಲ್ಲೆ ನಡೆದಾಗ ಅದನ್ನು ಖಂಡಿಸುವುದು ತಪ್ಪಿತಸ್ಥರನ್ನು ಶಿಕ್ಷಿಸುವ ವ್ಯವಸ್ಥೆ ಈ ದೇಶದಲ್ಲಿಲ್ಲ. ಆದುದರಿಂದ ಸಾಮೂಹಿಕ ಸಂಘಟನಾಕಾರರ ಹೋರಾಟ ಸಂಸ್ಯೆಗಳ ಇತ್ಯರ್ಥಕ್ಕೆ ಹಾದಿ.

**ಎಸ್.ಎಸ್. ಕುಮುಟ :** ಮೊದಲು ಮುಖ್ಯಮಂತ್ರಿಗಳು ಚಳವಳಿಯನ್ನು ತಪ್ಪುಸ್ಥಳದಲ್ಲಿ ನಡೆಸುತ್ತಿದ್ದೀರಿ ಎಂದರು, ಈಗ ಚಳುವಳಿಯನ್ನು ನಿಲ್ಲಿಸಿ ಎಂದು ಮನವಿ ಮಾಡುತ್ತಿದ್ದಾರೆ. ಇವರ ಈ ಹೇಳಿಕೆ ನೋಡಿದಾಗ ಅವರಿಗೆ ಸಮಸ್ಯೆಗಳಿವೆ ಎನ್ನುವುದು ತಿಳಿದಿದೆ. ಆದರೆ ಅವರು ಶ್ರೀ ಘೋರ್ಪಡೆಯವರನ್ನು ಉಳಿಸಲು ಪ್ರಯತ್ನಿಸುತ್ತಿದ್ದಾರೆ. ಇದು ಸಲ್ಲದು. ರಾಜ್ಯದಲ್ಲಿ ಕುತೂಹಲ ಕೆರಳಿಸಿದ 'ಸುಮಿತ್ರ' ದೇಸಾಯಿ ಪ್ರಕರಣದಲ್ಲಿ ಶ್ರೀ ಕಿತ್ತೂರರವರು ನಿರಪರಾಧಿಗಳು ಎಂದು ಅವರೇ ಹೇಳಿದರೂ ಅಪರಾಧ ಸಾಬೀತಾಗಿದೆ. ಕಿತ್ತೂರರ ರಾಜಿನಾಮೆ ಯನ್ನು ಪಡೆದರು. ಒಂದು ಕಡೆ ಕಿತ್ತೂರರಿಗೆ ಶಿಕ್ಷೆ ಏಕೆಂದರೆ ಅವರೊಬ್ಬ ಹರಿಜನ. ಮತ್ತೊಂದು ಕಡೆ ಘೋರ್ಪಡೆಯವರು ಲೆಕ್ಕವಿಲ್ಲದಷ್ಟು ತಪ್ಪುಗಳನ್ನು ಮಾಡಿದರೂ ಆಪಾದನೆಗಳ ಪಟ್ಟಿ ಇದ್ದರೂ ಅವರಿಗೆ ಕುಮಾರಸ್ವಾಮಿ ದೇವಸ್ಥಾನಕ್ಕೆ ವರ್ಷಂಪ್ರತಿ ಕೊಡುತ್ತಿದ್ದ ೩೬,೦೦೦ ರೂಗಳನ್ನು ೪೬,೦೦೦ ರೂಗಳಿಗೆ ಏರಿಸಲಾಗಿದೆ. ಇದಾವ ನ್ಯಾಯ?

**ಯಜಮಾನ್ ಶಾಂತರುದ್ರಪ್ಪ :** ಈ ಅಹಿಂಸಾತ್ಮಕ ಹೋರಾಟ ಮುಂದುವರಿದು ಕುಮಾರಸ್ವಾಮಿ ದೇವಸ್ಥಾನ ರಾಜರ ಹಿಡಿತದಿಂದ ಬಿಡುಗಡೆಯಾಗಲಿ. ಭೂಹೀನರ ಆಸೆ ಈಡೇರಲಿ. ಅದಕ್ಕಾಗಿ ಸಹಕರಿಸಿ ('ಕನ್ನಡ ಪ್ರಭ' ೫.೧೦.೧೯೭೩)

ಈ ಅಭಿಪ್ರಾಯಗಳನ್ನು ಗಮನಿಸಿದರೆ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ. ಮುಖ್ಯಮಂತ್ರಿಗಳು ಘೋರ್ಪಡೆಯವರನ್ನು ರಕ್ಷಿಸುತ್ತಿದ್ದಾರೆ ಎನ್ನುವ ಕಾರಣಕ್ಕೆ ಅವರ ಮೇಲೆ ಬೇಸರವಿದೆ. ವೆಂಕಟರಾಂ ಪ್ರಸ್ತಾಪಿಸುವ ಹರ್ಲಾಪುರದ ದಲಿತರ ಪ್ರಕರಣ, ಕುಮಟರವರು ನೆನಪಿಸುವ ಸುಮಿತ್ರಾ ದೇಸಾಯಿ ಪ್ರಕರಣ ರಾಜಕೀಯ ತಂತ್ರ ಪ್ರತಿತಂತ್ರದ ಸಿದ್ಧ ಸೂತ್ರದಂತೆ ಕಂಡರೂ ಸರ್ಕಾರದ ವೈಫಲ್ಯವನ್ನು ತೋರಿಸುವ

ಪ್ರಕಣಗಳಾಗಿ ಬಳಸಿದ್ದಾರೆ. ಅವುಗಳಮೂಲಕ ಸೊಂಡೂರು ಭೂ ಹೋರಾಟವನ್ನು ಕೇವಲ ರಾಜಕೀಯ ಹೊಂದಾಣಿಕೆಯಿಂದ ನಿಲ್ಲಿಸಲಾಗದು ಎನ್ನುವ ಸ್ಪಷ್ಟ ನಿರ್ಧಾರವಿತ್ತು. ಯಜಮಾನರು ಮೂಲತಃ ಗಾಂಧಿವಾದಿಗಳಾಗಿದ್ದರಿಂದ ಅಹಿಂಸಾತ್ಮಕ ಹೋರಾಟದಲ್ಲೇ ನಂಬಿಕೆ ಇರಿಸಿದ್ದರು. ತಿಮ್ಮಪ್ಪನವರ ಹೇಳಿಕೆಯಲ್ಲಿ ಘೋರ್ಪಡೆಯವರು ಬಗೆಗೆ ಗೌರವ ಮತ್ತು ವಿನಯದಿಂದ ರೈತರ ಬಗ್ಗೆ ಅವರು ಅನುಕಂಪ ತೋರಬೇಕು ಎನ್ನುವ ಪ್ರತಿಕ್ರಿಯೆಯನ್ನು ಮಾಡುತ್ತಾರೆ. ರಾಜವಂಶದ ಪರವಾಗಿದ್ದವರೂ ಅರಸು ಹೆಳಿಕೆಯನ್ನು ಅಭಿನಂದಿಸಿದರು. ಅಕ್ಟೋಬರ್ ೪ರಂದು ಸಂಯುಕ್ತ ಕರ್ನಾಟಕ ದಲ್ಲಿ ಪತ್ರಿಕಾ ಹೇಳಿಕೆ ಪ್ರಕಟವಾಯಿತು. ಸೊಂಡೂರು ತಾಲೂಕು ಮಂಡಳಿ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪನವರು 'ಮಾನ್ಯ ದೇವರಾಜ ಅರಸು ಅವರು ಇನಾಂ ರದ್ದಿಯಾತಿ ವಿಧೇಯಕ ಮಂಡಸಿ ಚಳವಳಿಯ ಬಗ್ಗೆ ಸ್ಪಷ್ಟ ಹೇಳಿಕೆ ನೀಡಿದ್ದಕ್ಕೆ ಅಭಿನಂದನೆಗಳು. ಈ ಸಂದರ್ಭದಲ್ಲಿ ಕರ್ನಾಟಕ ಸಮಾಜವಾದಿ ಪಕ್ಷವು ನಡೆಸಿದ ಪ್ರಯತ್ನಕ್ಕೆ ಐಕ್ಯದಿಂದ ಜೊತೆಯಾದ ಸೊಂಡೂರಿನ ಜನರಿಗೂ ನಾವು ಅಭಿನಂದಿಸುತ್ತೇವೆ' ಎಂದು ಹೇಳಿಕೆ ನೀಡಿದ್ದರು. ಇದು ಅರಸು ಹೇಳಿಕೆ ರಾಜಪರವೇ ಇತ್ತು. ಎನ್ನುವುದರ ಸಾಕ್ಷಿ.

ಹೋರಾಟವು ಸುತ್ತಮುತ್ತಲ ಹಳ್ಳಿಗಳಿಗೆ ವ್ಯಾಪಿಸಿತು. ಇದರಿಂದಾಗಿ ಆಯಾ ಹಳ್ಳಿಯ ಗುಂಪೊಂದು ಸೊಂಡೂರಿಗೆ ಬಂದು ಚಳುವಳಿಯಲ್ಲಿ ಭಾಗವಹಿಸುತ್ತಿದ್ದವು. ಸೊಂಡೂರು ಸಮೀಪದ ದೌಲತ್ ಪುರವು (ಮೂಲ ಹೆಸರು ಕೋನಾಪುರ) ೧೬೮ ಮನೆಗಳಿರುವ ಗ್ರಾಮ (೧೯೭೩ರಲ್ಲಿ). ಒಟ್ಟು ೯೮೪ ಜನರಿರುವ ಈ ಊರಿನ ರೈತರು ಚಳುವಳಿಯ ೧೯ನೇ ದಿನ ಸೆಪ್ಟಂಬರ್ ೩೦ರಂದು ಸೊಂಡೂರಿನಲ್ಲಿ ಸತ್ಯಾಗ್ರಹ ಮಾಡಿದರು. ದೌಲತ್ ಪುರದ ಒಟ್ಟು ೪೦ ಸತ್ಯಾಗ್ರಹಿಗಳು ೬ ಮಹಿಳೆಯರು ಮಕ್ಕಳೊಂದಿಗೆ ಭಾಗವಹಿಸಿದರು. ಈ ಊರಿನ ಪಂಚಾಯ್ತಿ ಬೋರ್ಡ್ ಸದಸ್ಯ ಆರ್. ಶಿವಮೂರ್ತಿ. ಪ್ರಮುಖ ರೈತರಾದ ವಿ.ನಾಗಪ್ಪ ಮತ್ತು ಕಂಪ್ಲಿ ಇಮಾಮ್ ಸಾಬ್ ಇವರ ನಾಯಕತ್ವದಲ್ಲಿ ತಾಲೂಕು ಕಛೇರಿ ಮುಂದೆ ಪಿಕೆಟಿಂಗ್ ಮಾಡಲು ಯತ್ನಿಸಿದಾಗ ಪೊಲೀಸರು ದಸ್ತಗಿರಿ ಮಾಡಿ ನಂತರ ಬಿಡುಗಡೆ ಮಾಡಿದರು. ಭಾಗವಹಿಸಿದ ೬ ಮಹಿಳೆಯರ ವಿವರ ಸಿಕ್ಕಿಲ್ಲ. ಈ ಹೊತ್ತಿಗಾಗಲೇ ಚಳವಳಿಯಲ್ಲಿ ದಸ್ತಗಿರಿ ಆದವರು ಒಟ್ಟು ೫೫೯ ಜನ. ೨೦ ನೇ ದಿನ ಸೊಂಡೂರು ತಾಲೂಕು ರೈತ ಸಂಘದ ಕಾರ್ಯದರ್ಶಿ ಜಿ.ನರಸಿಂಹರಾವ್ ಅವರ ನಾಯಕತ್ವದಲ್ಲಿ ೨೪ ಜನ ಸತ್ಯಾಗ್ರಹಿಗಳು ತಾಲೂಕು ಕಛೇರಿ ಮುಂದೆ ಸತ್ಯಾಗ್ರಹ ಮಾಡಿ ಬಂಧನಕ್ಕೊಳಗಾಗಿ ಬಿಡುಗಡೆಯಾದರು.

ಈ ಮೊದಲೇ ಜಾರ್ಜ್ ಫರ್ನಾಂಡಿಸ್ ಸೊಂಡೂರು ಚಳವಳಿಯಲ್ಲಿ ಭಾಗವಹಿಸುವವರ ಪಟ್ಟಿ ಕೊಟ್ಟಿದ್ದರು. ಇದರಲ್ಲಿ ಮೊದಲಿಗೆ ಬಂದವರೆಂದರೆ ಮಹಾರಾಷ್ಟ್ರದ ಸೋಷಲಿಸ್ಟರು. ಮುಂಬೈನ ಮುನಿಸಿಪಾಲ್ ಕಾರ್ಪೋರೇಟರಾದ ಏಕನಾಥ ಘೋರ್ಪಡೆಯವರ ನಾಯಕತ್ವದಲ್ಲಿ ಮಹಾರಾಷ್ಟ್ರದ ಸೋಷಲಿಸ್ಟ್ ಪಕ್ಷದ ಜಾಥಾ ಅಕಟೋಬರ್ ೩.೧೯೭೩ರಂದು ಸೊಂಡೂರು ತಲುಪಿತು. ಮರುದಿನ ಅಂದರೆ ಅಕ್ಟೋಬರ್ ೪ರಂದು ಈ ಜಾಥಾ ನಗರದ ಪ್ರಮುಖ ಬೀದಿಗಳಲ್ಲಿ ಪಥಸಂಚಲನ ಮಾಡಿತು. ಈ ಜಾಥಾದೊಂದಿಗೆ ಇಲ್ಲಿನ ರೈತರು ಸ್ಥಳೀಯ ಕಾರ್ಯಕರ್ತರು ಸತ್ಯಾಗ್ರಹಿಗಳು ಭಾಗವಹಿಸಿದರು. ಆ ದಿನದಂದು ಏಕನಾಥ ಘೋರ್ಪಡೆ ಮತ್ತು ರಾಜ್ಯ ಸೋಷಲಿಸ್ಟ್ ಪಾರ್ಟಿ ಖಚಾಂಚಿ ದಯಾನಂದ ನಾಡಕರ್ಣಿಯವರನ್ನು ತಾಲ್ಲೂಕು ಕಛೇರಿಯ ಮುಂದೆ ದಸ್ತಗಿರಿ ಮಾಡಲಾಯಿತು. ನಾಗಪ್ಪನವರು ಈ ಸಂದರ್ಭ ನೆನಪಿಸಿಕೊಳ್ಳುತ್ತಾ 'ಮಹಾರಾಷ್ಟ್ರದಿಂದ ನಮ್ಮ ಸಮಸ್ಯೆ ಪರಿಹರಿಸ್ಲಿಕ್ಕೆ ಬಂದಾರ ನಾವ್ಯಾಕ ಇನ್ನು ಎದುರಬೇಕು ಏನೇ ಆಗ್ಲಿ.. ಭೂಮಿ ನಮಗೆ ಸಿಗೋವರ್ಗು ಹೋರಾಟ ನಿಲ್ಲಿಸಬಾರ್ದು ಅಂತ ಚಳುವಳೀಲಿ ಭಾಗವಹಿಸಿದ ರೈತರು ಮಾತಾಡಿಕೊಳ್ತಿದ್ದರು' ಎನ್ನುತ್ತಾರೆ.

ಹೋರಾಟದಲ್ಲಿ ಭಾಗವಹಿಸಲು ಬಿಹಾರದಿಂದ ಶ್ರೀಮತಿ ಸಂತೋಷಿತಿಗಾ ಮತ್ತು ಸೂರಜ್ ಕುಮಾರ್ ಠಾಕೂರ್ ಅಕ್ಟೋಬರ್ ೬ರಂದು ಇಲ್ಲಿಗೆ ಬಂದರು. ಸಂತೋಷಿ ತಿಗಾರವರು ರಾಂಚಿ ನಗರ ಸೋಷಲಿಸ್ಟ್ ಪಾರ್ಟಿಯ ಅಧ್ಯಕ್ಷರು, ಬಿಹಾರಿನ ಸಮಾಜವಾದಿ ಯುವಜನ ಸಭಾದ ಸಂಚಾಲಕರಾಗಿದ್ದರು. ಸೂರಜ್ ಕುಮಾರ್‌ರು ಸಮಾಜವಾದಿ ಯುವಜನ ಸಭಾದ ಬಿಹಾರ ಶಾಖೆಯ ಮುಖ್ಯ ಕಾರ್ಯಕರ್ತರಾಗಿದ್ದರು. ಅಕ್ಟೋಬರ್ ೮ರಂದು ಇವರ ನಾಯಕತ್ವದಲ್ಲಿ ಮೆರವಣಿಗೆ ನಡೆಯಿತು. ಇದರಲ್ಲಿ ಮೂರು ನೂರಕ್ಕೂ ಹೆಚ್ಚು ಜನ ಸತ್ಯಾಗ್ರಹಿಗಳು ಸೇರಿದ್ದರೆಂದು ಕೆ.ಜಿ. ಮಹೇಶ್ವರಪ್ಪನವರು ಹೇಳುತ್ತಾರೆ. ಘೋಷಣೆಗಳು. ಕಿರುಚಾಟ ತೀವ್ರವಾಗಿ ಮೆರವಣಿಗೆ ತಾಲ್ಲೂಕು

ಕಛೇರಿಯ ಮುಂದೆ ತಲುಪಿದಾಗ ಸಂತೋಷಿ ತಿಗಾರವರು ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದರು. 'ಸೊಂಡೂರಿನಲ್ಲಿ ನಡೆಯುತ್ತಿರುವ ಈ ಹೋರಾಟವು ಜನತೆಯ ಹೋರಾಟವೆಂದೂ' ನಿಮ್ಮ ಹೋರಾಟಕ್ಕೆ ಜನತೆಯ ಬೆಂಬಲವಿದೆಯೆಂದೂ ಹೇಳಿದರಲ್ಲದೆ ಭೂಮಿಯಲ್ಲಿ ದುಡಿಯುವ ರೈತ, ಗಣಿಯಲ್ಲಿ ದುಡಿ ಯುವ ಕಾರ್ಮಿಕ ಈ ದೇಶದ ಶಿಲ್ಪಗಳೆಂದೂ, ಅವರ ಹಕ್ಕುಗಳು ಈಡೇರಬೇಕೆಂದೂ ಕರೆಯಿತ್ತರು. ಆದಿನ ಜೆ.ಎಚ್. ಪಟೇಲರು, ಎಸ್. ವೆಂಕಟರಾಂ, ಎಸ್.ಎಸ್. ಕುಮುಟಾರವರು ಮೆರವಣಿಗೆಯ ಜೊತೆ ಇದ್ದರು. ಈವರೆಗೆ ೬೫೦ ಜನ ಸತ್ಯಾಗ್ರಹಿಗಳು ಭಾಗಿಯಾಗಿದ್ದಾರೆಂದು ಸತ್ಯಾಗ್ರಹದ ಪ್ರಮುಖ ಬೆಳವಣಿಗೆಯನ್ನು ಪಟೇಲರು ಸಂತೋಷಿತಿಗಾರವರಿಗೆ ವಿವರಿಸಿದರು. ಅಕ್ಟೋಬರ್ ೯ರಂದು ಕೃಷ್ಣಾನಗರದ ಮಾಳಿಗೆ ಮನೆ ಮಾರಪ್ಪನವರ ನೇತೃತ್ವದಲ್ಲಿ ೩೫ ಜನ ರೈತರು ತಾಲೂಕು ಕಛೇರಿಯ ಮುಂದೆ ಪಿಕೆಟಿಂಗ್ ಮಾಡುವಾಗ ಬಂಧಿತರಾಗಿ ಬಿಡುಡಗೆ ಯಾದರು.

ನಂದಿಹಳ್ಳಿಯ ಬಳಿ ಇರುವ ೨೪೩ ಎಕರೆ ಜಮೀನನ್ನು ಸ್ನಾತಕೋತ್ತರ ಕೇಂದ್ರಕ್ಕೆ ನೀಡುವುದಾಗಿ ನಿಗದಿಯಾಗಿತ್ತು. ಈ ಬಗ್ಗೆ ತಹಶೀಲ್ದಾರ ಸಂಗಪ್ಪಾ ಶೆಟ್ಟಿಯವರು ಸರಕಾರದ ಪರವಾಗಿ ಭೂ ವಿವರವನ್ನು ನಿಡಿದ್ದರು. ಈ ಪ್ರಕರಣ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುತ್ತಿದ್ದ ಕಾರಣ ಅಲ್ಲಿಯ ಧಾರವಾಡದ ಸೋಷಲಿಸ್ಟ್ ಪಾರ್ಟಿ ಕಾರ್ಯಕರ್ತರು ಜಾಗೃತರಾದರು. ಅಕ್ಟೋಬರ್ ೧೦ರಂದು ಕರ್ನಾಟಕ ರಾಷ್ಟ್ರೀಯ ಸೋಷಲಿಸ್ಟ್ ಪಾರ್ಟಿ ಮತ್ತು ಧಾರವಾಡ ಜಿಲ್ಲಾ ಸೊಷಲಿಸ್ಟ್ ಪಾರ್ಟಿಯ ಕಾರ್ಯಕರ್ತರು ಒಗ್ಗೂಡಿ ಮತ ಪ್ರದರ್ಶನ ಮಡಿದರು. ಈ ಪ್ರದರ್ಶನದ ನೇತೃತ್ವವನ್ನು ಧಾರವಾಡ ಜಿಲ್ಲಾ ಸೋಷಲಿಸ್ಟ್ ಪಾರ್ಟಿ ಅಧ್ಯಕ್ಷ ಶ್ರೀ ಗಂಗಾಧರ ಪದಕಿ, ಕಾರ್ಯದರ್ಶಿ ರಾಚಪ್ಪ ಬೆಟದೂರು ಹಾಗೂ ಹಿರಿಯ ಸಮಾಜವಾದಿ ನೀಲಗಂಗಯ್ಯ ಪೂಜಾರ ಅವರು ವಹಿಸಿದ್ದರು. ಈ ಮತ ಪ್ರದರ್ಶನ ಸೊಂಡೂರಿನಲ್ಲಿ ನಡೆಯುತ್ತಿರುವ ರೈತರ ಚಳವಳಿಗೆ ಬೆಂಬಲ ಸೂಚಿಯೂ ಆಗಿತ್ತು. ಅಂತೆಯೇ ಕರ್ನಾಟಕದ ಇತರ ಕಡೆಗಳಲ್ಲಿರುವ ಸಮಾಜವಾದಿ ಕಾರ್ಯಕರ್ತರನ್ನು ಜಾಗೃತ ಗೊಳಿಸುವ ಜಾಥಾವೂ ಕೂಡ. ಒಂದು ವಿಶ್ವವಿದ್ಯಾಲಯವು ಜನಾಭಿಪ್ರಾಯದ ವಿರುದ್ಧ ಸ್ಥಾಪಿಸ ಹೊರಟ ಸ್ನಾತಕೋತ್ತರ ಕೇಂದ್ರದ ಸ್ಥಳ ಬದಲಾವಣೆಗೆ ಕ್ರಮವಹಿಸಲು ಕುಲಪತಿಗಳಾದ ಎಂ. ಜಯಲಕ್ಷ್ಮಮ್ಮಣ್ಣಿಯವರಿಗೆ ಮನವರಿಕೆ ಪತ್ರ ನೀಡಿದರು. ಈ ಮತ ಪ್ರದರ್ಶನದಲ್ಲಿ ಭಾಗವಹಿಸಿದ ಇತರೆಂದರೆ ಯಜಮಾನ ಶಾಂತರುದ್ರಪ್ಪ 'ಕುರುಕ್ಷೇತ್ರ' ಪತ್ರಿಕೆಯ ಸಂಪಾದಕ ಬಾಬುರೆಡ್ಡಿ ತುಂಗಳ್, ಸಾಗರದ ಸೋಷಲಿಸ್ಟ್ ಪಾರ್ಟಿಯ ಕಾರ್ಯದರ್ಶಿ ಐ.ಡಿ. ರಾಮಚಂದ್ರಪ್ಪ, ಬಿ.ರಮೇಶ್, ರಾಜ್ಯ ಸಮಾಜವಾದಿ ಯುವಜನ ಸಭಾದ ಪ್ರಭಾಕರ ಕಾಳೆ ಜಯಂತ್, 'ಆಂದೋಲನ' ಪತ್ರಿಕೆಯ ರಾಜಶೇಖರ ಕೋಟಿ.

**ತೋಟಗಾರಿಕೆ ಕಛೇರಿ ಎದುರು ಸತ್ಯಾಗ್ರಹ**

ಸೊಂಡೂರಿನಿಂದ ೮ ಕಿ.ಮೀ. ದೂರವಿರುವ ರಾಘಾಪುರದಲ್ಲಿ ಚಳವಳಿ ಆರಂಭಕ್ಕಿಂತ ಮುಂಚಿನ ಮೂರು ವರ್ಷದಿಂದಲೂ ತಂಬಾಕು ಕಂಪನಿ ಕೆಲಸವನ್ನು ನಿಡುಗಡೆ ಮಾಡಿತ್ತು. ಹಾಗಾಗಿ ಅಲ್ಲಿನ ಫಲವತ್ತಾದ ೧೫೨ ಎಕರೆ ಭೂಮಿ ತಂಬಾಕು ಕಂಪನಿಯ ಹೆಸರಿನಲ್ಲಿ ಸಾಗು ಮಾಡದೆ ರಾಜರ ಹದ್ದುಬಸ್ತಿನಲ್ಲಿತ್ತು. ೧೯೪೮ರ ಜಾಹಿರುನಾಮೆಯಲ್ಲಿ ಈ ಭೂಮಿ ೧೫೦೦ ಎಕರೆ ಎಂದಿದೆ. ಆದರೆ ೧೯೭೩ರ ಹೊತ್ತಿಗೆ ಅದು ೧೫೨ ಎಕರೆಗೆ ಹೇಗೆ ಇಳಿಯಿತೋ ತಿಳಿಯದು. ಸೆಪ್ಟಂಬರ್ ೧೦ರಂದು ಸೊಂಡೂರಿನ ತಹಶೀಲ್ದಾರ ಸಂಗಪ್ಪಾ ಮಟ್ಟಿ ಭೂ ವಿವರ ನೀಡುವಾಗ ರಾಘಾಪುರದ ಬಳಿಯಿರುವ ೧೫೨ ಎಕರೆ ಜಮೀನು ಸರಕಾರದ ವಶದಲ್ಲಿದೆ, ಈ ಭೂಮಿಯನ್ನು ತೋಟಗಾರಿಕೆ ಫಾರ್ಮ್ ಮತ್ತು ತರಬೇತಿ ಕೇಂದ್ರಕ್ಕಗಿ ಕಾಯ್ದಿರಿಸಲಾಗಿದೆ ಎಂದಿದ್ದರು. ತಂಬಾಕು ಕಂಪನಿಯ ಈ ಭೂಮಿಯನ್ನು ಈಗ ಯೋಜಿಸಿದಂತೆ ತೋಟಗಾರಿಕೆ ಪ್ರಾತ್ಯಕ್ಷಿತೆಗಾಗಿ ಉಪಯೋಗಿಸದೆ ಅದನ್ನು ಭೂರಹಿತರಿಗೆ ಹಂಚಬೇಕೆಂಬುದು ಚಳವಳಿಗಾರರ ಬೇಡಿಕೆಯಾಗಿತ್ತು. ಈ ಬೇಡಿಕೆಯನ್ನು ಸರಕಾರದ ಗಮನಕ್ಕೆ ತರಲಿಕ್ಕಾಗಿಯೇ ಅಕ್ಟೋಬರ್ ೧೫ರಂದು ಚಳವಳಿಗಾರರು ಇಲ್ಲಿಯ ತೋಟಗಾರಿಕೆ ಕಛೇರಿ ಎದುರು ಮತ ಪ್ರದರ್ಶನ ನಡೆಸಿದರು. ಕಛೇರಿಯ ಒಳಗಡೆ ಹೋಗಲು ಪ್ರಯತ್ನಿಸಿದ ೨೩ ಜನ ಸತ್ಯಾಗ್ರಹಿಗಳನ್ನು ಬಂಧಿಸಲಾಯಿತು.

ಕರ್ನಾಟಕ ಸಮಾಜವಾದಿ ಪಕ್ಷದ ಜೊತೆ ಹೀರಾಚಂದ ವಾಗ್ಮೋರೆಯವರು ಚಳವಳಿಯಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ "ಇಂದಿನ ಸರಕಾರ ತಾನು ಸಾರ್ವತ್ರಿಕ ಚುನಾವಣೆಯ ಕಾಲಕ್ಕೆ ಇತ್ತ ವಚನವನ್ನು ಪಾಲಿಸುವಲ್ಲಿ ವಿಫಲವಾಗಿದೆ. ಜನರು ಚಳವಳಿಯ

ಮೂಲಕ ತಮ್ಮ ಪ್ರತಿನಿಧಿಗಳು ಮತ್ತು ಸರಕಾರದ ಮೇಲೆ ಹಿಡಿತ ಇಟ್ಟುಕೊಳ್ಳಬೇಕೆಂದು" ಹೇಳಿದರು. ಆನಂತರ ಪೊಲೀಸರ ಕಾವಲು ಮುರಿದು ಕಛೇರಿಯ ಒಳಗೆ ನುಗ್ಗಲು ಹೋದಾಗ ಬಂಧಿಸಲ್ಪಟ್ಟಿದ್ದ ಸತ್ಯಾಗ್ರಹಿಗಳನ್ನು ಕಛೇರಿಯ ವೇಳೆ ಮುಗಿದ ನಂತರ ಪೊಲೀಸರು ಬಿಡುಗಡೆ ಮಾಡಿದರು.

ಪ್ರತಿದಿನ ನಡೆಯುತ್ತಿರುವ ಚಳವಳಿಯಲ್ಲಿ ಹೊರಗಿನಿಂದ ಬಂದವರು ನಾಯಕತ್ವ ವಹಿಸುತ್ತಿದ್ದರು. ಅಕ್ಟೋಬರ್ ೧೮ರಂದು ಸೋಷಲಿಸ್ಟ್ ಪಾರ್ಟಿಯ ಕರ್ನಾಟಕ ಶಾಖೆಯ ಜಂಟಿ ಕಾರ್ಯದರ್ಶಿ ಬಿ.ಎಸ್. ಚಂದ್ರಶೇಖರ್ ಅವರು ಚಳುವಳಿಯ ನಾಯಕತ್ವ ವಹಿಸಿದ್ದರು. ಇವರು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ಸಮಾಜವಾದಿ ಪಕ್ಷವನ್ನು ಬೆಳೆಸಲು ಸಮಾನ ಆಸಕ್ತರ ಜೊತೆ ಸಾರ್ವಜನಿಕ ಸಮಸ್ಯೆಗಳ ಈಡೇರಿಕೆಗಾಗಿ ಜನಪರ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದರು. ಅಂದಿನ ಚಳವಳಿಯಲ್ಲಿ ಸೊಂಡೂರು ತಾಲ್ಲೂಕು ರೈತ ಸಂಘದ ಉಪಾಧ್ಯಕ್ಷ ಜೆ. ಬಸವನ ಗೌಡ, ತ್ಯಾಗದಾಳು ಪಂಚಾಯ್ತಿ ಸದಸ್ಯ ಲತೀಫ್ ಸಾಹೇಬ್, ಧಾರವಾಡ ಜಿಲ್ಲೆಯ ಬಿ.ಟಿ. ಮಾಳಗಿ ಮನಿ ಮತ್ತು ಜೆ.ಎಚ್. ಪಟೇಲರನ್ನು ಒಳಗೊಂಡಂತೆ ೩೧ ಜನ ಸತ್ಯಾಗ್ರಹಿಗಳೊಂದಿಗೆ ತಾಲೂಕು ಕಛೇರಿ ಮುಂದೆ ಪಿಕೆಂಟಿಂಗ್ ಮಾಡುಲು ಮುಂದಾದಾಗ ಅವರನ್ನೆಲ್ಲ ಪೊಲೀಸರು ಬಂಧಿಸಿದರು. ಇದಕ್ಕೂ ಮುನ್ನ ಸತ್ಯಾಗ್ರಹಿಗಳು ಮೆರವಣಿಗೆಯಲ್ಲಿ ಹೊರಟು ತಾಲ್ಲೂಕು ಕಛೇರಿ ತಲುಪಿದರು. ಅಲ್ಲಿ ಬಿ.ಎಸ್. ಚಂದ್ರಶೇಖರ್ ಚಳವಳಿಯ ಬಗೆಗೆ ಮಾತನಾಡಿದರು. ಎಲಿಗಾರ ತಿಮ್ಮಪ್ಪನವರು ಈವರೆಗೂ ನಡೆದ ಚಳುವಳಿಯ ವರದಿಯನ್ನು ವಿವರಿಸಿದರು. ಆನಂತರ ಒಮ್ಮತದಿಂದ "ಸರಕಾರ ಸಮಜವಾದಿ ಪಕ್ಷ ಹಾಗೂ ರೈತ ಸಂಘದೊಂದಿಗೆ ಮಾತನಾಡಿ ರೈತರ ಬೇಡಿಕೆಗಳನ್ನು ಪರಿಹರಿಸುವವರೆಗೆ ಸತ್ಯಾಗ್ರಹವನ್ನು ಮುಂದುವರೆಸುತ್ತೇವೆ" ಎಂಬ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

ಸೋಷಲಿಸ್ಟ್ ಪಾರ್ಟಿಯ ಪ್ರಭಾವಿ ಕಾರ್ಯಕರ್ತರು, ಶಾಸಕರು ಆದ ಕಾಗೋಡು ತಿಮ್ಮಪ್ಪನವರು ಅಕ್ಟೋಬರ್ ೨೧ರಂದು ಚಳವಳಿಯಲ್ಲಿ ಭಾಗವಹಿಸಿದರು. ತಿಮ್ಮಪ್ಪನವರು ಚಳವಳಿಯಲ್ಲಿ ನೇರವಾಗಿ ಬಾಗವಹಿಸುವ ಜೊತೆಗೆ ವಿಧಾನ ಸಭೆಯಲ್ಲಿ ಇಲ್ಲಿನ ಹೋರಾಟದ ಬಗೆಗೆ ಮುಖ್ಯಮಂತ್ರಿಗಳಿಗೆ ಇತರೆ ಕಾಂಗ್ರೆಸ್ ಮಂತ್ರಿಗಳಿಗೆ ಮನವರಿಕೆ ಮಾಡಿಕೊಡುವಲ್ಲಿ ತುಂಬಾ ಕಾಳಜಿ ವಹಿಸಿದ್ದರು. ಅಂದಿನ ಚಳವಳಿಯಲ್ಲಿ ನೂರು ಜನ ಸತ್ಯಾಗ್ರಹಿಗಳು ಮೆರವಣಿಗೆ ಘೋಷಣೆಯೊಂದಿಗೆ ತಾಲೂಕು ಕಛೇರಿ ತಲುಪಿದರು. ಕಾಗೋಡು ತಿಮ್ಮಪ್ಪನವರು ಮಾತನಾಡಿ 'ಸೋಷಲಿಸ್ಟ್ ಪಾರ್ಟಿಯವರು ಸೊಂಡೂರಿನ ಪ್ರಗತಿಗೆ ಅಡ್ಡಿ ಬರುತ್ತಿದ್ದಾರೆಂದು ಕೆಲವರು ಅಪಪ್ರಚಾರ ನಡೆಸಿದ್ದಾರೆ. ಈ ಭಾಗದ ಪ್ರಗತಿಗೆ ನಾವೆಂದೂ ಅಡ್ಡ ಬಂದಿಲ್ಲ, ಅದಕ್ಕೆ ನಾವೂ ಹೋರಾಡಲು ಸಿದ್ಧ. ನಂದಿಹಳ್ಳಿಯಲ್ಲಿ ಸ್ಥಾಪಿಸಬೇಕೆಂದಿರುವ ತಾಂತ್ರಿಕ ಶಿಕ್ಷಣ ಸ್ನಾತಕೋತ್ತರ ಕೇಂದ್ರ ಇಲ್ಲಿಯೇ ಆಗಲಿ, ಆದರೆ ಅದು ಫಲವತ್ತಾದ ತಂಬಾಕು ಜಮೀನಿನಲ್ಲಿ ಆಗದೆ ಸಾಗುವಳಿಗೆ ಯೋಗ್ಯವಲ್ಲದ ಕಡೆ ಸ್ಥಾಪನೆ ಆಗಲಿ ಎಂಬುದೇ ನಮ್ಮ ವಾದ. ಇದನ್ನು ಕರ್ನಾಟಕದ ಜನತೆ, ಸರಕಾರ ಮತ್ತು ವಿಶ್ವವಿದ್ಯಾಲಯ ಅರಿಯಬೇಕು' ಎಂದರು. ಆನಂತರ ಚಳವಳಿಗಾರರನ್ನು ಬಂಧಿಸಿ ಸಂಜೆಗೆ ಬಿಡುಗಡೆ ಮಾಡಿದರು.

ಚಳವಳಿಯಲ್ಲಿ ಭಾಗವಹಿಸಿದ ಸೋಷಲಿಸ್ಟ್‌ರನ್ನು ಟೀಕಿಸುವುದು ಕಾಂಗ್ರೆಸ್ ಸರ್ಕಾರದ ಮತ್ತು ರಾಜಮನೆತನದ ಪರವಾಗಿದ್ದವರ ಕೆಲಸವಾಗಿತ್ತು. ಹಾಗಾಗಿಯೇ ಸೋಷಲಿಸ್ಟರು ಸೊಂಡೂರಿನ ಪ್ರಗತಿಗೆ ಅಡ್ಡಿಯಾಗುತ್ತಿದ್ದಾರೆ, ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ಇಲ್ಲಿನ ಜನತೆಗೆ ಇದು ಸಮಸ್ಯೆಯೇ ಅಲ್ಲ, ಸೋಷಲಿಸ್ಟರ್ ಇದನ್ನೊಂದು ಸಮಸ್ಯೆಯಾಗಿಸುತ್ತಿದ್ದಾರೆ. ಇಂತಹ ಟೀಕೆಗಳು ಚಳುವಳಿಯ ಉದ್ದಕ್ಕೂ ನಡೆದಿದ್ದವು. ಈ ಟೀಕೆಗಳಿಗೆ ಸೋಷಲಿಸ್ಟ್ ಕಾರ್ಯಕರ್ತರು ಉತ್ತರಿಸುತ್ತಿದ್ದರು. ಈ ಕಾರಣಕ್ಕಾಗಿಯೇ ತಿಮ್ಮಪ್ಪನವರು ಸೋಷಲಿಸ್ಟ್ ರನ್ನು ಸಮರ್ಥಿಸಿಕೊಂಡರು.

ಅಕ್ಟೋಬರ್ ೧೯ರಂದು ನಡೆದ ಚಳುವಳಿಯ ೩೧ನೇ ತಂಡದ ನಾಯಕತ್ವವನ್ನು ಆಂಧ್ರ ಪ್ರದೇಶದ ಉರುವಕೊಂಡ ಕ್ಷೇತ್ರದ ಸ್ವತಂತ್ರ ಶಾಸಕ ಬುಕ್ಕಟ್ಲ ಬಸಪ್ಪನವರು ವಹಿಸಿದ್ದರು. ಕೆ.ಜಿ. ಮಹೇಶ್ವರಪ್ಪ, ಎಸ್. ಎಸ್. ಕುಮುಟ, ಬಳ್ಳಾರಿ ಜಿಲ್ಲಾ ಸಮಾಜವಾದಿ ಪಕ್ಷದ ಕಾರ್ಯದರ್ಶಿ ಆರ್.ವಿ. ದೇಸಾಯಿ, ವೈ.ತಿಮ್ಮಪ್ಪ, ಜಿ.ನರಸಿಂಗರಾವ್ ಇವರನ್ನು ಒಳ ಗೊಂಡಂತೆ ೪೫ ಜನ ಸತ್ಯಾಗ್ರಹಿಗಳೊಂದಿಗೆ ಸೋಷಲಿಸ್ಟ್ ಪಾರ್ಟಿ ಕಛೇರಿಯಿಂದ ಹೊರಟ ಮೆರವಣಿಗೆ ತಾಲ್ಲೂಕು ಕಛೇರಿ ತಲುಪಿತು. ಬಿ. ಬಸಪ್ಪನವರು ಮಾತನಾಡುತ್ತ

‘ನಂದಿಹಳ್ಳಿಯಲ್ಲಿ ಸ್ಥಾಪಿಸಬೇಕೆಂದಿರುವ ಕರ್ನಾಟಕ ವಿಶ್ವವಿದ್ಯಾಲಯದ ತಾಂತ್ರಿಕ ಶಿಕ್ಷಣ ಕೇಂದ್ರದ ಪ್ರದೇಶವನ್ನು ವೀಕ್ಷಿಸಿದ್ದೇನೆ. ಇದು ವ್ಯವಸಾಯಕ್ಕೆ ಯೋಗ್ಯವಾದ ಭೂಮಿ. ಇದನ್ನು ಭೂಹೀನ ರಿಗೆ ಹಂಚಬೇಕು. ಆಂಧ್ರ ಪ್ರದೇಶದ ವಿ.ಪಿ.ಎ.ಜಿ. ರಾಜಮನೆತನವು ೧೦ ಕೋಟಿ ಬೆಲೆ ಬಾಳುವ ಅರಮನೆಯಲ್ಲಿ ಶಾಲೆಯೊಂದಕ್ಕೆ ಬಿಟ್ಟುಕೊಟ್ಟಂತೆ, ಶ್ರೀ ಎಂ.ವೈ. ಘೋರ್ಪಡೆ ಯವರು ಜನಾನುರಾಗಿಗಳಾಗಿದ್ದಲ್ಲಿ ಸೊಂಡೂರಿನ ತಮ್ಮ ಅರಮನೆಯನ್ನು ಈ ಶಾಲೆಗೆ ಬಿಟ್ಟುಕೊಡಬಾರದೇಕೆಂದು ಪ್ರಶ್ನಿಸುತ್ತೇನೆ’ ಎಂದರು. ಈವರೆಗೂ ನಂದಿಹಳ್ಳಿಯಲ್ಲಿ ಸ್ಥಾಪಿಸಬೇಕೆಂಬ ಸ್ನಾತಕೋತ್ತರ ಕೇಂದ್ರಕ್ಕೆ ಬೇರೆ ಭೂಮಿಯನ್ನು ಆಯ್ಕೆ ಮಾಡಿಕೊಳ್ಳಿ ಎನ್ನುವ ಬೇಡಿಕೆ ಇತ್ತು. ಇದಕ್ಕಿಂತ ಭಿನ್ನವಾಗಿ ಬಸಪ್ಪನವರು ಅರಮನೆಯನ್ನೇ ಸ್ನಾತಕೋತ್ತರ ಕೇಂದ್ರಕ್ಕೆ ಏಕೆ ಕೊಡಬಾರದು? ಎಂದು ಪ್ರಶ್ನಿಸಿದ್ದು ಚಳುವಳಿಗಾರರಿಗೆ ಹೊಸ ಬಗೆಯದಾಗಿತ್ತು. ಇದಕ್ಕೆ ಪೂರಕವಾಗಿ ಚಳವಳಿಗಾರರ ಘೋಷಣೆ ಹೆಚ್ಚಾದಾಗ ಪೊಲೀಸರು ಬಂಧಿಸಿದರು.

ರೈತರ ಚಳವಳಿಯು ನಿರಂತರವಾದಂತೆ ಕರ್ನಾಟಕದ ಪ್ರಜ್ಞಾವಂತ ಜನರಲ್ಲಿ ರೈತರನ್ನು ಬೆಂಬಲಿಸುವ ಪ್ರಜ್ಞೆ ಜಾಗ್ರತವಾಯಿತು. ಚಳವಳಿಯ ೩೦ನೇ ದಿನದವರೆಗೂ ಈ ಬಿಸಿ ಯಾವೊಬ್ಬ ಸಾಹಿತಿ, ಪತ್ರಿಕೋದ್ಯಮಿ, ಕಲಾವಿದರಿಗೂ ತಟ್ಟಿರಲಿಲ್ಲ. ಅಥವಾ ಗೊತ್ತಿದ್ದರು ಮೌನವಹಿಸಿದ್ದರೊ ತಿಳಿಯದು. ಈ ಚಳವಳಿ ಏಕಕಾಲದಲ್ಲಿ ಸೊಂಡೂರಿನ ರಾಜಮನೆತನದ ವಿರುದ್ಧವೂ, ರಾಜಮನೆತನವನ್ನು ಬೆಂಬಲಿಸುತ್ತಿರುವ ಕಾಂಗ್ರೆಸ್ ಸರ್ಕಾರದ ವಿರದ್ಧವೂ ಆಗಿದ್ದಿತು. ಇದರಿಂದಾಗಿ ಇಲ್ಲಿನ ರೈತರನ್ನು ಬೆಂಬಲಿಸುವುದೆಂದರೆ ಆಡಳಿತ ಸರ್ಕಾರದ ವಿರುದ್ಧವೂ ಧ್ವನಿ ಎತ್ತು ವಂತಿತ್ತು. ಎರಡನೆಯದಾಗಿ ಚಳವಳಿಯ ವಾಸ್ತವ ಸ್ವರೂಪ ವಿವರವಾಗಿ ಮಾಧ್ಯಮಗಳಿಂದ ಪ್ರಚಾರವಾಗಲಿಲ್ಲ. ಈ ಎಲ್ಲದರ ಮಧ್ಯೆಯೂ ಸಾಹಿತಿಗಳು, ಪತ್ರಿಕೋದ್ಯಮಿಗಳು, ಕಲಾವಿದರು ಸೊಂಡೂರು ರೈತರ ಪರವಾಗಿ ಪ್ರತಿಕ್ರಿಯಿಸಿದರು.

ಸಮಾಜವಾದಿ ಆಂದೋಲನ ಹಾಗೂ ರೈತರ ಹಿತಚಿಂತನೆಯ ಬಗ್ಗೆ ಸಹಾನುಭೂತಿ ಮತ್ತು ಕಾಳಜಿಯುಳ್ಳ ಬೆಂಗಳೂರಿನ ಪತ್ರಕರ್ತರ ಸಂಘಟನೆಯೊಂದರ ಅಧ್ಯಕ್ಷರಾದ ಟಿ.ದಾಸಪ್ಪ, ‘ಡೇಲಿಸಾಲರ್’ ಎಂಬ ಉರ್ದು ಪತ್ರಿಕೆಯ ಸಂಪಾದಕರಾದ ಮೊಹಮದ್ ಅಯಾಜ್ ಮೊದಲಾದ ಪತ್ರಿಕೋದ್ಯಮಿಗಳೂ, ಚಿತ್ರ ನಿರ್ದೇಶಕರಾದ ಪಟ್ಟಾಭಿರಾಮ ರೆಡ್ಡಿ, ಕೆ.ಎಂ. ಶಂಕರಪ್ಪ, ಮಹೇಶ್ ಸ್ವಾಮಿ, ಚಿತ್ರ ನಟಿಯಾದ ಶ್ರೀಮತಿ ಸ್ನೇಹಲತಾ ರೆಡ್ಡಿ, ಮೈಸೂರಿನ ಅಧ್ಯಾಪಕರೂ ಲೇಖಕರೂ ಆದ ಡಾ.ಯು.ಆರ್. ಅನಂತಮೂರ್ತಿ, ಬೆಂಗಳೂರಿನ ಅಧ್ಯಾಪಕರಾದ ಭರತ್ ಝುಂಜನ್ ವಾಲಾ, ಫೋಟೋ ಜರ್ನಲಿಸ್ಟ್ ರಾದ ಬಿ.ಎಸ್. ಆಚಾರ್ ಮೊದಲಾದವರು ಸೊಂಡೂರಿನ ನಿರ್ಗತಿಕ ರೈತರ ಬೇಡಿಕೆಗಳನ್ನು ಮುಖ್ಯಮಂತ್ರಿಗಳು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ಅಕ್ಟೋಬರ್ ೧೭ರಂದು ಸರ್ಕಾರಕ್ಕೆ ಮನವಿ ನೀಡಿದರು.

”ಲೇಖಕರು, ಅಧ್ಯಾಪಕರು, ಕಲಾವಿದರು, ಪತ್ರಿಕೋದ್ಯಮಿಗಳು ಹಾಗೂ ಸಿನಿಮಾ ಜನತೆಯಾದ ನಾವು ಸೊಂಡೂರಿನ ಬಡ ರೈತರ ಭೂಮಿಗಾಗಿ ನಡೆಸುತ್ತಿರುವ ಹೋರಾಟವನ್ನು ಗಮನಿಸಿದ್ದೇವೆ. ಸಮಕಾಲೀನ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ನಾವು ಅಲಕ್ಷ್ಯದಿಂದಿರಲು ಸಾಧ್ಯವಿಲ್ಲ. ಈ ಹೋರಾಟದ ವಿವರಗಳ ಬಗ್ಗೆ ಹೋಗದೆ ಬಡರೈತರ ಹಿತ ಚಿಂತನೆಯಿಂದ ಮುಖ್ಯಮಂತ್ರಿಗಳು ಶೀಘ್ರವಾಗಿ ಈ ಸಮಸ್ಯೆಯ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನಾವು ಮನವಿ ಮಾಡಿಕೊಳ್ಳತ್ತೇವೆ’’ ಎನ್ನುವುದಾಗಿತ್ತು. ಎಲ್ಲಿಯೋ ನಡೆಯುತ್ತಿರುವ ರೈತ ಚಳವಳಿಗೂ, ಬೆಂಗಳೂರಿನ ನಮಗೂ ಎಲ್ಲಿಯ ಉಸಾಬರಿ ಎಂದು ಮೌನವಹಿಸುವವರ ನಡುವೆಯೂ ರೈತರಿಗೆ ಬೆಂಬಲವಾಗಿ ಆತ್ಮಸ್ಥೈರ್ಯ ತುಂಬಿದ ಇಂತಹ ಕೆಲ ಮನಸ್ಸುಗಳು ಇದ್ದವು.

ಈ ಹಿಂದೆ ನಂದಿಹಳ್ಳಿಯಲ್ಲಿ ಸ್ನಾತಕೋತ್ತರ ಕೇಂದ್ರ ಸ್ಥಾಪಿಸುವ ವಿವಾದಕ್ಕೆ ಸಂಬಂಧಿಸಿದಂತೆ ಧಾರವಾಡದಲ್ಲಿನ ಸೋಷಲಿಸ್ಟ್ ಕಾರ್ಯಕರ್ತರು ಹೋರಾಟವನ್ನು ಬೆಂಬಲಿಸಿ ಮತ ಪ್ರದರ್ಶನ ಮಾಡಿ ಕರ್ನಾಟಕ ವಿ.ವಿ. ಕುಲಪತಿಗೆ ಮನವಿ ಸಲ್ಲಿಸಿದ್ದರು. ಈ ಮತ ಪ್ರದರ್ಶನ ನಗರಗಳ ಸೋಷಲಿಸ್ಟ್ ಕಾರ್ಯಕರ್ತರಿಗೆ ತಟ್ಟಿತು. ಇದರಿಂದಾಗಿಯೇ ಬೆಂಗಳೂರಿನ ಸೋಷಲಿಸ್ಟ್ ಕಾರ್ಯಕರ್ತರೂ ಸಹ ಬೆಂಗಳೂರಿನಲ್ಲಿಯೇ ಸೊಂಡೂರು ರೈತರ ಪರವಾಗಿ ಮತ ಪ್ರದರ್ಶನ ನಡೆಸಿದರು. ಧಾರವಾಡದ ಮತ ಪ್ರದರ್ಶನಕ್ಕೆ ನಂದಿಹಳ್ಳಿಯಲ್ಲಿ

ಸ್ಥಾಪಿಸಬೇಕೆಂಬ ಸ್ನಾತಕೋತ್ತರ ಕೇಂದ್ರ ಕಾರಣವಾದರೆ, ಇವರಿಗೆ ರಾಘಾಪುರ ಮತ್ತು ಸಿದ್ಧಾಪುರಗಳಲ್ಲಿ ಭೂಮಿಯಲ್ಲಿ ಸ್ಥಾಪಿಸಬೇಕೆಂದಿದ್ದ ತೋಟಗಾರಿಕೆ ಇಲಾಖೆಯ ಬೀಜ ಕೇಂದ್ರ ಕಾರಣವಾಯಿತು.

ಅಕ್ಟೋಬರ್ ೨೦ರಂದು ಸಮಾಜವಾದಿ ಪಕ್ಷದ ಬೆಂಗಳೂರು ನಗರ ಶಾಖೆಯ ಕಾರ್ಯದರ್ಶಿ ಆರ್. ವೆಂಕಟಸ್ವಾಮಿ ಹಾಗೂ ಸಮಾಜವಾದಿ ಯುವಜನ ಸಭೆಯ ಬಂದಗದ್ದೆ ರಮೇಶ್ ಅವರ ನೇತೃತ್ವದಲ್ಲಿ ಮತ ಪ್ರದರ್ಶನ ನಡೆಸಿ ಸೊಂಡೂರಿನಲ್ಲಿ ನಡೆಯುತ್ತಿರುವ ರೈತ ಹೋರಾಟಕ್ಕೆ ಜಯವಾಗಲಿ ಎಂಬ ಘೋಷಣೆ ಕೂಗಿದರು. ಆನಂತರ ಲಾಲ್ ಬಾಗಿನಲ್ಲಿ ತೋಟಗಾರಿಕೆ ಇಲಾಖೆಯ ನಿರ್ದೇಶಕರಿಗೆ ರಾಘಾಪುರ ಮತ್ತು ಸಿದ್ದಾಪುರಗಳ್ಲಿರುವ ಹೊಗೆ ಸೊಪ್ಪಿನ ಕಂಪನಿಯ ೪೪೯ ಎಕರೆ ಭೂಮಿಯಿದೆ. ಆ ಭೂಮಿಯಲ್ಲಿ ತೋಟಗಾರಿಕೆ ಇಲಾಖೆಯು ಪ್ರಯೋಗ ಮತ್ತು ಬೀಜದ ಕೇಂದ್ರವನ್ನು ಸ್ಥಾಪಿಸಬಾರದೆಂದೂ, ಆ ಭೂಮಿಯ ರೈತರಿಗೆ ಸಿಕ್ಕುವಂತೆ ಅದನ್ನು ಬಿಟ್ಟು ಕೊಡಬೇಕೆಂದೂ, ಒಂದು ಮನವಿ ಪತ್ರ ಸಲ್ಲಿಸಿ ಒತ್ತಾಯ ಪಡಿಸಿತು.

ಹೀಗೆ ಬೆಂಗಳೂರು, ಧಾರವಾಡ, ಶಿವಮೊಗ್ಗ, ಸಾಗರಗಳಲ್ಲಿ ಸಮಾಜವಾದಿ ಕಾರ್ಯಕರ್ತರು, ಸಣ್ಣ ಪ್ರಮಾಣದಲ್ಲಿ ಪ್ರತಿಭಟನಾತ್ಮಕ ಮೆರವಣಿಗೆ ಮಾಡಿದರು. ಇದು ಸೊಂಡೂರಿನ ರೈತರಿಗೆ ಪರೋಕ್ಷವಾಗಿ ಧೈರ್ಯ ತುಂಬಿದಂತಾಯಿತು. ಅಂತೆಯೇ ಕರ್ನಾಟಕದ ಇತರ ಕಡೆಗಳಲ್ಲಿ ಸೊಂಡೂರು ಹೋರಾಟ ತೀವ್ರತೆ ನಿಧಾನವಾಗಿ ಅರ್ಥವಾಗತೊಡಗಿತು. ಕಾಂಗ್ರೆಸ್ ಮೊದಲು ಈ ಚಳವಳಿಯನ್ನು ಸೋಷಲಿಸ್ಟರು ರಾಜಕೀಯ ಹಿತಾಸಕ್ತಿಗಾಗಿ ಮಾಡುತ್ತಿದ್ದಾರೆ ಎಂದು ಸರಳವಾಗಿ ಗ್ರಹಿಸಿತ್ತು. ಹೀಗೆ ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ಚಳವಳಿಯನ್ನು ಬೆಂಬಲಿಸುವ ಮತ ಪ್ರದರ್ಶನಗಳು ನಡೆದದ್ದರಿಂದ ಈ ಹೋರಾಟವನ್ನು ಗಂಭೀರವಾಗಿ ಪರಿಗಣಿಸಲು ಸಹಕಾರಿಯಾಯಿತು.

**ಸೊಂಡೂರಿನಲ್ಲಿ ೧೪೪ ಸೆಕ್ಷನ್ ಜಾರಿ**

ಅಕ್ಟೋಬರ್ ೨೧.೧೯೭೩ ಭಾನುವಾರ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದ ಪ್ರಸ್ತಾವ ದಂತೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಎಂ. ಜಯಲಕ್ಷ್ಮಮ್ಮಣ್ಣಿ ಅವರು ಸ್ಥಳ ಪರಿಶೀಲನೆಗಾಗಿ ನಂದಿಹಳ್ಳಿಗೆ ಆಗಮಿಸಿದರು. ಈ ಸಂದರ್ಭದಲ್ಲಿ ಚಳವಳಿ ನಡೆಸುತ್ತಿದ್ದ ಕಾರ್ಯಕರ್ತರು "ನಂದಿಹಳ್ಳಿ ಪ್ರದೇಶದ ಫಲವತ್ತಾದ ಜಮೀನನ್ನು ತಾಂತ್ರಿಕ ಶಿಕ್ಷಣ ಕೇಂದ್ರಕ್ಕೆ ನೀಡುವ ಬದಲು ಬಡ ಕೃಷಿಕರಿಗಾಗಿ ವಿತರಣೆ ಮಾಡಬೇಕೆಂದು" ಮನವಿ ಸಲ್ಲಿಸಿದರು. ಇದೇ ಹೊತ್ತಿಗೆ ನಂದಿಹಳ್ಳಿಯಲ್ಲಿಯೇ ತಾಂತ್ರಿಕ ವಿ.ವಿ. ಯನ್ನು ಸ್ಥಾಪಿಸಬೇಕೆಂದು ಒತ್ತಾಯ ಮಾಡುವ ಮನವಿಯನ್ನು ಸೊಂಡೂರು ತಾಲೂಕು ಮಂಡಳಿ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪ ಹಾಗೂ ಖಾಸಗಿ ಸಂಸ್ಥೆಯೊಂದರ ಅಧಿಕಾರಿ ಸುಬ್ಬರಾವ್ ಸಿಂಧೆ ಮತ್ತು ಅವರ ಜೋತೆ ಬಂದ ತಂಡವೊಂದು ಅರ್ಪಿಸಿತು. ಸಹಜವಾಗಿ ಈ ಸಂದರ್ಭದಲ್ಲಿ ಚಳವಳಿಗಾರರು ಮತ್ತು ಚಳವಳಿಯನ್ನು ವಿರೋಧಿಸುವ ಬಣ ಒಂದೇ ಕಡೆಯಲ್ಲಿ ಮುಖಾಮುಖಿಯಾದರು. ಇದರಿಂದಾಗಿ ಈ ಎರಡೂ ಬಣಗಳ ನಡುವೆ ಸಂಘರ್ಷ ಏರ್ಪಟ್ಟಿತು.

ಸೊಂಡೂರಿನ ಪ್ರವಾಸಿ ಮಂದಿರದ ಎದುರು ಈ ಘಟನೆ ಜರುಗಿತು. ಮನವಿ ಅರ್ಪಿಸಲು ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರು ಚಳವಳಿಗಾರರು ವಾಹನವೊಂದರಲ್ಲಿ ತೆರಳಿದ್ದರು. ಅಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬೃಹತ್ ಸಮೂಹವೂ ನೆರೆದಿತ್ತು. ವಾಹನದ ಮೇಲಿದ್ದ ಸೋಷಲಿಸ್ಟ್ ಪಾರ್ಟಿಯ ಬಾವುಟವನ್ನು ಕಾಂಗ್ರೆಸ್ ಕಾರ್ಯಕರ್ತರೊಬ್ಬರು ಕಿತ್ತರು. ಇದನ್ನು ತಡೆಯಲು ಬಂದ ಸೋಷಲಿಸ್ಟ್ ಪಾರ್ಟಿ ಕಾರ್ಯಕರ್ತ ಶ್ರೀನಿವಾಸ್ (ಪಾತ್ರ ಸೀನಪ್ಪ) ಎಂಬುವವರ ಮೇಲೆ ದಾಳಿ ನಡೆಸಲಾಯಿತು. ಶ್ರೀನಿವಾಸ್‌ಗೆ ಕಲ್ಲಿನಿಂದ ಏಟು ಬಿದ್ದು ತೀವ್ರವಾಗಿ ಗಾಯಗೊಂಡರು. ಇದರಿಂದಾಗಿ ಉದ್ರಿಕ್ತಗೊಂಡ ಎರಡೂ ಬಣಗಳಲ್ಲಿ ತೀವ್ರ ಜಗಳ ಹೊಡೆದಾಟ ನಡೆಯಿತು. ಈ ಸುದ್ದಿ ತಿಳಿದೊಡನೆ ಪೊಲೀಸ್ ಸೂಪರಿಡೆಂಟ್ ವಿ.ವಿ. ಭಾಸ್ಕರ್ ಮತ್ತು ಬಳ್ಳಾರಿ ಸಬ್ ಡಿವಿಜಿನಲ್ ಮ್ಯಾಜಿಸ್ಟ್ರೇಟ್ ಸ್ವತಂತ್ರರಾವ್ ಅವರು ಸೊಂಡೂರಿಗೆ ಆಗಮಿಸಿ ಪರಿಸ್ಥಿತಿ ಪರಿಶೀಲನೆ ನಡೆಸಿದರು. ಆನಂತರ ಪರಿಸ್ಥಿತಿಯನ್ನು ಶಾಂತಸ್ಥಿತಿಗೆ ತರಲು ಅಕ್ಟೋಬರ್ ೨೨

ಸೋಮವಾರ ಮುಂಜಾನೆ ೮ ಗಂಟೆಯಿಂದ (ಕ್ರಿಮಿನಲ್ ಕೋಡಿನ) ೧೪೪ನೇ ಸೆಕ್ಷನ್ ಮೇರೆಗೆ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಲಾಯಿತು.

ಈ ಘಟನೆಯಿಂದಾಗಿ ಕಳೆದ ೪೨ ದಿನಗಳಿಂದ ಶಾಂತಿಯುತವಾಗಿ ನಡೆಯುತ್ತಿದ್ದ ರೈತ ಚಳವಳಿಯಲ್ಲಿ ಹಿಂಸೆ ಕಾಣುವಂತಾಯಿತು. ಪ್ರತಿಬಂಧಕಾಜ್ಞೆಯಿಂದ ಸತ್ಯಾಗ್ರಹ ಸ್ವರೂಪ ಅತ್ಯಂತ ಕಠಿಣವಾಯಿತು. ಇದರ ಮಧ್ಯೆಯೂ ಅಕ್ಟೋಬರ್ ೨೨ರ ಸೋಮವಾರ ಸಂಜೆ ಕಾಯ್ದೆಯನ್ನು ಮುರಿದು ಹೋರಾಟವನ್ನು ಮುಂದುವರಿಸಿದರು. ಹಾಗಾಗಿ ಕೆ.ಜಿ. ಮಹೇಶ್ವರಪ್ಪ, ದೇಸಾಯಿ ಷಣ್ಮುಖಪ್ಪ, ಎಚ್.ಸಿದ್ದಪ್ಪ, ಗಂಗಪ್ಪ, ಸಿ. ಭೀಮಪ್ಪ, ಕೆ.ಚೌಡಪ್ಪ, ಆರ್. ಪರಮೇಶ್ವರಪ್ಪ, ವಿ.ಹನುಮಂತಪ್ಪ, ದುರ್ಗಪ್ಪ, ಕೆ.ತಿಮ್ಮಪ್ಪ ಅವರನ್ನು ಪೊಲೀಸರು ಬಂಧಿಸಿ ಕೂಡ್ಲಿಗಿ ಕೋರ್ಟಿಗೆ ಕರೆದೊಯ್ದರು. ಕೂಡ್ಲಿಗಿ ಕೋರ್ಟಿನ ನ್ಯಾಯಾಧೀಶರು ಅವರಿಗೆ ಮೂರು ದಿನದ ಸಾದಾ ಸಜೆಯನ್ನು ವಿಧಿಸಿದರು.

ಈ ಘಟನೆಯನ್ನು ಸೋಷಲಿಸ್ಟ್ ಪಾರ್ಟಿಯ ಕಾರ್ಯಕರ್ತರು ಖಂಡಿಸಿದರು. ಈವರೆಗೂ ೪೨ ದಿನಗಳಿಂದ ಶಾಂತಿಯುತವಾಗಿ ನಡೆಯುತ್ತಿದ್ದ ಸತ್ಯಾಗ್ರಹವನ್ನು ದಮನ ಮಾಡಲು ಸಂವಿಧಾನ ಬಾಹಿರ ಹಾಗೂ ಪ್ರಜಾತಂತ್ರ ವಿರೋಧಿ ಕ್ರಮಗಳನ್ನು ಖುದ್ದಾಗಿ ಅರ್ಥ ಮಂತ್ರಿ ಎಂ.ವೈ. ಘೋರ್ಪಡೆಯವರೇ ಸಜ್ಜುಗೊಳಿಸಿರುವರೆಂದು ಆಪಾದಿಸಿ ಇದಕ್ಕಾಗಿ ಅವರು ಕೂಡಲೇ ತಮ್ಮ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಬೇಕೆಂದು ಒತ್ತಾಯಿಸಿದರು. ಅರ್ಥ ಸಚಿವರ ಕೈಗೊಂಬೆಗಳಾಗಿ ಪೋಲಿಸರು ವರ್ತಿಸುತ್ತಿದ್ದಾರೆಂಬುದು ಪೊಲೀಸರು ನಡವಳಿಕೆಯಿಂದ ರುಜುವಾತು ಪಟ್ಟಿದೆಯೆಂದು ಇದಕ್ಕಾಗಿ ಪೊಲೀಸರನ್ನು ಧಿಕ್ಕರಿಸಲಾಯಿತು.

ಈ ದಿನವನ್ನು ಕೆ.ಜಿ. ಮಹೇಶ್ವರಪ್ಪ ನೆನಪಿಸಿಕೊಳ್ಳುತ್ತಾ "ಕೂಡ್ಲಿಗಿಯ ಜೈಲಿನಲ್ಲಿ ಗೊಬ್ಬು ವಾಸನೆ ಇತ್ತು. ಅಂತದ್ದರಲ್ಲಿ ಇದ್ದೆವು. ಲೆಟ್ರಿನ್ ಗೆ ಹೋಗುವ ಡಬ್ಬಗಳಲ್ಲಿ ಕುಡಿಯಲಿಕ್ಕೆ ನೀರು ಕೊಡ್ತಾ ಇದ್ರು. ಆವಾಗಲೇ ಘೋರ್ಪಡೆ ಕಡೆಯವರು ಬಂದ್ ನೀವು ಲೀಡಿಂಗ್ ವಕೀಲ್ರು ಇದ್ದೀರಿ. ನಿಮಗೆ ಸರ್ಕಾರದಿಂದ ಏನು ಬೇಕು ಹೇಳ್ರಿ ಚಳವಳಿ ಬಿಟ್ಟು ಹೋಗ್ರಿ" ಎಂದು ಮನವೊಲಿಸುವ ಪ್ರಯತ್ನಿಸುತ್ತಿದ್ದರು ಎನ್ನುತ್ತಾರೆ.

ಅಕ್ಟೋಬರ್ ೨೨ರಂದು ಚಳವಳಿಗಾರರು ಬಂದಿತರಾದುದರಿಂದ ಹೋರಾಟ ಮತ್ತಷ್ಟು ತೀವ್ರ ಸ್ವರೂಪವನ್ನು ಪಡೆಯಿತು. ಮುಂದುವರಿದಂತೆ ದಿನಾಂಕ ೨೩,೨೪ ರಂದು ಬೆಂಗಳೂರಿನ ಸಮಾಜವಾದಿ ಯುವಜನ ಸಭೆಯ ವಿದ್ಯಾರ್ಥಿ ನಾಯಕ ಕೆ. ಸುಬ್ರಮಣ್ಯಂ, ಗಂಗಪ್ಪ, ಮುದ್ದ ಹನುಮಂತಪ್ಪ, ರೇವಗಲ್ ಕುಮಾರಸ್ವಾಮಿ, ದೇಸಾಯಿ, ಸುಬ್ಬಯ್ಯ, ಮರಿ ಈರಪ್ಪ, ಹನುಮಂತಪ್ಪ, ಬೆಂಗಳೂರಿನ ಸೋಹನಕುಮಾರಿ, ಮೈಸೂರಿನ ತಿವಾರಿ ಬುಡ್ಡೆಮ್ಮ, ಸಾಗರದ ವಕೀಲ ಎಸ್.ನಾಗಪ್ಪ, ಸಮಾಜವಾದಿ ಯುವಜನ ಸಭೆಯ ಬಿ.ರಮೇಶ, ಎಚ್. ದಾಸಪ್ಪ ಬೆನಕಲ್, ದಾವಣಗೆರೆ ವಕೀಲ ಜೆ.ಎಂ. ಕಲ್ಲಪ್ಪ, ಸೊರಬ ತಾಲ್ಲೂಕಿನ ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷ ಎಂ.ಜಿ. ಸ್ವಾದಿ ಮುಂತಾದವರ ನೇತೃತ್ವದಲ್ಲಿ ರೈತರು ಪ್ರತಿಬಂದಕಾಜ್ಞೆಯನ್ನು ಉಲ್ಲಂಘಿಸಿ ಸೊಂಡೂರು ಕಛೇರಿಗೆ ಮುತ್ತಿಗೆ ಹಾಕಿದಾಗ ಪೊಲೀಸರು ಅಮಾನುಷವಾಗಿ ಚಳವಳಿಗಾರರನ್ನು ಹಿಂಸಿಸಿದರು.

ಪೋಲೀಸರು ಚಳವಳಿಗಾರರೊಂದಿಗೆ ನಡೆದುಕೊಂಡದ್ದು ದಬ್ಬಾಳಿಕೆ ಸ್ವರೂಪದ್ದಾಗಿತ್ತು. ಇದರಿಂದಾಗಿ ರಾಷ್ಟ್ರೀಯ ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಮೋಹನ್ ಅವರು ಬೆಂಗೂರಿನಲ್ಲಿ ನೀಡಿದ ಪತ್ರಿಕಾ ಹೇಳಿಕೆಯೊಂದರಲ್ಲಿ "೨೩ ಮತ್ತು ೨೪ರಂದು ಸೊಂಡೂರಿನಲ್ಲಿ ರೈತ ಸತ್ಯಾಗ್ರಹಿಗಳನ್ನು ಥಳಿಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವದರ ಜೊತೆಗೆ ಇದರ ಬಗ್ಗೆ ನ್ಯಾಯಂಗ ವಿಚಾರಣೆಯೊಂದನ್ನು ನಡೆಸಬೇಕೆಂದು, ಸತ್ಯಾಗ್ರಹಿಗಳ ಮೇಲೆ ಈ ಕ್ರಮ ಸಚಿವ ಎಂ.ವೈ. ಘೋರ್ಪಡೆಯವರು ಆದೇಶದ ಮೇರೆಗೆ ನಡೆಯಿತು. ಸಚಿವರು ಅಧಿಕಾರದಲ್ಲಿರುವವರೆಗೆ ಅವರಿಂದ ಅದರ ದುರುಪಯೋಗವಾಗುತ್ತದೆ. ಆದುದರಿಂದ ಅವರು ಸಚಿವ ಸ್ಥಾನಕ್ಕೆ ರಾಜಿನಾಮೆ ಕೊಡಬೇಕೆಂದು" ಸರ್ಕಾರವನ್ನು ಒತ್ತಾಯಿಸಿದರು.

ಸುರೇಂದ್ರ ಮೋಹನ್ ರನ್ನು ಒಳಗೊಂಡಂತೆ ಸೋಷಲಿಸ್ಟ್ ಕಾರ್ಯಕರ್ತರು ಪೊಲೀಸರ ದೌರ್ಜನ್ಯವನ್ನು, ಚಳವಳಿಗಾರರೊಂದಿಗೆ ನಡೆಸಿದ ಅಮಾನವೀಯ ವರ್ತನೆಯನ್ನು ಖಂಡಿಸಿದ ರಾದರೂ ಅದರ ತೀವ್ರ ಪರಿಣಾಮ ಪೊಲೀಸ್ ಅಧಿಕಾರಿಗಳಿಗೆ ತಟ್ಟಲಿಲ್ಲ. ಇದಕ್ಕೆ ಎಂ.ವೈ. ಘೋರ್ಪಡೆಯವರ ಪರೋಕ್ಷ ಸಹಕಾರ ಆ ಅಧಿಕಾರಿಗಳ ಮೇಲಿದ್ದದ್ದು. ಆದರೂ ಈ ಖಂಡನೆಯನ್ನು ಅಲ್ಲ ಗೆಳೆಯುವಂತೆ ಪೊಲೀಸ್ ಸೂಪರಿಡೆಂಟ್ ವಿ.ವಿ. ಭಾಸ್ಕರ್ ಅವರು ಪತ್ರಿಕಾ ಹೇಳಿಕೆ ನೀಡುತ್ತಾ ಸೊಂಡೂರಿನಲ್ಲಿ ಪೊಲೀಸರಿಂದ ಲಾಠಿ ಪ್ರಹಾರ ನಡೆದಿದೆ ಎಂದು ಪತ್ರಿಕೆಗಳಲ್ಲಿ ಸುಳ್ಳು ಸುದ್ದಿಯಾಗಿದೆ. ಇಲ್ಲಿ ಇದುವರೆಗೆ ಯಾವುದೇ ಲಾಠಿ ಪ್ರಹಾರ ನಡೆದಿಲ್ಲವೆಂದು ಸಮರ್ಥಿಸಿಕೊಂಡರು.

ಹೀಗೆ ೪೭ ದಿನ ನಡೆದ ಹೋರಾಟವನ್ನು ತಾತ್ಕಾಲಿಕವಾಗಿ ಮುಂದೂಡಲಾಯಿತು. ಒಟ್ಟು ೧೦೩೭ ಸತ್ಯಾಗ್ರಹಿಗಳ ಪಿಕೆಟಿಂಗ್ ಭೂ ಆಕ್ರಮಣಗಳಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ರಾಜಮನೆತನದ ಯಾವುದೇ ವೈಯಕ್ತಿಕ ಆಸ್ತಿಗೆ ಧಕ್ಕೆ ಯುಂಟುಮಾಡದೆ ಅವರ ಸ್ವಂತ ಭೂಮಿಯನ್ನು ಆಕ್ರಮಿಸದೆ, ರಾಜಮನೆತನ ವಶಪಡಿಸಿಕೊಂಡಿದ್ದ ನಂದಿಹಳ್ಳಿ, ರಾಘಾಪುರ ಮತ್ತು ಸಿದ್ಧಾಪುರ ಹಳ್ಳಿಗಳ ಹೊಗೆಸೊಪ್ಪಿನ ಜಮೀನಗಳಲ್ಲಿ ಇನಾಮು ಭೂಮಿಯಲ್ಲಿ ಮಾತ್ರ ಸತ್ಯಾಗ್ರಹಿಗಳು ಒಟ್ಟು ೮ ಬಾರಿ ಭೂ ಆಕ್ರಮಣ ಚಳವಳಿಯನ್ನು ನಡೆಸಿದರು. ನಂದಿಹಳ್ಳಿಯ ಪಾರಮ್ಮ ಹೇಳುವಂತೆ "ಸಿಗರೇಟು ಕಂಪನಿ ಬಳಿ ಏಳೆಂಟು ಜೊತೆ ಎತ್ತುಗಳನ್ನು ಕುಂಟೆ ಹಾಕಿಕೊಂಡು ಭೂಮಿಯಲ್ಲಿ ನೇಗಿಲು ಹೊಡೆಯುತ್ತಿದ್ದರು.. ಆಮೇಲೆ ಪೊಲೀಸರು ಬಂದು ಅವರನ್ನು ಕರೆದುಕೊಂಡು ಹೋಗುತ್ತಿದ್ದರು. ನಾವು ಹೆಣ್ಣು ಮಕ್ಕಳು ದೂರದಿಂದಲೆ ನೋಡುತ್ತಿದ್ದೆವು" ಎನ್ನುತ್ತಾರೆ. ಅಂದರೆ ಹಳ್ಳಿಯ ಕೆಲವು ಜನರು ರಾಜರ ಭಯದಿಂದಾಗಿ ಭಾಗವಹಿಸುತ್ತಿರಲಿಲ್ಲ.

ಹೋರಾಟದಲ್ಲಿ ದಾಸೋಹ ಕಲ್ಪನೆಯಿತ್ತು. ಹಳ್ಳಿಗಳಿಂದ ಹೋರಾಟಗಾರರಿಗೆ ಜೋಳ, ರಾಗಿ, ನವಣಕ್ಕಿ, ನೆಲ್ಲಕ್ಕಿ ಮುಂತಾದ ದವಸ ದಾನ್ಯಗಳನ್ನು ರೈತರು ತರುತ್ತಿದ್ದರು. ವಾರದ ಸಂತೆ ದಿನ ಸಂತೆಗೆ ಹೋಗಿ ತರಕಾರಿಯನ್ನು ಎತ್ತುತ್ತಿದ್ದರು. ಎಲ್ಲರೂ ಕೂಡಿಯೇ ಊಟ ಮಾಡುತ್ತಿದ್ದರು. ನಾಗಪ್ಪ ಹೇಳುವಂತೆ "ಹೋರಾಟದಲ್ಲಿ ಹೆಸ್ರು ಬರಬಾರ್ದು ಅನ್ನೋರೆಲ್ಲ ಹಿಂಗ ದವಸ ಧಾನ್ಯ ರೊಕ್ಕ ಕೊಟ್ಟು ಸಹಾಯ ಮಾಡ್ತಿದ್ರು. ಆವಾಗ ಊಟದ ತ್ರಾಸು ಬಾಳ ಇತ್ತು.. ಊಟಕ್ಕಾಗಿ ಚಳವಳೀಲಿ ಭಾಗವಹಿಸೋ ಜನಾನು ಇದ್ರು" ಇನ್ನುತ್ತಾರೆ. ಈ ಆಂದೋಲನದಲ್ಲಿ ಅನೇಕ ಮಹಿಳೆಯರು ತಮ್ಮ ಕೂಸುಗಳ ಸಮೇತ ಪಿಕೆಟಿಂಗ್ ಭೂ ಆಕ್ರಮಣಗಳಲ್ಲಿ ಭಾಗವಹಿಸಿ ಬಂಧಿತರಾದದ್ದು ಗಮನಾರ್ಹ. ಹರಿಜನ ನಾಯಕಿ ಬುಡ್ಡಮ್ಮ, ಮಾರಮ್ಮ, ಮೇದಾರ ಹುಲ್ಲೆಮ್ಮ, ಮೇದಾರ ಭೀಮ್ಮಕ್ಕ, ಬೆಂಗಳೂರಿನ ಸೋಹನ ಕುಮಾರಿ, ಭುಜಂಗ ನಗರದ ವಡ್ಡನಕಟ್ಟೆ ಶಾಂತಮ್ಮ, ಎನ್.ಎಂ. ಶಿವದೇವಮ್ಮ ಬಿಹಾರದ ಗಿರಿಜನ ನಾಯಕಿ ಸಂತೋಷಿತಿಗಾ, ಮಹಾರಾಷ್ಟ್ರದ ಸಮಾಜವಾದಿ ನಾಯಕಿ ಮೃಣಾಲ್ ಘೋರೆ. ಇವರುಗಳೆಲ್ಲ ಸ್ತ್ರೀಶಕ್ತಿಯನ್ನು ಹೋರಾಟದಲ್ಲಿ ಪ್ರತಿನಿಧಿಸಿದರು. ೪೭ ದಿನಗಳ ಭೂ ಹೋರಾಟ ಶಾಂತಿಯುತವಾಗಿಯೆ ನಡೆದರೂ ಪೊಲೀಸರ ದೌರ್ಜನ್ಯದಿಂದಾಗಿ ಕೊನೆಗೆ ಅಹಿಂಸಾತ್ಮಕ ರೂಪ ತಾಳಿತು.

## ೭. ೧೯೭೩ರ ವಿದ್ಯಮಾನ

೧೯೭೩ರಲ್ಲಿ ಡಿ. ದೇವರಾಜ ಅರಸು ಕರ್ನಾಟಕದ ಮುಖ್ಯಮಂತ್ರಿ. ಕೇಂದ್ರದಲ್ಲಿ ಇಂದಿರಾಗಾಂಧಿಯವರು ಸಮರ್ಥ ಆಡಳಿತಗಾರರಾಗಿದ್ದರು. ಆದರೆ ಅವರ ಮಂತ್ರಿಮಂಡಲದ ಮಂತ್ರಿಗಳು ಅವರಂತೆ ನಡೆಯದೆ ಸರ್ಕಾರ ಟೀಕೆಗೆ ಗುರಿಯಾಗಿತ್ತು ಇಂಥದ್ದೆ ವಿಚಿತ್ರ ಸ್ಥಿತಿ ಅರಸರದು ಕೂಡ. ಅರಸು ಕರ್ನಾಟಕ ಕಂಡ ಸಮರ್ಥ ಮುಖ್ಯಮಂತ್ರಿ ಎನ್ನುವುದು ಆಗಿನ ಜನಾಭಿಪ್ರಾಯ. ಆದರೆ ಅವರ ಮಂತ್ರಿ ಮಂಡಲ ಅವರದೇ ದಾರಿಯಲ್ಲಿ ನಡೆದದ್ದು ಕಡಿಮೆ. ಕೆಲ ಮಂತ್ರಿಗಳ ಮಿತಿ ಮೀರಿದ ವರ್ತನೆ ಹಾಗೂ ಅಧಿಕಾರದ ದುರುಪಯೋಗದ ಪ್ರಕರಣಗಳು ಅರಸರನ್ನು ನೆರಳಿನಂತೆ ಹಿಂಬಾಲಿಸಿದವು. ಪತ್ರಿಕೆಗಳಲ್ಲಿ ಟೀಕೆ ಹಾಗೂ ವಿಧಾನ ಮಂಡಲದಲ್ಲಿ ಶಸ್ತ್ರ ಚಿಕಿತ್ಸೆ ನಡೆದರೂ ಕೂಡ, ಆ ಮಂತ್ರಿಗಳು ತಮ್ಮನ್ನು ತಿದ್ದಿಕೊಳ್ಳಲಿಲ್ಲ. ಇದರಿಂದಾಗಿ ಮಂತ್ರಿಗಳ ಮೇಲಿನ ಬಾಣ ಪ್ರಯೋಗ ಮುಖ್ಯಮಂತ್ರಿಗಳಿಗೂ ಬಡಿದುಕೊಳ್ಳುತ್ತಿದ್ದವು.

೧೯೭೩ರ ಕರ್ನಾಟಕದ ಕೆಲವು ಸಾಮಾಜಿಕ ವಿದ್ಯಮಾನಗಳನ್ನು ಗಮನಿಸಬಹುದು. ಕಳ್ಳತನದ ಗುಮಾನಿಯ ಮೇಲೆ ಹಾಸನದ ಪೊಲೀಸರು ಕಸ್ಟಡಿಗೆ ತೆಗೆದುಕೊಂಡ ತರುಣನೊಬ್ಬ ಸತ್ತ. ಸುದ್ದಿ ಅಲ್ಲಿನ ಜನತೆಯಲ್ಲಿ ಪೊಲೀಸ್ ದೌರ್ಜನ್ಯದ ಶಂಕೆಯನ್ನು ಉಂಟುಮಾಡಿತು. ಇದರಿಂದಾಗಿ ಜನರು ಮತ್ತು ಪೊಲೀಸರ ನಡುವೆ ಘರ್ಷಣೆಯಾಯಿತು (ಸೆಪ್ಟಂಬರ್ ೫. ೧೯೭೩). ಇದೇ ವರ್ಷದಲ್ಲಿ ಪೊಲೀಸರಿಂದ ಅಂತಹ ಹತ್ತಕ್ಕೂ ಹೆಚ್ಚು ಲಾಕಪ್‌ಡೆತ್‌ಗಳಾಗಿದ್ದವು. ಆ ಸಂದರ್ಭದಲ್ಲಿ ಪೊಲೀಸರ ಪರವಾಗಿ ನೀಡಲಾದ ವಿವರಣೆಗಳು ಏಕಪ್ರಕಾರವಾಗಿದ್ದವು. ಇದು ಬ್ರಿಟಿಷರ ಆಡಳಿತದ ಪೊಲೀಸ್ ದರ್ಪ ದೌರ್ಜನ್ಯಗಳು ಸ್ವತಂತ್ರ್ಯ ನಂತರದ ಭಾರತದಲ್ಲಿ ನಿರಂತರವಾದದ್ದರ ಚಿತ್ರ. ಕರ್ನಾಟಕದಾದ್ಯಂತ ಈ ಘಟನೆಯನ್ನು ವಿರೋಧಿಸಿ ಪ್ರತಿಭಟನೆ ದಂಗೆಗಳಾದವು. ಮಂಗಳೂರಿನ ಕಮ್ಯುನಿಸ್ಟ್ ಪಾರ್ಟಿಯ ಸದಸ್ಯರ ಬೃಹತ್ ಪ್ರತಿಭಟನೆ, ತುಮಕೂರಿನ ವಿದ್ಯಾರ್ಥಿ ಫೆಡರೇಷನ್ ಹಾಸನದ ಘಟನೆ ವಿರೋಧಿಸಿ ತುಮಕೂರು ಬಂದ್ ಆಚರಿಸಿದ್ದು, ದಕ್ಷಿಣ ಮೈಸೂರಿನ ವಿದ್ಯಾರ್ಥಿ ಗಲಭೆ, ಮಂಡ್ಯದಲ್ಲಿ ವಿದ್ಯಾರ್ಥಿ ದಂಗೆಯಲ್ಲಿ ಪೊಲೀಸರಿಗೂ ವಿದ್ಯಾರ್ಥಿಗಳಿಗೂ ನಡೆದ ಸಂಘರ್ಷ. ಇವು ವಿದ್ಯಾರ್ಥಿಗಳು ಪೊಲೀಸ್ ದೌರ್ಜನ್ಯವನ್ನು ವಿರೋಧಿಸಿ ಮಾಡಿದ ಪ್ರತಿಭಟನೆಗಳು. ಇವುಗಳಿಗೆ ಮುಖ್ಯಮಂತ್ರಿಯ ಭರವಸೆಯೆಂದರೆ 'ಹಾಸನದಲ್ಲಿ ಸಾವು ಅನುಮಾನಸ್ಪದ ನಿಜಾಂಶ ತಿಳಿಯಲು ಸರ್ಕಾರದ ಸರ್ವ ಪ್ರಯತ್ನ' ಎನ್ನುವುದಾಗಿತ್ತು. ೧೨ ಸೆಪ್ಟಂಬರ್ ೧೯೭೩ರಲ್ಲಿ ಎಲ್ಲ ಪತ್ರಿಕೆಗಳಲ್ಲಿ ಹಾಸನದ ಘಟನೆ ಮುಖಪುಟದ ಸುದ್ದಿಯಾಯಿತು.

ರಾಸಾಯನಿಕ ಗೊಬ್ಬರದ ಹಾವಳಿಗೆ ರೈತರು ತತ್ತರಿಸಿದ್ದರು. ಹಾಗಾಗಿ ಸೀಮೆಗೊಬ್ಬರಕ್ಕಾಗಿ ಪ್ರತಿಭಟನೆಗಳು ಇದೇ ಸಮಯದಲ್ಲಿ ನಡೆದವು. ಸೆಪ್ಟಂಬರ್ ೧೩ರಂದು ಸಂಜೆ ಸಾವಿರಕ್ಕೂ ಹೆಚ್ಚು ಮಂದಿ ರೈತರು ದಾವಣಗೆರೆಯ ಸಬ್ ಡಿವಿಜನಲ್ ಅಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಿ 'ನಗರದಲ್ಲಿರುವ ಅಘೋಷಿತ ಹಾಗೂ ಕಳ್ಳ ದಾಸ್ತಾನು ಗೊಬ್ಬರ ವರ್ತಕರಲ್ಲಿರುವುದೆಂದೂ, ಗೊಬ್ಬರಕ್ಕಾಗಿ ತಾವುಗಳು ಪರಿತಪಿಸುತ್ತಿರುವುದಾಗಿಯೂ, ದಾಸ್ತಾನು ಹೊರಗೆಳೆದು ತಮಗೆ ನೀಡಬೇಕೆಂದು ಎಚ್ಚರಿಕೆಯ ಬೇಡಿಕೆ ಸಲ್ಲಿಸಿದರು. ದಾವಣಗೆರೆಯ ಶಾಸಕಿ ಶ್ರೀಮತಿ ನಾಗರತ್ನಮ್ಮ ರೈತರ ಪರವಾಗಿ ಒತ್ತಾಯಿಸಿದರು. ಸೆಪ್ಟಂಬರ್ ೧೭ರಂದು ಭದ್ರಾವತಿಯಲ್ಲಿಯೂ ಸೀಮೆಗೊಬ್ಬರಕ್ಕಾಗಿ ನೂರಾರು ಮಂದಿ ರೈತರು ಪ್ರತಿಭಟಿಸಿದರು. ತಹಶೀಲ್ದಾರರು, ಬಿ.ಡಿ.ಒ. ಮತ್ತು ಕೃಷಿ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಕಛೇರಿಗಳನ್ನು ಬಲವಂತವಾಗಿ ಪ್ರವೇಶಿಸಲು ಯತ್ನಿಸಿ ಗೊಂದಲ ಉಂಟಾಯಿತು. ಪೊಲೀಸರಿಗೂ ರೈತರಿಗೂ ಘರ್ಷಣೆಯೂ ಆಯಿತು. ಹೀಗೆ ಕರ್ನಾಟಕದಲ್ಲಿ ಹಲವಾರು ಕಡೆ ಸೀಮೆಗೊಬ್ಬರಕ್ಕಾಗಿ ಕೃಷಿ ಇಲಾಖೆಯನ್ನು ರೈತರು ಮುತ್ತಿಗೆ ಹಾಕಿದ ಘಟನೆಗಳು ನಡೆದವು.

ಬೆಲೆ ಏರಿಕೆ ಮತ್ತು ಆಹಾರ ಅಭಾವಕ್ಕಾಗಿಯೂ ಕರ್ನಾಟಕದ ಬಹುತೇಕ ಕಡೆಗಳಲ್ಲಿ ದೊಂಬಿ ಗಲಭೆಗಳಾದವು. ರಾಣೆಬೆನ್ನೂರಿನಲ್ಲಿ ಧಾನ್ಯ ವ್ಯಾಗನ್‌ಗಳ ಮೇಲೆ ಲೂಟಿ ನಡೆದಿದ್ದರಿಂದ ಪೊಲೀಸರು ಗೋಲಿಬಾರ್ ಮಾಡಿದಾಗ ಒಬ್ಬನು ಮೃತಪಟ್ಟನು. ಗುಬ್ಬಿಯಲ್ಲಿ ಬೆಲೆ ಏರಿಕೆ ವಿರೋಧಿ ಸರ್ಕಾರಿ ಗೋದಾಮುಗಳನ್ನು ಲೂಟಿ ಮಾಡಿದ್ದಕ್ಕಾಗಿ ೩೦ ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಪಾವಗಡದಲ್ಲಿ ಹಣ್ಣಿನ ಅಂಗಡಿಗಳ ಲೂಟಿ, ಯಲಹಂಕದಲ್ಲಿ ಕೃಷಿ ಮಾರುಕಟ್ಟೆಗಳ ಮೇಲೆ ರೈತರ ದಾಳಿ, ಸೆ.೨೦ರಂದು ಕೃಷಿಯ ಹಾಗೂ ಕೃಷಿ ಕಾರ್ಮಿಕರ ಬೇಡಿಕೆಗಳ ಬಗ್ಗೆ ಒತ್ತಾಯ ಮಾಡಲು ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕರು ಪುತ್ತೂರು ಹಾಗೂ ಕುಂದಾಪುರಗಳಲ್ಲಿ ಅಸಿಸ್ಟೆಂಟ್ ಕಮೀಷನರುಗಳ ಕಛೇರಿ ಮುಂದೆ ನಡೆಸಿದ ಧರಣಿ, ದೆಹಲಿಯಲ್ಲಿ ಬಸ್ ಸಾರಿಗೆಯ ಅವ್ಯವಸ್ಥೆ ವಿರೋಧಿಸಿ ಭಗತ್‌ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಮೂರು ಬಸ್ಸಿಗೆ ಬೆಂಕಿ ಇಟ್ಟಿದ್ದು. ಮಧ್ಯಪಾನ ವಿರೋಧಿ ಚಳುವಳಿಗಳು ಕರ್ನಾಟಕದಲ್ಲಿ ನಡೆಯುತ್ತಿದ್ದ ಕಾಲಕ್ಕೆ ತಮಿಳುನಾಡಿನ ಮುಖ್ಯಮಂತ್ರಿ ಎಂ. ಕರುಣಾನಿಧಿಯವರು ಮುಂದಿನ ವರ್ಷದಿಂದ ಮಧ್ಯಪಾನ ನಿಷೇಧ ಎಂದು ಘೋಷಿಸಿದ್ದು. ಈ ಎಲ್ಲ ಘಟನೆಗಳು ಕರ್ನಾಟಕದ ಸಾಮಾಜಿಕ ಸ್ಥಿತಿಯನ್ನು ಭಿನ್ನವಾಗಿ ಚಿತ್ರಿಸುತ್ತವೆ.

ಕರ್ನಾಟಕದಲ್ಲಿ ೧೯೭೩ರಲ್ಲಿ ಅಸ್ಪಶ್ಯತೆ ಹಸಿ ಹಸಿಯಾಗಿತ್ತು. ಭೀಕರವಾಗಿತ್ತು. ಚಾಮರಾಜನಗರ ತಾಲ್ಲೂಕು ಸಂತೆ ಮಾರನಹಳ್ಳಿಯಲ್ಲಿ ಸವರ್ಣೀಯ ಹಿಂದೂಗಳು ಹರಿಜನರಿಗೆ ಸಾರ್ವಜನಿಕ ಬಹಿಷ್ಕಾರ ಹಾಕಲಾಗಿತ್ತು. ಹರಿಜನರನ್ನು ಊರಿನವರು ಯಾವ ಕೆಲಸಕ್ಕೂ ಕರೆಯದೆ ಅತಂತ್ರ ಸ್ಥಿತಿಯಲ್ಲಿ ಬದುಕುವಂತೆ ಮಾಡಿದ್ದರು. ಸೆಪ್ಟಂಬರ್ ೧೧ರಂದು ವಿಧಾನಸಭೆಯಲ್ಲಿ ಈ ಬಗ್ಗೆ ಚರ್ಚೆ ಆದರೂ ಕಟ್ಟುನಿಟ್ಟಿನ

ಕ್ರಮವೇನೂ ಜಾರಿಯಾಗಲಿಲ್ಲ. ಇದು ಒಂದು ಘಟನೆ ಮಾತ್ರ. ಇದೇ ವರ್ಷದಲ್ಲಿ ಇಂತಹದೇ ಪ್ರಕರಣಗಳು ಇಪ್ಪತ್ತಕ್ಕೂ ಹೆಚ್ಚು ನಡೆದವು. ಇವುಗಳು ಮಾಧ್ಯಮದ ಕಣ್ಣಿಗೆ ಸಿಕ್ಕುವು ಮಾತ್ರ. ಇದೇ ಸಂದರ್ಭದಲ್ಲಿ ತಲೆ ಮೇಲೆ ಮಲ ಹೊರುವ ಪದ್ಧತಿಯ ರದ್ಧತಿಗೆ ಕೇಂದ್ರ ಯೋಜನೆಯೊಂದನ್ನು ರೂಪಿಸಿತು. ಮಧ್ಯಮ ವರ್ಗದ ಪಟ್ಟಣಗಳಲ್ಲಿ ತಲೆ ಮೇಲೆ ಮಲಹೋರುವ ಪದ್ಧತಿಯನ್ನು ರದ್ದು ಮಾಡಲು ಹೊಸ ಕಾರ್ಯಕ್ರಮಗಳು ಸಿದ್ಧಪಡಿಸುವುದಾಗಿ ಕಾಮಗಾರಿ ಮತ್ತು ನಗರಾಭಿವೃದ್ಧಿ ಸಚಿವ ಭೋಗಾಪಾಸ್ವಾನ್ ಶಾಸ್ತ್ರಿ ಸೆಪ್ಟಂಬರ್ ೧೯ರಂದು ವರದಿಗಾರರಿಗೆ ತಿಳಿಸಿದರು. ರಾಜ್ಯ ಸರ್ಕಾರವೂ ಅಸ್ಪೃಶ್ಯತೆ ನಿವಾರಣೆಗೆ ಕಾನೂನುಗಳನ್ನು ಜಾರಿಗೊಳಿಸಿತು. ಮುಜರಾಯಿ ದೇವಸ್ಥಾನಗಳ ಸಮಿತಿಯಲ್ಲಿ ಹರಿಜನರಿಗೆ ಸದಸ್ಯತ್ವವನ್ನು ಕಡ್ಡಾಯಗೊಳಿಸಲಾಯಿತು. ಊರಿನ ಎಲ್ಲರ ಜೊತೆ ಹರಿಜನರೂ ಬಾವಿ, ಕೆರೆ, ನಲ್ಲಿಯ ನೀರನ್ನು ಬಳಸುವ ವ್ಯವಸ್ಥೆಗಾಗಿ ಶೇ ೫೦%ರಷ್ಟು ಹರಿಜನರಿರುವ ಹಳ್ಳಿಗಳಿಗೆ ರಾಷ್ಟ್ರೀಯ ನೀರು ಪೂರೈಕೆ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಪಂಚಾಯ್ತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಪ್ರದೇಶದ ಹರಿಜನರಿಗೆ ಓಡಾಡಲು ಪ್ರತಿ ಬಂಧಕವಿರುವ ಸಂಸ್ಥೆಗಳಿಗೆ ಧನ ಸಹಾಯ ನಿಲ್ಲಿಸಲಾಗುತ್ತದೆ ಎಂದು ಸರ್ಕಾರ ಎಚ್ಚರಿಸಿತು. ಇಂತಹ ಸಂದರ್ಭದಲ್ಲಿಯೇ ಸರ್ಕಾರದ ದುರ್ಬಲತೆ, ರಾಜಕೀಯ, ಭ್ರಷ್ಟಾಚಾರ ವಿರೋಧಿಸಿ ಆಂಧ್ರಪ್ರದೇಶದ ವಾರಂಗಲ್‌ನಲ್ಲಿ ಈ ರಾಷ್ಟ್ರದಲ್ಲಿ ಸಮಾಜವಾದವನ್ನು ಜಾರಿಗೆ ತರಲು ಜನತೆ ಶಸ್ತ್ರ ಸಜ್ಜಿತ ಹೋರಾಟಕ್ಕೆ ಸಿದ್ಧವಾಗಬೇಕು ಎಂದು ಕ್ರಾಂತಿಕಾರಿ ಬರಹಗಾರರ ಸಮ್ಮೇಳನ ಕರೆ ನೀಡಿತು.

ಒಂದು ವರ್ಷದ ಈ ಘಟನೆಗಳನ್ನು ನೋಡಿದರೆ ೧೯೭೩ ಸಂಘರ್ಷದ ವರ್ಷವಾಗಿ ಕಾಣುತ್ತೆ. ಹಾಸನದಲ್ಲಿ ಒಬ್ಬ ವಿದ್ಯಾರ್ಥಿಯ ಅನುಮಾನಾಸ್ಪದ ಸಾವು ನಾಂದಿಯಾಗಿ ರಾಜ್ಯದಾದ್ಯಂತ ವಿದ್ಯಾರ್ಥಿಗಳ ಚಳವಳಿ ತೀವ್ರರೂಪ ತಾಳಲು ಕಾರಣವಾಯಿತು. ಇಡೀ ರಾಜ್ಯಕ್ಕೆ ವ್ಯಾಪಿಸುವ ಭೀತಿಯುಂಟಾಯಿತು. ಚಳವಳಿ ಹಿಂಸಾತ್ಮಕ ತಿರುವು ಹೊಂದಿ ಅದನ್ನು ತಹಬದಿಗೆ ತರಲು ಪೊಲೀಸರು ರಾಜ್ಯದ ೭ ಪಟ್ಟಣಗಳಲ್ಲಿ ಗೋಲಿಬಾರ್, ಸುಮಾರು ೨೦ ಕಡೆ ಅಶ್ರುವಾಯು, ಲಾಟಿ ಪ್ರಹಾರ ಮೊದಲಾದವುಗಳನ್ನು ನಡೆಸಬೇಕಾಯಿತು. ಇದರ ಫಲವಾಗಿ ಲೆಕ್ಕಸಿಕ್ಕಂತೆ ೫ ಜನ ಸತ್ತರು. ಪೊಲೀಸರೂ ಸೇರಿದಂತೆ ನೂರಾರು ಜನ ಗಾಯಗೊಂಡರು. ಅನೇಕ ಕಡೆಗಳಲ್ಲಿ ವಿದ್ಯಾರ್ಥಿಗಳ ಜೊತೆಗೆ ಇತರರೂ ಸೇರಿಕೊಂಡು ಧಾನ್ಯದ ಅಂಗಡಿಗಳು, ಸರ್ಕಾರಿ ಮಳಿಗೆಗಳು, ಸೀಮೆಗೊಬ್ಬರದ ದಾಸ್ತಾನಿನ ಮಳಿಗೆಗಳನ್ನು ಲೂಟಿ ಮಾಡಿ ಅವುಗಳನ್ನು ತಮಗಿಷ್ಟ ಬಂದಂತೆ ಹಂಚಿಕೊಂಡರು. ಅನೇಕ ವಾಹನಗಳು ಮತ್ತು ಮಂಡ್ಯದಲ್ಲಿ ೧೦೦ಕ್ಕೂ ಗುಡಿಸಲುಗಳು ಅಗ್ನಿಗೆ ಆಹುತಿಯಾದವು.

ರಾಜ್ಯದಲ್ಲಾದ ಗಲಭೆ ದೊಂಬಿ ಅಗ್ನಿ ಸ್ಪರ್ಶ, ವಿದ್ಯಾರ್ಥಿಗಳ ಪ್ರತಿಭಟನೆ, ಬೆಲೆ ಏರಿಕೆಯ ವಿರುದ್ಧದ ಜನರ ಧೋರಣೆ ಹಿಂಸಾತ್ಮಕ ರೂಪ ತಾಳಿತು. ಇಷ್ಟೆಲ್ಲಾ ಆದದ್ದು ಯಾಕೆ ಎಂದರೆ ಹಸಿವು ಮತ್ತು ಕೊರತೆ. ಹಸಿವು ಎಲ್ಲಕ್ಕಿಂತ ಭೀಕರವಾದದ್ದು. ವಿಪರೀತ ಪರಿಣಾಮಗಳಿಗೆ ಕಾರಣವಾಗುವಂಥದ್ದು ಆಹಾರಕ್ಕಾಗಿ ಪರಿತಪಿಸಿದ ಇಕ್ಕಟ್ಟಿನ ದಿನಗಳು ಇವಾಗಿದ್ದವು. ಆ ಕಾರಣದಿಂದಲೇ ಈ ಪರಿಯ ಪ್ರತಿಭಟನೆ, ಆಹಾಕಾರ ಭಾರತದಾದ್ಯಂತ ಇತ್ತು. ಅದು ಕರ್ನಾಟಕದಲ್ಲಿ ತೀವ್ರವಾಗಿಯೇ ಅಭಿವ್ಯಕ್ತಗೊಂಡಿತು. ಮೈಸೂರಿನಂಥ ಅಕ್ಕಿ ಕಣಜದ ಪ್ರದೇಶದಲ್ಲಿ ಕೆ.ಜಿ.ಯ ಧಾರಣೆ ಬೆಳಗಾಗುವುದರಲ್ಲಿ ೨ ರೂಪಾಯಿನಷ್ಟು ಏರಿದರೆ, ಉಳಿದೆಡೆ ಅಕ್ಕಿ ಸಿಗುವುದೇ ಕಷ್ಟವಾಯಿತು. ಇದರಿಂದಾಗಿ ಜನರು ಪ್ರಕ್ಷುಬ್ಧರಾದರು. ಗಲಭೆ ದೊಂಬಿ ಲೂಟಿಗಳಿಗೆ ಗೂಂಡಾಗಳು, ಸಮಾಜ ವಿರೋಧಿ ಶಕ್ತಿಗಳೂ ಕಾರಣವಾದದ್ದು ಸಹಜವಾಗಿತ್ತು. ಸಾಮಾನ್ಯವಾಗಿ ಚಳವಳಿಗಳು ತೀವ್ರ ಸ್ವರೂಪ ತಾಳಿದಾಗ ಅಂಥವರು ಅದನ್ನು ದುರ್ಬಳಕೆ ಮಾಡಿಕೊಳ್ಳುವುದು ಹೊಸದೇನಲ್ಲ. ಆದರೆ ಚಳವಳಿಯ ಒಟ್ಟು ಮನಸ್ಥಿತಿಯನ್ನು ಈ ನೆಪದಲ್ಲಿ ಸರಳೀಕರಿಸಲು ಸಾಧ್ಯವಿಲ್ಲ.

ಇಲ್ಲಿನ ವಿವರಗಳು ಎಪ್ಪತ್ತರ ದಶಕದ ಕರ್ನಾಟಕವನ್ನು ಪರಿಚಯಿಸುತ್ತವೆ. ಒಂದು: ರಾಜ್ಯದಲ್ಲಿ ಶಾಂತಿ ಇರಲಿಲ್ಲ ಮುಖ್ಯವಾಗಿ 'ಆಹಾರ' ಇರದಿದ್ದ ಮೇಲೆ ಶಾಂತಿ ನೆಲೆಸಲು ಹೇಗೆ ಸಾಧ್ಯ. ಎರಡು: ಸಾಮಾನ್ಯ ಜನರಿಗೆ ಪ್ರತಿಭಟನೆಯ ವಿನಃ ಮತ್ತಾವ ದಾರಿಗಳೂ ಕಾಣದಂತಾಗಿತ್ತು. ತಾವು ಹಸಿದಿದ್ದಾಗಲೂ ಕೆಲವರು ಸುಖದ ಸುಪ್ಪತ್ತಿಗೆಯಲ್ಲಿರುವುದು ಜನರನ್ನು ಕೆರಳಿಸಿತ್ತು. ಮೂರು: ದೊಂಬಿ ಗಲಭೆಗಳ ನೆಪದಲ್ಲಿ ಸಂಪತ್ತಿನ ಸಂಗ್ರಹಗಳನ್ನು ಕೊಳ್ಳೆ ಹೊಡೆಯುವುದು, ಶ್ರೀಮಂತರ ಮೇಲಿನ ತಮ್ಮ ಕೋಪವನ್ನು ಈ ರೀತಿ ಕಡಿಮೆ

ಮಾಡಿಕೊಳ್ಳುವುದು. ನಾಲ್ಕು: ಒಂದು ವರ್ಷದಲ್ಲಿ ಕನಿಷ್ಟ ಮೂರು ನೂರಕ್ಕೂ ಹೆಚ್ಚಿನ ಪ್ರತಿಭಟನೆ ಚಳುವಳಿಗಳು ಜನಸಮುದಾಯದ ಪ್ರತಿಭಟನಾ ಮನೋಭಾವ ಮತ್ತು ೧೯೭೩ರ ಸಂದರ್ಭದಲ್ಲಿದ್ದ ಸಾಮಾಜಿಕ ರಾಜಕೀಯ ವ್ಯವಸ್ಥೆಗೆ ಜನತೆ ಸ್ಪಂದಿಸುತ್ತಿದ್ದ ಬಗೆಯನ್ನು ತೋರಿಸುತ್ತದೆ.

ಚಳವಳಿಯ ಭೂಮಿಕೆ ಸಿದ್ಧವಾದ ಕರ್ನಾಟಕದ ಒಟ್ಟು ಈ ಪರಿಸರ ಸೊಂಡೂರಿನಲ್ಲಿ ರೈತ ಚಳವಳಿಗೆ ಪರೋಕ್ಷವಾಗಿ ಸ್ಫೂರ್ತಿಯಾಯಿತು. ಸೊಂಡೂರು ಎಂಬ ಪುಟ್ಟ ತಾಲೂಕಿನ ರೈತರ ವಿಷಯವಾಗಿದ್ದ ಭೂಮಿಯ ಸಮಸ್ಯೆ ರಾಜ್ಯದ ಸಮಸ್ಯೆಯಾಯಿತು. ಈವರೆಗೂ 'ರಾಜ'ನ್ನೇ ಆರಾಧ್ಯ ದೈವವಾಗಿಸಿಕೊಂಡು, ರಾಜರ ಎಲ್ಲ ಅಪ್ಪಣೆಗೂ ತಲೆ ಹಾಕುತ್ತಾ ಬಂದವರಲ್ಲಿ ಕೆಲವರು ಎಚ್ಚೆತ್ತು ಚಳವಳಿಗೆ ಕಾರಣರಾದರು. ರಾಜ್ಯದಾದ್ಯಂತ ಚಳವಳಿಗಳ ಮುಖಂಡತ್ವ ವಹಿಸಿಕೊಂಡಿದ್ದವರು ಈ ರೈತರ ಹೋರಾಟಕ್ಕೆ ಬೆಂಬಲಿಸಿದರು. ಸೋಷಲಿಸ್ಟ್ ಪಾರ್ಟಿಯು ಇದು ತನ್ನ ನಿರ್ಣಾಯಕ ಹೋರಾಟವೊ ಎಂಬಂತೆ ಚಳವಳಿಯನ್ನು ರೂಪಿಸಿತು. ೧೯೭೩ರ ಸೊಂಡೂರಿನ ಸಾಮಾಜಿಕ ಪರಿಸರವನ್ನು ಅವಲೋಕಿಸುವುದು ಮುಖ್ಯ. ಕರ್ನಾಟಕದ ವಿದ್ಯಮಾನಗಳು ಈ ತಾಲೂಕನ್ನು ಪ್ರೇರೇಪಿಸಿದವೆ? ಅಥವಾ ಹೊರ ಜಗತ್ತಿಗೂ ನಮಗೂ ಸಂಬಂಧವೇ ಇಲ್ಲ ಎನ್ನುವ ಮಟ್ಟಿಗೆ ತಾಲ್ಲೂಕಿನ ಜನರು ಮೌನವಾಗಿದ್ದೆ? ಮೌನವಾಗಿದ್ದರೆ ಈ ಮೌನ ಹಿಂದಿರುವ ಒತ್ತಡವೇನು? ರೈತರ ಭೂ ಹೋರಾಟದಲ್ಲಿ ಯಾವ ಯಾವ ಸಮುದಾಯಗಳು ಕ್ರಿಯಾಶೀಲವಾಗಿ ಭಾಗವಹಿಸಿದವು? ಕೆಲವು ನಿರ್ಲಿಪ್ತವಾದದ್ದೇಕೆ? ಮುಂತಾದ ಪ್ರಶ್ನೆಗಳನ್ನು ಪರಿಶೀಲಿಸಬೇಕು. ಆಗ ಚಳವಳಿಯ ಜನಸಮುದಾಯದ ಮಗ್ಗಲುಗಳು ತೆರೆದುಕೊಳ್ಳುತ್ತವೆ.

೧೯೭೧ರ ಜನಗಣತಿಯ ಕೊಡುವ ತಾಲೂಕಿನ ಒಂದು ಚಿತ್ರವನ್ನು ನೋಡಬಹುದು. ಮೈಸೂರು ರಾಜ್ಯದ ಒಟ್ಟು ಜನಸಂಖ್ಯೆ ೨೯, ೨೯೯,೦೧೪ ರಷ್ಟಿದ್ದರೆ, ಬಳ್ಳಾರಿ ಜಿಲ್ಲೆಯ ಜನಸಂಖ್ಯೆ ೧,೧೨೨,೮೬೮ ರಷ್ಟಿತ್ತು. ಇನ್ನು ಸೊಂಡೂರು ತಾಲ್ಲೂಕಿನ ಜನಸಂಖ್ಯೆ ೯೨,೯೦೪ ರಷ್ಟು, ಪುರುಷರು ೪೭,೮೩೨ ಇದ್ದರೆ ಮಹಿಳೆಯರು ೪೫,೦೭೨ರಷ್ಟು, ಸಾಕ್ಷರತೆಯ ಪ್ರಮಾಣ ಒಟ್ಟು ೫,೧೭೯, ಪುರುಷರು ೧,೪೧೨ ಇದ್ದರೆ ಮಹಿಳೆಯರು ೩,೭೬೭ರಷ್ಟಿದ್ದರು. ತಾಲೂಕಿನ ಒಟ್ಟು ಕೆಲಸಗಾರರು ೩೪,೪೫೫. ಕೃಷಿಯನ್ನು ಅವಲಂಬಿಸಿದವರು ೧೩,೧೬೮. ಕೃಷಿ ಕಾರ್ಮಿಕರು ೧,೭೫೨, ಮೈನಿಂಗ್‌ನಲ್ಲಿ ದುಡಿಯುತ್ತಿದ್ದವರು ೪,೮೧೪ರಷ್ಟಿದ್ದರು.

ಇಲ್ಲಿನ ಅಂಕಿ ಸಂಖ್ಯೆಗಳನ್ನು ನೋಡಿದರೆ, ಸೊಂಡೂರು ಬಳ್ಳಾರಿ ಜಿಲ್ಲೆಯಲ್ಲಿಯೇ ಕಡಿಮೆ ಸಾಕ್ಷರತೆಯನ್ನು ಹೊಂದಿದ ತಾಲೂಕು. ಅಂತೆಯೇ ಹೆಚ್ಚು ಜನ ಕೃಷಿಯನ್ನು ಅವಲಂಬಿಸಿದವರು. ಜನಸಂಖ್ಯೆಯಲ್ಲಿ ಪುರುಷರಿಗಿಂತ ಮಹಿಳೆಯರು ೨೭೬೦ರಷ್ಟು ಕಡಿಮೆ ಇದ್ದಾರೆ. ಆದರೆ ಸಾಕ್ಷರತೆಯಲ್ಲಿ ಪುರುಷರಿಗಿಂತ ೨,೩೫೫ರಷ್ಟು ಹೆಚ್ಚಿದ್ದಾರೆ. ಪುರುಷರ ಸಾಕ್ಷರತೆ ತುಂಬ ಕಡಿಮೆ ಇದೆ. ೧೯೭೩ರ ಸಂದರ್ಭದ ಜನಸಮುದಾಯವನ್ನು ನೋಡಿದರೆ ಲಿಂಗಾಯಿತರು. ನಾಯಕರು ಸಮ ಪ್ರಮಾಣವಿದೆ. ಉಳಿದಂತೆ ಮರಾಠಿಗರು, ಜಂಗಮರು, ಬ್ರಾಹ್ಮಣರು, ಕುರುಬರು, ಮುಸ್ಲಿಮರು, ಪ್ರಮುಖವಾದ ಸಮುದಾಯಗಳು. ನಾಯಕರು ಮಹಾರಾಜರ ನಂಬಿಗಸ್ಥ ಸಮುದಾಯವಾಗಿತ್ತು. ಒಟ್ಟು ಇನಾಂ ಭೂಮಿಯಲ್ಲಿ ನಾಯಕ ಸಮುದಾಯದವರೇ ಹೆಚ್ಚು ಗೇಣಿ ಮಾಡುವವರಾಗಿದ್ದರು. ಆದರೆ ಚಳವಳಿಯಲ್ಲಿ ನಾಯಕ ಸಮುದಾಯ ಭಾಗವಹಿಸಿದ್ದು ಕಡಿಮೆ. ಕಾರಣ ಇವರನ್ನು ಮಹಾರಾಜರು ರಾಜವಂಶದ ಬೆಂಬಲಕ್ಕೆ ವಿಶ್ವಸನೀಯವಾಗಿ ನಡೆಸಿಕೊಂಡಂತೆ ಕಾಣುತ್ತದೆ.

ಯಜಮಾನ ಶಾಂತರುದ್ರಪ್ಪನವರ ಚಳವಳಿ ವೀರಶೈವ ಲಿಂಗಾಯಿತರನ್ನು ಹೆಚ್ಚು ಅವಲಂಬಿಸಿದ್ದಿತು. ಹಾಗಾಗಿ ಅವರಿಗೆ ಇತರ ಸಮುದಾಯಗಳ ಜೊತೆ ಬೆರೆಯುವಿಕೆ ಸಾಧ್ಯವಾಗುತ್ತಿರಲಿಲ್ಲ. ೭೦ರ ದಶಕದಲ್ಲಿ ಕಾಂಗ್ರೆಸ್ ಪ್ರಭಾವಿ ಪಕ್ಷವಾಗಿತ್ತು. ಇದರ ಎದುರು ನಿಲ್ಲುವಂತಹ ಪಕ್ಷಗಳಿರಲಿಲ್ಲ. ಇಂದಿರಾಗಾಂಧಿಯವರ ಆಕರ್ಷಕ ವ್ಯಕ್ತಿತ್ವ ಜನರನ್ನು ಸೂಜಿಗಲ್ಲಿನಂತೆ ಸೆಳೆದಿತ್ತು. ಎಲಿಗಾರ ತಿಮ್ಮಪ್ಪನವರು ಸಂಸ್ಥಾ ಕಾಂಗ್ರೆಸ್ಸಿನಲ್ಲಿ ಇದ್ದ ಕಾರಣ ಅವರ ಸಹಚರರೆಲ್ಲಾ ಸಂಸ್ಥಾ ಕಾಂಗ್ರೆಸ್‌ನಲ್ಲಿದ್ದರು. ಇವರು ಪಿ.ಎಲ್.ಡಿ. ಬ್ಯಾಂಕಿನ ಅಧ್ಯಕ್ಷರಾಗಿದ್ದರು. ರೈತರಿಗೆ ಕೃಷಿ ಸಾಲವನ್ನು ಕೊಡುತ್ತಿದ್ದರು. ಸಹಜವಾಗಿ ಕೃಷಿ ಸಾಲವನ್ನು ಮಧ್ಯಮ ವರ್ಗದ ಕೃಷಿಕರಿಗೆ ಕೊಡಲಾಗುತ್ತಿತ್ತು. ಸಾಲ ಪಡೆದವರಲ್ಲಿ ಹೆಚ್ಚಿನವರು ಲಿಂಗಾಯತರು. ಹಾಗಾಗಿ ತಿಮ್ಮಪ್ಪನವರ ಜೊತೆ ಕೃಷಿ ಕೂಲಿ ಕೆಲಸಗಾರರು ಇತರ ಸಮುದಾಯದವರು

ಜೊತೆಗಿದ್ದದ್ದು ಕಡಿಮೆ. ಹೀಗಾಗಿ ತಿಮ್ಮಪ್ಪನವರನ್ನು ಬೆಂಬಲಿಸುವ ಕೃಷಿ ಸಮುದಾಯದ ಒಂದು ವರ್ಗವಿತ್ತು. ಪಾತ್ರ ಸೀನಪ್ಪ ಹೇಳುವಂತೆ "ಸರಾಯಿ ಕಾಂಟ್ರ್ಯಾಕ್ಟ್ ಮಹಾರಾಜರದೇ ಆಗಿದ್ದರಿಂದ ಜನರಿಗೆ ಸರಾಯಿ ಕುಡಿಸಿ ಮಳ್ ಮಾಡ್ತಿದ್ರು. ನಾನು ಹಿರೋಜಿ ಲಾಡ್‌ಅವ್ರತ್ರ ಕಾರ್ ಡ್ರೈವರ್ ಆಗಿದ್ದೆ. ಸರಾಯಿ ಕಾಂಟ್ರ್ಯಾಕ್ಟ್ ಹೇಗಾದ್ರೂ ಮಾಡಿ ನಾವು ಪಡ್ಕೋಬೇಕು ಅಂತ ಹೋರಾಡಿ ನಾನೇ ಕಾಂಟ್ರ್ಯಾಕ್ಟ್ ತೊಗೊಂಡೆ", ಆಗ ಹಿರೋಜಿ ಲಾಡ್ ಅವರಿಗೂ ಘೋರ್ಪಡೆ ವಂಶಸ್ಥರಿಗೂ ಸಂಘರ್ಷಗಳೇನೂ ಇರಲಿಲ್ಲ.

ಎಂ.ವೈ.ಘೋರ್ಪಡೆಯವರು ದೇವರಾಜ ಅರಸು ಅವರ ಮಂತ್ರಿ ಮಂಡಲದಲ್ಲಿ ಅರ್ಥ ಸಚಿವರಾಗಿದ್ದರು. ಇದರಿಂದಾಗಿ ಸರ್ಕಾರದ ಕನಿಷ್ಠ ಸೌಲಭ್ಯಗಳನ್ನು ತಾಲ್ಲೂಕಿನ ಬಡ ಜನತೆಗೆ ಒದಗಿಸುವಲ್ಲಿ ಸಹಕಾರಿಯಾಗಿತ್ತು. ಇದು ತಾಲೂಕಿನ ಜನತೆಯಲ್ಲಿ ರಾಜಮನೆತನದ ಮೇಲೆ ಮೊದಲಿನಿಂದಲೂ ಇದ್ದ ಅಭಿಮಾನ ಗೌರವ ಇಮ್ಮಡಿಯಾಗಲು ಕಾರಣವಾಯಿತು. ಯಶವಂತರಾವ್ ಘೋರ್ಪಡೆಯವರ ದರ್ಪದ ಆಡಳಿತ ಜನಗಳ ಮಧ್ಯೆ ಹಸಿಹಸಿಯಾಗಿತ್ತು. ಇದು ಜನರಲ್ಲಿ ರಾಜವಂಶದ ಮೇಲೆ ನಿಜವಾದ ಭಕ್ತಿ ಗೌರವಗಳಿಗಿಂತ 'ರಾಜರು' ಎಂಬ ಭಯವೇ ಹೆಚ್ಚಾಗಲು ಕಾರಣವಾಗಿತ್ತು. ಈ ಭಯ ರಾಜರ ವಿರುದ್ಧ ನಿಲ್ಲುವುದನ್ನು 'ಮಾತನಾಡುವುದನ್ನು' ತಡೆಯುತ್ತಿತ್ತು. ಕುಮಾರಸ್ವಾಮಿ ಮುಂತಾದ ದೇವಾಲಯಗಳ ಜಾತ್ರೆ ಉತ್ಸವಗಳಲ್ಲಿ ರಾಜದರ್ಬಾರಿನದು ಪ್ರಧಾನ ಪಾತ್ರ. ಹೀಗೆ ಧರ್ಮದ ಮೂಲಕವೂ ಜನರನ್ನು ರಾಜಮನೆತನ ನಿಯಂತ್ರಿಸುತ್ತಿತ್ತು. ಇಲ್ಲಿಯ ದಸರಾ ಮೈಸೂರು ದಸರಾ ಮೆರವಣಿಗೆಯನ್ನು ಹೋಲುತ್ತಿತ್ತು. ಮಹಾರಾಜರಿಗೆ ಬನ್ನಿಕೊಟ್ಟು ಬೆನ್ನು ತಿರುಗಿಸಬಾರದೆಂದು ಮರೆಯಾಗುವ ತನಕ ಹಿಮ್ಮುಖವಾಗಿಯೇ ಚಲಿಸುವ ಪದ್ಧತಿ ಈಗಲೂ ಇದೆ. ಕುಮಾರಸ್ವಾಮಿ ಜಾತ್ರೆಯಲ್ಲಿ ಪಟದ ಹರಾಜಿನ ಜೊತೆ ಇನಾಮು ಭೂಮಿಯ 'ಗೇಣಿ'ಯೂ ನಿರ್ಧಾರವಾಗುತ್ತಿತ್ತು. ಒಂದೇ ಹೊಲಕ್ಕೆ ಹೆಚ್ಚು ಗೇಣಿ ಕೊಡುವವರಿಗೆ ಸಾಗುವಳಿ ಬದಲಾಗುತ್ತಿತ್ತು. ಅದೇ ಸಂದರ್ಭದಲ್ಲಿ ಒಪ್ಪಿತ ಗೇಣಿಯನ್ನು ಕಟ್ಟಲಾಗುತ್ತಿತ್ತು. "ಬೆಳೆ ಬಂದಾಗ ಇಂತಿಷ್ಟು ಕಾಳು ಎಂದು ಶಿವಪುರ ಪ್ಯಾಲೇಸಿಗೆ ಹೋಗಿ ಕೊಟ್ಟು ಬರುತ್ತಿದ್ದೆವು" ಎಂದು ಕಪ್ಪೆ ಸುಬ್ಬಣ್ಣ ನೆನಪಿಸಿಕೊಳ್ಳುತ್ತಾರೆ. ಈ ಕಾರಣಗಳು ಸೊಂಡೂರಿನ ಬಹುತೇಕ ಜನ ಸಮುದಾಯ ರಾಜಮನೆತನವನ್ನು ಆರಾಧಿಸುವಂತೆ ಮಾಡುತ್ತಿದ್ದವು. ತಾಲೂಕ ಕಛೇರಿ 'ಗ್ರಾಮ ಪಂಚಾಯ್ತಿ', ಪೊಲೀಸ್ ಇಲಾಖೆ ಮುಂತಾದ ಸರ್ಕಾರಿ ಇಲಾಖೆಗಳು ಕೂಡ ಮಹಾರಾಜರ ಅಪ್ಪಣೆಯ ಮೇರೆಗೆ ಇದ್ದವು.

೧೯೭೩ರ ಕರ್ನಾಟಕದಾದ್ಯಂತ ಆಹಾರ ಸಮಸ್ಯೆ, ಬೆಲೆ ಏರಿಕೆ, ಪೊಲೀಸರ ದೌರ್ಜನ್ಯ ಪ್ರಕರಣ, ಹೋರಾಟ, ಗಲಭೆಗಳಿದ್ದರೂ ಸೊಂಡೂರಿನಲ್ಲಿ ಇದಕ್ಕೆ ಪ್ರತಿಕ್ರಿಯೆ ಇರಲಿಲ್ಲ. ಅಂದರೆ ರಾಜ್ಯದ ಸಮಸ್ಯೆಗಳಿಗೂ ಸೊಂಡೂರಿನ ಜನತೆಗೂ ಯಾವುದೇ ಸಂಬಂಧ ಇಲ್ಲ ಎನ್ನುವ ಮಟ್ಟಿಗೆ ನಿರ್ಲಿಪ್ತವಾಗಿದ್ದರು. ೧೯೭೧ರ ಜನಗಣತಿ ಪ್ರಕಾರ ಮೈನಿಂಗ್‌ನಲ್ಲಿ ೪,೮೧೪ ಜನ ದುಡಿಯುತ್ತಿದ್ದರಾದರೂ ವಾಸ್ತವದಲ್ಲಿ ಈ ಸಂಖ್ಯೆ ಹೆಚ್ಚಾಗಿತ್ತು. ಮೈನಿಂಗ್‌ನಿಂದಾಗಿ ಕರ್ನಾಟಕದ ಬೇರೆ ಭಾಗಗಳಿಗಿಂತ ಉದ್ಯೋಗ ಹೆಚ್ಚಿತ್ತು. ತಾಲೂಕಿನ ಒಟ್ಟು ೬೨ ಸಾವಿರ ಜನಸಂಖ್ಯೆಯಲ್ಲಿ ೩೫ ಸಾವಿರ ಜನರಿಗೆ ಉದ್ಯೋಗವಿತ್ತು. ಈ ಕಾರ್ಮಿಕರಿಗೆ ರಾಜಮನೆತನದಿಂದ ತುಂಬ ಕಡಿಮೆ ದರಕ್ಕೆ ಆಹಾರ ಧಾನ್ಯಗಳು ಬಟ್ಟೆ ದೊರೆಯುತ್ತಿತ್ತು. ಹೀಗಾಗಿ ಇಲ್ಲಿ ನಿರುದ್ಯೋಗ, ಆಹಾರ ಸಮಸ್ಯೆ ಬೇರೆ ಭಾಗಗಳಿಗಿಂತ ಕಡಿಮೆ ಇತ್ತು. ಹೀಗಾಗಿ ಸೊಂಡೂರ ಜನರಿಗೆ ಉದ್ಯೋಗವಿತ್ತು. ಕೃಷಿ ಭೂಮಿ ಫಲವತ್ತಾಗಿದ್ದು, ಮಳೆ ಪ್ರಮಾಣ ಹೆಚ್ಚಿದ್ದರಿಂದ ಕೃಷಿ ಅವಲಂಬಿತರು ಹೆಚ್ಚಿನ ಸಂಕಷ್ಟದಲ್ಲಿರಲಿಲ್ಲ, ಬಹುತೇಕ ಜನರ ಪ್ರಮುಖ ಸಮಸ್ಯೆಗಳಾದ ಆಹಾರ, ಉದ್ಯೋಗ, ಬಟ್ಟೆ, ವಸತಿ ರಾಜಮನೆತನ ಬೇರೆ ಬೇರೆ ಮೂಲಗಳಿಂದ ಒದಗಿಸುತ್ತಿದ್ದರಿಂದ ತಾಲೂಕಿನ ಶೇ. ೭೦ರಷ್ಟು ಜನ ರಾಜರ ಋಣದಲ್ಲಿದ್ದರು. ಹಾಗಾಗಿ ಇಂಥವರಿಗೆ ರಾಜರ ವಿರುದ್ಧ ಧ್ವನಿ ಎತ್ತುವ ಸಾಧ್ಯತೆ ಇರಲಿಲ್ಲ.

ಈ ಎಲ್ಲದರ ಮಧ್ಯೆಯೂ ಪ್ರಜಾಪ್ರಭುತ್ವ ಸರ್ಕಾರದಲ್ಲಿ ರಾಜಶಾಹಿ ಕೆಲವರಿಗೆ ಕಹಿಯಾಯಿತು. ಜನರಿಗೆ ಅಹಾರ, ಉದ್ಯೋಗ ಕೊಟ್ಟು ಧ್ವನಿ ಎತ್ತದಂತೆ ಮಾಡಿ, ಅವರನ್ನೆಲ್ಲ ಶೋಷಿಸಲಾಗುತ್ತಿದೆ. ಇಲ್ಲಿ ಎಲ್ಲರೂ ಸಮಾನರು, ರಾಜರು ಅನಧಿಕೃತವಾಗಿ ಹೊಂದಿರುವ ಅಪಾರ ಸಂಪತ್ತು ಜನರಿಗೆ ಹಂಚಲ್ಪಡಲಿ, ಉಳುವವನೇ ಭೂಮಿಯ ಒಡೆಯನಾಗಲಿ ಎನ್ನುವ ಪ್ರಜ್ಞೆ ಕೆಲವರಲ್ಲಿ ಮೂಡಿತು. ಈ ಬಗೆಯ ಮನೋಸ್ಥಿತಿ ಇರುವವರು ಮತ್ತು ಇತರೆ ಕಾರಣಗಳಿಂದ ರಾಜರನ್ನು ವಿರೋಧಿಸುವವರ ಒಂದು ಗುಂಪು ಬೆಳೆಯಿತು. ಅವರುಗಳೆಂದರೆ, ಒಂದು: ಕೆಲವರು

ಮೈನಿಂಗ್ ಲೈಸೆನ್ಸಿಗಾಗಿ ಪ್ರಯತ್ನಿಸಿ ವಿಫಲರಾಗಿದ್ದರು. ಇದಕ್ಕೆ ಕಾರಣ ಮಹಾರಾಜರು. ಹಾಗಾಗಿ ಇವರೆಲ್ಲ ರಾಜರ ವಿರೋಧಿಗಳಾದರು. ಎರಡು: ತಾಲೂಕಿನ ಗ್ರಾಮ ಪಂಚಾಯ್ತಿಗಳ ರಾಜಕೀಯದಲ್ಲಿ ರಾಜರ ಪರವಾರದವರು ಇರುತ್ತಿದ್ದರು. ರಾಜರ ಪರವಾದವರನ್ನು ವಿರೋಧಿಸುತ್ತಿದ್ದವರೆಲ್ಲ ರಾಜರನ್ನು ವಿರೋಧಿಸ ತೊಡಗಿದರು. ಇದರಿಂದಾಗಿ ಹಳ್ಳಿಗಳಲ್ಲಿ ರಾಜರ ವಿರೋಧಿ ಗುಂಪೊಂದು ಬೆಳೆಯಿತು. ಮೂರು: ಕೇಂದ್ರ ಸರ್ಕಾರದ ಎನ್.ಎಂ.ಡಿ.ಸಿ ಯನ್ನು ರಾಜರು ಗುತ್ತಿಗೆ ಹಿಡಿದು ಆ ನೆಪದಲ್ಲಿ ನರಸಾಪುರ, ಭುಜಂಗನಗರದ ರೈತರ ಜಮೀನನ್ನು ವಶಪಡಿಸಿಕೊಂಡರು. ಹೀಗೆ ಭೂಮಿ ಕಳೆದುಕೊಂಡವರು. ನಾಲ್ಕು: ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬೆಳೆಯುವ ಲಕ್ಷಣವಿರುವವರನ್ನು ರಾಜತಂತ್ರದಿಮದ ಹತ್ತಿಕ್ಕಲಾಯಿತು. ಹೀಗೆ ಹತ್ತಿಕ್ಕಲ್ಪಟ್ಟವರು. ಐದು; ರಾಜರ ಕಂಪನಿಗಳಲ್ಲಿ ಕಾರ್ಮಿಕರನ್ನು ಒಗ್ಗೂಡಿಸುವವರನ್ನು, ಸರಿಯಾಗಿ ಕೆಲಸ ಮಾಡದವರನ್ನು 'ನಿಪುಣತೆ ಇರದವರನ್ನು' ಕೆಲಸದಿಂದ ತೆಗೆಯಲಾಗುತ್ತಿತ್ತು. ಹೀಗೆ ಕೆಲಸ ಕಳೆದುಕೊಂಡವರು. ಆರು: ಕಡಿಮೆ ದರದಲ್ಲಿ ಆಹಾರ ಧಾನ್ಯ, ಬಟ್ಟೆ, ಸೀಮೆಎಣ್ಣೆ ಮುಂತಾದವುಗಳು ರಾಜರ ನ್ಯಾಯ ಬೆಲೆ ಅಂಗಡಿಯಿಂದ ಸಿಗುತ್ತಿದ್ದವು. ಇದರಿಂದ ಇವುಗಳ ವ್ಯಾಪಾರವನ್ನು ನಂಬಿಕೊಂಡು ಬದುಕುತ್ತಿದ್ದ ಬಣಜಿಗರು, ಶೆಟ್ಟರು, ಬ್ರಾಹ್ಮಣರು ಮುಂತಾದ ವ್ಯಾಪಾರಿ ಸಮುದಾಯ. ಏಳು: ರಾಜರ ಬೆಂಬಲದಿಂದ ಪೊಲೀಸರು ದೌರ್ಜನ್ಯ ಮಾಡುತ್ತಿದ್ದರು. ಇಂತಹ ಪೊಲೀಸರಿಂದ ದೌರ್ಜನ್ಯಕ್ಕೊಳಗಾದವರು. ಹೀಗೆ ಮಹಾರಾಜರಿಂದ ಒಂದಲ್ಲ ಒಂದು ಕಾರಣಕ್ಕೆ ಶೋಷಣೆಗೆ ಒಳಗಾದವರೆಲ್ಲ ಒಂದು ಗುಂಪಾಗಿ ರಾಜವಂಶವನ್ನು ವಿರೋಧಿಸುವ ಒಂದು ಸಮೂಹವು ಜೊತೆಯಾಯಿತು. ಹೀಗೆ ರಾಜರ ವಿರೋಧಿಗಳ ಬಣವನ್ನು ಸೃಷ್ಟಿಸಿತು. ಈ ಸಂದರ್ಭದಲ್ಲಿ ೧೯೩೦ರಿಂದ ರಾಜರನ್ನು ವಿರೋಧಿಸುತ್ತಾ ಬಂದ ಎಲಿಗಾರ ತಿಮ್ಮಪ್ಪ, ಯಜಮಾನ ಶಾಂತರುದ್ರಪ್ಪ ನಾಯಕರಾದರು. ಮುಂದೆ ಭೂ ಹೋರಾಟದ ಸಂದರ್ಭದಲ್ಲಿ ಈ ವಿರೋಧಿ ಬಣ ಪರೋಕ್ಷವಾಗಿ ಪ್ರತ್ಯಕ್ಷವಾಗಿ ಸಹಕರಿಸಿ ಭಾಗವಹಿಸಿತು.

## ೮. ಹೋರಾಟ ಪೂರ್ವದ ಪರಿಸರ

೧೯೭೧ರ ಫೆಬ್ರವರಿ ೧೮,೧೯ ರಂದು ನರಸಾಪುರದಲ್ಲಿ ಎನ್.ಎಂ.ಡಿ.ಸಿ (ನ್ಯಾಷನಲ್ ಮಿನರಲ್ ಡೆವಲಪಮೆಂಟ್ ಕಾರ್ಪೋರೇಷನ್) ಭೂಮಿ ಕಳೆದುಕೊಂಡವರು ಸತ್ಯಾಗ್ರಹ ಮಾಡಿದರು. ಎನ್.ಎಮ್.ಡಿ.ಸಿ. ಕೇಂದ್ರ ಸರ್ಕಾರದ ಯೋಜನೆ ಆದರೆ ಅದರ ಗುತ್ತಿಗೆಯನ್ನು ರಾಜಮನೆತನವೇ ಪಡೆದಿತ್ತು. ಇದು ಪ್ರಾರಂಭವಾದಾಗ ನರಸಾಪುರದ ಬಹುತೇಕ ರೈತರು ತಮ್ಮ ಆಸ್ತಿಗಳನ್ನು ಕಳೆದುಕೊಂಡರು. ಮಾಜಿ ರಾಜರು ಇದರ ಪರಿಹಾರಾರ್ಥವಾಗಿ ಭೂಮಿ ಕಳೆದುಕೊಂಡಿವರಿಗೆ ಕಾರ್ಖಾನೆಯಲ್ಲಿ ಕೆಲಸ ಕೊಟ್ಟರು. ಆದರೆ ಕೆಲಸದಲ್ಲಿ ನಿಪುಣತೆ ಇಲ್ಲ ಎನ್ನುವ ನೆಪಹೊಡ್ಡಿ ಹೊಸದಾಗಿ ಉತ್ತರ ಭಾರತದ ಕೆಲಸಗಾರರನ್ನು ನೇಮಿಸಿಕೊಂಡು ೧೯೭೧ರಲ್ಲಿ ನರಸಾಪುರದ ರೈತರನ್ನೆಲ್ಲಾ ಕೆಲಸದಿಂದ ತೆರವುಗೊಳಿಸಲಾಯಿತು. ಇತ್ತ ಕೆಲಸವೂ ಇಲ್ಲದೆ ಅತ್ತ ಭೂಮಿಯೂ ಸಿಗದೆ ಅತಂತ್ರರಾದ ರೈತರು ರಾಜರನ್ನು ವಿರೋಧಿಸಿ ಎರಡು ದಿನ ಸತ್ಯಾಗ್ರಹ ಮಾಡಿದರು. ಎನ್.ಎಂ.ಡಿ.ಸಿ.ಗೆ ನೀರಿನ ಸರಬರಾಜು ಷಣ್ಮುಖಪ್ಪ ದೇಸಾಯಿಯವರ ಮನೆ ಪಕ್ಕದ ಭಾವಿಯಿಂದಲೇ ಆಗುತ್ತಿತ್ತು. ರೈತರು ಈ ನೀರಿನ ಸರಬರಾಜರನ್ನು ನಿಲ್ಲಿಸಿದರು. ಚಳವಳಿಗೆ ನರಸಾಪುರದ ರೈತರೆಲ್ಲಾ ಹೆಚ್ಚು ಕಡಿಮೆ ಒಂದು ಸಾವಿರ ಜನರು ಭಾಗವಹಿಸಿದರು. ಮೊದಲ ದಿನ ಘೋರ್ಪಡೆಯವರು ರೈತರಲ್ಲಿ ಮನವಿ ಮಾಡಿಕೊಂಡರು. ಪರಿಹಾರ ಧನ ನೀಡುವುದಾಗಿ ಹೇಳಿದರು. ಜನರು ಇಂತಹ ಭರವಸೆಯಲ್ಲಿ ನಂಬಿಕೆ ಕಳೆದುಕೊಂಡಿದ್ದರು. ಮಾಜಿ ರಾಜರ ಈ ಮನವಿಯನ್ನು ತಿರಸ್ಕರಿಸಿ, ಅವರೆದುರಿಗೇ ರಾಜರಿಗೆ ಧಿಕ್ಕಾರ 'ಬೇಕೆ ಬೇಕು ನ್ಯಾಯ ಬೇಕು' ಎಂದು ಕೂಗಿದರು. ಷಣ್ಮುಖಪ್ಪ ದೇಸಾಯಿಯವರ ನಾಯಕತ್ವದಲ್ಲಿ ರೈತರೆಲ್ಲಾ ಒಂದಾದರು. ಫೆಬ್ರವರಿ ೧೯ ಚಳುವಳಿಯ ಎರಡನೆಯ ದಿನ ಮತ್ತಷ್ಟು ರೈತರು ಉತ್ಸಾಹದಿಂದ ಭಾಗಿಯಾದರು. ಅಂದು ಲಾಟಿ ಚಾರ್ಜ ಆಯಿತು. ಅಂದೂ ಸಹ ಎನ್.ಎಂ.ಡಿ.ಸಿ.ಗೆ ನೀರು ಬಿಡಲಿಲ್ಲ. ನ್ಯಾಯ ಸಿಗುವವರೆಗೂ ಹೋರಾಟ ನಿಲ್ಲದು ಎನ್ನುವ ಘೋಷನೆ ಮಾತ್ರ ಜೋರಾಗಿತ್ತು. ಪೊಲೀಸರ ರಿಜರ್‌ವ್ಯಾನ್ನು ಬಂದು ಚಳವಳಿಗಾರರನ್ನು ಬೆದರಿಸಲು ನೋಡಿದರು. ಆದಿನ ಕೂಡ್ಲಿಗಿಯ ಸರ್ಕಲ್ ಇನ್ಸ್‌ಪೆಕ್ಟರ್, ಬಳ್ಳಾರಿಯ ಜಿಲ್ಲಾಧಿಕಾರಿಗಳು ಬಂದು ರೈತರೊಂದಿಗೆ ಮಾತನಾಡಿ ಪರಿಹಾರ ಕೊಡಿಸುವುದಾಗಿ ಭರವಸೆ ಕೊಟ್ಟು ಚಳುವಳಿಯನ್ನು ನಿಲ್ಲಿಸಿದರು. ಆದರೆ ಮೊದಲ ಬಾರಿಗೆ ಇಷ್ಟು ರೈತರು ರಾಜನ ವಿರುದ್ಧ ತಿರುಗಿ ಬಿದ್ದುದ್ದು ಸೊಂಡೂರಿನ ಸುತ್ತಮುತ್ತಲಿನ

ಹಳ್ಳಿಯ ರೈತರಿಗೆ ಬೆರಗು ಮೂಡಿಸಿತು. ಘೋರ್ಪಡೆಯವರಿಗೂ ರೈತರ ಶಕ್ತಿಯನ್ನು ನೋಡಿ ದಂಗ ಬಡಿದಂತಾಯಿತು. ವಿಪರ್ಯಾಸವೆಂದರೆ ಈವರೆಗಿನ ರಾಜವಂಶ ವಿರೋಧಿ ಚಳುವಳಿಗಾರರು ಈ ಸತ್ಯಾಗ್ರಹದಲ್ಲಿ ಭಾಗವಹಿಸಿರಲಿಲ್ಲ.

ಕುಮಾರಸ್ವಾಮಿ ದೇವಸ್ಥಾನ ಮಾತ್ರ ಸಮಸ್ಯೆಯ ಮೂಲವಾಗಿ ಕಾಣುತ್ತಿದ್ದ ಯಜಮಾನ ಶಾಂತರುದ್ರಪ್ಪನವರಿಗೆ ಈ ರೈತ ಸಮಸ್ಯೆಯು ಏಕೆ ಕಾಣಲಿಲ್ಲ? ಎಲಿಗಾರ ತಿಮ್ಮಪ್ಪ ಇದರಲ್ಲಿ ಏಕೆ ಭಾಗವಹಿಸಲಿಲ್ಲ ಎಂದು ತಿಳಿಯುವುದಿಲ್ಲ. ಮೊದಲ ದಿನದ ಸತ್ಯಾಗ್ರಹದ ನಂತರ ಸೊಂಡೂರಿನಲ್ಲಿ ಇದರ ಸುದ್ದಿಯಾಯಿತು. ಈ ಸುದ್ದಿ ತಿಳಿದರೂ ಹೊರಗಿನ ಹೋರಾಟಗಾರರು ಏಕೆ ಎರಡನೆಯ ದಿನದ ಸತ್ಯಾಗ್ರಹ ಬೆಂಬಲಿಸಲಿಲ್ಲ ಎನ್ನುವ ಪ್ರಶ್ನೆಗಳು ಏಳುತ್ತವೆ. ದೇಸಾಯಿ ಷಣ್ಮುಖಪ್ಪನವರು 'ಹೊರಗಿನ ಯಾರನ್ನು ಕರೆಯಲಿಲ್ಲ. ನಾನೇ ನಾಯಕತ್ವ ವಹಿಸಿದ್ದೆ. ಆಗಲೆ ಇಂದಿರಾಗಾಂಧಿಯವರು ಈಗಿನ ಜಿಂದಾಲನ್ನು (ವಿಜಯನಗರ ಉಕ್ಕಿನ ಕಾರ್ಖಾನೆ) ಉದ್ಘಾಟಿಸಿದ್ದರು. ಆ ಭಾಗದ ರೈತರು ಭೂಮಿ ಕಳೆದುಕೊಳ್ಳುವ ಆತಂಕದಲ್ಲಿದ್ದರು. ಅಂತವರೂ ನಮ್ಮ ಜೊತೆ ಸೇರಿದ್ದರು' ಎನ್ನುತ್ತಾರೆ. ಯಜಮಾನ ಮತ್ತು ಎಲಿಗಾರರಿಗೆ ಸೊಂಡೂರು ಮಾತ್ರ ಹೋರಾಟದ ಕೇಂದ್ರವಾಗಿದ್ದಂತೆ ಕಾಣುತ್ತದೆ. ಸುತ್ತಮುತ್ತಲ ಹಳ್ಳಿಗಳ ರೈತರ ಸಮಸ್ಯೆಗಳ ಸ್ವರೂಪದ ಬಗೆಗೆ ಅಷ್ಟಾಗಿ ಆಸಕ್ತಿ ಇದ್ದಂತೆ ಕಾಣುವುದಿಲ್ಲ. ಈ ಸತ್ಯಾಗ್ರಹದಿಂದ ರೈತರಿಗೆ ಯಾವುದೇ ಪ್ರತಿಫಲ ಸಿಗಲಿಲ್ಲ. ಆದರೆ ರಾಜರ ವಿರುದ್ಧ ಹೋರಾಟ ಮಾಡಲು ನರಸಾಪುರದ ರೈತರು ಸಜ್ಜಾದರು. ೧೯೭೩ರ ರೈತ ಚಳವಳಿಯಲ್ಲಿಯೂ ನರಸಾಪುರದ ರೈತರು ಸಕ್ರಿಯವಾಗಿ ಭಾಗವಹಿಸಿದರು. ಇಲ್ಲಿಂದಲೇ ೧೯೭೩ರ ರೈತ ಚಳುವಳಿಗೆ ಪೂರಕ ವಾತಾವರಣ ಸೃಷ್ಟಿಯಾಯಿತು.

**ಸೊಂಡೂರಿನಲ್ಲಿ ಜಾರ್ಜ**

೧೯೭೦ರವರೆಗೆ ಮಾಜಿ ರಾಜರ ರಾಜಶಾಹಿ ಆಡಳಿತಕ್ಕೆ ಜನರ ಮೌನ ಉತ್ತರವಾಗಿತ್ತು. ಸಣ್ಣ ಬಗೆಯ ಪ್ರತಿರೋಧ, ಜಗಳ, ಗುದ್ದಾಟವನ್ನು ರೈತರ ಪರವಾಗಿ ಕೆಲವು ನಾಯಕರು ನಡೆಸಿಕೊಂಡೆ ಬಂದರು. ಸರ್ಕಾರಕ್ಕೆ ರಾಜರ ಶೋಷಣೆಯನ್ನು ಅರ್ಜಿ ಮೂಲಕ ತಿಳಿಸುವುದು, ಕೋರ್ಟು, ಕಛೇರಿಗಳ ಬೆಂಬಲಕ್ಕಾಗಿ ಕಾಯುವುದು, ಈ ಬಗೆಯ ಹೋರಾಟದಿಂದ ಶಾಶ್ವತ ಪರಿಹಾರ ಸಿಗಲಾರದೆಂದು ಮನವರಿಕೆಯಾಯಿತು. ಆಗ ಯಜಮಾನ ಶಾಂತರುದ್ರಪ್ಪ, ಎಲಿಗಾರ ತಿಮ್ಮಪ್ಪ ಜನರನ್ನು ಸಂಘಟಿಸುವಲ್ಲಿ, ಜನಸಭೆಗಳನ್ನು ನಡೆಸುವಲ್ಲಿ ಆಸಕ್ತಿ ವಹಿಸಿದರು. ಎಲಿಗಾರ ತಿಮ್ಮಪ್ಪನು ನಮ್ಮ ಹೋರಾಟಕ್ಕೆ ಸೋಷಲಿಸ್ಟ್ ಪಾರ್ಟಿಯ ಬೆಂಬಲ ದೊರೆತರೆ ರಾಜ್ಯಮಟ್ಟದ ಹೋರಾಟವನ್ನು ಸಂಘಟಿಸಬಹುದೆಂದು ಅರಿತು, ರಾಜ್ಯ ಸೋಷಲಿಸ್ಟ್ ಪಾರ್ಟಿಯ ಅಧ್ಯಕ್ಷರಾಗಿದ್ದ ಕೆ.ಜಿ. ಮಹೇಶ್ವರಪ್ಪನವರಲ್ಲಿ ಸೊಂಡೂರು ರೈತರ ಸಮಸ್ಯೆಯನ್ನು ತಿಳಿಸಿ ಭೂಮಿಯ ಹಕ್ಕಿಗಾಗಿ ಚಳುವಳಿ ರೂಪಿಸಲು ಸಮಾಜವಾದಿ ಪಕ್ಷದ ಬೆಂಬಲ ಬೇಕಿದೆ ಎಂದು ಕೇಳಿಕೊಂಡರು. ಭೂಮಿ ಸಂಬಂಧಿ ಚಳುವಳಿಗಳನ್ನು ರೂಪಿಸುತ್ತಲೇ ಬಂದಿದ್ದ ಸೋಷಲಿಸ್ಟ್ ಪಾರ್ಟಿಯು ಇದಕ್ಕೆ ಸ್ಪಂದಿಸಿತು. ಕೆ.ಜಿ. ಮಹೇಶ್ವರಪ್ಪನವರು ರಾಷ್ಟೀಯ ಅಧ್ಯಕ್ಷರಾದ ಜಾರ್ಜ್‌ಫರ್ನಾಂಡಿಸ್ ರ ಬಳಿ ಚರ್ಚಿಸಿ, ಸೊಂಡುರಿಲ್ಲಿ ರೈತರ ಚಳುವಳಿಯನ್ನು ರೂಪಿಸುವುದಾಗಿ ನಿರ್ಧರಿಸಲಾಯಿತು. ಜನವರಿ ೨೮.೧೯೭೩ರಲ್ಲಿ ಸೋಷಲಿಸ್ಟ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಜಾರ್ಜ್‌ಫರ್ನಾಂಡಿಸ್ ಪೂರ್ವಭಾವಿಯಾಗಿ ಸೊಂಡೂರಿನಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕೆ.ಜಿ. ಮಹೇಶ್ವರಪ್ಪನವರು ಈ ದಿನವನ್ನು ನೆನಪಿಸಿಕೊಳ್ಳುತ್ತ 'ಜಾರ್ಜ್ ಅಂದು ಗುಡುಗಿದರು. ಸೊಂಡೂರು ರಾಜರು ಜನರನ್ನು ಹೇಗೆ ಮೋಸಗೊಳಿಸುತ್ತಾ ಇದ್ದಾರೆ ಎನ್ನುವುದನ್ನು ಭಾಷಣದಲ್ಲಿ ಹೇಳಿ. ರೈತರೆಲ್ಲಾ ಒಂದಾಗಿ ಅಂತ ಕರೆಕೊಟ್ರು. ಆ ದಿನ ಸೊಂಡೂರಿನ ಇತಿಹಾಸದಲ್ಲಿಯೇ ಮಹತ್ವದ್ದು' ಎನ್ನುತ್ತಾರೆ.

ಜಾರ್ಜ್ ಮಾತನಾಡಿ "ಸೊಂಡೂರು ಮಾಜಿರಾಜ ಸಾವಿರಾರು ಎಕರೆ ರೈತರ ಭೂಮಿಯನ್ನು ಕುಮಾರಸ್ವಾಮಿ ಇನಾಮಿನ ನೆಪದಲ್ಲಿ ತಾನೇ ಅನುಭವಿಸುತ್ತಿದ್ದಾನೆ. ೧೯೪೮ರಲ್ಲಿ ವಿಸರ್ಜನೆ ಯಾದ ಟ್ಯುಬ್ಯಾಕೋ ಕಂಪನಿಯ ಜಮೀನನ್ನೂ ರಾಜನೇ ಕೊಳ್ಳೆ ಹೊಡೆದಿದ್ದಾನೆ. ಸರ್ಕಾರಕ್ಕೆ ಮೋಸಗೊಳಸಿ ೯೦ ಸಾವಿರ ರಾಜಧನ ಈ ಹಿಂದೆ ಪಡೆಯುತ್ತಿದ್ದ. ಈಗ ರೈತರ ಬಿಡುಗಡೆಗಾಗಿ ಸೋಷಲಿಸ್ಟ್ ಪಾರ್ಟಿ ರಾಷ್ಟ್ರಮಟ್ಟದ ಹೋರಾಟವನ್ನು ಮಾಡುತ್ತಿದೆ. ಇದಕ್ಕೆ ಇಲ್ಲಿನ ರೈತರೆಲ್ಲಾ ಕೈಜೋಡಿಸಬೇಕು. ಉಳುವವನೇ ಭೂ ಒಡೆಯ. ನೀವು ಉತ್ತುವ ಭೂಮಿ ನಿಮಗೆ

ಸಿಗಬೇಕು. ಈ ಹೋರಾಟಕ್ಕೆ ನೀವೆಲ್ಲರೂ ಪಣತೊಟ್ಟು ಭಾಗವಹಿಸಿ'' ಎಂದು ಕರೆ ನೀಡಿದರು. ಜಾರ್ಜ್ ಮಾತುಗಳಿಂದ ರೈತರಲ್ಲಿ ಉತ್ಸಾಹ ತುಂಬಿದರು. ನಮ್ಮ ಬಗ್ಗೆ ಕರುಣೆ ತೋರಿಸುವವರು ಈ ರಾಜ್ಯದಲ್ಲಿ ಇದ್ದಾರೆ ಎನ್ನುವಂತಹ ಭಾವನೆ ಈ ಭಾಗದ ಜನರಲ್ಲಿ ಮೂಡತೊಡಗಿತ್ತು.

ಜಾರ್ಜ್ ಮಾಡಿದ ಈ ಭಾಷಣ, ಎಂ.ವೈ.ಘೋರ್ಪಡೆಯವರ ಮೇಲಿನ ಆಪಾದನೆಗಳು ರಾಜ್ಯಮಟ್ಟದ ಸುದ್ದಿಯಾದವು. ಕೂಡಲೇ ಎಂ.ವೈ. ಘೋರ್ಪಡೆಯವರು ಜಾರ್ಜ್‌ರ ಆಪಾದನೆಗಳನ್ನು ಅಲ್ಲಗಳೆದು. ನಾನು ಅಪಾರ ಆಸ್ತಿ ಜಮೀನಿನ ಒಡೆಯ ಎಂಬ ಹಳೆಯ ಸುಳ್ಳನ್ನೇ ಮತ್ತೆ ಮತ್ತೆ ಹೇಳುತ್ತಿದ್ದಾರೆ. ಈ ವಿಷಯ ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಬರುತ್ತಿದೆ. ನಾನು ಅರ್ಥಸಚಿವನಾದ ಕೂಡಲೆ ಸೊಂಡೂರಿನ ನನ್ನ ಮನೆಯ ಬಳಿ ಸುಮಾರು ೬೦ ಎಕರೆ ಖುಷ್ಕಿ ಜಮೀನಿದೆ ಎಂದು ತಿಳಿಸಿ ನನ್ನ ಆಸ್ತಿಪಾಸ್ತಿಗಳ ವಿವರಗಳನ್ನು ವಿಧಾನ ಮಂಡಲದ ಉಭಯ ಸಧನಗಳ ಅಧ್ಯಕ್ಷರುಗಳಿಗೆ ಒಪ್ಪಿಸಿದ್ದೆ. ಜನತೆಗೆ ಜ್ಞಾಪಕ ಮಾಡಿಕೊಡುವ ಉದ್ದೇಶ ದಿಂದ ಮತ್ತೆ ಹೇಳಬೇಕಾಗಿದೆ. ೧೯೭೨ರ ಜೂನ್ ೨೨ರಂದು ವಿಧಾನಪರಿಷತ್ತಿನಲ್ಲಿ ನಾನು ನೀಡಿದ ಹೇಳಿಕೆಯಲ್ಲಿ ಹೆಚ್ಚು ಭೂಮಿಯನ್ನು ಹೊಂದಿರುವ ಇಚ್ಚೆಯ ಇಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದೇನೆ.

ದತ್ತಿಯಾಗಿ ನಿರ್ವಹಿಸುತ್ತಿರು ಕುಮಾರಸ್ವಾಮಿ ದೇವಾಲಯದ ಸ್ವಾಧೀನದಲ್ಲಿ ಅರಣ್ಯ ಭೂಮಿ ಇದೆ. ಜೊತೆಗೆ ೭೦ ದಿಂದ ೮೦ ಎಕರೆಯಷ್ಟು ಖುಷ್ಕಿ ಜಮೀನಿದೆ ಎಂದು ಅದೇ ಹೇಳಿಕೆಯಲ್ಲಿ ತಿಳಿಸಿದ್ದೆ. ದೇವಾಲಯಕ್ಕೆ ಸೇರಿದ ಸುಮಾರು ೮೦೦೦ ಎಕರೆ ಉಳಿದ ಜಮೀನು ೮ ಗ್ರಾಮಗಳಲ್ಲಿದೆ. ಇದನ್ನು ಸರ್ಕಾರ ನಿರ್ವಹಿಸುತ್ತಿದೆ. ಈ ಜಮೀನು ದೇವಾಲಯದ ಸ್ವಾಧೀನದಲ್ಲಿದೆ. ೧೯೪೮ರಲ್ಲಿ ವಿಸರ್ಜನೆಗೊಂಡ ಸೊಂಡೂರು ಟೊಬ್ಯಾಕೋ ಕಂಪನಿಗೆ ಅನೇಕ ವರ್ಷಗಳ ಹಿಂದೆ ಗುತ್ತಿಗೆಗೆ ಈಗ ಸರ್ಕಾರಕ್ಕೆ ಸೇರಿದೆ. ಬಹುಭಾಗ ಬೀಳು ಬಿದ್ದಿರುವ ಈ ಜಮೀನನ್ನು ಯಾವುದಾದರೂ ಒಂದು ಸಾರ್ವಜನಿಕ ಅಥವಾ ಸಾಮಾಜಿಕ ಉದ್ದೇಶಕ್ಕಾಗಿ ಸಾರ್ಥಕವಾಗಿ ಉಪಯೋಗಿಸುವ ಬಗ್ಗೆ ನಾನು ಆಸಕ್ತಿ ವಹಿಸಿದೆ. ರಾಘಾಪುರಗಳಲ್ಲಿರುವ ಜಮೀನಿನಲ್ಲಿ ಸರ್ಕಾರ ಒಂದು ತೋಟಗಾರಿಕೆ ಕ್ಷೇತ್ರ ಹಾಗೂ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಲಿದೆ. ನಂದಿಹಳ್ಳಿಯಲ್ಲಿರುವ ಜಮೀನು ಶಿಕ್ಷಣಕ್ಕೆ ಯೋಗ್ಯವಾಗಿದೆ. ಇಲ್ಲಿ ವ್ಯವಸಾಯ ಕಾಲೇಜು ಮತ್ತು ಉಕ್ಕು ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವಂತೆ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ ಎಂದು ಉತ್ತರವಿತ್ತರು.

ಈವರೆಗೂ ಯಜಮಾನ ಶಾಂತರುದ್ರಪ್ಪ, ಎಲಿಗಾರ ತಿಮ್ಮಪ್ಪ ಮುಂತಾದವರು ಹಲವು ಬಾರಿ ಎತ್ತಿದ ಪ್ರಶ್ನೆಗಳನ್ನೆ ಜಾರ್ಜ್ ಎತ್ತಿದ್ದರು. ಆದರೆ ಎಂ.ವೈ. ಘೋರ್ಪಡೆ ಈ ಪ್ರಶ್ನೆಗಳಿಗೆ ಸಮರ್ಥನೆ ನೀಡುವ ಕಡೆಗೆ ಗಮನ ಹರಿಸಲಿಲ್ಲ. ಆದರೆ ಇದೇ ಪ್ರಶ್ನೆಗಳನ್ನು ಜಾರ್ಜ್ ಎತ್ತುತ್ತಲೂ ಘೋರ್ಪಡೆಯವರು ನಿಜಕ್ಕೂ ಆತಂಕಕ್ಕೊಳಗಾದರು. ಇದು ತಮ್ಮ ಮಂತ್ರಿ ಪದವಿಗೆ ಕುತ್ತು ಬರಬಹುದೆಂದು ಅವರ ಪ್ರಶ್ನೆಗಳಿಗೆ ಉತ್ತರಿಸಿ ನನಗೆ ಕೇವಲ ೬೦ ಎಕರೆ ಖುಷ್ಕಿ ಭೂಮಿ ಮಾತ್ರ ಇದೆ ಇದನ್ನು ಬಿಟ್ಟರೆ ಬೇರೇನೂ ಇಲ್ಲ ಎಂದರು. ಈ ಹೇಳಿಕೆಯನ್ನು ಆಶ್ಚರ್ಯಕರ ಚಿನ್ಹೆಯನ್ನೊಳಗೊಂಡು ಎಲ್ಲ ಪತ್ರಿಕೆಗಳು ಪ್ರಕಟಿಸಿದವು.

ಸೋಷಲಿಸ್ಟ್ ಪಾರ್ಟಿಯ ರಾಜ್ಯಾಧ್ಯಕ್ಷರಾದ ಕೆ.ಜಿ. ಮಹೇಶ್ವರಪ್ಪನವರು ಘೋರ್ಪಡೆಯ ಈ ಹೇಳಿಕೆಯನ್ನು ಖಂಡಿಸಿದರು. 'ಅರ್ಥ ಸಚಿವರಾದ ಘೋರ್ಪಡೆಯವರು ಪತ್ರಿಕಾ ಹೇಳಿಕೆಯಲ್ಲಿ ಸತ್ಯಕ್ಕೆ ದೂರವಾದ ವಿಚಾರ ತಿಳಿಸಿದ್ದಾರೆ. ಸತ್ಯವನ್ನು ಮರೆಮಾಚಲು ಪ್ರಯತ್ನಿಸಿದ್ದಾರೆ' ಎಂದು ಆಪಾದಿಸಿದರು. ಇಲ್ಲಿನ ಆರೋಪ ಪ್ರತ್ಯಾರೋಪಗಳು ತೀರಾ ರಾಜಕೀಯ ಕ್ಲೀಷೆಗಳಂತೆ ಕಂಡರೂ ಸೊಂಡೂರಿನ ವಿಷಯದಲ್ಲಿ ಇಂತಹದ್ದೊಂದು ಚರ್ಚೆ ರಾಜ್ಯ ಮಟ್ಟದಲ್ಲಿ ನಡೆಯುವ ಅಗತ್ಯವಿತ್ತು. ಬಹುಶಃ ಈ ಸಂದರ್ಭದಲ್ಲಿಯೇ ಸೊಂಡೂರಿನ ಜನರ ಸ್ಥಿತಿಯ ಬಗ್ಗೆ ತಿಳಿಯಲು ಸಾಧ್ಯವಾಯಿತು. ಇದರಿಂದಾಗಿ ಇದು ಕೇವಲ ಸೊಂಡೂರಿನ ಸಮಸ್ಯೆ ಎನ್ನುವ ಅರ್ಥಕ್ಕಿಂತ ರಾಜಶಾಹಿಯ ದರ್ಪದಡಿ ಬಳಸುವ ಬದುಕು ಬಿಡುಗಡೆಯಾಗ ಬೇಕಿದೆ ಎನ್ನುವ ವ್ಯಾಪ್ತಿಯನ್ನು ಪಡೆದುಕೊಂಡಿತು.

**ಸೋಷಲಿಸ್ಟರ ಸಂಗ್ರಾಮ ಸಮಿತಿ**

ಸೋಷಲಿಸ್ಟರು ಸೊಂಡೂರಿನಲ್ಲಿ ಚಳವಳಿ ಮಾಡುವುದಾಗಿ ನಿರ್ಧರಿಸಿದರು. ಅದರ ರೂಪುರೇಷೆಗೆ ಹೊಸಪೇಟೆಯಲ್ಲಿ ಜನವರಿ ೩೦,೧೯೭೩ರಲ್ಲಿ ಒಂದು ಸಭೆ ನಡೆಯಿತು. ಈ ಸಭೆಯ ನಿರ್ಣಯದಲ್ಲಿ ಸೊಂಡೂರಿನ ಮಾಜಿ ರಾಜರು ಮತ್ತು ಎಂ.ವೈ. ಘೋರ್ಪಡೆಯವರು ರೈತರ ಜಮೀನನ್ನು ತಮ್ಮ ವಶದಲ್ಲೇ ಇಟ್ಟುಕೊಂಡಿರುವುದನ್ನು ಪ್ರತಿಭಟಿಸಿ ಆ ಜಮೀನಿನ ವಿಮೋಚನೆಗಾಗಿ “ಸೊಂಡೂರು ಸಂಗ್ರಾಮ ಸಿದ್ಧತಾ ಸಮಿತಿ”ಯನ್ನು ರಚಿಸಿದರು. ಅದರಲ್ಲಿ ಕೆ.ಜಿ.ಮಹೇಶ್ವರಪ್ಪ, ಎಸ್. ವೆಂಕಟರಾಂ, ದಾಸನ್ ಸಾಲೋಮನ್, ಎಂ.ವೈ.ಆರ್. ಪರಮೇಶ್ವರಪ್ಪ, ಎಸ್.ಎಸ್. ಕುಮುಟ ಮತ್ತು ಕೋಣಂದೂರು ಲಿಂಗಪ್ಪ ಇವರುಗಳನು ಸಮಿತಿಯ ಸದಸ್ಯರುಗಳನ್ನಾಗಿ ನಿರ್ಣಯಿಸಲಾಯಿತು. ಈ ಸಭೆಯಲ್ಲಿ ಸ್ಥಳೀಯ ಕಾಂಗರನ್ನು ಪಕ್ಷ ಖಂಡಿಸಿತು. ಇದೇ ಸಭೆಯಲ್ಲಿ ಹೂವಿನಹಡಗಲಿಯಲ್ಲಿ ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಮಾವೇಶ ಮಾಡಲು ನಿರ್ಧರಿಸಲಾಯಿತು.

ಈ ಸಮಿತಿಯ ಕಾರ್ಯ ಚಟುವಟಿಕೆಯ ಬಗೆಗೆ ಫೆಬ್ರವರಿ ೧೪ರಂದು ಕೆ.ಜಿ. ಮಹೇಶ್ವರಪ್ಪನವರು ಪತ್ರಿಕಾಗೋಷ್ಟಿಯಲ್ಲಿ ‘ಸೊಂಡೂರಿನ ರಾಜ ವೈ.ಆರ್. ಘೋರ್ಪಡೆ ಮತ್ತು ಎಂ.ವೈ. ಘೋರ್ಪಡೆ ಅವರ ಅಕ್ರಮ ವ್ಯವಹಾರಗಳ ವಿರುದ್ಧ ಅಹಿಂಸಾತ್ಮಕ ಹೋರಾಟವನ್ನು ನಡೆಸಲು ಕರ್ನಾಟಕ ರಾಜ್ಯ ಸೋಷಲಿಸ್ಟ್ ಪಾರ್ಟಿ ನಿರ್ಧರಿಸಿದೆ. ಹೋರಾಟದ ದಿನ ಮತ್ತು ಇನ್ನಿತರ ವಿಚಾರಗಳಿಗೆ ಫೆಬ್ರವರಿ ೧೬,೧೭ ಮತ್ತು ೧೮ ರಂದು ದೆಹಲಿಯಲ್ಲಿ ಸಮಾವೇಶಗೊಳ್ಳಲು ರಾಷ್ಟ್ರೀಯ ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಯಿತು’ ಎಂದು ವಿವರಿಸಿದರು.

ಈ ನಡುವೆ ರಾಷ್ಟ್ರಪತಿಗೆ ಸೊಂಡೂರಿನ ಚಳವಳಿಯ ಬಗೆಗೆ ಮನವರಿಕೆ ಮಾಡುವ ಅಗತ್ಯವಿತ್ತು. ಹಾಗಾಗಿಯೇ ಫೆಬ್ರವರಿ ೧೨ರಂದು ಜಾರ್ಜ್ ಫರ್ನಾಂಡಿಸ್ ರಾಷ್ಟ್ರಪತಿ ವಿ.ವಿ. ಗಿರಿಯವರಿಗೆ ಒಂದು ಪತ್ರ ಬರೆದರು. ಈ ಪತ್ರದಲ್ಲಿ ಮೈಸೂರಿನ ಹಣಕಾಸು ಸಚಿವ ಮುರಾರಿರಾವ್ ಯಶವಂತರಾವ್ ಘೋರ್ಪಡೆಯವರು ಸಚಿವ ಸ್ಥಾನಕ್ಕೆ ರಾಜಿನಾಮೆ ಕೊಡುವಂತೆ ತಮ್ಮ ಪ್ರಭಾವ ಬೀರಬೇಕೆಂದು ರಾಷ್ಟ್ರಪತಿಗಳನ್ನು ಪ್ರಾರ್ಥಿಸಿದ್ದರು. ರಾಜ ವಂಶಸ್ಥರು ಅಕ್ರಮವಾಗಿ ಸಾವಿರಾರು ಎಕರೆಗಳಷ್ಟು ಭೂಮಿಯನ್ನು ಇಟ್ಟುಕೊಂಡಿದ್ದಾರೆಂದು, ಜನವರಿ ೨೮ರಂದು ಸೊಂಡೂರಿನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ತಾವು ಭಾಷಣ ಮಾಡಿದ ಸಂದರ್ಭದಲ್ಲಿ ಹಣಕೊಟ್ಟು ತಯಾರಿಸಿದ ಗೂಂಡಾಗಳು ಸಮಾಜವಾದಿ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದಾರೆಂದು ಆರೋಪಿಸಿದ್ದರು. ಘೋರ್ಪಡೆ ವಂಶಸ್ಥರು ಪಡೆದಿರುವ ಜಮೀನುಗಳ ತನಿಖೆ ನಡೆಸಲು ಒಂದು ಆಯೋಗವನ್ನು ನೇಮಿಸಬೇಕೆಂದು ಪತ್ರದಲ್ಲಿ ಸೂಚಿಸಲಾಗಿತ್ತು. ಭೂಹೀನರಿಗೆ ಆ ಜಮೀನುಗಳನ್ನು ಹಂಚಲು ರಾಜ್ಯ ಸರಕಾರ ಕ್ರಮ ತೆಗೆದುಕೊಳ್ಳದೆ ಹೋದಲ್ಲಿ ಬರುವ ಏಪ್ರಿಲ್ ನಲ್ಲಿ ಘೋರ್ಪಡೆ ಅವರ ಜಮೀನನ್ನು ಬಲವಂತವಾಗಿ ಆಕ್ರಮಿಸಿಕೊಳ್ಳಲು ಶಾಂತಿಯುತ ಸತ್ಯಾಗ್ರಹ ಆರಂಭಿಸಬೇಕೆಂದು ಸಮಾಜವಾದಿ ಪಕ್ಷದ ರಾಜ್ಯ ಶಾಖೆ ನಿರ್ಧರಿಸಿರುವ ವಿಷಯವನ್ನು ಪತ್ರದಲ್ಲಿ ತಿಳಿಸಲಾಗಿತ್ತು.

### ಮುಖ್ಯಮಂತ್ರಿಗೆ ಮನವಿ

ಮಾರ್ಚ್ ೩.೧೯೭೩ರಂದು ಸೊಂಡೂರು ಸತ್ಯಾಗ್ರಹದ ಪೂರ್ವಭಾವಿಯಾಗಿ ಬೆಂಗಳೂರಿನಲ್ಲಿ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರು ಸೊಂಡೂರಿನ ರೈತರು ಮೆರವಣಿಗೆ ಮಾಡಿದರು. ಈ ಮೆರವಣಿಗೆಯ ಅಜೆಂಡಾ “ಅಂದು ಕಾಗೋಡು ಇಂದು ಸೊಂಡೂರು” ಎಂಬುದಾಗಿತ್ತು. ಈ ಮೆರವಣಿಗೆಯಲ್ಲಿ ಕೆ.ಜಿ. ಮಹೇಶ್ವರಪ್ಪ, ಜೆ.ಎಚ್. ಪಟೇಲ್, ಎಂ.ಪಿ. ಪ್ರಕಾಶ್, ಯಜಮಾನ ಶಾಂತರುದ್ರಪ್ಪ, ಎಲಿಗಾರ ತಿಮ್ಮಪ್ಪ, ಎಸ್. ಎಸ್. ಕುಮುಟ, ಕಾಗೋಡು ತಿಮ್ಮಪ್ಪ ಮುಂತಾದ ಪ್ರಮುಖರನ್ನೊಳಗೊಂಡಂತೆ ನೂರಕ್ಕೂ ಹೆಚ್ಚು ಸಮಾಜವಾದಿ ಪಕ್ಷ ಕಾರ್ಯಕರ್ತರೂ, ಸೊಂಡೂರಿನ ರೈತರು ಅತ್ಯಂತ ಉತ್ಸುಕತೆಯಿಂದ ಭಾಗವಹಿಸಿದ್ದರು. ಬೆಂಗಳೂರಿನಲ್ಲಿ ಮೊದಲ ಬಾರಿಗೆ ಸೊಂಡೂರು ರೈತರ ಶೋಷಣೆಯ ಮುಕ್ತಿಗಾಗಿ ನಡೆಸಿದ ಮೆರವಣಿಗೆಯಾಗಿತ್ತು. ಈ ಮೆರವಣಿಗೆಯ ಸಂದರ್ಭದಲ್ಲಿ ‘ಪ್ರಜಾವಾಣಿ’ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಫೋಟೋ ಇದೆ. ಮುಂದೊಬ್ಬರು ಕಪ್ಪು ಕನ್ನಡಕ, ಕೋಟು ಹಾಕಿಕೊಂಡಿದ್ದಾರೆ. ಅಂಗವಿಕಲರೊಬ್ಬರು ಕೋಲು ಊರುತ್ತಾ ನಡೆಯುತ್ತಿದ್ದಾರೆ. ಮತ್ತೊಬ್ಬರು ಕೈಯಲ್ಲಿ ಕರಪತ್ರಗಳನ್ನು ಹಿಡಿದಂತೆ ಕಾಣುತ್ತಿದೆ. ಬಿಳಿ ಅಂಗಿ, ಬಿಳಿ ಪ್ಯಾಂಟು, ಗಾಂಧಿ ಟೋಪಿ ಧರಿಸಿ ಭಾರತದ ರಾಷ್ಟ್ರಧ್ವಜವನ್ನು ಹಿಡಿದು ಗಂಭೀರವಾಗಿ ಮುಂದೊಬ್ಬರು ನಡೆಯುತ್ತಿದ್ದಾನೆ. ಸೋಷಲಿಸ್ಟ್ ಪಾರ್ಟಿ (ನೇಗಿಲು ಸುತ್ತಚಕ್ರದ

ಚಿನ್ನೆಯನ್ನೊಳಗೊಂಡ) ಎಂಬ ಬ್ಯಾನರ್ ಹಿಡಿದಿದ್ದಾರೆ. ಮೊದಲ ಸಾಲಲ್ಲಿ ಜೆ.ಎಚ್. ಪಟೇಲ್ ಇದ್ದಾರೆ. ಅವರ ಹಿಂದಿನ ಸಾಲಿನಲ್ಲಿ "ಸೊಂಡೂರು ರೈತ ಹೋರಾಟ" ಎಂಬ ಇನ್ನೊಂದು ಬ್ಯಾನರ್ ಹಿಡಿಯ ಲಾಗಿದೆ. ಎಣಿಕೆಗೆ ೪೦ ಜನರು ಕಾಣುತ್ತಾರೆ. ಮೂವರು ಭಿತ್ತಿಪತ್ರಗಳನ್ನು ಹಿಡಿದಿರುವುದು ಕಾಣುತ್ತಿದೆ. ಚಳವಳಿಗಾರರು ಮುಖ್ಯರಸ್ತೆಯಲ್ಲಿ ಪಥಸಂಚಲನ ಮಾಡುತ್ತಿದ್ದಾರೆ. ಬಲಕ್ಕೆ ಅಂಬಾಸಿಡರ್ ಕಾರು, ಒಂದು ಆಟೋ  ಹೋಗುತ್ತಿದೆ. ಪಕ್ಕದ ಫುಟ್ ಬಾತಿನಲ್ಲಿ ನಡೆದಾಡುತ್ತಿರುವ ಜನರೆಲ್ಲರೂ ಈ ಮೆರವಣಿಗೆಯನ್ನೆ ಕುತೂಹಲದಿಂದ ನೋಡುತ್ತಿದ್ದಾರೆ. ಎಡಭಾಗಕ್ಕೆ ಬ್ರಿಟಿಷ್ ಮಾದರಿಯ ಮೊಣಕಾಲಿನ ತನಕದ ಅರ್ಧ ಪ್ಯಾಂಟು ಧರಿಸಿದ ಮೂವರು ಪೊಲೀಸರು ಲಾಟಿ ಹಿಡಿದು ನಡೆಯುತ್ತಿದ್ದಾರೆ. ಹೆಚ್ಚು ಜನರು ಗಾಂಧಿ ಟೋಪಿ ಧರಿಸಿದ್ದಾರೆ.

ಸೊಂಡುರು ತಾಲೂಕಿನಿಂದ ಬಂದಿದ್ದ ರೈತರ ಯೋಗಕ್ಷೇಮ ವಿಚಾರಿಸಲು ಮುಖ್ಯವಂತ್ರಿ ಡಿ.ದೇವರಾಜ ಅರಸು ಅವರು ವಿಧಾನಸೌಧದಿಂದ ಚಳವಳಿಗಾರರು ತಂಗಿದ್ದ ಕಬ್ಬನ್ ಪಾರ್ಕಿನ ಮರದಡಿಗೆ ಬಂದರು. ಚಳಿವಳಿಗಾರರು ಮುಖ್ಯಮಂತ್ರಿಗಳನ್ನು ಸ್ವಾಗತಿಸಿ ಸೊಂಡೂರು ಚಳವಳಿ ಕುರಿತು ಒಂದು ಮನವಿಯನ್ನು ಅರ್ಪಿಸಿದರು. ಮನವಿ ಒಳಗೊಂಡ ಅಂಶಗಳು ಹೀಗಿದ್ದವು.

೧. ಸೊಂಡೂರು ರಾಜರ ಧರ್ಮದರ್ಶಿತ್ವದಲ್ಲಿರುವ ವಿವಿಧ ದೇವಸ್ಥಾನಗಳ ಸುಮಾರು ೧೦,೦೦೦ ಎಕರೆ ಜಮೀನನ್ನು ಅವುಗಳ ಗೇಣಿದಾರರಿಗೆ ಕೊಡಬೇಕು. ಈ ಕ್ರಮವನ್ನು ಜಾರಿಗೆ ತರುವಲ್ಲಿ ಅವಶ್ಯಕವಾದರೆ ೧೯೩೭ರ ಸೊಂಡೂರು ಇನಾಂ ನಿಯಂತ್ರಣ ಕಾನೂನು, ೧೯೪೬ರ ಸಂವಿಧಾನ ಉದ್ಘೋಷಣೆ ಮತ್ತು ೧೯೪೮ರ ಸೊಂಡೂರ ದೇವಾಲಯ ಉದ್ಘೋಷಣೆಗಳನ್ನು. ಸುಗ್ರೀವಾಜ್ಞೆಯ ಮೂಲಕವಾದರೂ ರದ್ದುಮಾಡಬೇಕು.

೨. ಎಸ್. ಎಂ. ಆಂಡ್ ಐ. ಕಂಪನಿಗೆ ನೀಡಲಾದ ೨೯ ಚದರ ಮೈಲಿ ಗುತ್ತಿಗೆಯನ್ನು ರದ್ದುಪಡಿಸಿ, ಈ ಗುತ್ತಿಗೆಯನ್ನು ರಾಷ್ಟ್ರೀಯ ಗಣಿ ಅಭಿವೃದ್ಧಿ ನಿಗಮ ಮತ್ತು ಮೈಸೂರು ಮೆಟಲ್ಸ್ ಲಿಮಿಟೆಡ್ ಈ ಎರಡರಲ್ಲಿ ಒಂದು ಸಂಸ್ಥೆಗೆ ಕೊಡಬೇಕು.

೩. ಹಿಂದೆ ಹೊಗೆಸೊಪ್ಪಿನ ಕಂಪನಿಗೆ ಗುತ್ತಿಗೆ ಕೊಡಲಾಗಿದ್ದ ನಂದಿಹಳ್ಳಿ, ಸಿದ್ದಾಪುರ ಮತ್ತು ರಾಘಾಪುರ ಗ್ರಾಮಗಳಲ್ಲಿ ರತಕ್ಕ ಸುಮಾರು ೧೦೦೦ ಎಕರೆ ಜಮೀನನ್ನು ಭೂಹೀನ ರೈತರಿಗೆ ಹಂಚಬೇಕು.

೪. ರಾಜಮನೆತನದ ಖಾಸಗಿ ಸಂಸ್ಥೆಯಾದ 'ಸ್ಕಂದ ಉದ್ಯಮ'ದ ಹೆಸರಲ್ಲಿ ಪಡೆದಿರುವ ೧೫೦ ಎಕರೆ ಜಮೀನನ್ನು ಸರ್ಕಾರ ವಶಪಡಿಸಿಕೊಳ್ಳಬೇಕು. ಪಕ್ಕದ ಭೂಮಿ ಯಲ್ಲಿ ಅಕ್ರಮವಾಗಿ ನಡೆಯುತ್ತಿರುವ ಗಣಿಗಾರಿಕೆಯನ್ನು ತಕ್ಷಣ ನಿಲ್ಲಿಸಬೇಕು.

೫. ರಾಜಮನೆತನದ ಮೃಗಯಾ ವಿಹಾರಕ್ಕೆಂದು ಕಾದಿಟ್ಟ ಸುಮಾರು ೨೦೦೦ ಎಕರೆ ವಿಸ್ತಾರವಾದ ಅರಣ್ಯ ಪ್ರದೇಶವನ್ನು ಸರಕಾರ ರದ್ದಪಡಿಸಬೇಕು.

೬. ಶಿವಾಪುರ ಶಿಕ್ಷಣ ಸಮಿತಿ ಹಾಗೂ ಸೊಂಡೂರು ಶಿಕ್ಷಣ ಸಮಿತಿ ಇತ್ಯಾದಿ ಸಂಸ್ಥೆಗಳನ್ನು ಸರಕಾರ ವಶಪಡಿಸಿಕೊಳ್ಳಬೇಕು.

೭. ಹೈಕೋರ್ಟು ನ್ಯಾಯಧೀಶರ ಅಧ್ಯಕ್ಷತೆಯಲ್ಲಿ ರಾಜಮನೆತನದ ವಿರುದ್ಧ ಮಾಡಲಾಗಿರುವ ಮೇಲ್ಕಂಡ ಹಾಗೂ ಇತರ ಆಪಾದನೆಗಳ ಪರಿಶೀಲನೆಗೆ ಒಂದು ವಿಚಾರಣ ಆಯೋಗವನ್ನು ನೇಮಕ ಮಾಡಬೇಕು.

೮. ಮುಖ್ಯಮಂತ್ರಿ ದೇವರಾಜ ಅರಸು ಅವರು ಸೊಂಡೂರು ಮನೆತನದ ವಿವಿಧ ಸುಲಿಗೆ ಶೋಷಣೆ ಮತ್ತು ಅನ್ಯಾಯಗಳ ಬಗ್ಗೆ ತುರ್ತುಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಎಂ.ವೈ. ಘೋರ್ಪಡೆಯವರನ್ನು ಕೂಡಲೆ ಮಂತ್ರಿ ಪದವಿಯಿಂದ ತೆಗೆದು ಹಾಕಬೇಕು.

ಮನವಿ ಸ್ವೀಕರಿಸಿದ ಮುಖ್ಯಮಂತ್ರಿಗಳು ಪ್ರಕರಣವನ್ನು ಸಮಗ್ರವಾಗಿ ಚರ್ಚಿಸಿ ಅದಷ್ಟು ಬೇಗನೆ ಬೇಡಿಕೆಗಳನ್ನು ಈಡೇರಿಸಲಾಗುವುದು. ಇನಾಂ ರದ್ದತಿ ಆಕ್ಟನ್ನು ಸದ್ಯದಲ್ಲಿಯೇ ಪಾಸ್ ಮಾಡಲಾಗುತ್ತಿದೆ ಎಂದು ಭರವಸೆಯನ್ನಿತ್ತರು. ಈ ಮನವಿ ಮೊದಲಿನ ಪ್ರತಿಭಟನೆಗಿಳಿದ್ದದ್ದು ಸಣ್ಣ ಪ್ರಮಾಣದ ಆರೋಪಗಳಿಗಿಂತ ಗಂಭೀರ ಸಮಸ್ಯೆಗಳನ್ನು ಪರಿಗಣಿಸಿದ್ದು ಗಮನಾರ್ಹ. ಪ್ರಜಾಪ್ರಭುತ್ವದ ಆ ದಿನಗಳಲ್ಲಿಯೂ ರಾಜಪ್ರಭುತ್ವವನ್ನು ಅದೇ ಸರ್ಕಾರ ಪರೋಕ್ಷವಾಗಿ ಬೆಂಬಲಿಸುವ ಸೂಕ್ಷ್ಮತೆಗಳನ್ನು ಸೋಷಲಿಸ್ಟ್ ಪಾರ್ಟಿಯ ಕಾರ್ಯಕರ್ತರು ಸೊಂಡೂರು ಹೋರಾಟದ ಸಂದರ್ಭದಲ್ಲಿ ಪ್ರಸ್ತಾಪಿಸಿದರು.

**ಅರಸು ಮೌನ : ಹೋರಾಟಕ್ಕೆ ತಯಾರಿ**

ಕರ್ನಾಟಕದ ಸಮಾಜವಾದಿ ಕಾರ್ಯಕಾರಿ ಸಮಿತಿಯು ಆಗಸ್ಟ್ ೧೫.೧೯೭೪ರಂದು ಸೊಂಡೂರಿನಲ್ಲಿ ಸಭೆ ಸೇರಿ ಸೊಂಡೂರು ಹೋರಾಟವನ್ನು ತೀವ್ರಗೊಳಿಸಬೇಕೆಂದು ನಿರ್ಧರಿಸಿತು. ಪಕ್ಷದ ಮತ್ತು ಸೊಂಡೂರು ರೈತ ಸಂಘದ ನಿಯೋಗವು ಮಾರ್ಚ್ ೧೩.೧೯೭೪ ರಂದು ದೇವರಾಜ ಅರಸು ಅವರಿಗೆ ಸಲ್ಲಿಸಿದ್ದ ಮನವಿಯ ಬಗ್ಗೆ ಅವರು ಇಲ್ಲಿಯವರೆಗೆ ಯಾವ ಕ್ರಮವನ್ನು ತೆಗೆದುಕೊಳ್ಳದೆ ಮೌನವಾಗಿದ್ದರು. ಹಾಗಾಗಿ. ಸೆಪ್ಟಂಬರ್ ೧೦.೧೯೭೪ ಒಳಗೆ ಬೇಡಿಕೆಗಳನ್ನು ನೆರವೇರಿಸದಿದ್ದರೆ ಹೋರಾಟವನ್ನು ಅನಿವಾರ್ಯವಾಗಿ ಪ್ರಾರಂಭಿಸ ಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಸಭೆ ನೀಡಿತು. ಸಮಿತಿಯ ಸಭೆಯು ಕರ್ನಾಟಕ ಸಮಾಜವಾದಿ ಪಕ್ಷ ಹಾಗೂ ಸೊಂಡೂರು ರೈತ ಸಂಘ ಜಂಟಿ ಆಶ್ರಯದಲ್ಲಿ ರಾಜಮನೆತನದ ರಾಜಪ್ರಭುತ್ವದ ವಿರುದ್ಧ ಹೋರಾಡಲು ಸೊಂಡೂರು ಹೋರಾಟ ಸಮಿತಿಯನ್ನು ರಚಿಸಿತು. ಕೆ.ಜಿ. ಮಹೇಶ್ವರಪ್ಪ ಅವರನ್ನು ಸಮಿತಿಯ ನಿರ್ದೇಶಕರನ್ನಾಗಿಯೂ, ಬೀದರಿನ ಕಾಶೀನಾಥ ರಾವ್ ಬೇಲೂರೆ, ಉತ್ತರ ಕನ್ನಡದ ಎಸ್. ಎಸ್. ಕುಮುಟ ಮತ್ತು ಹೂವಿನ ಹಡಗಲಿಯ ಎಂ.ಪಿ. ಪ್ರಕಾಶ್ ಹಾಗೂ ಸೊಂಡೂರು ರೈತ ಸಂಘದ ಅಧ್ಯಕ್ಷ ಎಲಿಗಾರ ತಿಮ್ಮಪ್ಪ, ಬಳ್ಳಾರಿಯ ಯಜಮಾನ ಶಾಂತರುದ್ರಪ್ಪ, ಸೊಂಡೂರು ನರಸಿಂಗರಾವ್ ಮೊದಲಾದವರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

ಕರ್ನಾಟಕ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯು ಸೊಂಡೂರು ಹೋರಾಟದ ರೂಪರೇಷೆ ಹಾಗೂ ವಿಧಾನಗಳನ್ನು ಸ್ಪಷ್ಟಪಡಿಸಿತು. ಶಾಂತಿಯುತವಾಗಿ ಹಾಗೂ ಅಹಿಂಸಾತ್ಮಕವಾಗಿ ಇನಾಮು ಭೂಮಿಯನ್ನು ಹಳ್ಳಿಗಳ ಬಡರೈತರು ಆಕ್ರಮಿಸುವುದು, ತಾಲೂಕು ಕಛೇರಿಗಳ ಮುಂದೆ ಧರಣಿ ಹೂಡುವುದು, ಸಭೆ ಮೆರವಣಿಗೆ, ಪ್ರದರ್ಶನ ನಡೆಸುವುದು, ಈ ಮೊದಲಾದ ವಿಧಾನಗಳನ್ನು ಅನುಸರಿಸಿ ಹೋರಾಟವನ್ನು ತೀವ್ರಗೊಳಿಸಲು ಸಮಿತಿ ನಿರ್ಧರಿಸಿತು. ಈ ಬಗ್ಗೆ ರಾಜ್ಯ ಸಮಿತಿಯು ನೀಡಿದ ಒಂದು ಹೇಳಿಕೆಯಲ್ಲಿ "ಈ ಜನತಾ ಹೋರಾಟವನ್ನು ಹತ್ತಿಕ್ಕಲು ಸರಕಾರ ಪ್ರಯತ್ನ ಮಾಡಿದರೆ ಸಂಭವಿಸಬಹುದಾದ ಅಪಾಯಕರ ಪರಿಣಾಮಕ್ಕೆ ಸರಕಾರವೇ ಜವಾಬ್ದಾರಿಯಾಗುತ್ತದೆಂದು ಸಮಿತಿ ಎಚ್ಚರಿಕೆ ಕೊಡುತ್ತದೆ. ಅನ್ಯಾಯದ ವಿರುದ್ಧ ನಡೆಯುವ ಹಾಗೂ ರಾಜಶಾಹಿಯ ಶೋಷಣೆಯ ಅವಶೇಷಗಳ ನಿರ್ನಾಮ ಮಾಡುವ ಈ ಹೋರಾಟವನ್ನು ಸರಕಾರ ಕಡೆಗಣಿಸದಿರಲಿ ರಾಜ್ಯದ ಜನತೆ ಮತ್ತು ಇತರ ರಾಜಕೀಯ ಪಕ್ಷಗಳು ಈ ಹೋರಾಟವನ್ನು ಬೆಂಬಲಿಸಬೇಕೆಂದು ನಾವು ಕೇಳಿಕೊಳ್ಳುತ್ತೇವೆ" ಎಂದು ಹೇಳಲಾಯಿತು.

ರಾಜ್ಯ ಸಮಾಜವಾದಿ ಪಕ್ಷವು ಸೊಂಡೂರು ಹೋರಾಟದ ಬಗ್ಗೆ ಮಾಡಿದ ನಿರ್ಣಯಗಳನ್ನು ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಗೆ ತಿಳಿಸಿತು. ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸೊಂಡೂರು ಹೋರಾಟದ ವಿವರಗಳನ್ನು ಹಾಗೂ ಹೋರಾಟದ ಸ್ವರೂಪ ವಿಧಾನಗಳನ್ನು ಚರ್ಚಿಸಿ ತನ್ನ ಅನುಮೋದನೆ ಮತ್ತು ನೆರವನ್ನು ನೀಡಲು ನಿರ್ಧರಿಸಿತು. ಸಮಾಜವಾದಿಪಕ್ಷದ ಕೇಂದ್ರ ಕಛೇರಿಯು ಸೆಪ್ಟಂಬರ್ ೬.೧೯೭೪ರಂದು ಭಾರತದ ರಾಜ್ಯಘಟಕಗಳಿಗೆ ಹಾಗೂ ಪ್ರಮುಖ ಸಮಾಜವಾದಿ ನಾಯಕರಿಗೆ ಸುತ್ತೋಲೆ ಕಳಿಸಲಾಯಿತು. ಕರ್ನಾಟಕ ರಾಜ್ಯ ಸಮಾಜವಾದಿ ಪಕ್ಷ ನಡೆಸುತ್ತಿರುವ ಸೊಂಡೂರು ರೈತ ಹೋರಾಟಕ್ಕೆ ಒಂದೊಂದು ತಂಡವನ್ನು ತಮ್ಮ ತಮ್ಮ ರಾಜ್ಯಗಳಿಂದ ಕಳುಹಿಸಬೇಕು, ಪ್ರಮುಖ ಸಮಾಜವಾದಿ ನಾಯಕರು ಸ್ವತಃ ಹೋರಾಟದಲ್ಲಿ ಭಾಗವಹಿಸಬೇಕೆಂದು ಕರೆಕೊಟ್ಟಿತು. ಈ ಬಗ್ಗೆ ಪಕ್ಷದ ಜಾರ್ಜ್‌ಫರ್ನಾಂಡಿಸ್, ಸಮಾಜವಾದಿ ಪಕ್ಷದಿಂದ ಲೋಹ ಸಂಭೆಯ ಸದಸ್ಯರಾಗಿದ್ದ ಮಧು ದಂಡವತೆ ಮತ್ತು ಪಿ.ವಿಶ್ವಂಬರನ್ ಅವರನ್ನೂ

ಒಳಗೊಂಡ ಹೋರಾಟಕ್ಕೆ ನಿರ್ದೇಶನ ಹಾಗೂ ಮಾರ್ಗದರ್ಶನ ನೀಡಲು ರಾಷ್ಟ್ರೀಯ ಸಮಿತಿಯನ್ನು ರಚಿಸಲಾಯಿತು. ಅಖಿಲ ಭಾರತ ರೈತರ ಸಂಘಟನೆಯಾದ ಕಿಸಾನ್-ಖೇತ್ ಮಜದೂರ್ ಪಂಚಾಯಿತಿ ಸಹ ಸೊಂಡೂರು ರೈತರ ಹೋರಾಟಕ್ಕೆ ಸಂಪೂರ್ಣ ಹಾಗೂ ಸಕ್ರಿಯ ಬೆಂಬಲ ಕೊಡುವ ಒಂದು ನಿರ್ಣಯವನ್ನು ಕೈಗೊಂಡಿತು. ಜೊತೆಗೆ ಅದು ತನ್ನ ರಾಜ್ಯ ಘಟಕಗಳಿಗೆ ಒಂದು ಸುತ್ತೋಲೆಯನ್ನು ಕಳಿಸಿ ಸೊಂಡೂರು ಹೋರಾಟಕ್ಕೆ ತಂಡಗಳನ್ನು ಕಳುಹಿಸಿ ಭಾಗವಹಿಸುವುದರ ಮೂಲಕ ಹೋರಾಟವನ್ನು ಜಯಪ್ರದಗೊಳಿಸಬೇಕೆಂದು ಕರೆಕೊಟ್ಟಿತು.

ಹೀಗೆ ಸೊಂಡೂರಿನ ರೈತರ ಭೂಮಿ ಸಮಸ್ಯೆಯನ್ನು ಪರಿಹರಿಸಲು ಸೋಷಲಿಸ್ಟ್ ಪಾರ್ಟಿಯು ಚಳವಳಿ ರೂಪಿಸುವ ಮೂಲಕ ಇದೊಂದು ರಾಷ್ಟ್ರದ ಗಮನ ಸೆಳೆಯುವ ವಿಷಯವಾಯಿತು. ಅಂತೆಯೇ ಈ ಚಳವಳಿಗೊಂದು ವಿಶಾಲ ಹರವು ಬಂದಿತು. ಈವರೆಗೂ ಸ್ಥಳೀಯ ಹೋರಾಟ ಚಳವಳಿಗಳು ಸಫಲತೆಗಿಂತ ವಿಫಲತೆಯನ್ನು ಅನುಭವಿಸಿದ್ದೇ ಹೆಚ್ಚು. ಬಹುಶಃ ಹೀಗಾಗಿ ಸೊಂಡೂರು ರೈತರು ಆತ್ಮವಿಶ್ವಾಸ ಕಳೆದುಕೊಂಡು ಸ್ಥಿತಿಯಲ್ಲಿರದ್ದರು. ೧೯೭೩ರ ಚಳವಳಿ ಪ್ರಾರಂಭಕ್ಕೂ ಮುನ್ನ ಬಹುದೊಡ್ಡ ಪ್ರಚಾರ ಪಡೆದುಕೊಂಡದ್ದು ಸೊಂಡೂರಿನ ಪ್ರಜ್ಞಾವಂತ ಸಮುದಾಯದಲ್ಲಿ ಹೊಸ ಹುರುಪು. ಚೈತನ್ಯ ತುಂಬಿತು. ಇದರ ಒಂದು ಸಣ್ಣ ಅಲೆ ರೈತ ಸಮುದಾಯದಲ್ಲೂ ಮಂದವಾಗಿ ಸಂಚರಿಸಲು ಪ್ರಾರಂಭವಾಯಿತು.

## ೧೦. ಸದನದಲ್ಲಿ ಕಲಾಪಗಳ ಚರ್ಚೆ

ಲೋಕಸಭೆ ಮತ್ತು ವಿಧಾನಸಭಾ ಕಲಾಪಗಳನ್ನು ನಾವೀಗ ಲೈವ್ ಟೀವಿಯಲ್ಲಿ ನೋಡುತ್ತೇವೆ. ಜನಪ್ರತಿನಿಧಿಗಳು ಏನು ಮಾಡುತ್ತಾರೆ ಎನ್ನುವುದನ್ನು ಇದರಿಂದ ತಿಳಿಯಬಹುದು. ಅಳುವ ಪಕ್ಷ ಸಮರ್ಥನೆ, ವಿರೋಧ ಪಕ್ಷದ ವಿರೋಧಿಸುವಿಕೆಗೆ ಈಗ ಅಂತಹ ಗಟ್ಟಿಯಾದ ಉದ್ದೇಶಗಳು ಉಳಿದಂತೆ ಕಾಣುವುದಿಲ್ಲ. ಆಳುವ ಪಕ್ಷದ ಎಲ್ಲವನ್ನು ವಿರೋಧಿಸಲಿಕ್ಕಾಗಿಯೇ ವಿರೋಧಿಸುವುದು,. ವಿರೋಧ ಪಕ್ಷದವರಿಗೆ ವಿರೋಧಿಸುವ ಕೆಲಸ ಎಂದು ಆಳುವ ಪಕ್ಷ ತಿಳಿಯುವುದು ಇವು ಪರಸ್ಪರ ಹೊಂದಾಣಿಕೆಯ ವಾಸ್ತವಾಂಶಗಳಾಗಿವೆ. ಇಂದಿನ ಚರ್ಚೆಗಳು ರಾಜಕೀಯ ಬಲಾಬಲದ ಸೆಣಸಾಟದತ್ತಲೇ ಕೇಂದ್ರಿಕರಿಸುತ್ತಿವೆ. ಜಗಳ, ಕೂಗಾಟ, ಕಿರುಚಾಟ, ಸಭಾತ್ಯಾಗ, ಅಸಭ್ಯವರ್ತನೆಗಳು ಒಂದು ರೋಗದಂತೆ ಪರಿಣಮಿಸಿದೆ. ಈ ಎಲ್ಲದರ ಮಧ್ಯೆ ಅಂತಹ ಗದ್ದಲದಲ್ಲಿ ಜಗತ್ತಿನ ಪರಿವೆ ಇಲ್ಲದಂತೆ ನಿದ್ದೆಗೆ ಶರಣಾದ ಸದಸ್ಯರುಗಳು ಇಲ್ಲದಿಲ್ಲ. ಈ ದೇಶದ ನಿಜವಾದ ಸಮಸ್ಯೆಗಳು ಚರ್ಚೆ ಆಗುವುದು. ಆ ಸಮಸ್ಯೆಗಳಿಗೆ ಇಲ್ಲರೂ ಸಮಾನ ಮನಸ್ಥಿತಿಯಿಂದ ಪರಿಹಾರ ಕಂಡುಕೊಳ್ಳುವುದು ಕಲಾಪಗಳಲ್ಲಿ ಈಗಲೂ ಸಾಧ್ಯವಾಗದ ಸಂಗತಿ. ರಾಜ್ಯ ಪತ್ರಗಾರ ಇಲಾಖೆಯಲ್ಲಿರುವ ೬೦,೭೦ರ ದಶಕದ ವಿಧಾನ ಮಂಡಲ ಕಲಾಪಗಳನ್ನು ಗಮನಿಸಬೇಕು. ಅಲ್ಲಿನ ಚರ್ಚೆಯಲ್ಲಿದ್ದ ಸಾಮಾಜಿಕ ಕಳಕಳಿ, ಪಕ್ಷಾತೀತ ನಿಲುವುಗಳು, ನಿರ್ದಯ ಧೋರಣೆಗಳು ಅಚ್ಚರಿಗೊಳಿಸುತ್ತವೆ. ಅಂದ ಮಾತ್ರಕ್ಕೆ ಆಗಿನ ಕಲಾಪಗಳಲ್ಲಿ ಜಗಳ, ವೈಯಕ್ತಿಕ ದ್ವೇಷಗಳು ಇರಲಿಲ್ಲವೆಂತಲ್ಲ, ಇದ್ದರೂ ಅವುಗಳಿದ್ದ ಪ್ರಾಶಸ್ತ್ಯ ಕಡಿಮೆ. ೧೯೭೩ರ ವಿಧಾನ ಮಂಡಲದ ಕಲಾಪಗಳಲ್ಲಿ ಸೊಂಡೂರು ರೈತ ಹೋರಾಟದ ಕುರಿತಾಗಿ ಚರ್ಚೆಗಳು ನಡೆದವು. ಚರ್ಚೆಯ ಸಂದರ್ಭವನ್ನು ಕಟ್ಟಿಕೊಡಲು ಅವನ್ನು ಮೂಲ ಸ್ವರೂಪದಲ್ಲಿಯೇ ಕೊಡಲಾಗಿದೆ.

೧೯೭೨ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಬಾಚಿಗೊಂಡನಹಳ್ಳಿ ಕೆ. ಚೆನ್ನಬಸವನ ಗೌಡ ಅವರು ಪರಿಷತ್ತಿನ ಕಲಾಪದಲ್ಲಿ ಎಂ.ವೈ. ಘೋರ್ಪಡೆಯವರ ವಿರುದ್ಧ ಆರೋಪಿಸಿದರು. ಅವುಗಳೆಂದರೆ ಒಂದು: ಮ್ಯಾಂಗನೀಸ್ ಅದಿರನ ಪ್ರದೇಶವನ್ನು ಯಾವುದೇ ಕಂಪನಿಗೆ ೧೦ ಚದರ ಮೈಲು ಪ್ರದೇಶಕ್ಕಿಂತ ಹೆಚ್ಚು ಕೊಡಬಾರದೆಂದು ಮೈನಿಂಗ್ ನಿಯಮವಿದೆ. ಈ ಕಾನೂನನ್ನು ಉಲ್ಲಂಘಿಸಿ ರಾಜಮನೆತನ ಎಸ್.ಎಂ. ಆಂಡ್ ಐ.ಒ. ಕಂಪನಿಯು ೨೯ ಚದರ ಮೈಲು ಮ್ಯಾಂಗನೀಸ್ ಅದುರು ಪ್ರದೇಶವನ್ನು ೨೦ ವರ್ಷಗಳ ಅವಧಿಯವರೆಗೆ ಗುತ್ತಿಗೆಗೆ ಪಡೆದಿದೆ. ಎರಡು: ವ್ಯಾಸನ ಕೆರೆಯಲ್ಲಿ ರಾಜಮನೆತನದ ಬೀಡು ಕಬ್ಬಿಣ ಕಾರ್ಖಾನೆಯು ಮೈಸೂರು ವಿದ್ಯುತ್ ಶಕ್ತಿ ಮಂಡಳಿಗೆ ಕೊಡಬೇಕಾಗಿರುವ ೨೭ ಲಕ್ಷ ರೂಪಾಯಿಗಳ ಬಾಕಿಯನ್ನು ರಾಜ್ಯಪಾಲ ಧರ್ಮವೀರರಿಂದ ವಜಾ ಮಾಡಿಸಿಕೊಂಡಿದ್ದಾರೆ. ಮೂರು: ಕುಮಾರಸ್ವಾಮಿ ಇನಾಂ

ಭೂಮಿಯು ಗೇಣಿದಾರರನ್ನು ಬಲತ್ಕಾರವಾಗಿ ಒಕ್ಕಲೆಬ್ಬಸಲಾಗಿದೆ. ಹೊಗೆಸೊಪ್ಪಿನ ಭೂಮಿ ೧೦೦೦ ಎಕರೆಯಲ್ಲಿ ರಾಜಮನೆತನ ಅನುಭವಿಸುತ್ತಿದೆ. ನಾಲ್ಕು: ಶಿವಪುರ ಶಿಕ್ಷಣ ಸಮಿತಿಯ ಜಿಲ್ಲಾ ಮಂಡಳಿಯು ಶಾಲೆಯ ಕಟ್ಟಡವನ್ನು ರೆಸಿಡೆನ್ಸಿಯಲ್ ಶಾಲೆಗಾಗಿ ಒಂದು ರೂಪಾಯಿ ಬಾಡಿಗೆಗೆ ಸರಕಾರದಿಂದ ಪಡೆದಿದೆ.

ಜೂನ್ ೨೬,೧೯೭೨ರಲ್ಲಿ ಎಂ.ವೈ. ಘೋರ್ಪಡೆಯವರು ಕೆ. ಚೆನ್ನಬಸವನ ಗೌಡರು ಮಾಡಿದ ಆರೋಪಗಳಿಗೆ ಪರಿಷತ್ತಿನಲ್ಲಿ ನೇರವಾಗಿ ನಿರ್ದಿಷ್ಟವಾಗಿ ಉತ್ತರ ಕೊಡದೆ ತೇಲಿಕೆಯ ಉತ್ತರ ಕೊಟ್ಟು ವಸ್ತು ಸ್ಥಿತಿಯನ್ನು ಮರೆಮಾಚಿದರು. ಅವರು ಕೊಟ್ಟ ಜಾರಿಕೆ ಉತ್ತರ ಹೀಗಿತ್ತು: "೨೬ ಚದರ ಮೈಲು ಅದುರು ಪ್ರದೇಶವನ್ನು ೧೦ ಚದರ ಮೈಲಿ ವಿಸ್ತೀರ್ಣದ ಪಾಕೆಟ್ಟುಗಳನ್ನಾಗಿ ಮಾಡಿ ಬೇರೆ ಕಂಪನಿಗಳಿಗೆ ಗುತ್ತಿಗೆಗೆ ಕೊಟ್ಟರೆ ಗಣಿ ಉದ್ಯಮಕ್ಕೆ ತೊಂದರೆ ಆಗುತ್ತದೆ. ಕುಮಾರಸ್ವಾಮಿ ದೇವಸ್ಥಾನದ ಬಳಿ ೭೦.೮೦ ಎಕರೆ ಜಮೀನು ತಮ್ಮ ತಂದೆಯ ಧರ್ಮದರ್ಶಿತ್ವದಲ್ಲಿದೆ. ಹೊಗೆಸೊಪ್ಪಿನ ಭೂಮಿಯನ್ನು ಎಸ್. ಎಂ. ಅಂಡ್ ಐ.ಒ. ಕಂಪನಿಗಳು ಕಾರ್ಮಿಕರಿಗಾಗಿ ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ ಗುತ್ತಿಗೆಗೆ ಹಿಡಿಯಲಾಗಿದೆ." ಅಂದು ಕೆ. ಚೆನ್ನಬಸವನಗೌಡರು ನಿರ್ದಿಷ್ಟ ಉತ್ತರಕ್ಕಾಗಿ ಪಟ್ಟುಹಿಡಿದರೂ ಅವರನ್ನು ಬೆಂಬಲಿಸುವವರು ಇರಲಿಲ್ಲ. ಕನ್ನಡದ ಖ್ಯಾತ ಕಾದಂಬರಿಕಾರಿ ಬಸವರಾಜ ಕಟ್ಟಿಮನಿ ಅವರು ೧೯೨೨ರಲ್ಲಿ ವಿಧಾನಪರಿಷತ್ ಸದಸ್ಯರಾಗಿದ್ದರು. ಅವರು ಜೂನ್ ೨೪, ೧೯೭೭ರಂದು ವಿಧಾನಪರಿಷತ್ತಿನಲ್ಲಿ ಹಣಕಾಸು ಮಂತ್ರಿಗಳಾಗಿದ್ದ ಎಂ.ವೈ. ಘೋರ್ಪಡೆ ಅವರನ್ನು ಹೊಗಳುತ್ತಾ, ಹಿಂದಿನ ಹಣಕಾಸು ಮಂತ್ರಿ ರಾಮಕೃಷ್ಣ ಹೆಗಡೆಯವರನ್ನು ತೆಗಳುತ್ತಾ ಮಾತನಾಡಿದರಂತೆ. ಚನ್ನಬಸವನಗೌಡರು ಕಟ್ಟಿಮನಿಯವರನ್ನು ಟೀಕಿಸಿದಾಗ ಅವರು ಅದನ್ನು ಸಮರ್ಥಿಸಿಕೊಂಡರಂತೆ. ಇದನ್ನು ಚನ್ನಬಸವನಗೌಡರು ತಮ್ಮ 'ನಾನೊಬ್ಬ ಸಾರ್ವಜನಿಕ' ಆತ್ಮಕತೆಯಲ್ಲಿ ಬರೆಯುತ್ತಾರೆ. ಸೃಜನಶೀಲ ಸಮಾಜಮುಖಿ ಲೇಖಕರೊಬ್ಬರು ಅಧಿಕಾರಶಾಹಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಂತಹ ವರ್ತನೆ ಅಚ್ಚರಿಯನ್ನುಟ್ಟಿಸುತ್ತದೆ. ಹಾಗಾಗಿ ಅವರ ಆರೋಪಗಳಿಗೆ ತಕ್ಕ ಪ್ರತಿಕ್ರಿಯೆ ಸಿಗಲಿಲ್ಲ. ಮುಂದೆ ೧೯೭೩ರ ಹೋರಾಟಕ್ಕೆ ಈ ಆರೋಪಗಳೂ ಕಾರಣವಾದವು.

**೧೦ ಸೆಪ್ಟಂಬರ್, ೧೯೭೩**

೧೯೭೩ ಸೆಪ್ಟಂಬರ್ ೧೦ ರಂದು ಸೊಂಡೂರಿನಲ್ಲಿ ರೈತ ಚಳುವಳಿ ಪ್ರಾರಂಭವಾಗುತ್ತಲೂ ಅದೇ ದಿನ ವಿಧಾನ ಸಭಾ ಕಲಾಪದಲ್ಲಿ ಕೋಣಂದೂರು ಲಿಂಗಪ್ಪ ಪ್ರಸ್ತಾಪಿಸಿದರು.

**ಕೋಣಂದೂರು ಲಿಂಗಪ್ಪ** – ಮಾನ್ಯ ಅಧ್ಯಕ್ಷರೆ, ಈ ದಿವಸ ರಾಜ್ಯದ ಒಂದು ಭಾಗದಲ್ಲಿ ಬಹಳ ಗಂಭೀರವಾದ ತುರ್ತು ಪರಿಸ್ಥಿತಿಯುಂಟಾಗಿದೆ. ಅದೇನೆಂದರೆ ಆ ಸೊಂಡೂರು ಕ್ಷೇತ್ರದಲ್ಲಿ ಯಾವ ಬಹಿರಂಗ ಸಭೆಗಳನ್ನು.

**ಅಧ್ಯಕ್ಷರು :** ನಾನು ಸರ್ಕಾರದಿಂದ ರಿಪೋರ್ಟನ್ನು ಕಾಲ್ ಫಾರ್ ಮಾಡಿದ್ದೇನೆ. **ಕೋ–ಲಿಂಗಪ್ಪ:** ಅಲ್ಲಿ ಮಾಜಿ ರಾಜಮನೆತನದವರು ಗೂಂಡಾಗಳನ್ನು ಬಿಟ್ಟು ಜನರನ್ನು ಹೊಡೆಸುತ್ತಿದ್ದಾರೆ. ಈಗ ಅಲ್ಲಿ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾದಂತೆ ಕಾಣುತ್ತದೆ..

**ಅಧ್ಯಕ್ಷರು :** ಮಾನ್ಯ ಸದಸ್ಯರು ಈಗೇನು ವಿಚಾರ ಎತ್ತುತ್ತಿದ್ದಾರೆ. ಆ ವಿಷಯದಲ್ಲಿ ಅವರು ಒಂದು ನೋಟಿಸನ್ನು ಕೊಟ್ಟಿಲ್ಲ. ಆದರೆ ಹಾಗೆ ಸಭೆಯಲ್ಲಿ ತಮಗೆ ಮನಸ್ಸಿಗೆ ಬಂದ ವಿಷಯಗಳನ್ನು ಹೇಳಬಹುದೆಂದು ಅವರು ಭಾವಿಸಿದಂತಿದೆ. ಅದುದರಿಂದ ಮಾನ್ಯ ಲಿಂಗಪ್ಪನವರು ದಯಮಾಡಿ ಕುಳಿತುಕೊಳ್ಳಿ.

೧೧ ಸೆಪ್ಟೆಂಬರ್ ೧೯೭೩

**ಕೋ. ಲಿಂಗಪ್ಪ :** ಮಾನ್ಯ ರೆವಿನ್ಯೂ ಮಂತ್ರಿಗಳ ಮೇಲೆ ೩ ದಿನಗಳ ಹಿಂದೆ ಹಕ್ಕು ಬಾಧ್ಯದ ನಿರ್ಣಯವನ್ನು ಕಳುಹಿಸಿದ್ದೆ. ಕಳೆದ ಅದಿವೇಶನದಲ್ಲಿ ಸೊಂಡೂರು ಇನಾಂ ರದ್ದಿಯಾತಿ ಕಾನೂನನ್ನು ಸಭೆಯಲ್ಲಿ ಮಂಡಿಸುತ್ತೇವೆಂದು ಹೇಳಿದರು. ಕಳೆದ ಅಧಿವೇಶನ ಮುಗಿದು ಹೋಯ್ತು. ಇದುವರೆಗೆ ಮಂಡಿಸಲಿಲ್ಲ. ಈ ಸಭೆಯಲ್ಲಿ ತೀರ್ಪುಗಾರರಿಗೆ ಹೇಳಿದ್ದಾರೆ ಹಕ್ಕು ಬಾಧ್ಯತಾ ನಿರ್ಣಯವನ್ನು ಕಳುಹಿಸಿದ್ದೇವೆ ಎಂದು. ಆದರೆ ರೆವಿನ್ಯೂ ಮಂತ್ರಿಗಳು ಏನು ಹೇಳುತ್ತಾರೆ.

**ಕಾಗೋಡುತಿಮ್ಮಪ್ಪ :** ಈ ಒಂದು ಅಧಿವೇಶನದಲ್ಲೇ ಮಸೂದೆಯನ್ನು ಮಂಡಿಸುತ್ತೇವೆ ಎಂದು ಪ್ರಶ್ನೆ ಕೇಳಿದಾಗ ಮಂತ್ರಿಗಳು ಹೇಳಿದರು, ಮತ್ತೊಂದು ಗಮನ ಸೆಳೆಯುವ. ಸೂಚನೆಯಲ್ಲಿ ಪ್ರಸ್ತಾವನೆ ಮಾಡಿದಾಗ ಇದೇ ರೀತಿ ಹೇಳಿದರು. ಆದರೆ ಇದುವರೆಗೂ ಮಂಡಿಸಲಿಲ್ಲ.

**ಹುಚ್ಚು ಮಾಸ್ತಿಗೌಡ :** ಕಳೆದ ಅಧಿವೇಶನದಲ್ಲಿ ನಾನು ಭರವಸೆ ಕೊಟ್ಟಿದ್ದು ನಿಜ. ಆದರೆ ನಾನು ಮಸೂದೆ ಕಾನೂನನ್ನು ತಯಾರು ಮಾಡುವುದರೊಳಗಾಗಿ ಅಧಿವೇಶನ ಆರಂಭವಾದುದರಿಂದ ಮಂಡಿಸುವುದಕ್ಕೆ ಆಗಿರಲಿಲ್ಲ. ಈಗ ತಯಾರಾಗಿದೆ. ಈ ಅಧಿವೇಶನದಲ್ಲಿ ಸಭೆಯ ಮುಂದೆ ತರುತ್ತೇನೆ.

೧೨ ಸೆಪ್ಟಂಬರ್ ೧೯೭೩

ಈ ದಿನ ವಿಧಾನ ಸಭಾಧಿವೇಶನದಲ್ಲಿ ವಿವರವಾಗಿ ಇನಾಂ ರದ್ದಿಯಾತಿ ಮಸೂದೆಯು ಮಂಡಿಸಲ್ಪಟ್ಟಿತು. ಈ ಮಸೂದೆಯಲ್ಲಿ ಸೊಂಡೂರು ಪ್ರದೇಶದ ಎಲ್ಲ ಬಗೆಯ ಇನಾಂ ಗ್ರಾಮಗಳ (ಅವುಗಳು ಒಳಗೊಂಡ ಜಮೀನು, ಸಹಿತ) ರದ್ದಿಯಾತಿ, ತತ್ಸಂಬಂಧೀ ಶಬ್ದಗಳ ವಿವರ ಭೂ ದಾಖಲೆಗಳು, ಶಾಶ್ವತ ಗೇಣಿ ವಕ್ಕಲು, ದೇವದಾಯ ಅಥವಾ ಧರ್ಮಾದಾಯ ವೆನಿಸಿದ ಖಾಸಗಿ ಇನಾಂ, ನಿಗದಿತ ದಿನಾಂಕದೊಳಗೆ ಸತತ ಕನಿಷ್ಟ ೧೨ ವರ್ಷಗಳಿಗೆ ಕಡಿಮೆ ಇಲ್ಲದಂತೆ ಸ್ವತಃ ಸಾಗುವಳಿ ಮಾಡಿದಂತ ಗೇಣಿ ಒಕ್ಕಲನ್ನು ರಕ್ಷಿತ ಗೇಣಿದಾರರೆಂಬ ಪರಿಗಣನೆ, ಧಾರ್ಮಿಕ ಸಂಸ್ಥೆ ಇತ್ಯಾದಿ ಪದಗಳ ವಿವರವೆಲ್ಲ ಒಳಗೊಂಡಂತೆ ಸುದೀರ್ಘವಾಗಿ ಕಂದಾಯ ಮಂತ್ರಿ ಹುಚ್ಚು ಮಾಸ್ತಿಗೌಡರು ಮಂಡಿಸಿದರು.

ಈ ಮಸೂದೆಯನ್ನು ಮಂಡಿಸಿದ ನಂತರ ಸಭಾ ಕಲಾಪವನ್ನುದ್ದೇಶಿಸಿ ಮಾತನಾಡುತ್ತಾ ಹಿಡುವಲಿ ಇಡೀ ರಾಜ್ಯದಲ್ಲಿ ಏಕರೂಪತೆಗೆ ಬರಬೇಕು ಎನ್ನುವುದೇ ಇದರ ಮೂಲ ಉದ್ದೇಶ. ಸೊಂಡೂರು ತಾಲೂಕಿನಲ್ಲಿ ಕೆಲವು ಇನಾಂ ಗ್ರಾಮಗಳನ್ನು ರದ್ದು ಮಡಿದ ಕೂಡಲೆ ಏಕರೂಪದ ಹಿಡುವಳಿ ತರಲೆಂದು ಈ ಮಸೂದೆ ಮಂಡಿಸಿದೆ. ಅಲ್ಲಿ ಒಟ್ಟು ೨೩ ಇನಾಂ ಗ್ರಾಮಗಳ ಪೈಕಿ ೮ ಗ್ರಾಮಗಳು ರಿಲಿಜಿಯಸ್ ಅಂಡ್ ಚಾರಿಟಬಲ್ ಎಂಡೋನ್‌ಮೆಂಟ್ಸ್‌ಗೆ ಸಂಬಂಧಿಸಿದ ಇನಾಂ ಆಗಿ ಅವುಗಳ ವರಮಾನ ಕಾರ್ತೀಕೇಶ್ವರ ಹಾಗೂ ಶ್ರೀ ನರಸಿಂಹಸ್ವಾಮಿ ದೇಗುಲಗಳಿಗೆ ಮುಡಿಪು ಎಂದಿದೆ. ದೇವಸ್ಥಾನದ ಕೆಲಸಗಳನ್ನು ವಂಶಪಾರಂಪರ್ಯವಾಗಿ ಮಾಡಿಕೊಂಡು ಬರಬೇಕೆಂದು ಎಮ್ಮಿ ಹತ್ತಿ, ವಿಠಲನಗರ ಹಾಗೂ ಮುರಾರಿ ಪುರ, ಇತ್ಯಾದಿ ಖಾಸಗಿ ಇನಾಂ ಗ್ರಾಮ (Personal Incom Village) ಗಳು ಇದ್ದು ಈ ಕುರಿತು ಮಸೂದಾ ಕಾನೂನು ಇದು. ಮೈನರ್ ಟೆನೆಂಟುಗಳಾಗಲಿ, ಪ್ರೊಟೆಕ್ಟೆಡ್ ಟೆನೆಂಟುಗಳಾಗಲಿ, ಈ ಗ್ರಾಮಗಳಲ್ಲಿ ಇಲ್ಲದ ಕಾರಣ ಈ ಮೂರು ಗ್ರಾಮದವರಿಗೆ ಯಾವ ವಿಧವಾದ ಹಕ್ಕು ಈವರೆಗೂ ದೊರೆತಿಲ್ಲ, ಅಂತಾಗಿ ಸಣ್ಣ ಜಮೀನು ಕೃಷಿ ಗೇಣಿದಾರರಿಗೆ ಅದರ ಪೂರ್ಣ ಹಕ್ಕು ಕೊಡಬೇಕೆಂದು ಮಸೂದೆಯಲ್ಲಿದೆ. ಅದರೆ ಶಾಶ್ವತ ಗೇಣಿದಾರರಿಗೆ ಭೂಮಿಯ ಮೇಲೆ ಪೂರ್ಣ ಹಕ್ಕು ಕೊಡಬೇಕೆಂದೂ, ಅವರು ಭೂ ಕಂದಾಯದ ೨೦ರಷ್ಟು ಅಕ್ಯುಪೆನ್ಸಿ ಹಣವನ್ನು ಕೊಡಬೇಕೆಂದೂ, ರಕ್ಷಿತ ಗೇಣಿದಾರರು ಭೂ ಕಂದಾಯದ ೫೦ ರಷ್ಟು ಮೊತ್ತ ನೀಡಬೇಕೆಂದೂ, ತಿಳಿಸಲಾಗಿದೆ ಎಂದರು. ಹೀಗೆಯೇ ಜಮೀನುದಾರರು ಕೊಡಬೇಕಾದ ಭೂ ಕಂದಾಯುದ ಮೊತ್ತ, ಅರ್ಚಕ ವರ್ಗದ ಹಕ್ಕು, ಭೂಮಿಯ ವರಮಾನ ಅನುಸರಿಸಿ ಪಡೆಯಬೇಕಾದ ಕಂದಾಯದ ವಿವರಗಳನ್ನು ನೀಡುತ್ತ, ಒಟ್ಟಾರೆ ಈ ಮಸೂದೆ ಸದರಿ ಗ್ರಾಮಗಳ ಗೇಣಿದಾರರಿಗೆ ಹಕ್ಕು ಕೊಡುವ ಅವಕಾಶ ಒದಗಿಸುತ್ತದೆ ಎಂದು ಹೇಳಿ ಸಭೆಯ ಸಮ್ಮತಿಯನ್ನು ತೋರಿದರು.

ಈ ಮಸೂದೆಗೆ ಪ್ರತಿಕ್ರಿಯಿಸಿ ಕಾಗೋಡು ತಿಮ್ಮಪ್ಪನವರು ಈ ಮಸೂದೆ ಕಾನೂನಿನಡಿಯಲ್ಲಿ ಪರ್ಸನಲ್ ಮೈನರ್ ಮತ್ತು ಧರ್ಮ ಸಂಸ್ಥೆಗಳಿಗೆ ಸೇರಿರುವ ಇನಾಂಗಳನ್ನು ರದ್ದು ಮಾಡುವ ಮುಖಾಂತರ ಸೊಂಡೂರಿನ ಭಾಗದಲ್ಲಿ ಬಹುಭಾಗದಿಂದ ಇದ್ದಂಥ ಇನಾಂ, ರದ್ದತಿ ಕ್ರಮ ಜಾರಿಗೆ ಬಂದಂತಾಗುತ್ತದೆ. ಆದರೆ ಇದಕ್ಕೆ ಅನೇಕ ತರಹವಾದ ಅಸ್ವಶಕ್ತಿಗಳು ಇದ್ದುದರಿಂದ ಆ ಭಾಗದಲ್ಲಿ ಇದುವರೆಗೆ ಜಾರಿಗೆ ಬಂದಿರಲಿಲ್ಲ. ಈಗ ಅವುಗಳನ್ನು ದಾಟಿ ಬಂದಿರುವುದು ನಮಗೆ ಸಂತೋಷವಾಗಿದೆ. ಏಕೆಂದರೆ ಈ ಪ್ರದೇಶದಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದ ಕೂಡಲೆ ಈ ಇನಾಂಗಳನ್ನು ರದ್ದು ಮಾಡುವಂತಹ ಕೆಲಸ ಮೊದಲೇ ಆಗಬೇಕಿತ್ತು. ಆದರೆ ಟ್ರಸ್ಟಿಯವರು ಸೊಂಡೂರಿನ ಲ ಗ್ರಾಮಗಳು ಇರುವಂಥ ದೇವಸ್ಥಾನಗಳ ಮೇಲ್ವಿಚಾರಣೆಗೆ ಒಂದು ಟ್ರಸ್ಟ್ ಮಾಡಿಕೊಂಡರು. ಪ್ರೊಕ್ಲಮೇಷನ್ ಆಕ್ಟ್ ಮಾಡಿಕೊಂಡಿದ್ದ ರಿಂದ ಟ್ರಸ್ಟೀಸ್ ಗೆ ಈವೊತ್ತಿನವರೆಗೂ ೩೬ ಸಾವಿರ ರೂಗಳನ್ನು ಕೊಡುತ್ತಾ ಬರಲಾಗಿದೆ. ಅದರೆ ಈತನಕ ಕೂಡ ಅವರು ಇದನ್ನು ಹೇಗೆ ಖರ್ಚು ಮಾಡಿದರು ಎನ್ನುವ ಬಗ್ಗೆ ಲೆಕ್ಕವನ್ನು ಯಾರೂ ಕೇಳಿಲ್ಲ. ಅದರ ಪ್ರಸ್ತಾಪವನ್ನೇ ಮಾಡಿಲ್ಲ. ಈವೊತ್ತು ಈ ಬಗ್ಗೆ ನಾವು ಒಂದು ಕಾನೂನು ಕ್ರಮದಲ್ಲಿ ಜಮೀನನ್ನು ತೆಗೆದುಕೊಳ್ಳುತ್ತಿದ್ದೇವೆ. ಆದುದರಿಂದ ಆ ದೇವಸ್ಥಾನದಲ್ಲಿ ಏನು ಆಸ್ತಿ ಇದೆಯೋ ಅದು ಸಾರ್ವಜನಿಕ ಸ್ವತ್ತು ಎಂದಾಗುತ್ತದೆ. ಎನ್ನುವುದನ್ನು ಘೋಷಿಸಬೇಕು. ಹಿಂದೆ ಮೇಲ್ವಿಚಾರಣೆಗೆ ಒಂದು ಟ್ರಸ್ಟ್ ಮಾಡಿ ಏನೊಂದು ಹೆರಿಡಿಟರಿ ಪದ್ಧತಿ ಇತ್ತೋ ಅದನ್ನು ತೆಗೆದು ಹಾಕಬೇಕು ಎನ್ನುವುದು ನನ್ನವಾದ. ಹಾಗೆಯೇ ಈ ಪ್ರದೇಶದಲ್ಲಿರುವ ಗಂಧದ ಮರ ಮತ್ತು ಖನಿಜ ಸಂಪತ್ತು ಸರ್ಕಾರಕ್ಕೆ ಸೇರಿದ್ದು ಎಂದು ಮಾಡಬೇಕು. ಇನಾಂ ರದ್ದಾದ ಮೇಲೆ ಈ ಗ್ರಾಮಗಳು ಸರ್ಕಾರದ ಸುಪರ್ದಿಗೆ ಬರುತ್ತವೆ. ಹಾಗೆಯೇ ದೇವಸ್ಥಾನಗಳು ಸರ್ಕಾರಕ್ಕೆ ಸೇರುತ್ತವೆ. ಮೇಲ್ವಿಚಾರಣೆ ಜವಾಬ್ದಾರಿ ಆಗ ಸರ್ಕಾರವಾಗುತ್ತದೆಯೇ ಹೊರತು ಮತ್ತಾರೂ ಟ್ರಸ್ಟೀಸ್ ಆಗುವುದಿಲ್ಲ. ಈ ಜಮೀನೆಲ್ಲ ಸರ್ಕಾರಕ್ಕೆ ಸೇರಿದ ಮೇಲೆ ಮತ್ತಾರೂ ಟ್ರಸ್ಟೀಸ್ ಆಗುವುದಿಲ್ಲ. ಟ್ರಸ್ಟೀಸ್ ಹೆಸರಿನಲ್ಲಿ ಅವರು ೩೬ ಸಾವಿರ ರೂ ಪಡೆದು ಖರ್ಚು ಮಾಡುವುದಕ್ಕೆ ಅವಕಾಶವನ್ನು ನೀಡಕೂಡದು. ಶೃಂಗೇರಿ, ಕೆಳದಿ ದೇವಸ್ಥಾನಗಳಿಗೆ ಸಂಬಂಧ ಪಟ್ಟ ಹಾಗೆ ಧರ್ಮದರ್ಶಿಗಳ ಒಂದು ಕಮಿಟಿಯ ವ್ಯವಸ್ಥೆ ಇರುವಂತೆ ಸೊಂಡೂರು ದೇವಸ್ಥಾನ ಗಳಿಗೂ ಬಂದರೆ ನಮ್ಮದೇನೂ ಅಭ್ಯಂತರವಿಲ್ಲ ಸಾರ್ವಜನಿಕ ಹಣವಾದ ೩೬ ಸಾವಿರ ರೂಪಾಯಿಗಳನ್ನು ಖರ್ಚು ಮಾಡುವಾಗ ಅದನ್ನು ಖರ್ಚು ಮಾಡತಕ್ಕ ವಿದಾನವನ್ನು ಮಸೂದೆಯಲ್ಲಿ ಸೂಚಿಸಿ. ಸರ್ಕಾರದ ಮೇಲ್ವಿಚಾರಣೆಯಲ್ಲಿ ಇದನ್ನು ಖರ್ಚು ಮಾಡಬೇಕು" ಎಂದೆಲ್ಲಾ ತಮ್ಮ ಸಲಹೆಗಳನ್ನು ಕೊಟ್ಟರು.

ಸಚಿವ ಶ್ರೀ ಎನ್. ಹುಚ್ಚು ಮಾಸ್ತಿಗೌಡರು, ಕಾಗೋಡು ತಿಮ್ಮಪ್ಪನವರ ಸಲಹೆಗಳನ್ನು ಸ್ವಾಗತಿಸುತ್ತ, ಮಾನ್ಯ ಸಭೆಗೆ ಭರವಸೆ ಕೊಟ್ಟಿರುವ ಹಾಗೆ ಏಕರೂಪವಾದ ಕಾನೂನನ್ನು ಈ ಧಾರ್ಮಿಕ ಸಂಸ್ಥೆಗಳ ವಿಷಯದಲ್ಲಿ ತರಬೇಕಾಗಿತ್ತು. ಸಲಹೆಗಳನ್ನು ಅದರಲ್ಲಿ ಅಳವಡಿಸುವುದಕ್ಕೆ ಸಾಧ್ಯವಾಗಬಹುದೆಂದು ನನ್ನ ಅಭಿಪ್ರಾಯ. ಸದ್ಯ ಸೇರಿಸುವುದಕ್ಕೆ ಸಾಧ್ಯವಿಲ್ಲದೆ ಇರಬಹುದು. ಆದರೂ ಇದನ್ನು ಪರಿಶೀಲನೆ ಮಾಡಬೇಕಾಗಿ ಬರುತ್ತದೆ. ಈಗ ಬಹುಮುಖ್ಯ ಪ್ರಶ್ನೆ ಎಂದರೆ ಇನಾಂದಾರು ಇನಾಂ ರದ್ದಯಾತಿ ಆಗುವುದಕ್ಕೆ ಮುಂಚಿತವಾಗಿ ಇತರರ ಜೊತೆಯಲ್ಲಿ ಕೆಲವು ಒಪ್ಪಂದಗಳನ್ನು ಹಾಗೂ ಕರಾರುಗಳನ್ನು ಮಾಡಿಕೊಂಡಿದ್ದಾರೆ. ಅವು ಊರ್ಜಿತವಾಗಬೇಕೆ ಬೇಡವೇ ಎಂಬುದು. ಅವು ಯಾವ ರೀತಿಯಲ್ಲಿ ಈ ಒಂದು ಕಾನೂನಿನ ಮಿತಿಯಲ್ಲಿ ಬರಬೇಕೆಂಬುದನ್ನು ನಾವು ಯೋಚನೆ ಮಾಡಬೇಕು. ಕಾನೂನು ಮಾಡುವಾಗ ಇದನ್ನು ಕೂಲಂಕಶವಾಗಿ ಚರ್ಚೆ ಮಾಡಿ ಎಲ್ಲೆಲ್ಲಿ ದೋಷಗಳಿವೆಯೋ ಅಲ್ಲಿ ಅವು ಇಲ್ಲದಂತೆ ಮಾಡುವುದಗತ್ಯ. ಈಗಾಗಲೇ ಅವನ್ನು ಪರಿಶೀಲನಾ ಸಮಿತಿಗೆ ಕಳುಹಿಸಿ ಕೊಟ್ಟು ಅಲ್ಲಿ ಚರ್ಚೆ ಮಾಡಿ ಅವುಗಳಲ್ಲಿರುವ ತಪ್ಪುಗಳನ್ನು ತಿದ್ದುವುದಕ್ಕೆ ಪ್ರಯತ್ನ ನಡೆಸಿದ್ದೇವೆ. ಅದೇ ರೀತಿ ಈ ಕಾನೂನನ್ನು ರಾಜ್ಯದಲ್ಲಿ ಜಾರಿಗೆ ತರುವಾಗ ಗೇಣಿದಾರರಿಗೆ ಎಷ್ಟರ ಮಟ್ಟಿಗೆ ಇದರಿಂದ ಪೂರ್ಣ ಲಾಭ ಸಿಗುತ್ತದೆ? ಸರ್ಕಾರಕ್ಕೆ ನೇರವಾಗಿ ವರಮಾನ ಎಷ್ಟು ದೊರಕಬೇಕಾದ್ದು ಇದೆ? ಮತ್ತು ಹಿಂದಿನಿಂದಲೂ ಆಸಕ್ತಿ ಇರುವ ರಾಜಮನೆತದವರಿಗೆ ಇದರಿಂದ ಲಾಭ ಗಳಿಸುವುದನ್ನು ಯಾವ ರೀತಿ ತಪ್ಪಿಸಬೇಕು? ಎಂಬ ಪ್ರಶ್ನೆಗಳು ಇದರಲ್ಲಿ ಅಡಗಿವೆ. ಅಂತಾಗಿ ಈ ಮಸೂದೆಯನ್ನು ಜಂಟಿ ಪರಿಶೀಲನಾ ಸಭೆಗೆ ಕಳುಹಿಸಿ ಅಲ್ಲಿ ಚರ್ಚಿತವಾದ ನಂತರ ಅಂತಿಮ ತೀರ್ಮಾನ ತೆಗೆದುಕೊಳ್ಳುವುದು ಅವಶ್ಯ ಎಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ಈ ಮಸೂದೆಯನ್ನು ಜಂಟಿ ಪರಿಶೀಲನಾ ಸಮಿತಿಗೆ ಕಳುಹಿಸುವುದ ಕ್ಕೊಸ್ಕರ ಈ ಸಭೆಯ ಮುಂದೆ ಇದನ್ನು ಮಂಡಿಸುವುದಕ್ಕೆ ಇಷ್ಟ ಪಡುತ್ತೇನೆ ಎಂದರು. ತದನುಗುಣವಾಗಿ ನಿರ್ಣಯವು ಅಂಗೀಕೃತವಾಯಿತು. ಸದಸ್ಯರ ಜಂಟಿ ಪರಿಶೀಲನಾ ಸಮಿತಿ ಯಲ್ಲಿ ೧೫ ವಿಧಾನ ಸಭಾ ಸದಸ್ಯರು ೫ ವಿಧಾನ ಪರಿಷತ್ ಸದಸ್ಯರು ಇರುವ ಸಮಿತಿಯ ಸದಸ್ಯರ ಹೆಸರುಗಳನ್ನು ಸಭೆಯು ಅನುಮೋದಿಸಿತು.

**೨೦ ಸೆಪ್ಟಂಬರ್ ೧೯೭೩**

ಶೂನ್ಯ ವೇಳೆಯಲ್ಲಿ ಪ್ರಶ್ನೆ ಎತ್ತಿದ ಕೋಣಂದೂರು ಲಿಂಗಪ್ಪ "ಸೆಪ್ಟಂಬರ್ ೧೦ ರಿಂದ ಸೊಂಡೂರಿನಲ್ಲಿ ರೈತರ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ ಈವರೆಗೆ ೨೭೪ ಮಂದಿ ದಸ್ತಗಿರಿಯಾಗಿದ್ದಾರೆ. ಅಲ್ಲಿನ ರಾಜಮನೆತನದವರು ಕುಮಾರಸ್ವಾಮಿ ದೇವಾಲಯದ ಹೆಸರಿನ್ಲಲಿ ೮೦೦೦ ಎಕರೆ ಭೂಮಿಯನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ. ದೇವಾಲಯದ ಆಡಳಿತಕ್ಕಾಗಿ ಸರ್ಕಾರದಿಂದ ವಾರ್ಷಿಕ ೩೯,೦೦೦ ರೂಗಳನ್ನು ಪಡೆಯುತ್ತಿದ್ದಾರೆ. ಬೇಟೆಯಾಡುವುದಕ್ಕೆಂದು ೨೦೦೦ ಎಕರೆ ಕಾಡು ತಮ್ಮ ವಶದಲ್ಲಿ ಹೊಂದಿರುವುದು ಸ್ವತಂತ್ರ ರಾಷ್ಟ್ರದಲ್ಲಿ ತರವಲ್ಲ. ರೈತರಿಗೆ ಸಿಗಬೇಕಾಗಿದ್ದ ಭೂಮಿಯಲ್ಲಿ ರಾತ್ರೋ ರಾತ್ರಿ ತೋಟಗಾರಿಕೆಯ ಪ್ರಯತ್ನ ನಡೆದಿದೆ ಎಂದು ತಿಳಿಸಿ ಸರಕಾರದಿಂದ ಖಚಿತ ಹೇಳಿಕೆ ಕೋರಿದರು.

ಈ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ದೇವರಾಜ ಅರಸು "ಅವರು ಹೇಳುತ್ತಿರುವುದರಲ್ಲಿ ಸತ್ಯಕ್ಕೆ ದೂರವಾದ ಅಂಶಗಳಿವೆ. ಅದು ಎಷ್ಟು ಸರಿ? ಎಷ್ಟು ಸ್ವಂತದ ಆಸ್ತಿ ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ. ನಮ್ಮ ಸ್ನೇಹಿತರು ಚಳುವಳಿಗೆ ತಪ್ಪು ಸ್ಥಳವನ್ನು ಆರಿಸಿಕೊಂಡಿದ್ದಾರೆ, ಒಂದು ವೇಳೆ ಸರಕಾರದ ಭೂಮಿ ಎಂದಾದರೆ ಅದನ್ನು ನಾನು ವಶಕ್ಕೆ ತೆಗೆದುಕೊಳ್ಳುವುದು ಖಂಡಿತ. ಈಗಾಗಲೇ ನಾನು ವಾಗ್ದಾನ ನೀಡಿದಂತೆ ಸೊಂಡೂರು ಇನಾಂ ರದ್ದತಿ ಮಸೂದೆ ಸಭೆಯ ಮುಂದಿದೆ" ಸದಸ್ಯರ ಬೇಡಿಕೆಗಳ ಬಗ್ಗೆ ತಾವು ಸೊಂಡೂರು ಚಳವಳಿಗೆ ಪೂರಕವಾದ ಹೇಳಿಕೆಯೊಂದನ್ನು ಕೂಡಲೇ ನೀಡಲಿರುವುದಾಗಿ ತಿಳಿಸಿದರು.

**ಸೆಪ್ಟಂಬರ್ ೨೧.೧೯೭೩**

ಸೋಷಲಿಸ್ಟ್ ಪಾರ್ಟಿಯ ಕೋಣಂದೂರು ಲಿಂಗಪ್ಪ ಅವರಿಗೂ ಹಣಕಾಸು ಮಂತ್ರಿ ಶ್ರೀ ಘೋರ್ಪಡೆ ಅವರಿಗೂ ಮಾತಿನ ಚಕಮಕಿ ನಡೆಯಿತು. ರಾಜ್ಯದ ತಲಾ ವರಮಾನ ವರ್ಷಕ್ಕೆ (ಸರಾಸರಿ) ೫೧೫ ರೂಪಾಯಿ ಬಂದರೆ, ದಿನಕ್ಕೆ ಒಂದೂವರೆ ರೂಪಾಯಿ ಆಯಿತೆಂದು ವಾದ. ಇಲ್ಲಿ ಅದು ದಿನಕ್ಕೆ ಮುವತ್ತೈದು ಪೈಸೆಗೂ ಕಡಿಮೆ.. ಎನ್ನುತ್ತ 'ಬೇಕಿದ್ದರೆ ನಿಮ್ಮ ಸೊಂಡೂರಿಗೇ ಹೋಗಿ ಜನರನ್ನು ಕೇಳಿ" ಎಂದು ಘೋರ್ಪಡೆಯವರಿಗೆ ಹೇಳಿದರು. ಆಗ ಘೋರ್ಪಡೆಯವರು 'ಸೊಂಡೂರು ವಿಚಾರ ಹಾಗೆಲ್ಲಾ ಲಘುವಾಗಿ ಮಾತಾಡೋದು ಸರಿಯಲ್ಲಿ. ಅಲ್ಲಿನ ಜನರಿಗೆ ಉದ್ಯೋಗ ಇದೆ. ಅದಕ್ಕೆ ನಿಮ್ಮ ಚಳವಳಿಗೆ ತೊಂದರೆ ಆಗಿರೋದು' (ಒಂದಷ್ಟು ಸಭೆ ಮೌನ). ನಂತರ ಅವರೇ ಮುಂದುವರಿದು ಶ್ರೀ ಲಿಂಗಪ್ಪ ಅವರಿಗೆ ಎಲ್ಲಿ ನೋಡಿದರೂ ಸೊಂಡೂರೇ ಕಾಣುತ್ತೆ. ಆದರೆ ಆ ಜನ ಇವರ ಮಾರ್ಗದರ್ಶನಕ್ಕೆ ಸಿದ್ಧವಾಗಿಲ್ಲ" ಎಂದರು. ಕೋಣಂದೂರು ಲಿಂಗಪ್ಪ ಮತ್ತೇನನ್ನೋ ಪ್ರತಿಕ್ರಿಯಿಸುವ ಹೊತ್ತಿಗೆ ಅನೇಕರ ಪ್ರಶ್ನೆ: 'ಸರ್ಕಾರಿ ನೌಕರರಿಗೆ ಮೂರುವರೆ ಕೋಟಿ ಕೊಟ್ಟಿದ್ದೀರಿ ರೈತರಿಗೇನು ಕೊಟ್ಟೀದ್ದೀರಿ?' ಘೋರ್ಪಡೆಯವರು ಸಿಟ್ಟಿನಿಂದ 'ಅಭಾವ ಪರಿಹಾರಕ್ಕೆ ೪೪ ಕೋಟಿ ರೂಗಳನ್ನು ವೆಚ್ಚ ಮಾಡಲಿಲ್ಲವೇ?' ಎನ್ನುತ್ತಲೂ ಚರ್ಚೆ ಬೇರೆಯ ಸ್ವರೂಪವನ್ನು ಪಡೆಯಿತು.

**ಸೆಪ್ಟಂಬರ್ ೨೮.೧೯೭೩**

**ಕೋಣಂದೂರು ಲಿಂಗಪ್ಪ :** ಅಧ್ಯಕ್ಷರೇ ಕಳೆದ ಒಂದು ವಾರದ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಸೊಂಡೂರಿನ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇನೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಪ್ರತಿಬಾರಿಯೂ ನಾವು ಹೇಳಿದಾಗಲೆಲ್ಲ. ಹೇಳಿಕೆ ಕೋಡುತ್ತೇವೆ. ಎಂದು ಹೇಳುತ್ತಿದ್ದಾರೆ. ಅದರ ಅರ್ಥ ನಮಗೆ ಗೊತ್ತಾಗುತ್ತಿಲ್ಲ.

**ಅಧ್ಯಕ್ಷರು :** ಮುಖ್ಯಮಂತ್ರಿಗಳು ಬರಲಿ ವಿಚಾರಿಸೋಣ

**ಕೋಣಂದೂರು ಲಿಂಗಪ್ಪ :** ನೋ... ನೋ...

**ಅಧ್ಯಕ್ಷರು :** ಇದೇನು ಇದು ತಾವು ಚಿಕ್ಕ ಮಕ್ಕಳು ಕೇಳಿದ ಹಾಗೆ ಕೇಳುತ್ತಿದ್ದೀರಲ್ಲ

**ಬಿ.ಪುಟ್ಟಸ್ವಾಮಯ್ಯ :** ಇಲ್ಲಿ ಮಂತ್ರಿಗಳು ಇಲ್ಲದೆ ಹೋದರೆ ನಾವು ದೇವರಿಗೆ ಹೇಳೋಣವೆ ಯಾರಿಗೆ ಹೇಳೋಣ ತಾವೇ ಹೇಳಿ. ಅವರನ್ನು ಕರೆ ಕಳುಹಿಸಿ (೪ ಜನ ಸದಸ್ಯರು ಎದ್ದು ಇದೇ ಮಾತನ್ನು ಪುನರುಚ್ಚರಿಸಿದರು)

**ಅಧ್ಯಕ್ಷರು :** ತಾವು ಹೀಗೆ ೩-೪ ಜನ ಎದ್ದು ಮಾತನಾಡಿದರೆ ನನಗೆ ಏನೂ ಅರ್ಥವಾಗುವುದಿಲ್ಲ.

**ಬಿ.ಪುಟ್ಟಸ್ವಾಮಯ್ಯ :** ಸಭೆ ನಡೆಯುವಾಗ ಮಂತ್ರಿಗಳು ಇರಬೇಕಾದುದು ಅಗತ್ಯ ಅಲ್ಲವೇ?

**ಅಧ್ಯಕ್ಷರು :** ನಾನು ನಿಂತಿರುವಾಗ ಆದರೂ ತಾವು ಕುಳಿತುಕೊಳ್ಳಿ. ಮಂತ್ರಿಗಳು ಬರಲಿ ನಾನು ಅವರನ್ನು ಕೇಳಿ ನಿಮಗೆ ಹೇಳುತ್ತೇನೆ.

**ಕೋಣಂದೂರು ಲಿಂಗಪ್ಪ :** ಮಾನ್ಯ ಮಂತ್ರಿಗಳು ಒಂದು ವಾರದ ಹಿಂದೆ ನಾವು ಪ್ರಸ್ತಾಪ ಮಾಡಿದಾಗಲೆಲ್ಲಾ ನಾಳೆ ಸ್ಟೇಟ್ ಮೆಂಟ್ ಕೊಡುತ್ತೇನೆ ಎಂದು ಹೇಳುತ್ತಿರುತ್ತಾರೆ. ಅರ್ಥ ಮಂತ್ರಿ ಶ್ರೀ ಘೋರ್ಪಡೆಯವರನ್ನು ರಕ್ಷಣೆ ಮಾಡುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆಯೇ? ಅದೇ ರೀತಿಯ ಉದ್ದೇಶವಿರಬೇಕು. ಈ ಸರ್ಕಾರ ಮಾಜಿ ರಾಜ ಮಹಾರಾಜರುಗಳನ್ನು ಸಂರಕ್ಷಣೆ ಮಾಡುವ ಪಟ್ಟಭದ್ರ ಹಿತಗಳನ್ನು ರಕ್ಷಣೆ ಮಾಡುವ ಗುರಾಣಿ ಎಂದು ನಾನು ಹೇಳುತ್ತಿದ್ದೇನೆ.

(ಕಲಾಪಕ್ಕೆ ಮುಖ್ಯಮಂತ್ರಿ ದೇವರಾಜ ಅರಸು ಅವರು ಬರುತ್ತಾರೆ.)

**ಕೋಣಂದೂರು ಲಿಂಗಪ್ಪ:** ಈಗ ಮುಖ್ಯಮಂತ್ರಿಗಳು ಬಂದಿದ್ದಾರೆ. ಸೊಂಡೂರಿನ ಬಗ್ಗೆ ಅವರು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದರು. ಅದನ್ನು ಯಾವಾಗ ಮಾಡುತ್ತಾರೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ ಎಂದರು. ಮುಖ್ಯಮಂತ್ರಿಗಳು ಅದಕ್ಕೆ ಉತ್ತರವಾಗಿ ಸ್ಟೇಟ್‌ಮೆಂಟನ್ನು ನೀಡಿದರು. ಈ ಹೇಳಿಕೆ ಹೋರಾಟದ ಕೆಲವು ಸಮಸ್ಯೆಗಳನ್ನು ಮಾತ್ರ ಕೇಂದ್ರೀಕರಿ ಸಿತ್ತು. ಹೊರನೋಟಕ್ಕೆ ಅರ್ಥ ಮಂತ್ರಿಗಳನ್ನು ರಕ್ಷಿಸುತ್ತಿದ್ದಾರೆ ಎನ್ನುವುದು ಈ ಸ್ಟೇಟ್‌ಮೆಂಟಿನಿಂದ ಕಾಣುತ್ತಿತ್ತು. (ಈ ಸ್ಟೇಟ್‌ಮೆಂಟಿನ ಪೂರ್ಣ ಭಾಗವನ್ನು ಹೋರಾಟದ ೪೬ ದಿನಗಳು ಭಾಗದಲ್ಲಿ ವಿವರಿಸಲಾಗಿದೆ.)

ಈ ಸ್ಟೇಟ್‌ಮೆಂಟಿಗೆ ಪ್ರತಿಕ್ರಿಯಿಸಿದ ಕಾಗೋಡು ತಿಮ್ಮಪ್ಪನವರು ಮಾತನಾಡಿ ಸೊಂಡೂರಿನ ಇನಾಂ ಅನ್ನು ರದ್ದು ಮಾಡುವುದಕ್ಕಾಗಿ ಮಸೂದೆಯನ್ನು ತಂದ ಬಗ್ಗೆ ನಾವು ತಮಗೆ ಕೃತಜ್ಞತೆಯನ್ನು ಅರ್ಪಿಸಿದ್ದೆವು. ಅದನ್ನು ಆದಷ್ಟು ಬೇಗ ಮಂಜೂರಾತಿ ಬರುವಂತೆ ಮಾಡಬೇಕು. ಜೊತೆಗೆ ಅಲ್ಲಿನ ಅರಣ್ಯ ಪ್ರದೇಶವನ್ನು ಸರ್ಕಾರಕ್ಕೆ ಬಿಟ್ಟು ಕೊಟ್ಟಿದ್ದಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಸರ್ಕಾರ ಅದನ್ನು ಅರಣ್ಯ ಇಲಾಖೆಯಿಂದ ಕೂಡಲೇ ವಶಪಡಿಸಿ ಕೊಳ್ಳಬೇಕು. ಜೊತೆಗೆ ಸಂಬಂಧಪಟ್ಟ ಭೂಮಿಯಲ್ಲಿ ಇನ್ನೂ ಆರ್ಟ್‌ಕಲ್ಚರ್ ಫಾರಂ ಅನ್ನು ಮಾಡುವ ನಿರ್ಣಯ ಆಗಿಲ್ಲ ಎಂದು ಹೇಳಿದ್ದಾರೆ. ಇದನ್ನು ಸರ್ಕಾರಕ್ಕೆ ತೆಗೆದುಕೊಳ್ಳುವ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಒಂದು ತೀರ್ಮಾನವನ್ನು ಕಂಡುಹಿಡಿಯುತ್ತೇವೆಂದೂ ಅವರು ಹೇಳಿದ್ದಾರೆ. ಅವರು ಆ ಸ್ಥಳಕ್ಕೆ ಹೋಗುವ ಸಂದರ್ಭದಲ್ಲಿ ನನ್ನನ್ನು ಕೂಡ ಬನ್ನಿ ಎಂದು ಹೇಳಿದ್ದಾರೆ. ಅದನ್ನು ಅವರೂ ಕೂಡ ನಡೆಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಎಂದರು.

ಮುಖ್ಯಮಂತ್ರಿಗಳ ಹೇಳಿಕೆಯಲ್ಲಿ ಪರಿಹಾರದ ಸೂಚನೆಗಳಿಲ್ಲ ಎಂದು ಚಳವಳಿಗಾರರು ಸೊಂಡೂರಿನಲ್ಲಿ ಪ್ರತಿಕ್ರಿಯೆ ನೀಡಿದರು. ಆದರೂ ಸೊಂಡೂರು ಚಳುವಳಿಗೆ ಪೂರಕವಾದ ಅನೇಕ ಅಂಶಗಳಿಗೆ ಈ ವ್ಯಾಖ್ಯಾನ ಬೆಳಕು ಚೆಲ್ಲಿತ್ತು. ಸರ್ಕಾರ ಸೊಂಡೂರು ಬಗೆಗೆ ಗಮನ ಹರಿಸುತ್ತಿದೆ ಎನ್ನುವುದು ತಡವಾಗಿಯಾದರೂ ಮನಗಾಣಿಸಿತು.

ಇಲ್ಲಿಯ ಚರ್ಚೆಗಳನ್ನು ಗಮನಿಸಿದರೆ ವಿಧಾನಸಭಾ ಕಲಾಪಗಳಲ್ಲಿಯೂ ಒಂದು ಹೋರಾಟ ನಡೆದಂತೆ ಕಾಣುತ್ತದೆ. ೧೯೭೨ರಲ್ಲಿ ಬಾಚಿಗೊಂಡನಹಳ್ಳಿಯ ಕೆ. ಚೆನ್ನ ಬಸವನ ಗೌಡರು ಗಂಭೀರವಾಗಿ ಆರೋಪಿಸಿದರು. ಆದರೆ ಎಂ.ವೈ. ಘೋರ್ಪಡೆಯವರು ತೇಲಿಕೆಯ ಉತ್ತರ ಕೊಟ್ಟು ವಿಷಯಾಂತರ ಮಾಡಿದ್ದರು. ನಿರ್ದಿಷ್ಟ ಉತ್ತರಕ್ಕಾಗಿ ಗೌಡರೊಂದಿಗೆ ಯಾರೊಬ್ಬರೂ ಮಾತೆತ್ತಲಿಲ್ಲ. ಬಸವರಾಜ ಕಟ್ಟಿಮನಿ ಅವರಂತಹ ಗಂಭೀರ ಕಾದಂಬರಿ ಕಾರರು ಎಂ.ವೈ. ಘೋರ್ಪಡೆಯವರನ್ನು ಹೊಗಳುತ್ತ ಸಮರ್ಥಿಕೊಳ್ಳುತ್ತಾರೆ. ಇದು ಒಬ್ಬ ಲೇಖಕನಿಗಿರುವ ಸಾಮಾಜಿಕ ಬದ್ಧತೆಯನ್ನೇ ಪ್ರಶ್ನಾರ್ಥಕಗೊಳಿಸುತ್ತದೆ. ಕಾರಣ ಆಳುವ ಸರ್ಕಾರದ ಪ್ರಾಬಲ್ಯ. ಎಂ.ವೈ. ಘೋರ್ಪಡೆಯವರು ಅರ್ಥ ಸಚಿವರಾಗಿದ್ದರು. ಅಂತೆಯೇ ಕೇಂದ್ರ ಸರ್ಕಾರದ ಇಂದಿರಾಗಾಂಧಿಯವರೊಂದಿಗೆ ಉತ್ತಮ ಸಂಬಂಧವಿರಿಸಿಕೊಂಡಿದ್ದರು. ಈ ಮುಂಚೆಯೂ ಇಂತಹ ಪ್ರಶ್ನೆಗಳು ಎದ್ದಾಗಲೂ ಅದರ ಬಗಗೆ ಯಾರೂ ತಲೆಕೆಡಿಸಿಕೊಂಡಿರಲಿಲ್ಲ. ಪ್ರಭುತ್ವವು ತನ್ನನ್ನು ತಾನು ಸುಭದ್ರವಾಗಿರಿಸಿಕೊಳ್ಳಲು ಇಂತಹ ವ್ಯವಸ್ಥೆಯನ್ನು ರೂಪಿಸಿಕೊಂಡಿರುತ್ತದದೆ. ಪ್ರಭುತ್ವಕ್ಕೆ ಚ್ಯುತಿ ಬಂದಾಗಲೆಲ್ಲಾ ಆ ವ್ಯವಸ್ಥೆಗೆ ಜೀವಂತಿಕೆ ಬರುತ್ತದೆ.

ಇಲ್ಲಿಯ ಕಲಾಪಗಳನ್ನು ನೋಡಿದರೆ ಮುಖ್ಯಮಂತ್ರಿಗಳ ಗೈರು ಹಾಜರಿಯೇ ಹೆಚ್ಚು. ದೇವರಾಜ ಅರಸು ಸೊಂಡೂರು ಬಗೆಗಿನ ಚರ್ಚೆಯಲ್ಲಿ ತೀವ್ರವಾಗಿ ಭಾಗವಹಿಸಲಿಲ್ಲ. ಅವರ ಪ್ರತಿಕ್ರಿಯೆಯೂ ಮೆದುವಾಗಿತ್ತು. ಅಂತೆಯೇ ಚಳುವಳಿಗೆ ಆಯ್ಕೆ ಮಾಡಿಕೊಂಡ ಸ್ಥಳವೇ ಸರಿಯಾದುದಲ್ಲ ಎಂದಿದ್ದರು? ಹೆಚ್ಚು ಕಡಿಮೆ ೮೦೦೦ ಸಾವಿರ ಎಕರೆಗಳ ಇನಾಂ ಭೂಮಿಯನ್ನು ಇರಿಸಿಕೊಂಡ ರಾಜವಂಶದೆದುರು ಚಳವಳಿ ಮಾಡಿದ್ದು ಅರಸರಿಗೆ ತಪ್ಪು ಸ್ಥಳವಾಗಿತ್ತು. ಭೂಮಿಯ ಬಗ್ಗೆ ತೀವ್ರ ಆಸ್ಕತಿಯನ್ನು ಇರಿಸಿಕೊಂಡು ರೈತಪರವಾಗಿದ್ದ ಅರಸರು ಹೀಗೇಕೆ ಪ್ರತಿಕ್ರಿಯಿಸಿದರು? ಅವರಿಗಿದ್ದ ಒತ್ತಡಗಳೇನು? ಭೂ ಸುಧಾರಣೆಯ ಹರಿಕಾರರೆಂದು ಹೇಳುವ ಹೊತ್ತಿಗೆ ಸೊಂಡೂರಿನ ಭೂಮಿ ವಿಷಯವಾಗಿ ಅವರು ತಾಳಿದ ನಿಲುವೇನು? ಇಂತಹ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ. ಇನ್ನು ಕಲಾಪಗಳಲ್ಲಿ ಕಾಗೋಡು ತಿಮ್ಮಪ್ಪ, ಕೋಣಂದೂರು ಲಿಂಗಪ್ಪನವರು ಮಾತ್ರ ಸರ್ಕಾರದ ಮೇಲೆ ಒತ್ತಡ ತರಲು ಪ್ರಯತ್ನಿಸಿದರು. ಆಗಲೇ ಸೊರಬ ಕ್ಷೇತ್ರದಲ್ಲಿ ಸೋಷಲಿಸ್ಟ್ ಪಾರ್ಟಿಯಿಂದ ಗೆದ್ದ ಎಸ್. ಬಂಗಾರಪ್ಪ ಚರ್ಚೆಯಲ್ಲಿ ಧ್ವನಿ ಎತ್ತಲಿಲ್ಲ. ಇವರ ಮೌನದ ಅರ್ಥವೇನು? ಯಾಕಾಗಿ ಸುಮ್ಮನಿದ್ದರು ಎನ್ನುವ ಅನುಮಾನಗಳು ಕಾಡುತ್ತವೆ. ಇಡಿಯಾದ ಚರ್ಚೆಗಳಲ್ಲಿ ಗಮನಾರ್ಹ ಸಂಗತಿಯೆಂದರೆ ಅರೋಗ್ಯಕರ ಮುಖಾಮುಖಿ ಪಕ್ಷಾತೀತವಾದ ಧೋರಣೆಗಳು, ಸಮಾಜಮುಖಿಯಾಗಿ ಆಗಿನ ಜನಪ್ರತಿನಿಧಿಗಳಿಗಿದ್ದ ಬದ್ಧತೆ.

## ೧೧. ಪತ್ರಿಕೆಗಳು ಹಾಗೂ ಭೂ ಹೋರಾಟ

ಎಲಿಗಾರ ತಮ್ಮಪ್ಪನ ಮಗ ನಾಗರಾಜಪ್ಪ ಪತ್ರಿಕಗಳ ಬಗ್ಗೆ ಹೀಗೆ ಹೇಳುತ್ತಾರೆ. "ಆಗ ಬಳ್ಳಾರಿ ಜಿಲ್ಲೆಯ ಪತ್ರಕರ್ತರೆಲ್ಲದ ರಾಜವಂಶದ ಪರವಾಗಿದ್ದರು. ಯಾರೂ ರಾಜರ ವಿರುದ್ಧವಾಗಿ ಬರೆಯುವಂತಹ ಸ್ಥಿತಿ ಇರಲಿಲ್ಲ. ಚಳವಳಿ ನಡೆಯುವಾಗ ನಾನು ಬಿ.ಎಸ್ಸಿ ಓದುತ್ತಿದ್ದ ಹುಡುಗ. ಎರಡು ದಿನಕ್ಕೊಮ್ಮೆ ಚಳವಳಿ ನಡೆದ ವರದಿಯನ್ನು ನಾನೇ ಸ್ವತಃ ಬೆಂಗಳೂರಿಗೆ ಹೋಗಿ ಪತ್ರಿಕ ಕಛೇರಿಗಳಿಗೆ ತಲುಪಿಸುತ್ತಿದ್ದೆ. ಆಗ ವರದಿಗಳು ಪ್ರಕಟವಾಗುತ್ತಿದ್ದವು" ಚಳವಳಿಗಾರರಿಗೆ ಚಳವಳಿಯ ಸುದ್ದಿ ವರದಿಯಾಗಬೇಕು, ರಾಜ್ಯ ದಾದ್ಯಂತ ಪ್ರಜ್ಞಾವಂತ ಸಮುದಾಯಕ್ಕೆ ತಿಳಿಯಬೇಕೆಂಬ ಜಾಗ್ರತೆ ಇತ್ತು. ದಿನಪತ್ರಿಕೆಗಳ ವರದಿಯನ್ನು ನೋಡಿದರೆ ಪರ ವಿರೋಧಗಳ ಮಧ್ಯೆಯೂ ಸುದ್ದಿಯನ್ನು ನಿಷ್ಠೆಯಿಂದ ಪ್ರಕಟಿಸುವುದು ಮುಖ್ಯವಾಗಿತ್ತು. ರಾಜ್ಯಮಟ್ಟದ ದಿನಪತ್ರಿಕೆಗಳಿಗೂ, ಸ್ಥಳೀಯ ದಿನ ಪತ್ರಿಕೆಗಳಿಗೂ ಭಿನ್ನ ದಾರಿಗಳಿದ್ದವು. ಹುಬ್ಬಳ್ಳಿಯಿಂದ ಬರುತ್ತಿದ್ದ 'ಪ್ರಪಂಚ' ಪತ್ರಿಕೆಯಲ್ಲಿ ಓದುಗರು ಕೇಳಿದ ಒಂದು ಪ್ರಶ್ನೆಯಿದೆ. "ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಪತ್ರಿಕೆಗಳೇಕೆ ಸೊಂಡೂರು ರಾಜದ ಶೋಷಣೆಯ ಬಗ್ಗೆ ಬರೆಯುವುದಿಲ್ಲ?" : ಅದಕ್ಕೆ ಪಾಟೀಲ ಪುಟ್ಟಪ್ಪನವರ ಉತ್ತರವೆಂದರೆ 'ಗಾಜಿನ ಮನೆಯಲ್ಲಿದ್ದವರು ಇನ್ನೊಂದು ಗಾಜಿನ ಮನೆ ಮೇಲೆ ಕಲ್ಲು ತೂರುವುದಿಲ್ಲ', ಅಂದರೆ ಪ್ರಭುತ್ವವನ್ನು ಪತ್ರಿಕೆಗಳೂ ಪೋಷಿಸುತ್ತಿದ್ದವು. ಚಳವಳಿಯ ಪ್ರಾರಂಭದಿಂದ ಮುಗಿಯುವ ತನಕ 'ವಿಶಾಲ ಕರ್ನಾಟಕ' ವರದಿ ಮಾಡಿತು. ರಾಜ್ಯಮಟ್ಟದ ಪತ್ರಿಕೆಗಳಲ್ಲಿ

ಹೋರಾಟದ ವರದಿ ಮಾಡಿದ್ದು ಮೊದಲು 'ಕನ್ನಡಪ್ರಭ', ಎರಡನೆಯದು 'ಪ್ರಜಾವಾಣಿ', ಸಂಯುಕ್ತ ಕರ್ನಾಟಕವಂತೂ ಚಳುವಳಿಯನ್ನು ವಿರೋಧಿಸುತ್ತಿದ್ದ ಇನ್ನೊಂದು ಮುಖವನ್ನು ವರದಿ ಮಾಡುತ್ತಿತ್ತು.

ಸೊಂಡೂರಿನಲ್ಲಿ ಸೋಷಲಿಸ್ಟ್ ಪಕ್ಷದ ಚಳವಳಿ ಆರಂಭ, ಬೇಡಿಕೆ ಈಡೇರಿಕೆ ಬಗ್ಗೆ ತ್ವರಿತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಪಟೇಲ್ ಆಗ್ರಹ, ಸೊಂಡೂರು ಸತ್ಯಾಗ್ರಹ ವಿಧಾನ ಸಭೆಯಲ್ಲಿ ಪ್ರಸ್ತಾಪ, ಸೊಂಡೂರಿನ ವ್ಯವಹಾರ ಕುರಿತು ಅರಸು ಹೇಳಿಕೆ, ಸತ್ಯಾಗ್ರಹ ನಿಲ್ಲದು ಸೊಂಡೂರು ಸತ್ಯಾಗ್ರಹ ಮುಖ್ಯಮಂತ್ರಿಗಳ ಹೇಳಿಕೆಯಲ್ಲಿ ಪರಿಹಾರ ಸೂತ್ರವಿಲ್ಲ. ಇಂತಹ ಸುದ್ದಿಯನ್ನು ಪ್ರಕಟಿಸಿದ 'ಕನ್ನಡಪ್ರಭ' ಚಳವಳಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿತ್ತು. ಅಂತೆಯೇ ಈ ಸುದ್ದಿಯ ಹಿಂದಿರುವ ಧೋರಣೆ ರೈತ ಪರವಾಗಿತ್ತು. ಚಳವಳಿಯ ನಲವತ್ತಾರು ದಿನಗಳ ವರದಿ ಸಂಪೂರ್ಣವಾಗಿ 'ಕನ್ನಡಪ್ರಭ' ಮತ್ತು 'ವಿಶ್ವವಾಣಿ'ಯಲ್ಲಿ ಮಾತ್ರ ದೊರೆಯುತ್ತದೆ. ಈ ವರದಿಯು ರಾಜ್ಯಮಟ್ಟದ ಚಳವಳಿ ಎನ್ನುವ ವ್ಯಾಪ್ತಿಯನ್ನು ವಿಸ್ತರಿಸುವಂತಿತ್ತು. 'ಪ್ರಜಾವಾಣಿ'ಯೂ ಇದಕ್ಕೆ ಭಿನ್ನವಾಗಿಯೇನೂ ಇರಲಿಲ್ಲ. ಆದರೆ 'ಕನ್ನಡಪ್ರಭ' ಸೂಕ್ಷ್ಮವಾಗಿ ಗಮನಿಸದಷ್ಟು ಈ ಪತ್ರಿಕೆಗೆ ಸಾಧ್ಯವಾಗಲಿಲ್ಲ. ಆದರೆ ವರದಿಯ ಧೋರಣೆ ಮಾತ್ರ ರೈತ ಪರವಾಗಿಯೇ ಇತ್ತು. ಮಾರ್ಚ್ ೨೪.೧೯೭೩ ರಂದು ಸೊಂಡೂರು ಸತ್ಯಾಗ್ರಹದ ಪೂರ್ವ ತಯಾರಿಯಾಗಿ ಬೆಂಗಳೂರಿನಲ್ಲೊಂದು ಮೆರವಣಿಗೆ ನಡೆಯಿತು. ಅಂದು 'ಪ್ರಜಾವಾಣಿ'ಯಲ್ಲಿ ಮೆರವಣಿಗೆಯ ಫೋಟೊದೊಂದಿಗೆ 'ಅಂದು ಕಾಗೋಡು ಇಂದು ಸೊಂಡೂರು'. ಎಂಬ ಶೀರ್ಷಿಕೆಯಡಿ ಸುದ್ದಿಯಾಯಿತು. "ವಿಧಾನಸೌಧದ ಮುಂದೆ ಕಬ್ಬನ್ ಪಾರ್ಕ್‌ನಲ್ಲಿ ಸಮಾವೇಶಗೊಂಡಿದ್ದ ಸತ್ಯಾಗ್ರಹಿಗಳ ಒಂದು ಭಿತ್ತಿಪತ್ರ ಅವರ ಇತಿಹಾಸ ಉದ್ದೇಶವನ್ನು ಪತ್ರಿಬಿಂಬಿಸಿತು. ದೂರದ ಸೊಂಡೂರು ತಾಲ್ಲೂಕಿನಿಂದ ಬಂದಿದ್ದ ರೈತರ ಯೋಗಕ್ಷೇಮ ವಿಚಾರಿಸಲು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸರು ವಿಧಾನಸೌಧದಿಂದ ಕಬ್ಬನ್ ಪಾರ್ಕ್‌ನ ಮರದಡಿಗೆ ಇಳಿದು ಬಂದರು" ಇಂತಹ ಸುದ್ದಿಗಳಲ್ಲಿ ಪ್ರಚೋದನೆಯಾಗಲಿ, ಸೊಂಡೂರು ರೈತರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುವ ಧೋರಣೆಯಾಗಲಿ ಇರಲಿಲ್ಲ. 'ಕನ್ನಡಪ್ರಭ' ಮತ್ತು 'ಪ್ರಜಾವಾಣಿ' ಸುದ್ದಿಯನ್ನು ಪ್ರಕಟಿಸುವಲ್ಲಿ ಆಸಕ್ತಿ ತೋರಿದವು. ಕಾಳಜಿ ವಹಿಸಿದವು. ಆದರೆ ರಕ್ಷಣಾತ್ಮಕ ಆಟವೆಂಬಂತೆ ನಿರ್ಲಿಪ್ತತೆಯನ್ನು ತಾಳಿದವು.

ರಾಜ್ಯಮಟ್ಟದ ದಿನಪತ್ರಿಕೆಗಳಲ್ಲಿ ಚಳವಳಿಯ ಕಡಿಮೆ ಸುದ್ದಿ ಪ್ರಕಟಿಸಿದ್ದೆಂದರೆ 'ಸಂಯುಕ್ತ ಕರ್ನಾಟಕ'. 'ರೈತರ ಚಳುವಳಿಯನ್ನು ವಿರೋಧಿಸಲು ಮನವಿ' 'ಸಮಾಜವಾದಿ ಸತ್ಯಾಗ್ರಹಿಗಳ ಬಂಧನ', 'ನಂದಿಹಳ್ಳಿಯಲ್ಲಿರುವ ಪದವಿಯೋತ್ತರ ತಾಂತ್ರಿಕ ಕೇಂದ್ರ ಸ್ಥಾಪನೆ' 'ಸೊಂಡೂರು ಹೋರಾಟ ನಿಲ್ಲಿಸಲು ಮನವಿ', 'ಸೊಂಡೂರಿನಲ್ಲಿ ಲಾಠಿ ಪ್ರಯೋಗ ಆಗಿಲ್ಲ' ಇಂತಹ ಚಳವಳಿಯ ವರದಿಗಳು ಇಲ್ಲಿನ ರೈತರಲ್ಲಿ ಭಯವನ್ನು ಹುಟ್ಟಿಸುವಂತಿದ್ದವು. ಅಂತೆಯೇ ಚಳವಳಿಯನ್ನು ವಿರೋಧಿಸಲು ಜನರ ಮನಸ್ಥಿತಿಯನ್ನು ಬದಲಾಯಿಸುವ ಧೋರಣೆಯಿತ್ತು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸೊಂಡೂರು ರಾಜರ ಶಿವಪುರ ಪ್ಯಾಲೆಸ್‌ಗೆ ಹೋಗಿ, ಅರಮನೆಯ ಮುಂದಿನ ಕಛೇರಿಯಲ್ಲಿ ಕುಳಿತಾಗ ಅಲ್ಲಿನ ಅಧಿಕಾರಿಯೊಬ್ಬರ ಬಳಿ ಮಾತನಾಡಿದೆ. ಸಂಯುಕ್ತ ಕರ್ನಾಟಕದ ವರ್ಷದ ಕ್ಯಾಲೆಂಡರ್ ಗೋಡೆಯ ಮೇಲಿತ್ತು. ಅದೇ ಪತ್ರಿಕೆಯನ್ನು ಆತ ಓದುತ್ತಿದ್ದ. ಯಾಕೆ 'ಪ್ರಜಾವಾಣಿ', 'ಕನ್ನಡಪ್ರಭ' ಪತ್ರಿಕೆಗಳನ್ನು ಕಛೇರಿಗೆ ತರಿಸುವುದಿಲ್ಲವೇ? ಎಂದು ಕೇಳಿದೆ. ಆತ ಇದು ಹಿಂದಿನ ಕಾಲದಿಂದಲೂ ರಾಜರ ಬಗ್ಗೆ ಗೌರವ ಇಟ್ಟುಕೊಂಡು ಪತ್ರಿಕೆ ರೀ ಇವೆಲ್ಲ ಈಗ ಬಂದೋವು" ಎಂದರು. ಒಂದು ಕಾಲದಲ್ಲಿ ರಾಜರ ಪರ ಬರೆದ ಪತ್ರಿಕೆ ಈಗಲೂ ರಾಜಪರ ಧೋರಣೆಗಳನ್ನು ಹೇಗೆ ವಿಸ್ತರಿಸಿಗೊಳ್ಳುತ್ತಿದೆ ಎಂದು ಸೋಜಿಗವಾಯಿತು.

ಹಾಗೆ ನೋಡಿದರೆ ರಾಜವಂಶದ ಜೊತೆ ಪತ್ರಿಕೆಗಳು ನಿರಂತರವಾಗಿ ಸಂಘರ್ಷ ಮಾಡುತ್ತಲೇ ಬಂದಿವೆ. ೧೯೫೩ರಲ್ಲಿ ಎಂ.ಜಿ. ಕರುಣಾಳ್ ಸಂಪಾದಕತ್ವದ 'ಕರ್ಮಯೋಗಿ' ಬೆಂಗಳೂರಿನಿಂದ ಬರುತ್ತಿತ್ತು. ಆಗ ಯಶವಂತರಾವ್ ಘೋರ್ಪಡೆ ಮತ್ತು ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಸಂಬಂಧ ಕುರಿತು ಬರೆಯಿತು. "ಹನುಮಂತಯ್ಯನವರೇ ನೂತನ ಬಳ್ಳಾರಿ ಜಿಲ್ಲೆಯನ್ನು ಬಂಡವಾಳಗಾರರ ಕೈಯಿಂದ ಕಾಪಾಡಿ" ಎನ್ನುವ ಶೀರ್ಷಿಕೆಯಲ್ಲಿ ಪ್ರಕಟಿಸಿತು. ಅದರ ಒಂದು ಭಾಗ ಹೀಗಿದೆ:

*ಸೊಂಡೂರು ಸಂಸ್ಥಾನವು ಬಳ್ಳಾರಿ ಜಿಲ್ಲೆಯಲ್ಲಿ ವಿಲೀನಿಕರಣದಿಂದ ಮೈಸೂರು ಸೇರಿ ತಪ್ಪೆ.. ಅಲ್ಲಿ ಸೊಂಡೂರು ಜನರಲ್ ಮೈನಿಂಗ್ ಕಂಪನಿ ಎಂಬ ಒಂದು ಸಂಸ್ಥೆ ಬೆಲ್ಜಿಯಂ ಬಂಡವಾಳಗಾರರ ನೇತೃತ್ವದಲ್ಲಿ ನಡೆಯುತ್ತಿದೆ. ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆಯುಳ್ಳ*

*ಅದುರುಗಳು ಇಲ್ಲಿಂದ ಪಾಶ್ಚಾತ್ಯ ದೇಶದ ಕೈಗಾರಿಕಾ ಸಂಸ್ಥೆಗಳಿಗೆ ತಲುಪುತ್ತಿದೆ. ಸುವ್ಯವಸ್ಥಿತವಾದ ಈ ವಿದೇಶಿ ಬಂಡವಾಳಗಾರರ ಸಂಸ್ಥೆಯನ್ನು ತಮ್ಮ ವಶಕ್ಕೆ ಕೊಡುವುದಾದರೆ ೬೦ ಕೋಟಿ ರೂಪಾಯಿ ಕೊಡುತ್ತೇವೆಂದು ಅಮೇರಿಕನ್ನರು ಬೆಲ್ಜಿಯಂಗೆ ಆಸೆ ತೋರಿಸಿದೆ. ಸೊಂಡೂರು ಮಹರಾಜರು ಸುಮಾರು ೩೨ ಚದರ ಮೈಲು ಪ್ರದೇಶವನ್ನು ರಾಯಲ್ಟಿ ಆಧಾರದ ಮೇಲೆ ತಮಗೆ ಕೊಡಿಸಬೇಕೆಂದು ಮೈಸೂರು ಸರ್ಕಾರವನ್ನು ಕೇಳುತ್ತಿದ್ದಾರೆ. ಈ ದೊಡ್ಡ ವ್ಯವಹಾರದ ಕೇಳಿಕೆ ಹೇಳಿಕೆಗಳ ಒಳ ಸ್ವರೂಪವೆಲ್ಲಾ ಏಕಾದಿಪತ್ಯ ವೆಂಬ ಅಕ್ರಮಕ್ಕೆ ಸಹಾನುಭೂತಿ ಕೇಳುವಂತಿದೆ. (ಏಪ್ರಿಲ್ ೧,೧೯೫೩)*

ಈ ವರದಿ ಬಂಡವಾಳಶಾಹಿ ಏಕಾಧಿಪತ್ಯದ ವಿರುದ್ಧ ಬಿಗಿಯಾದ ನಿಲುವು ತಾಳಿದೆ. ಇಂದು ಸಹ ಗಣಿಗಾರಿಕೆಯ ರಾಜ್ಯ ಸರ್ಕಾರವನ್ನು ನಿಯಂತ್ರಿಸುತ್ತಿದೆ. ಬಹುಶಃ ಇಂತಹ ನಿಯಂತ್ರಣ ೫೦ರ ದಶಕದಿಂದ ನಡೆಯುತ್ತ ಬಂದಿದೆ. ಕೆಂಗಲ್ ಹನುಮಂತಯ್ಯನವರಿಂದ ಹಿಡಿದು ಇವತ್ತಿನ ರಾಜಕಾರಣಿಗಳವರೆಗೆ ಗಣಿಗಾರಿಕೆಯೊಂದಿಗೆ ಸಂಬಂಧವಿದೆ. ಈ ಬಗೆಯಲ್ಲಿ ಕರ್ನಾಟಕದ ರಾಜಕೀಯ ಚರಿತ್ರೆಯನ್ನು ಗಣಿಗಾರಿಕೆಯ ಜೊತೆ ಪರಿಶೀಲಿಸುವ ಅಗತ್ಯವಿದೆ.

ಪಾಟೀಲ್ ಪುಟ್ಟಪ್ಪನವರ 'ಪ್ರಪಂಚ' ಹುಬ್ಬಳ್ಳಿಯಿಂದ ಬರುತ್ತಿದ್ದ ಕೋ. ಚನ್ನಬಸಪ್ಪನವರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಬರುತ್ತಿದ್ದ 'ರೈತ' ಮುಂತಾದ ಪತ್ರಿಕೆಗಳು ಸೊಂಡೂರು ರಾಜ ಮನೆತನದ ಬಗೆಗೆ ಬರೆಯುತ್ತ ಬಂದವು. ಜಗಳ ಕಾದವು. ಪತ್ರಿಕಾ ವರದಿಗೆ ಆಡಳಿತ ಸರ್ಕಾರ ಸ್ಪಂದಿಸದಿದ್ದಾಗ ಆಕ್ರೋಶ ವ್ಯಕ್ತವಾಯಿತು. ಸೊಂಡೂರು ಸಂಸ್ಥಾನ ಸ್ವಾತಂತ್ರ ನಂತರವೂ ತನ್ನ ಅಧಿಕಾರವನ್ನು ಚಲಾಯಿಸತೊಡಗಿತು. ಪ್ರಜಾಪ್ರಭುತ್ವ ಸರ್ಕಾರ ಎಂಬ ಹೊತ್ತಲ್ಲೆ ರಾಜಶಾಹಿ ಇಲ್ಲಿತ್ತು. ಇದನ್ನು ಮನಗಾಣಿಸಲು ಪಾಪು ಹಲವು ಬಾರಿ ಬರೆದು ಸುಸ್ತಾದರು. ಒಂದೆರಡು ವರದಿಗಳನ್ನು ನೋಡಬಹುದು.

*ಸೊಂಡೂರು ಮಾಜಿ ದೊರೆ ದೇವಾಲಯದ ಹಣವನ್ನು ಸ್ವಂತಕ್ಕೆ ಬಳಸುತ್ತಿದ್ದಾರೆ ಎನ್ನುವ ಶೀರ್ಷಿಕೆಯಲ್ಲಿ ೧೦ ಸೆಪ್ಟಂಬರ್ ೧೯೬೯ರಲ್ಲಿ ಪ್ರಕಟಿಸಿದ ವರದಿ ಭಾರತವು ಪ್ರಜಾ ರಾಜ್ಯವಾಗಿ ಹನ್ನೆರಡು ವರ್ಷ ಸಂದು ಹೋದರೂ ಚಿಲ್ಲರೆ ರಾಜ ಮಹಾರಾಜರುಗಳ ದರ್ಪ ಇನ್ನೂ ನಿಂತಿಲ್ಲವೆನ್ನುವುದಕ್ಕೆ ಸೊಂಡೂರಿನ ಮಾಜಿ ದೊರೆ ಯಶವಂತರಾವ್ ಘೋರ್ಪಡೆಯವರು ಸಾಕ್ಷಿಯಾಗಿದ್ದರೆ. ಅವರ 'ದರ್ಭಾರಿ' ನಡತೆಯನ್ನು ನೋಡಿ, ಅವರಿನ್ನು ತಾವು ಸೊಂಡೂರಿನ ದೊರೆಗಳಂತೆ ಭಾವಿಸಿದ್ದಾರೆ.*

** ಡಿಸೆಂಬರ್ ೧೮.೧೯೬೯ರಲ್ಲಿ ಪ್ರಕಟವಾದ ವರದಿ "ಜಮೀನುದಾರರು ಜಿಂಕೆಗಳಿಗೆ ಜಾಗ ಸಾಲದೆಂದು ಜನರನ್ನು ಜಮೀನಿನಿಂದ ಓಡಿಸಿ ಅಲ್ಲಿ ಜಿಂಕೆಗಳನ್ನು ಸಾಕಿದಂತ ಉದಾಹರಣೆ ನಿಮಗೆ ಗೊತ್ತೆ? ಉಳುವ ಭೂಮಿಯನ್ನು ಬಿಡಿಸಿ ಆ ಭೂಮಿಯಲ್ಲಿ ಜಮೀನುದಾರರು ಕುರಿ ಸಾಕಿದ್ದನ್ನು ನಂಬುತ್ತೀರಾ? ನಂಬುವುದು ಕಷ್ಟ ಆದರೆ ವಾಸ್ತವವಾಗಿ ಇಂಗ್ಲೆಂಡ್ ಮತ್ತು ಸ್ಕಾಟ್ ಲ್ಯಾಂಡಿನಲ್ಲಿ ಹೀಗೆ ನಡೆಯಿತು ಎಂದು ಬರ್ನಾಡ್ ಷಾ ತಮ್ಮ ಗ್ರಂಥ 'Intelligent womans Guide'ದಲ್ಲಿ ಬರೆಯುತ್ತಾರೆ. ಇಂಗ್ಲೆಂಡಿನ ಭೂ ಸ್ವಾಮಿಗಳಿಗೆ ಜನಗಳಿಗಿಂತಲೂ ಜಿಂಕೆ, ಕುರಿಗಳೇ ಹೆಚ್ಚು ಪ್ರಯೋಜನಕಾರಿಯಾಗಿ ಕಂಡುಬಂದವು. ಹೀಗೆ ಜನಗಳ ಬೆಲೆ ಮೂಕ ಪ್ರಾಣಿಗಳ ಬೆಲೆಗಿಂತ ಅಗ್ಗವಾಗಿತ್ತು. ರೈತರನ್ನು ದೇಶಾಂತರ ಅಟ್ಟಿದ ಜನ ಅಮೇರಿಕಾದಲ್ಲಿ ನೆಲೆಸಿದರು. ಇಂದು ಅವರು ಜಗತ್ತಿನ ಕುಬೇರರು ಎನ್ನುತ್ತಾರೆ.*

*ಷಾ ಹೇಳುವ ಮಾತು ಮಧ್ಯಯುಗದ ಅನಾಗರಿಕ ಜನರ ಕ್ರೂರವರ್ತನೆ, ಇಂದೆಲ್ಲಿ ಅಂಥ ಅನ್ಯಾಯ ನಡೆದೀತು? ಎಂದು ಕೆಲವರು ಭಾವಿಸಬಹುದು. ಅದು ಸಹಜವೂ ಕೂಡ. ಆದರೆ ವಾಸ್ತವದಲ್ಲಿ ಇಂದಿಗೂ ನಮ್ಮ ದೇಶದ ಪ್ರತಿಯೊಂದು ಜಮೀನುದಾರರಲ್ಲೂ ಜಹಗೀರಿಯಲ್ಲೂ ರಾಜರ ಖಾಸಗೀ ಆಸ್ತಿಗಳಲ್ಲೂ ಈ ರೀತಿಯಾಗಿ ಜನರನ್ನು ಭೂಮಿಯಿಂದ ಬಿಟ್ಟು ಓಡಿಸುವ ಉದಾಹರಣೆಗಳಿವೆ. ಅಂಥವರಲ್ಲಿ ಸೊಂಡೂರಿನ ಯಶವಂತರಾವ್ ಘೋರ್ಪಡೆಯವರು ಒಬ್ಬರು.*

ಇಂತಹುದೇ ವರದಿಗಳ ರಾಜವಂಶದ ವಿರುದ್ಧ ಪ್ರಪಂಚದಲ್ಲಿ ಪ್ರಕಟವಾಗುತ್ತಿದ್ದವು. ಈ ವರದಿಗಳ ಧೋರಣೆ ಪ್ರಜಾಪ್ರಭುತ್ವ ಸರ್ಕಾರದಲ್ಲಿ ರಾಜಶಾಹಿಯು ನಿರ್ಮೂಲವಾಗಬೇಕು ಎನ್ನುವುದು; ಆಗ ನಂಬಿದ್ದು ಭೂಮಿ ಎಲ್ಲರಿಗೂ ಸೇರಬೇಕು ಎಂಬ ತತ್ವವನ್ನು 'ದೇವರಿತ್ತ ಧರಣಿಯು ಎಲ್ಲರಿಗೂ ಸೇರಿದೆ. ಯಾರೋಬ್ಬರೂ ಅದರಲ್ಲಿ ಸರ್ವಸ್ವತಂತ್ರ ಅಧಿಕಾರವಿಲ್ಲ ಎಂದು ಒಪ್ಪಿಕೊಂಡ ಅರ್ಥಶಾಸ್ತ್ರಜ್ಞರು. ಸಮಾಜ ಕಲ್ಯಾಣಕಾಂಕ್ಷಿಗಳು ಮಾನವೀಯ ದೃಷ್ಟಿಯುಳ್ಳವರು ಕಾಲ ಕಾಲಕ್ಕೂ ಹೇಳುತ್ತಾ ಬಂದಿದ್ದಾರೆ. ಭೂಮಿಯ ಮೇಲೆ ಎಲ್ಲರಿಗೂ ಸಮನವಾದ ಹಕ್ಕಿದೆ. ಅದನ್ನು ಯಾರೂ ಹೇಗೂ ಕಿತ್ತುಕೊಳ್ಳಕೂಡದು. ಇದೇ ನ್ಯಾಯ; ಇದೇ ಧರ್ಮ; ಇದೇ ಮಾನವೀಯತೆಯೂ ಕೂಡ. ಜಮೀನುದಾರಿ ಪದ್ಧತಿ ತೊಲಗಬೇಕು ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ನವಯುಗವಾಣಿಯನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ' ಎಂದು ಪಾಪುರವರೇ ಬರೆಯುತ್ತಾರೆ. ಮಾನವೀಯ ನೆಲೆಯ ತುಡಿತವಿರುವ ವರೆಲ್ಲ ರಾಜಶಾಹಿಯನ್ನು ವಿರೋಧಿಸಬೇಕಾದ ಒಂದು ಮನಸ್ಥಿತಿಯನ್ನು ಸಿದ್ಧಗೊಳಿಸುವ ಹಾಗೆ ಪತ್ರಿಕೆಗಳು ಕೆಲಸ ಮಾಡುತ್ತಿದ್ದವು.

ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಪಾಪು ಅರವರನ್ನು ಭೇಟಿ ಮಾಡಲಾಯಿತು. ಸೊಂಡೂರು ಮಾಜಿ ದೊರೆಗಳ ಸುದ್ದಿಯ ಪ್ರಸ್ತಾಪಿಸಿದಾದ ಇದ್ದಕ್ಕಿದ್ದಂತೆ 'ಅವ್ರು ಬಿಡ್ರಿ ಸ್ವರ್ಗದಿಂದ ಇಳಿದು ಬಂದ ದೊರೆಗಳಂತೆ ಮಾಡ್ತಿದ್ರು' ಎಂದು ಆಕ್ರೋಶದಿಂದ ಮಾತನಾಡಿದರು. ಅವರ ಬಗ್ಗೆ ನಮ್ಮ 'ಪ್ರಪಂಚದಲ್ಲಿ ಧೈರ್ಯದಿಂದ ನಾನೆ ಮೊದ್ಲು ಬರೆದದ್ದು ಹೇಳೋದೇನಿದೆ ಪತ್ರಿಕೆ ನೋಡಿ' ಎಂದು ಗ್ರಂಥಾಲಯದ ಸಹಾಯಕರನ್ನು ಕರೆದು ಪತ್ರಿಕೆ ತೋರಿಸಲು ಹೇಳಿದರು. ಈ ಇಳಿ ವಯಸ್ಸಿನಲ್ಲಿಯೂ ಅವರ ಸಿಟ್ಟು ಆಕ್ರೋಶ ನೇರವಂತಿಕೆಗೆ ಮುಪ್ಪು ಬಂದಿರಲಿಲ್ಲ.

೧೯೫೫ರಲ್ಲಿ ಸೊಂಡೂರಿನಲ್ಲಿ ನಡೆದ ಉಪ ಚುನಾವಣೆಯಲ್ಲಿ ಎಂ.ವೈ. ಘೋರ್ಪಡೆಯವರಿಗೆ ಕಾಂಗ್ರೇಸ್ ಸೀಟು ದೊರಕಿಸುವ ಪ್ರಯತ್ನ ನಡೆಯಿತು. ಇದನ್ನು ಬೆಂಗಳೂರಿನಿಂದ ಬರುತ್ತಿದ್ದ 'ಜ್ವಾಲಾಮುಖಿ' ಪತ್ರಿಕೆ 'ಸೊಂಡೂರಿನ ರಜ್ವಿಗೆ ಕಾಂಗ್ರೆಸ್ ಟಿಕೆಟ್' ಎಂದು ವರದಿ ಮಾಡಿತು. 'ಹೈದಾರಾಬಾದಿನ ರಜಾಕಾರರ ಚಳುವಳಿಯ ಮುಖಂಡ ಕಾಸಿಂ ರಜ್ವಿ ಪಾಕಿಸ್ತಾನದಲ್ಲಿ ನೆಲೆಸದೆ ಭಾರತದಲ್ಲಿ ನೆಲೆಸಿ ಕಾಂಗ್ರೆಸ್ ಪಕ್ಷ ಸೇರಿದರೆ ಆತನೂ ಸಚಿವನಾಗುತ್ತಿದ್ದ. ತಮ್ಮ ರಾಷ್ಟ್ರ ವಿದ್ರೋಹಿ ಚಟುವಟಿಕೆಗಳಲ್ಲಿ ರಜ್ವಿಯನ್ನು ಮೀರಿಸುವ ಸೊಂಡೂರಿನ ಮಹಾರಾಜ ಯಶವಂತರಾವ್ ಘೋರ್ಪಡೆಯವರ ಪುತ್ರ ಮುರಾರಿರಾವ್ ಘೋರ್ಪಡೆಯವರಿಗೆ ವಿಧಾನ ಸಭೆಗೆ ಟಿಕೆಟ್ ದೊರಕಿಸಲು ಕೆಲವು ಕಾಂಗ್ರೆಸ್ ಮುಖಂಡರು ಪ್ರಯತ್ನಿಸುತ್ತಿದ್ದಾರೆ" ಎಂಬ ವರದಿಯಲ್ಲಿ ಸೊಂಡೂರು ರಾಜರನ್ನು ಕಾಶೀಂರಜ್ವಿಗೆ ಹೋಲಿಸಲಾಗಿದೆ. ರಜಕರರ ಹೆಸರಲ್ಲಿ ಪೈಶಾಚಿಕ ಕೃತ್ಯಗಳಿಗೆ ಹೆಸರಾದ ರಜ್ವಿಯ ರೂಪಕವನ್ನು ಬಳಸುವುದಾದರೆ, ಸೊಂಡೂರಿನ ಮಹಾರಾಜರು ಪ್ರಜೆಗಳನ್ನು ಹೇಗೆ ನಡೆಸಿಕೊಳ್ಳುತ್ತಿರಬಹುದು ಎಂಬ ಪ್ರಶ್ನೆ ಕಾಡುತ್ತದೆ. ಅಥವಾ ಇದು ನೈತಿಕತೆಯ ಅತಿನಿಷ್ಠೆಯಿಂದಾಗಿ ತೆಗಳಿಕೆಯ ಅತಿಗೆ ಹೋಗಿರಬಹುದೇ? ಎನ್ನುವ ಅನುಮಾನಗಳು ಕಾಡುತ್ತವೆ.

ಕೋ.ಚನ್ನಬಸಪ್ಪ ತಮ್ಮ 'ರೈತ' ಪತ್ರಿಕೆಯಲ್ಲಿ ಸೊಂಡೂರು ಮಾಜಿ ರಾಜರ ಅಧಿಕಾರ ದುರುಪಯೋಗದ ಬಗ್ಗೆ ಬರೆಯುತ್ತಿದ್ದರು. ಪಾಪು ಹಾಗೂ ಕೋಚೆಯವರ ಬರಹಗಳು ಸ್ಪರ್ಧೆಗಿಳಿದಂತೆ ನೈತಿಕತೆಯ ಅಧಃಪತನವನ್ನು ದಾಖಲಿಸುತ್ತಿದ್ದವು. ಮೇ ೧೧.೧೯೫೫ರ ಕೋಚೆಯವರ ಒಂದು ವರದಿ ಹೀಗಿದೆ:

ಜತ್ತಿ, ಸೊಂಡೂರಿನ ಮಾಜಿ ದೊರೆಯನ್ನು ಏಕೆ-ಸಹಿಸುತ್ತಾರೆ? ಅದರ ಗುಟ್ಟು ಇಲ್ಲಿದೆ ಎನ್ನುವ ಲೇಖನದಲ್ಲಿ ಕಳೆದ ವಾರ ವಿಧಾನ ಸಭೆಯಲ್ಲಿ ಶ್ರೀಮತಿ ನಾಗರತ್ನಮ್ಮ ಹಿರೇಮಾಠರು ಸೊಂಡೂರು ಕುಮಾರಸ್ವಾಮಿ ದೇವಸ್ಥಾನದ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರ ಕೊಡುತ್ತ ರೆವಿನ್ಯೂ ಮಂತ್ರಿ ಕಡಿದಾಳ ಮಂಜಪ್ಪ. ಹಾಗೂ ಮುಖ್ಯಮಂತ್ರಿ ಜತ್ತಿಯವರು ಸೊಂಡೂರಿನ ಮಾಜಿ ದೊರೆ ಯಶವಂತರಾವ್ ಘೋರ್ಪಡೆಯವರನ್ನು ಎತ್ತಿ ಹಿಡಿದು ಅವರ ಎಲ್ಲ ಘೋರ ಕೃತ್ಯಗಳಿಗೂ ಮನ್ನಣೆಯನ್ನು ಕೊಟ್ಟಿದ್ದಾರೆ. ಸೊಂಡೂರಿನ ಮಾಜಿ ದೊರೆ ದೇವಸ್ಥಾನದ ಅನುವಂಶಿಕ ಟ್ರಸ್ಟಿಯೆಂದೂ. ಅವರು ದೇವಸ್ಥಾನವನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆಂದೂ ಮೇಲುಗಟ್ಟಿದ್ದಾರೆ. ದೊರೆಯ ವಿರುದ್ಧ ಅಸಂಖ್ಯಾತ ಸಾರ್ವಜನಿಕ ದೂರು ಸರ್ಕಾರಕ್ಕೆ ಹೋಗಿದ್ದರೂ ಯಾವ ಪರಾಮರ್ಶೆ ಮಾಡದೆ ಅವರ ಬೆನ್ನು ತಟ್ಟುವ ರಹಸ್ಯವೇನೆಂಬುದು ಈಗ

ಯಾರಿಗಾದರೂ ಸ್ಪಷ್ಟವಾಗುವಂತಿದೆ. ಮುಖ್ಯಮಂತ್ರಿಗಳು ಸೊಂಡೂರು ದೊರೆಯ ಮುಲಾಜಿಗೊಳಗಾಗಿ ಸತ್ಯವನ್ನು ಹೇಗೆ ಮರೆ ಮಾಚುತ್ತಿದ್ದಾರೆ ಎನ್ನುವುದಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನ ಇನ್ನೇನು ಬೇಕು?

ಹೀಗೆ ಕೋಚೆಯವರು ೧೯೫೪ರಲ್ಲಿ ಜತ್ತಿ ಮತ್ತು ಸೊಂಸೂರು ಸಂಸ್ಥಾನದ ಸಂಬಂಧದ ಬಗ್ಗೆ ಬರೆದರು. ಇಲ್ಲಿ ಜನಪರವಾದ ಆಶಯವೊಂದು ನಿಷ್ಠುರವಾಗಿ ಕೆಲಸ ಮಾಡಿದೆ. ಅದೇ ಹೊತ್ತಿನ ದಿನಪತ್ರಿಕೆಗಳನ್ನು ನೋಡಿದರೆ. ಎಲ್ಲವೂ ಸರಿಯಾಗಿದೆ ಎನ್ನುವ ಧೋರಣೆಯನ್ನು ತಾಳುತ್ತಿದ್ದವು. ಆದರೆ ವಾರಪತ್ರಿಕೆ, ಮಾಸಪತ್ರಿಕೆಗಳು ಸಮಾಜದ ಕೊಳಕನ್ನು ಸರಿಪಡಿಸುವಲ್ಲಿ ಚಡಪಡಿಸುತ್ತಿದ್ದವು. ಈ ಮಧ್ಯೆಯೂ ಸರ್ಕಾರದ ಪರ ಬರೆಯುವ ಪತ್ರಿಕೆಗಳು ಇರಲಿಲ್ಲವೆ? ಅಥವಾ ಎಲ್ಲಾ ಪತ್ರಿಕೆಗಳು ನಿಷ್ಠುರತೆಯನ್ನು ಮಾನದಂಡವಾಗಿಸಿಕೊಂಡಿದ್ದವೆ? ಎಂದುಕೊಂಡರೆ ಅಂತಹ ಪತ್ರಿಕೆಗಳೂ ಇದ್ದವು ಆದರೆ ಅವುಗಳು ಓದುಗ ಸಮುದಾಯವನ್ನು ಅಷ್ಟಾಗಿ ಆವರಿಸಿರಲಿಲ್ಲ. ಇದೆ ಹೊತ್ತಿಗೆ ಹೊಸಪೇಟೆಯಿಂದ ಬರುತ್ತಿದ್ದ ಸ್ವತಂತ್ರ ಎಂಬ ಪತ್ರಿಕೆಯೊಂದು ಸೊಂಡೂರು ರಾಜಮನೆತವನ್ನು ವೈಭವಿಕರಿಸಿಯೆ ಬರೆಯುತ್ತಿತ್ತು. ಬಳ್ಳಾರಿಯ ಎಸ್.ಎಂ. ಕೊಟ್ರಯ್ಯ ಎಂಬುವರು ಇದರ ಸಂಪಾದಕರಾಗಿದ್ದರು.

"ಸೊಂಡೂರಿನಲ್ಲಿ ನಡೆದಿರುವ ಈ ಅನ್ಯಾಯ ನಿಲ್ಲಲಿ, ಕರ್ನಾಟಕ ಸರಕಾರ ಇಲ್ಲಿನ ಅಪಚಾರಗಳ ಬಗ್ಗೆ ಗಮನಿಸಲಿ. ಜನತೆ ಹೋರಾಟ ಸಫಲವಾಗಲಿ" ಎಂದು ಬೆಂಗಳೂರಿನ 'ಸಂಗ್ರಾಮ' ಪತ್ರಿಕೆ ವರದಿ ಮಾಡಿತು. ಅಂತೆಯೇ ಮೈಸೂರಿನಿಂದ ಬರುತ್ತಿದ್ದ ಪಿ.ಆರ್. ರಾಮಯ್ಯನವರ ಸಂಪಾದಕತ್ವದ 'ತಾಯಿನಾಡು' ವಾರಪತ್ರಿಕೆ ಬಿ.ಎನ್. ಗುಪ್ತರ 'ಪ್ರಜಾಮತ', 'ಪ್ರಜಾಮಿತ್ರ', 'ಜನವಾಣಿ', 'ಜನಪ್ರಗತಿ', ಪ್ರಾಸಂಗಿಕವಾಗಿ ಸೊಂಡೂರು ರಾಜಮನೆತನದ ಬಗೆಗೆ ಬರೆಯುತ್ತಿದ್ದವು. ಆದರೆ ಸೊಂಡೂರು ರಾಜಮನೆತನವನ್ನೇ ಪ್ರಧಾನವಾಗಿ ಗಮನಿಸುತ್ತಿದ್ದ ಪತ್ರಿಕೆಗಳು ಇದ್ದವು. ಅವುಗಳೆಂದರೆ ಬಳ್ಳಾರಿಯಿಂದ ಬರುತ್ತಿದ್ದ 'ಬುಲೆಟಿನ್', ಬೆಂಗಳೂರಿನ ರಣಧೀರ, ಹುಬ್ಬಳ್ಳಿಯ 'ವಿಶಾಲ ಕರ್ನಾಟಕ'.

ಬೆಂಗಳೂರಿನ ಸಮಾಜವಾದಿ ಪಕ್ಷದ ಮುಖವಾಣಿ ಪತ್ರಿಕೆ 'ರಣಧೀರ'. ಇದರ ಸಂಪಾದಕರು ಎಸ್. ಭಕ್ತವತ್ಸಲ. ಈ ಪತ್ರಿಕೆಯು "ಸೊಂಡೂರು ಮಹಾರಾಜರ ಪ್ರಕರಣ" ಎಂಬ ಸರಣಿ ಲೇಖನಗಳನ್ನು ಪ್ರಕಟಿಸಿತು. ಪತ್ರಿಕೆಯ ಕಾಯಿದೆ ಸಲಹೆಗಾರರು ಕೆ.ಜಿ. ಮಹೇಶ್ವರಪ್ಪ. ಸರಣಿ ಲೇಖನಗಳ ಶೀರ್ಷಿಕೆಗಳು ಹೀಗಿದ್ದವು. "ದೇವನೊಬ್ಬ ನಾಮ ಹಲವು, ದೇವರುಗಳ ಹೆಸರಿನಲ್ಲಿ ದೇಶದ ಸಂಪತ್ತಿನ ಲೂಟಿ" "ಇಂಡಿಕೇಟ್ ಸಮಾಜವಾದಿ ಸೊಂಡೂರು ಮಹಾರಾಜರ ಮೋಘಲ್ ಷಾಹಿ ದೌಲತ್ತು", "ಸೊಂಡೂರು ಮಹಾರಾಜರಿಗೆ ಕೊಂಬಿದೆಯೆ? ಈ ದೇಶದಲ್ಲಿ ಪ್ರಜಾಪ್ರಭುತ್ವವಿದೆಯೇ? "ಸಂಸ್ಥಾನದ ಜನತೆ ದಂಗೆ ಏಳಬೇಕಾಗುತ್ತದೆ". ಇಂತಹ ತಲೆಬರಹದ ಲೇಖನಗಳು ಉಗ್ರವಾದ ಧೋರಣೆ ಹೊಂದಿದ್ದವು. ಇಲ್ಲಿನ ಬರಹದಲ್ಲಿ ಸಾಮಾನ್ಯ ಜನರನ್ನು ಎಚ್ಚರಗೊಳಿಸುವ ಜರೂರು ಕಾಣುತ್ತದೆ. ಪತ್ರಿಕೆಯ ಧ್ಯೇಯವೆ ಸಮಾಜವಾದಿ ಧೋರಣೆಯಾಗಿದ್ದರಿಂದ 'ರಾಜಶಾಹಿ'ಯನ್ನು ಬೆಂಬಲಿಸುವ ಎಲ್ಲ ವಿಷಯಗಳ ಬಗ್ಗೆ ತುಂಬ ನಿಷ್ಠುರವಾಗಿ ಜನರಲ್ಲಿ ಸಂಚಲನವನ್ನುಂಟು ಮಾಡುವಂತೆ ವರದಿಗಳಿರುತ್ತಿದ್ದವು. 'ರಣಧೀರ ಪತ್ರಿಕೆ'ಯು ಈ ಲೇಖನ ಸರಣಿ ಪ್ರಾರಂಭಿಸುವ ಮುನ್ನ ಒಂದು ಪ್ರತಿಜ್ಞೆಯನ್ನು ಪ್ರಕಟಿಸಿತು. ಆದರ ಒಂದು ಭಾಗ ಹೀಗಿದೆ :

*ಸೊಂಡೂರು ರಾಜ ಯಶವಂತರಾವ್ ಹಿಂದೂರಾವ್ ಘೋರ್ಪಡೆಯವರ ಬಗ್ಗೆಯಾಗಲಿ, ಅವರ ಪುತ್ರ ಎಂ.ವೈ. ಘೋರ್ಪಡೆಯವರ ಬಗ್ಗೆಯಾಗಲಿ ಮತ್ತು ಅವರ ಹುಜೂರ್ ಕಾರ್ಯದರ್ಶಿಯವರಾದ ಮಾನ್ ಸಿಂಗ್ ಪೋಲೆಯವರ ಬಗ್ಗೆಯಾಗಲಿ ನಮಗೆ ವಯಕ್ತಿಕ ದ್ವೇಶವಿಲ್ಲ. ಸೊಂಡೂರು ರಾಜರಿಗೆ ಸೇರಿದ ಖಾಸಗಿ ಆಸ್ತಿಯ ಮತ್ತು ದೇವಸ್ಥಾನಗಳಿಗೆ ಸೇರಿದ ಆಸ್ತಿಯು ವಿಚಾರವಾಗಿ ಪರಿಶೀಲನೆ ನಡೆಸಿದರೆ ಗಹನವಾದ ಪ್ರಶ್ನೆಗಳು ಉದ್ಭವಿಸುತ್ತವೆ. ನಮ್ಮ ಬಡ ದೇಶದಲ್ಲಿ ಯಾವುದೇ ವ್ಯಕ್ತಿ ಶರೀರ ಶ್ರಮವಿಲ್ಲದೆ ಭೋಗ ಜೀವನ ನಡೆಸಿಕೊಂಡು ಬರುವ ವ್ಯವಸ್ಥೆಯನ್ನು ಇನ್ನೆಲ್ಲಿಯವರೆಗೆ ಉಳಿಸಿಕೊಳ್ಳುವುದು? ಈ ದೃಷ್ಟಿಯಿಂದ ಸೊಂಡೂರಿನ ಮಹಾರಾಜರ ನಿದರ್ಶನವನ್ನು ನಾವು ಜನತೆಯ ಮುಂದೆ ಇಟ್ಟಿದ್ದೇವೆ. ಬಂಡವಾಳಷಾಹಿ ಮತ್ತು ರಾಜಷಾಹಿ ಎಲ್ಲಾ ದುಷ್ಟಶಕ್ತಿಗಳು ಒಬ್ಬ ವ್ಯಕ್ತಿಯಲ್ಲಿದ್ದರೂ ಹೇಗೆ ಸಾಮಾನ್ಯ ಜನತೆಯ ಮುಂದೆ ಜನಪ್ರಿಯವಾಗಿ ಮೆರೆಯಬಲ್ಲನು ಎಂಬುದಕ್ಕೆ ರಾಜರು ಸಮರ್ಥ ಉದಾಹರಣೆ. ಪರಮ ದೈವ*

*ಭಕ್ತರಂತೆ ದೇಶಕ್ಕೆ ತೋರಿಸಿ, ದೇವರನ್ನೇ ನುಂಗುವ ಸಮಾಜವಾದಿ ನಾಯಕರಂತೆ ನಂಬಿಸಿ, ಜನರ ರಕ್ತಹೀರುತ್ತ ಸನ್ಯಾಸಿ ವೇಷಧಾರಿಯಾಗಿ ವಂಚಿಸುವ ಮಹಾನುಭಾವರು ನಮ್ಮ ದೇಶದಲ್ಲಿದ್ದಾರೆ. ಇಂತಹ ಕಪಟ ನಾಟಕಗಳನ್ನು ಬಯಲು ಗೊಳಿಸುವುದೇ ರಣಧೀರ ಪತ್ರಿಕೆಯ ಪ್ರತಿಜ್ಞೆ (ನವೆಂಬರ್ ೭.೧೯೭೧)*

ಹೀಗೆ ಪತ್ರಿಕೆಯೊಂದು ಪ್ರತಿಜ್ಞೆ ಮಾಡುವ ಮೂಲಕ 'ಸಮಾಜವಾದಿ' ಆಶಯವನ್ನು ವ್ಯಕ್ತಪಡಿಸುವುದು ವಿಶೇಷವಾಗಿದೆ. ಇದು ಅಕ್ಷರ ಕ್ರಾಂತಿಯಂತೆ ಕಾಣುತ್ತದೆ. ಎಂ.ವೈ. ಘೋರ್ಪಡೆಯವರು ಹಣಕಾಸು ಮಂತ್ರಿಗಳಾಗಿದ್ದ ಸಂದರ್ಭದಲ್ಲಿಯೂ "ರಾಜ್ಯದ ಹಣಕಾಸಿನ ಮಂತ್ರಿಗಳಿಗೆ ರಣಧೀರನ ಬಹಿರಂಗ ಪತ್ರ" ಎಂದು ಹತ್ತಾರು ಸಮಸ್ಯೆಗಳನ್ನು ಪ್ರಶ್ನೆ ಮಾಡಿತು. ಇಂತಹದ್ದೇ ಸರಣಿ ಲೇಖನಗಳನ್ನು ಪ್ರಕಟಿಸಿದ್ದು 'ವಿಶಾಲ ಕರ್ನಾಟಕ' ವಾರಪತ್ರಿಕೆ. ಆರ್.ವೈ. ಜಠಾರ, ಕೆ.ಎಸ್. ಪಟೇಲ್ ಇವರ ಸಂಪಾದಕತ್ವದಲ್ಲಿ ಹುಬ್ಬಳ್ಳಿಯಿಂದ ಬರುತ್ತಿದ್ದ ಪತ್ರಿಕೆ ಆರ್. ಟಿ. ಮಜ್ಜರಿಗಿ ಎಂಬುವರು "ಸೊಂಡೂರು ಕುಮಾರಸ್ವಾಮಿ ವಿಮೋಚನೆ" ಎಂಬ ಲೇಖನ ಮಾಲೆಯನ್ನು ಐದು ಕಂತುಗಳಲ್ಲಿ ಬರೆದರು "ಮಾಜಿರಾಜರ ಮಸಲತ್ತು" "ಸತ್ಯಕ್ಕೆ ಅಪಚಾರ" "ಝುಂಡಾ ಹಾರಿಸುವ ಯಲಾಮ್ ರದ್ದಾದದ್ದು ಸಾರ್ವಜನಿಕ ವಂಚನೆ" "ಮುಕ್ತದರ್ಶನ ಅಗತ್ಯ" "ಶೃಂಖಲೆ ಕಳಚಲಿ" ಎಂಬ ಶೀರ್ಷಿಕೆಗಳಲ್ಲಿ ಪ್ರಕಟವಾದ ಲೇಖನಗಳು ಮಾಜಿ ಮಹಾರಾಜರ ಬಗೆಗೆ ಹಲವು ಒಳನೋಟಗಳನ್ನು ಕೊಡುತ್ತದೆ. ಈ ಬರಹಗಳು ಮುಖ್ಯವಾಗಿ ಕುಮಾಸ್ವಾಮಿ ದೇವಸ್ಥಾನ ವಿಮೋಚನೆಯತ್ತ ಗಮನ ಹರಸಿವೆ. ಯಜಮಾನ ಶಾಂತರುದ್ರಪ್ಪ  ನವರು ಹೊರಡಿಸಿದ ಕರಪತ್ರಗಳೇ ಇಲ್ಲಿ ಲೇಖನಗಳಾದಂತೆ ಕಾಣುತ್ತಿದೆ. ಈ ಪತ್ರಿಕೆ ಹುಬ್ಬಳ್ಳಿಯಿಂದ ಬರುತ್ತಿದ್ದರಿಂದ ಉತ್ತರ ಕರ್ನಾಟಕದಲ್ಲಿ ಸೊಂಡೂರಿನ ಮಹಾರಾಜರ ವಾಸ್ತವ ಚಿತ್ರಣ ಪ್ರಚಾರವಾಯಿತು.

ಬಳ್ಳಾರಿಯಿಂದ ಬರುತ್ತಿದ್ದ 'ಬುಲೆಟಿನ್' ಪತ್ರಿಕೆ ಸಂಪಾದಕರ ಹೆಸರಲ್ಲಿ 'ಬುಲೆಟಿನ್ ಶಾಂತಿಯುಗ' ಎಂದು ಪ್ರಕಟಿಸುತ್ತಿತ್ತು. ಸಿದ್ದಪ್ಪ ಬುಕ್ಕಪ್ಪ ಇಟಿಗಿಯವರು ಇದರ ಸಂಪಾದಕರಾಗಿದ್ದರು. ಬಳ್ಳಾಗಿಯ 'ಸೊಂಡೂರು ವಿಮೋಚನ ಸಮರ ಸಮಿತಿಯ' ಪ್ರತಿ ಹೋರಾಟಕ್ಕೂ ಪತ್ರಿಕೆ ಮುಖವಾಣಿಯಾಗಿತ್ತು. ಈ ಪತ್ರಿಕೆಯ ಬರಹವೂ ಅಬ್ಬರದಿಂದಿತ್ತು. ವರದಿಯ ಒಂದು ಭಾಗವನ್ನು ನೋಡಬಹುದು.

*ಸೊಂಡೂರು ಮಾಜಿ ರಾಜ ದೇವರಸೊತ್ತನ್ನು ತಿನ್ನುವ ಭಾರಿ ದರೋಡೆಕೋರ, ಹಿಂದೆ ರಾಷ್ಟ್ರಧ್ವಜವನ್ನು ಕಿತ್ತು ಸುಟ್ಟ.. ಸೊಂಡೂರು ರಾಜ ಈಗ ಗಾಂಧಿ ಭಕ್ತ ಎಂಬ ಲೇಖನದಲ್ಲಿ (ಏಪ್ರಿಲ್ ೩೦.೧೯೬೭) ಬಳ್ಳಾರಿ ಜನರೇ ಏಳಿ ಎದ್ದೇಳಿ ಎಚ್ಚರವಾಗಿ ಈ ಭ್ರಷ್ಟಾಚಾರವನ್ನು ಹತ್ತಿಕ್ಕಲು ಮುಂದೆ ಬನ್ನಿ, ಯಶವಂತರಾವ್ ಘೋರ್ಪಡೆ ಇವರು ಯಾವ ತಲೆಮಾರಿನಲ್ಲಿಯೋ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದು ಸೇರಿ ಆಲದ ಮರದಂತೆ ಬೇರು ಬಿಟ್ಟು, ಭದ್ರವಾಗಿ ಕುಳಿತಿದ್ದಾರೆ. ಇಂತಹ ಭ್ರಷ್ಟವ್ಯಕ್ತಿಯ ಬೆನ್ನು ತಟ್ಟುವವರು ಭ್ರಷ್ಟಾಚಾರಕ್ಕೆ ಒಳಗಾದವರಲ್ಲವೆ? ನಮ್ಮ ಆರೋಪಗಳು ಸರಿಯಲ್ಲವೆಂದು ಹೇಳುವ ವೀರರು ಮುಂದೆ ಬರಲಿ. ಹೀಗೆ ಮಾಜಿರಾಜರಾಗಲಿ ಆತನ ಅನುಯಾಯಿಗಳಾಗಲಿ ಉತ್ತರ ಕೊಡದಿದ್ದರೆ ನಮ್ಮ ಆರೋಪಗಳೇ ಸತ್ಯವೆಂದು ಜನತೆ ನಿರ್ಧಾರ ಮಾಡಬೇಕಾಗುತ್ತದೆ.*

ಹೀಗೆ 'ಬುಲೆಟನ್' ಪತ್ರಿಕೆ ಮಾಜಿದೊರೆಗಳ ವಿರುದ್ಧ ಯುದ್ಧವನ್ನೇ ಸಾರಿದಂತೆ ಪ್ರತಿ ಸಂಚಿಕೆಯಲ್ಲಿ ಬರೆಯುತ್ತಿತ್ತು. ಸೊಂಡೂರು ಮಾಜಿರಾಜರನ್ನು ವಿರೋಧಿಸುವ ಒಂದು ಪತ್ರಿಕಾ ಬಳಗವೇ ಇತ್ತು. ಇಂತಹ ಹಿನ್ನೆಲೆಯಿರುವ ಪತ್ರಿಕಾ ವರದಿಗಳನ್ನು ಪರಿಶೀಲಿಸಿದರೆ, ೧೯೭೩ರ ರೈತ ಹೋರಾಟದ ಹೊತ್ತಿಗೆ ಇವುಗಳ ಕ್ರಾಂತಿಯ ಸ್ವರೂಪ ಸೌಮ್ಯವಾದಂತೆ ಕಾಣುತ್ತದೆ. ಬಹುತೇಕ ಪತ್ರಿಕೆಗಳು ತಮ್ಮ ಪ್ರಕಟಣೆಯನ್ನು ನಿಲ್ಲಿಸಿದ್ದವು. ಪಾಪು ೬೦ರ ದಶಕದಿಂದ ಸೊಂಡೂರು ಸಂಸ್ಥಾನದ ಬಗ್ಗೆ ಬರೆದೂ ಬರೆದು ದಣಿದಂತಿದ್ದರು. ೧೯೭೦ರಲ್ಲಿ ಓದುಗರೊಬ್ಬರು ಪ್ರಪಂಚಕ್ಕೆ 'ಸೊಂಡೂರು ದೊರೆಯ ಬಗೆಗೆ ನೀವು ಇತ್ತೀಚೆಗೆ ಏನೂ ಬರೆದಿಲ್ಲ ಇದರಿಂದ ನಿಮ್ಮದು ಇಳಿಮುಖವಾಯಿತೆಂದು ತಿಳಿಯೋಣವೆ? ಎಂದು ಪ್ರಶ್ನೆ ಕೇಳಿದ್ದರು. ಇದಕ್ಕೆ ಪಾಪುರವರು 'ಪತ್ರಿಕೆಯು ಗುರಿಯನ್ನು ಮಾತ್ರ ತೋರಿಸುತ್ತದೆ. ಆ ಗುರಿಯ ಕಡೆಗೆ ಹೊಡೆಯುವುದು ಆಡಳಿತದ ಕೆಲಸ, ಆಡಳಿತವು ಅತ್ತ ಹೊಡೆಯುವುದಿಲ್ಲ ಅಂತಾದರೆ ಅಂಥ ಆಡಳಿತವನ್ನು ಪಡೆದ ಜನರು ತಲೆತಗ್ಗಿಸಬೇಕು' ಎಂದು ಉತ್ತರಿಸಿದ್ದರು. ಭೂ ಹೋರಾಟದ ಸಂದರ್ಭಕ್ಕೆ ಅವರ ಸಂಪಾದಕತ್ವದ 'ವಿಶ್ವವಾಣಿ' ದಿನಪತ್ರಿಕೆ ಪ್ರತಿ ದಿನದ ವರದಿ ಮಾಡಿತು. ಚಳುವಳಿಯ ನಾಯಕರು ಮಾಡಿದ ಭಾಷಣಗಳನ್ನು ಸಹ ಪ್ರಕಟಿಸಿತು. 'ಪ್ರಪಂಚ' ಪತ್ರಿಕೆ ಬಗ್ಗೆ ಬಾಬುರೆಡ್ಡಿ

ತುಂಗಳ್‌ರವರು ಹೀಗೆ ಬರೆಯುತ್ತಾರೆ: ‘ಆ ಕಾಲದಲ್ಲಿ ಪಾಟೀಲ್ ಪುಟ್ಟಪ್ಪ ನವರ ಪ್ರಪಂಚ ವಾರಪತ್ರಿಕೆ ಕರ್ನಾಟಕದ ಮನೆಮಾತಾಗಿತ್ತು. ಅದನ್ನು ಕೊಳ್ಳಲು ಜನರು ಮುಗಿಬೀಳುತ್ತಿದ್ದರು. ನಮಗಂತೂ ‘ಪ್ರಪಂಚ’ದ ಹುಚ್ಚೇ ತಲೆಯಲ್ಲಿ ತುಂಬಿಕೊಂಡಿತ್ತು. ಅದಕ್ಕಾಗಿ ಬಾಗಲಕೋಟೆ ರೈಲ್ವೆ ಸ್ಟೇಷನ್ನಿನಲ್ಲಿ ರೈಲು ಬರುವವರೆಗೆ ಕಾಯುತ್ತಿದ್ದೆವು. ಬಂಡಲ್ ಹೊಡೆದ ಕೂಡಲೆ ಪತ್ರಿಕೆ ಕೊಳ್ಳಲು ನುಗ್ಗತ್ತಿದ್ದೆವು. ೧೯೫೦ರ ದಶಕದಲ್ಲಿ ‘ಪ್ರಪಂಚ’ ಪತ್ರಿಕಾ ರಂಗದಲ್ಲೊಂದು ಕ್ರಾಂತಿಯನ್ನೇ ಮಾಡಿತು. ಹಲವಾರು ಪ್ರತಿಭಾವಂತರನ್ನು ಅದು ಸಾರಸ್ವತ ಲೋಕಕ್ಕೆ ಪರಿಚಯಿಸಿತು. ಉತ್ತರ ಕರ್ನಾಟಕದ ಮುಖವಾಣಿಯಾಗಿ ಪ್ರಪಂಚ ಹಳ್ಳಿಹಳ್ಳಿಯನ್ನು ತಲುಪಿಬಿಟ್ಟಿತು. ಆಗಿನ ನಾಡಿನ ಜನತೆ ಪಾಪುರವರಿಗೆ ಪತ್ರಿಕಾ ರಂಗದ ಧೀಮಂತ ಎಂಬ ಪಟ್ಟ ಕಟ್ಟಿದ್ದರು. ಹುಬ್ಬಳ್ಳಿಯ ಟ್ರಾಫಿಕ್ ಐರ್ಲಾಂಡ್ ಪತ್ರಿಕಾ ಪ್ರಿಯರ ಕಾಶಿಯೆನಿಸಿತು. ನಾವೆಲ್ಲ ಪಾಪು ಭಕ್ತಮಂಡಳಿಯನ್ನು ಗೊತ್ತಿಲ್ಲದಂತೆ ಸೇರಿಕೊಂಡೆವು’ ಹಗರಿಬೊಮ್ಮನಹಳ್ಳಿಯ ಸಾಹಿತಿ ಗುರುಮೂರ್ತಿ ಪೆಂಡಕೂರರೊಂದಿಗೆ ಮಾತನಾಡುತ್ತಿದ್ದಾಗ ‘ರಾಜಕಾರಣಿಗಳ ಫೋಟೋವನ್ನು ಮೊದಲು ಪ್ರಪಂಚ ಪ್ರಕಟಿಸುತ್ತಿತ್ತು. ಜನ ಆವಾಗ್ಲೆ ಅವರ ಮುಖ ನೋಡ್ತಿದ್ದು…’ ಎಂದರು. ಒಂದು ಪತ್ರಿಕೆ ತನ್ನ ಕಾಲದ ನಾಡಿ ಮಿಡಿತವಾದಲ್ಲಿ ಅದು ಸಂಚಲನವನ್ನುಂಟು ಮಾಡಬಲ್ಲದು ಎಂಬುದಕ್ಕೆ ಪಾಪುರವರ ‘ಪ್ರಪಂಚ’ವೇ ಸಾಕ್ಷಿ.

೧೯೭೩ರ ಚಳುವಳಿಯ ಬಗೆಗೆ ಇಂಗ್ಲಿಷ್ ಪತ್ರಿಕೆಗಳಾದ ‘ಡೆಕ್ಕನ್ ಹೆರಾಲ್ಡ್’, ‘ದಿ ಹಿಂದೂ’, ‘ಇಂಡಿಯನ್ ಎಕ್ಸ್ ಪ್ರೆಸ್’ಗಳು ತುಣುಕು ಸುದ್ದಿಯಾಗಿ ಪ್ರಕಟಿಸಿದವು. ಸೆಪ್ಟಂಬರ್ ೧೩.೧೯೭೩ರಂದು ‘ಇಂಡಿಯನ್ ಎಕ್ಸ್ ಪ್ರೆಸ್’ನಲ್ಲಿ ಹೋರಾಟದ ಸುದ್ದಿ ”Sondur stir Fizzles out” ಎಂದು ಪ್ರಕಟವಾಯಿತು. ಈ ವರದಿ ”ರೈತರಿಂದ ಸೊಂಡೂರಿನಲ್ಲಿ ಕೋಲಾಹಲವನ್ನು ಎಬ್ಬಿಸಲಾಗಿದೆ. ಇದೊಂದು ವ್ಯರ್ಥ ಪ್ರಯತ್ನ” ಎನ್ನುವಂತಿತ್ತು. ಇದನ್ನು ವಿರೋಧಿಸಿ ಯಜಮಾನ ಶಾಂತರುದ್ರಪ್ಪನವರು ಪತ್ರಿಕಾ ಕಚೇರಿಗೆ ಬಂದು ಪತ್ರ ಬರೆದರು. ಅದರಲ್ಲಿ ಬಳ್ಳಾರಿಯ ಪತ್ರಿಕಾ ಪ್ರತಿನಿಧಿ ಸತ್ಯಾನಂದ ಇವರನ್ನು ದೂಷಿಸಲಾಗಿತ್ತು. ”ನಿಮ್ಮ ಪತ್ರಿಕಾ ಪ್ರತಿನಿಧಿ ರೈತ ಹೋರಾಟವನ್ನು ಕಡೆಗಣಿಸಿ ಬರೆದಿದ್ದಾರೆ. ಅರ್ಥ ಸಚಿವರ ಪರವಾದ ಈ ವರದಿ ಸತ್ಯಕ್ಕೆ ದೂರವಾಗಿದೆ. ಜಾರ್ಜ್ ಫರ್ನಾಂಡಿಸ್ ಅಂತವರ ಮುಖಂಡತ್ವದ ಈ ಹೋರಾಟವನ್ನು ಕೇವಲ ಕೋಲಾಹಲ ದೊಂಬಿ ಎಂದು ಅವಮಾನಿಸಿದ್ದಾರೆ. ಹಾಗಾಗಿ ಪತ್ರಿಕೆ ವಿಚಾರಣೆ ನಡೆಸಿ ಕ್ಷಮಾಪಣೆ ಕೇಳಬೇಕೆಂದು ವಿನಂತಿಸಿಕೊಳ್ಳುತ್ತೇವೆ” ಎಂದು ಬರೆಯಲಾಗಿತ್ತು. ಹೀಗೆ ಪತ್ರಿಕೆಗಳೊಂದಿಗೂ ಹೋರಾಟಗಾರರ ಲಿಖಿತ ಘರ್ಷಣೆಗಳು ನಡೆದವು.

ಇಲ್ಲಿಯ ಪತ್ರಿಕಾ ಬರಹಗಳನ್ನು ಗಮನಿಸಿದರೆ ಕೆಲವು ಸಂಗತಿಗಳು ಸ್ಪಷ್ಟವಾಗುತ್ತವೆ. ಒಂದು: ೧೯೭೩ರ ಭೂ ಹೋರಾಟವನ್ನು ಪತ್ರಿಕೆಗಳು ವರದಿ ಮಾಡುವ ಮೂಲಕ ಹೇಗೆ ಬೆಂಬಲಿಸಿದವು. ಎರಡು: ಒಂದು ರಾಜಮನೆತನದ ವಿರುದ್ಧ ಪತ್ರಿಕೆಗಳ ಪ್ರತಿರೋಧದ ಚರಿತ್ರೆ. ಈ ಎರಡೂ ಅಂಶಗಳು ಒಂದಕ್ಕೊಂದು ಪೂರಕವಾದವುಗಳು ಅಥವಾ ಪತ್ರಿಕೆಗಳ ಮಾಜಿರಾಜರ ವಿರುದ್ಧದ ನಿರಂತರ ಪ್ರತಿರೋಧವೇ ೧೯೭೩ರ ಭೂ ಹೋರಾಟಕ್ಕೆ ಪರೋಕ್ಷ ಕಾರಣವೂ ಕೂಡ. ಇಲ್ಲಿ ಬಳಸಿರುವ ಭಾಷೆ, ತಳೆದಿರುವ ಧೋರಣೆ ಹೇಳಹೊರಟಿಸುವ ಶೈಲಿ, ಓದುಗರ ಮೇಲೆ ಇಟ್ಟುಕೊಂಡ ದೃಷ್ಟಿ ಎಲ್ಲವೂ ಪತ್ರಿಕಾ ಚರಿತ್ರೆಯ ಭಿನ್ನ ಆಯಮಾಮಗಳೇ. ಪತ್ರಿಕೆ ಯೊಂದು ಸಮಾಜದ ‘ಶಸ್ತ್ರಚಿಕಿತ್ಸಕ’ ಎಂಬ ಜಯಮಾನವನ್ನು ೬೦ರ ದಶಕ ಪತ್ರಿಕೆಗಳು ಪಾಲಿಸಿದವು. ಹಾಗಾಗಿಯೇ ಇಲ್ಲಿ ಪರ ವಿರೋಧದ ರಾಜಕಾರಣ ಕೆಲಸ ಮಾಡದೆ ಪತ್ರಿಕಾ ನಿಷ್ಠೆ ಮಾತ್ರ ಇತ್ತು. ಇಲ್ಲಿನ ಧೋರಣೆಗಳು ಪ್ರಜಾಪ್ರಭುತ್ವ ಸರ್ಕಾರದಲ್ಲಿ ಎಲ್ಲರೂ ಸಮಾನರು ಎಂಬ ತತ್ತ್ವವನ್ನು ತೀವ್ರವಾಗಿ ನಂಬಿದ್ದವು. ಹಾಗಾಗಿಯೇ ಈ ಸಮಾನತೆ ಎಲ್ಲೆಲ್ಲಿ ಅಸಮಾನತೆಯ ರೂಪ ತಾಳುತ್ತದೆಯೋ ಅಲ್ಲಿ ಪತ್ರಿಕೆಗಳು ಉಗ್ರ ಸ್ವರೂಪವನ್ನು ತಾಳುತ್ತಿದ್ದವು. ಮೇಲಿನ ಪತ್ರಿಕೆಗಳ ಮಾಹಿತಿಯನ್ನು ಕೇವಲ ಸೊಂಡೂರು ಸಂಸ್ಥಾನವನ್ನು ಕೇಂದ್ರಕರಿಸಿ ನೋಡುವುದು ಒಂದು ವಿಧಾನವಾದರೆ, ಇದರ ಮೂಲಕವೇ ಕರ್ನಾಟಕ ಪತ್ರಿಕಾ ಚರಿತ್ರೆಯ ಕವಲುಗಳನ್ನು ಕರ್ನಾಟಕದ ರಾಜಕೀಯ ಚರಿತ್ರೆಯ ಭಿನ್ನ ಮಗ್ಗಲುಗಳನ್ನು ನೋಡಲು ಸಾಧ್ಯವಿದೆ.

‘ಆಧುನಿಕ ಸಾರ್ವಭೌಮ’, ‘ಮೊಘಲ್ ಶಾಹಿ ದೌಲತ್ತು’, ‘ಮಹಾರಾಜರಿಗೆ ಕೊಂಬು ಬಂದಿದೆಯೇ”? ‘ಕುಮಾರಸ್ವಾಮಿ ವಿಮೋಚನೆಯಾಗಲಿ’, ‘ಶೃಂಖಲೆ ಕಳಚಲಿ’ ಈ ಬಗೆಯ ಪದ ಬಳಕೆ ಭಾಷೆಯ ಸ್ವಾತಂತ್ರವನ್ನು, ಪ್ರಜಾಪ್ರಭುತ್ವವನ್ನು ಹಂಬಲಿಸುವಂತಿದೆ.

ರೋಚಕ ನಿರೂಪಣೆಗಳು, ಅಬ್ಬರವಾದ ಬೈಗುಳಗಳು, ಸ್ಫೋಟಕ ಸಾಲುಗಳು, ಭಾಷೆಯು ಪತ್ರಿಕಾ ರಂಗದಲ್ಲಿ ಪಡೆಯುವ ಭಿನ್ನ ಆಯಾಮುಗಳನ್ನು ತಿಳಿಸುತ್ತದೆ. ಒಂದು ಕಾಲದ ಚರಿತ್ರೆಯನ್ನು ದಾಖಲಿಸುವ ಸಂದರ್ಭದಲ್ಲಿ ಇಂತ ಭಾಷೆಯ ಬಳಕೆಯೂ ದಾಖಲಾಗುವ ಅಗತ್ಯವಿದೆ. ಆ ಕಾರಣಕ್ಕಾಗಿಯೇ ಪತ್ರಿಕೆಗಳ ಉಧೃತ ಭಾಗಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಪತ್ರಿಕೆಗಳ ಕಣ್ಣಿಂದ ೧೯೭೩ರ ಚಳವಳಿಯನ್ನು ನೋಡುವ ಕ್ರಮ ಇಲ್ಲಿದೆ. ಸ್ವಾತಂತ್ರ್ಯನಂತರದಿಂದ ಪತ್ರಿಕೆಗಳು, ಅಷ್ಟು ನೇರವಾಗಿ ಸೊಂಡೂರು ಮಾಜಿರಾಜರ ಅಪರಾಧಗಳನ್ನು ಬರೆಯುತ್ತ ಬಂದವು. ಆದರೆ ಇದಕ್ಕೆ ಸರ್ಕಾರ ಸ್ಪಂದಿಸಿದ್ದು ಮಾತ್ರ ತುಂಬ ಕಡಿಮೆ. ಈ ವರದಿಯಿಂದ ಜನ ಎಚ್ಚೆತ್ತು ಹೋರಾಟವನ್ನೇನು ರೂಪಿಸಲಿಲ್ಲ. ಆದರೆ ಅಂತಹ ವಾತಾವರಣವನ್ನು ಕ್ರಮೇಣ ರೂಪಿಸುತ್ತಾ ಬಂದವು. ಅದು ನಿಧಾನಗತಿಯ ಪ್ರತಿಫಲವಾಗಿ ೧೯೭೩ರ ಚಳುವಳಿ ನಡೆಯಿತು.

## ೧೨. ಸೋಷಲಿಸ್ಟ್ ಪಾರ್ಟಿ ಮತ್ತು ಕಾಂಗ್ರೆಸ್ ಸರ್ಕಾರ

ಸೊಂಡೂರು ರೈತ ಹೋರಾಟಕ್ಕೆ ರಾಷ್ಟ್ರೀಯ ಹೋರಾಟದ ಸ್ವರೂಪ ಬಂದದ್ದು ಸೋಷಲಿಸ್ಟ್ ಪಾರ್ಟಿಯಿಂದ. ಕೊನೆಗೂ ಇದು ಕಾಂಗ್ರೆಸ್ ಸರ್ಕಾರ ಮತ್ತು ಸೋಷಲಿಸ್ಟ್ ಪಾರ್ಟಿಯ ನಡುವಿನ ಹೋರಾಟವಾಗಿಯೇ ಪರಿಣಮಿಸಿತು. ಭೂಮಾಲಿಕರು, ರಾಜಶಾಹಿಗಳು, ಬಂಡವಾಳಶಾಹಿಗಳು ತುಂಬಿದ ಭೂರ್ಜ್ವಮಯವಾದ ಕಾಂಗ್ರೆಸ್ ಸ್ಥಿತಿ ಒಂದಾದರೆ, ಕಳಪೆ ಅನೈತಿಕ ಜಗತ್ತಿನ ವಿರುದ್ಧ ಹೋಸ ನೈತಿಕ ಜಗತ್ತಿನ ನಿರ್ಮಾಣಕ್ಕಾಗಿ ಶ್ರಮಿಸುವ ಆಳದ ಆಶಯ ಹೊತ್ತ ಸಮಾಜವಾದಿ ಪಕ್ಷದ ಸ್ಥಿತಿ ಇನ್ನೊಂದು ಮುಖ. ಈ ಎರಡು ತಾತ್ವಿಕ ಭಿನ್ನಾಭಿಪ್ರಾಯಗಳೇ ಅವಳಿ ವೈರುಧ್ಯಗಳಾಗಿ ೭೦ರ ದಶಕದಲ್ಲಿ ಸಂಘರ್ಷಿಸುತ್ತಿದ್ದವು. ಈ ಸಂಘರ್ಷದ ಒಂದು ಅಂಚಿನಲ್ಲಿ ಕಾಂಗ್ರೆಸ್‌ನ ಇಂದಿರಾಗಾಂಧಿ ಇದ್ದರೆ ಇನ್ನೊಂದು ಅಂಚಿನಲ್ಲಿ ಸಮಾಜವಾದಿ ಪಕ್ಷದ ಜಾರ್ಜ್ ಫರ್ನಾಡಿಸ್ ಇದ್ದರು. ಇಂತಹ ಮುಖಾಮುಖಿಯ ಪರಿಣಾಮ ಸೊಂಡೂರಿನ ಭೂ ಹೋರಾಟದ ಮೇಲಾಯಿತು.

೭೦ರ ದಶಕದಲ್ಲಿ ಕರ್ನಾಟಕದಲ್ಲಿ ಸೋಷಲಿಸ್ಟ್ ಪಾರ್ಟಿ ತನ್ನ ತೀವ್ರತೆಯನ್ನು ಕಳೆದುಕೊಂಡಿತ್ತು. ಲೇಖಕರು, ಬರಹಗಾರರು, ಕಲಾವಿದರು, ಯುವಜನರ ಒಂದು ಪಡೆ ಪ್ರತ್ಯೇಕಗೊಂಡು ಸಾಹಿತ್ಯ ಕ್ಷೇತ್ರ ಸೇರಿದಂತೆ ಸಮಾಜದೊಂದಿಗೆ ಸ್ವತಂತ್ರವಾಗಿ ಬರೆಯಲು ಪ್ರಾರಂಭಿಸಿದರು. ಸಮಾಜವಾದಿ ಪಕ್ಷದ ಯುವ ವಿಭಾಗ 'ಸಮಾಜವಾದಿ ಯುವಜನ ಸಭಾ'ದಿಂದ ಹೊರಬಿದ್ದ ಗುಂಪು ಪ್ರತ್ಯೇಕವಾಗಿ ಕಾರ್ಯನಿರತವಾಯಿತು. ಇದರ ಮುಖಂಡ ರಾಗಿ ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಪಿ. ಲಂಕೇಶ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಪ್ರೊ.ಚಂದ್ರಶೇಖರ ಪಾಟೀಲ್, ದೇವನೂರು ಮಹಾದೇವ, ಪ್ರೊ.ಕೆ. ರಾಮದಾಸ್ ಮುಂತಾದವರು ಇದ್ದರು. ಇವರೆಲ್ಲಾ ಲೋಹಿಯಾ ಚಿಂತನೆಗಳಿಂದ ಪ್ರಭಾವಿತರಾಗಿ ಬರಹ-ಚಳವಳಿ ಎರಡರಲ್ಲೂ ತೊಡಗಿಸಿಕೊಂಡರು. ಜಿಲ್ಲೆಗಳಲ್ಲಿ ಚಟುವಟಿಕೆಯನ್ನು ಚುರುಕುಗೊಳಿಸಿ ಲಾಯಿತು. ಜಿಲ್ಲೆಗೊಂದರಂತೆ ಸಮಾಜವಾದಿ ಯುವಜನ ಸಭಾ ರಚಿಸಿ, ಯುವಜನರನ್ನು ಕಾರ್ಯಶೀಲಗೊಳಿಸಿದರು. ಕರ್ನಾಟಕ ವಿಚಾರವಾದಿ ಒಕ್ಕೂಟವನ್ನು ಸ್ಥಾಪಿಸಿ. ಕರ್ನಾಟಕ ಲೋಹಿಯಾ ವಿಚಾರ ಮಂಥನ ಕಿರು ಪುಸ್ತಕಗಳ ಪ್ರಕಟಣೆ, ಮೂಢನಂಬಿಕೆಗಳ ವಿರುದ್ಧ ಜನಜಾಗ್ರತಿ ಆಂದೋಲನ, ಜಾತಿ ವಿನಾಶ ಸಮ್ಮೇಳನಗಳ ಸಂಘಟನೆ, ಸಾಯಿಬಾಬನ ವಿರುದ್ಧ ಚಳವಳಿ ಮುಂತಾದ ಚಟುವಟಿಕೆಗಳನ್ನು ವ್ಯಾಪಕವಾಗಿ ಪ್ರಾರಂಭಿಸಿದರು. ಮುಂದೆ ೧೯೭೪ರಲ್ಲಿ ಕಾಣಿಸಿಕೊಂಡ ನವ ನಿರ್ಮಾಣ ಚಳವಳಿಗೆ ಸಮಾಜವಾದಿ ಯುವಜನ ಸಭಾ ಸಂಪೂರ್ಣವಾಗಿ ಪ್ರತಿಕ್ರಿಯಿಸಿತು. ತನ್ನ ಅಸ್ತಿತ್ವವನ್ನೇ ಅದರಲ್ಲಿ ವಿಲೀನಗೊಳಿಸಿತು.

೧೯೭೨ರ ಚುನಾವಣೆ ಹೊತ್ತಿಗಾಗಲೇ ಸಮಾಜವಾದಿಗಳು ರಾಜ್ಯದಲ್ಲಿ ತಮ್ಮ ನೆಲೆ ಕಳೆದುಕೊಂಡಿದ್ದರು. ಬಹುತೇಕ ಪಿ.ಎಸ್.ಪಿ. ನಾಯಕರುಗಳೆಲ್ಲ ಇಂದಿರಾಗಾಂಧಿಯವರ ಆಡಳಿತ ಕಾಂಗ್ರೆಸ್ ಸೇರಿದ್ದರು. ತುಮಕೂರು ಲೋಕಸಭಾ ಕ್ಷೇತ್ರದಿಂದಿ ಕೆ. ಲಕ್ಕಪ್ಪ, ಮಂಡ್ಯ ಕ್ಷೇತ್ರದಿಂದ ಎಸ್. ಎಂ. ಕೃಷ್ಣ ಅವರು ಸಮಾಜವಾದಿ ಪಕ್ಷದಿಂದ ಕಾಂಗ್ರೆಸ್ ಗೆ ಸೇರಿ ಆಡಳಿತ ಕಾಂಗ್ರೆಸ್ ಮೂಲಕ ಲೋಕಸಭೆಯನ್ನು ಪ್ರವೇಶಿಸಿದರು. ೧೯೭೨ರ ವಿಧಾನಸಭೆ ಚುನಾವಣೆ ಯಲ್ಲಿ ಕೇವಲ ಮೂರು ಸ್ಥಾನಗಳು ಮಾತ್ರ ಸಮಾಜವಾದಿ ಪಕ್ಷಕ್ಕೆ (ಸೋಷಲಿಷ್ಟ್

ಪಾರ್ಟಿ ಎಸ್.ಓ.ಪಿ) ದೊರಕಿದವು. ಅವೆಂದರೆ ಸೊರಬದಿಂದ ಎಸ್. ಬಂಗಾರಪ್ಪ, ಸಾಗರದಿಂದ ಕಾಗೋಡು ತಿಮ್ಮಪ್ಪ, ತೀರ್ಥಹಳ್ಳಿಯಿಂದ ಕೋಣಂದೂರು ಲಿಂಗಪ್ಪ. ೧೯೭೩ರ ಹೊತ್ತಿಗೆ ಸಮಾಜವಾದಿ ಪಕ್ಷದ ಜನಪ್ರಿಯ ನಾಯಕ ಗೋಪಾಲಗೌಡರು ಇರಲಿಲ್ಲ. ಅವರ ನಂತರ ರಾಜ್ಯದಲ್ಲಿ ಸಮಾಜವಾದಿ ಪಕ್ಷದ ಸಮರ್ಥ ನಾಯಕತ್ವವೂ ಇನ್ನು ಸಾಧವಾಗಿರಲಿಲ್ಲ.

ಕರ್ನಾಟಕದಲ್ಲಿ ಸಮಾಜವಾದಿ ಪಕ್ಷ ಈ ಸ್ಥಿತಿಯಲ್ಲಿರುವಾಗ ಭಾರತದಲ್ಲಿ ಸಮಾಜವಾದಿ ಪಕ್ಷ ಆಡಳಿತ ಕಾಂಗ್ರೆಸ್‌ನ ಸಮರ್ಥ ವಿರೋಧ ಪಕ್ಷವಾಗಿ ಬೆಳೆಯತೊಡಗಿತ್ತು. ಜಾರ್ಜ್ ಫರ್ನಾಂಡಿಸ್‌ರ ನಾಯಕತ್ವವೂ ಇದಕ್ಕೆ ಕಾರಣವಾಗಿತ್ತು. ಅಂತೆಯೇ ರಾಜ್ಯವಾರು ಪ್ರಭಾವಿ ನಾಯಕರಿದ್ದರು. ಬಿಹಾರದ ಮಾಜಿ ಗೃಹಮಂತ್ರಿ ರಾಮಾನಂದ ತಿವಾರಿ, ಅಸ್ಸಾಂನ ಲೋಕ ಸಭಾಸದಸ್ಯ ಗೋಪಾಲ್ ಬಾರ್ಬೋಲಾ, ರಾಜಸ್ಥಾನದ ಶಾಸಕರು ಹಾಗೂ ಗಂಗಾನಗರದ ರೈತ ಆಂದೋಲನದ ಪ್ರಸಿದ್ಧ ನಾಯಕರೂ ಆದ ಪ್ರೊ. ಕೇದಾರನಾಥ್, ಕೇರಳದ ಸೋಷಲಿಸ್ಟ್ ಪಾರ್ಟಿಯ ಮಾಜಿ ನಾಯಕ ಕೆ.ಕೆ. ಅಬುಸಾಹೇಬ್, ತಮಿಳುನಾಡಿನ ರೈತ ಹೋರಾಟದ ನಾಯಕರು ಹಾಗೂ ಮಾಜಿ ಶಾಸನ ಸಭೆಯ ಸದಸ್ಯರಾದ ಪಿ.ಕೆ. ನಲ್ಲಂಶಿವಂ ಇಂತಹ ನಾಯಕರುಗಳಿಂದಾಗಿ ರಾಷ್ಟ್ರೀಯ ಸೋಷಲಿಸ್ಟ ಪಾರ್ಟಿ ತನ್ನದೇ ಆದ ಚಳವಳಿಗಳನ್ನು ಹುಟ್ಟುಹಾಕುತ್ತಾ, ಆಯಾ ರಾಜ್ಯಗಳಲ್ಲಿ ಜನಪರವಾದ ಕೆಲಸಗಳನ್ನು ಮಾಡುತ್ತಿತ್ತು. ಇದರ ಭಾಗವಾಗಿ ಸೊಂಡೂರಿನಲ್ಲಿ ಭೂ ಹೋರಾಟ ಸಾಧ್ಯವಾಯಿತು.

ಜಾರ್ಜ್‌ಫರ್ನಾಂಡಿಸ್ ಅವರು ಸೊಂಡೂರು ಭೂ ಹೋರಾಟದ ಕುರಿತಾಗಿ ಪತ್ರಿಕೆ ಹೇಳಿಕೆ ನೀಡಿದಾಗ 'ಶ್ರೀಮತಿ ಇಂದಿರಾಗಾಂಧಿಯವರ ಕಪಟ ಸಮಾಜವಾದವನ್ನು ಬಯಲಿಗೆಳೆಯಲು ಈ ಹೋರಾಟ ನೆರವಾಗುತ್ತದೆ' ಎಂದಿದ್ದರು. ಒಂದು ವೇಳೆ ಎಂ.ವೈ. ಘೋರ್ಪಡೆಯವರು ಪ್ರಧಾನಿ ಇಂದಿರಾಗಾಂಧಿಯೊಂದಿಗೆ ನೇರ ಸಂಪರ್ಕವಿರುವ ಕಾಂಗ್ರೆಸ್ ಪ್ರಭಾವಿ ರಾಜಕಾರಣಿ ಆಗದೆ ಇದ್ದಿದ್ದರೆ ಈ ಹೋರಾಟ ನಡೆಯುತ್ತಲೇ ಇರಲಿಲ್ಲ. ಅಥವಾ ಜಾರ್ಜ್‌ರಂತಹ ರಾಷ್ಟ್ರೀಯ ನಾಯಕರು ಸೊಂಡೂರಿಗೆ ಬರುತ್ತಿರಲಿಲ್ಲ. ಹಾಗಾಗಿ ಈ ಹೋರಾಟವನ್ನು ರಾಜಕೀಯಗೊಳಿಸಿ ಆಡಳಿತ ಕಾಂಗ್ರೆಸ್‌ನ ವಿರುದ್ಧದ ಹೋರಾಟವನ್ನಾಗಿ ಸಮಾಜವಾದಿ ಪಕ್ಷ ಕಂಡಿತು. ರೈತರಿಗೆ ಭೂಮಿ ಕೊಡಿಸುವುದೆ ನಿಜವಾದ ಕಾಳಜಿ ಆಗಿತ್ತಾ? ಎಂದು ಪ್ರಶ್ನೆ ಮಾಡಿಕೊಂಡರೆ, ನಿಜಕ್ಕೂ ಆಳದಲ್ಲಿ ರೈತರಿಗೆ ಭೂಮಿ ಕೊಡಿಸುವ ಕಾಳಜಿಗಿಂತ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ವರ್ಚಸ್ಸನ್ನು ಕಡಿಮೆ ಮಾಡಬೇಕು. ವಿಫಲಗೊಂಡಿರುವ ಸಮಾಜವಾದಿ ಪಕ್ಷವನ್ನು ಚೇತರಿಸಿಕೊಳ್ಳಲು ಸಹಕಾರಿಯಾಗಬೇಕು ಎನ್ನುವ ರಾಜಕೀಯ ಉದ್ದೇಶ ಈ ಹೋರಾಟಕ್ಕಿತ್ತು. ಹಾಗಾಗಿ ಜಾರ್ಜ್‌ರಿಗೆ ಹೋರಾಟದಲ್ಲಿ ನೇರವಾಗಿ ಭಾಗವಹಿಸಿ ಭೂಮಿ ಕೋಡಿಸಲು ಆಡಳಿತ ಸರ್ಕಾರದೆದುರು ತೀವ್ರ ಒತ್ತಡ ತರಲು ಆಗಲಿಲ್ಲ. ಬದಲಾಗಿ ಭಾರತದಾದ್ಯಂತ ಇವರು ಹೋದೆಡೆಗಳೆಲ್ಲೆಲ್ಲ ಸೊಂಡೂರಿನಲ್ಲಿ ಆಗುತ್ತಿದ್ದ ಹೋರಾಟದ ಬಗೆಗೆ ಪ್ರಚಾರ ಕೈಗೊಂಡರು. 'ಸೊಂಡೂರು ಹೋರಾಟವನ್ನು' ಸೋಷಲಿಸ್ಟ್ ಪಾರ್ಟಿಯ ಪ್ರಚಾರಕ್ಕೆ ಹೆಚ್ಚು ಬಳಸಿಕೊಳ್ಳಲಾಯಿತು. ಆಯಾ ರಾಜ್ಯದ ಸಮಾಜವಾದಿ ನಾಯಕರನ್ನು ಈ ಹೋರಾಟದಲ್ಲಿ ಭಾಗವಹಿಸಲು ಪ್ರೇರೇಪಿಸಿದರು. ಕೊನೆಗೂ ಜಾರ್ಜ್ ಅವರು ಹೋರಾಟದ ಬಗ್ಗೆ ಪತ್ರಿಕೆ ಹೇಳಿಕೆ ನೀಡಿದ್ದನ್ನು ಬಿಟ್ಟರೆ ಚಳುವಳಿಯ ೪೯ ದಿನಗಳಲ್ಲಿ ಒಂದು ದಿನವೂ ಬಂದು ಭಾಗವಹಿಸಲಿಲ್ಲ. ಹೋರಾಟದ ಪ್ರಾರಂಭಕ್ಕೆ ಇದ್ದ ಹುರುಪು ನಂತರ ಉಳಿಯಲಿಲ್ಲ. ಹೋರಾಟದ ನಂತರ ಭೂಮಿಗಾಗಿ ನಡೆದ ಮಾತುಕತೆಯಲ್ಲಿಯೂ ಇವರು ಭಾಗವಹಿಸಲಿಲ್ಲ. ಆ ನಂತರ ಒಂದು ಹೇಳಿಕೆಯನ್ನು ಸಹ ಕೊಡಲಿಲ್ಲ. ರಾಷ್ಟ್ರೀಯ ನಾಯಕರಾಗಿದ್ದರಿಂದ ಗಮನಹರಿಸಲು ಸಾಧ್ಯವಾಲಿಲ್ಲ ಎಂದು ಹೇಳಿದರೆ ಅಷ್ಟು ಸರಿಯಾಗಲಾರದು.

ಸೋಷಲಿಸ್ಟ್ ಪಾರ್ಟಿಯ ಹೆಸರಲ್ಲಿ ಹೋರಾಟಕ್ಕೆ ತೀವ್ರತೆ ತಂದವರೆಂದರೆ ಕೆ.ಜಿ. ಮಹೇಶ್ವರಪ್ಪ, ಜೆ.ಎಚ್. ಪಟೇಲ್, ಎಸ್.ಎಸ್. ಕುಮುಟ, ಎಸ್. ವೆಂಕಟರಾಮ್, ಕಾಗೋಡು ತಿಮ್ಮಪ್ಪ, ಕೋಣಂದೂರು ಲಿಂಗಪ್ಪ, ಎಂ.ಪಿ. ಪ್ರಕಾಶ್, ಕೆ.ಜಿ. ಮಹೇಶ್ವರಪ್ಪ ಅವರಿಗೆ ಸಮಾಜವಾದಿ ಪಕ್ಷದ ಆಶಯಗಳಿಗಿಂತ ಕಾಂಗ್ರೆಸ್ ವಿರೋಧಿ ಪಕ್ಷವೊಂದರಲ್ಲಿ ಹೆಸರು ಮಾಡಬೇಕು ಎನ್ನುವ ಕಾರಣಕ್ಕಾಗಿಯೇ ಪಕ್ಷ ಸೇರಿದ್ದರು. ಗೋಪಾಲಗೌಡರಿಗೆ ಹಣಕಾಸಿನ ನೆರವು ನೀಡುತ್ತಿದ್ದುದು ಇವರೆ. ಬೆಂಗಳೂರಿನಲ್ಲಿ ಸಮಾಜವಾದಿ ಪಕ್ಷಕ್ಕೆ ಎಂದರೆ ಒಂದು ಬಾಡಿಗೆ ರೂಮು

ಸಿಗುವ ಸಾಧ್ಯತೆಯೂ ಇರಲಿಲ್ಲ. ಹಾಗಾಗಿ ಇವರು ಬೆಂಗಳೂರಿನ ಸುಬೇದಾರ್ ಚತ್ರಂ ಬಳಿ ತಮ್ಮ ಹೆಸರಿನಲ್ಲಿ ಕೋಣೆ ಹಿಡಿದು ಅದನ್ನೇ ಕಚೇರಿಯನ್ನಾಗಿ ಮಾಡಿಕೊಂಡಿದ್ದರು.

ಗೋಪಾಲಗೌಡರ ನಂತರ ಕರ್ನಾಟಕದ ಸಮಾಜವಾದಿ ಪಕ್ಷದಲ್ಲಿ ಗಟ್ಟಿಯಾದ ಹೆಸರು ಗುರುತಿಸಿಕೊಳ್ಳುವ ಸ್ಪರ್ಧೆ ತಣ್ಣಗೆ ನಡೆಯುತ್ತಿತ್ತು. ಈ ಸ್ಪರ್ಧೆಗೆ ಸೊಂಡೂರು ಹೋರಾಟ ಒಂದು ವೇದಿಕೆಯಂತೆ ಕಂಡಿತು. ಕೆ.ಜಿ. ಮಹೇಶ್ವರಪ್ಪನವರಂತೂ ಈ ಸ್ಪರ್ಧೆಯ ಹುರಿಯಾಳಿನಂತೆ ಹೋರಾಟದಲ್ಲಿ ಭಾಗವಹಿಸಿದರು. ಹೀಗಾಗಿ ಹೊಸ ತಲೆಮಾರಿನ ಸಮಾಜವಾದಿ ನಾಯಕರುಗಳ ಹೋರಾಟ ಇದಾಗಿತ್ತು. ಈಗಾಗಲೇ ಸಮಾಜವಾದಿ ಹೋರಾಟಗಾರರೆನಿಸಿ ಕೊಂಡಿದ್ದ ಹಿರಿಯ ನಾಯಕರು ಇದರಲ್ಲಿ ಭಾಗವಹಿಸಿದ್ದು ಕಡಿಮೆ. ಧಾರವಾಡದ  ನೀಲಗಂಗಯ್ಯ ಪೂಜಾರ ಬರೆದ ಪತ್ರವೊಂದರಲ್ಲಿ 'ಸೊಂಡೂರಿನಲ್ಲಿ ರೈತ ಹೋರಾಟ ಆಯಿತೆ? ನನಗೆ ಅಷ್ಟಾಗಿ ಅದರ ಬಗ್ಗೆ ತಿಳಿದಿಲ್ಲ. ಸಂಸಾರದ ಒತ್ತಡದಲ್ಲಿ ದೂರದ ಊರುಗಳಿಗೆ ಚಳವಳಿ ಅಂತ ಸುತ್ತಲು ಆಗುತ್ತಿರಲಿಲ್ಲ. ಹೋರಾಟ ನಡೆದಿದ್ದರೆ ತಿಳಿಸಿ' ಎಂದು ಬರೆಯುತ್ತಾರೆ. ಬಹುಶಃ ಈ ಪತ್ರ ಅವರು ಮರೆವಿನಿಂದಾಗಿ ಬರೆದಿರಬಹುದು. ಇವರು ಹೋರಾಟದಲ್ಲಿ ಭಾಗವಹಿಸಲಿಲ್ಲ ನಿಜ ಆದರೆ ಹೋರಾಟ ಸಂದರ್ಭದಲ್ಲಿಯೇ ಧಾರವಾಡ ದಲ್ಲಾದ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರ ಕುರಿತಾದ ಸೋಷಲಿಸ್ಟ್ ಪಾರ್ಟಿಯ ಜಮತ ಪ್ರದರ್ಶನದಲ್ಲಿ ಭಾಗವಹಿಸಿದ್ದರು. 'ಪ್ರಪಂಚ', 'ವಿಶಾಲ ಕರ್ನಾಟಕ' ಪತ್ರಿಕೆಗಳಲ್ಲಿ ಈ ಹೋರಾಟದ ವಿವರವಾದ ಮಾಹಿತಿ ಹುಬ್ಬಳ್ಳಿ ಧಾರವಾಡಗಳಲ್ಲಿ ಪ್ರಸಾರವಾಗುತ್ತಿತ್ತು. ಆದರೂ ನೀಲಗಂಗಯ್ಯ ಪೂಜಾರ, ಅಬ್ಬಿಗೇರಿ ವಿರುಪಾಕ್ಷಪ್ಪ ಮೊದಲಾದ ಆ ಭಾಗದ ಸಮಾಜವಾದಿ ಹೋರಾಟಗಾರರು ಚಳವಳಿಯಲ್ಲಿ ಭಾಗವಹಿಸಲು ಬರಲಿಲ್ಲ. ಇವರು ಈ ಹೊತ್ತಿಗೆ ಪಕ್ಷ ದೊಂದಿಗೆ ಸಂಬಂಧ ಕಡಿದುಕೊಂಡಿದ್ದರೋ, ಹೋರಾಟ ಚಳವಳಿಗಿಂತ ವೈಯಕ್ತಿಕ ಬದುಕೆ ಭಾರವಾಗಿತ್ತೊ, ಅಥವಾ ಪಕ್ಷದ ಸದ್ಯದ ನಾಯಕರು ಇವರನ್ನು ಉಪೇಕ್ಷೆಗೆ ಗುರಿಮಾಡಿದರೋ ಎನ್ನುವದು ಖಚಿತವಾಗುವುದಿಲ್ಲ.

ಐವತ್ತರ ದಶಕದಲ್ಲಿ ಕಾಗೋಡು ಸತ್ಯಾಗ್ರಹದ ಹೊತ್ತಿನ ಕಾಂಗ್ರೆಸ್ ಮತ್ತು ಸೋಷಲಿಸ್ಟ್ ಪಾರ್ಟಿಯ ಸ್ಥಿತಿ ಎಪ್ಪತ್ತರ ದಶಕದಲ್ಲಿ ಹಲವು ಬದಲಾವಣೆಗಳಾಗಿದ್ದವು. ಕಾಂಗ್ರೆಸ್ ಜಮೀನ್ದಾರಿಯ, ಮನೋಭಾವದಿಂದ ಜನಮುಖಿಯಾಗುವ ಕಾರ್ಯಕ್ರಮಗಳಲ್ಲಿ ಆಸಕ್ತಿ ವಹಿಸಿತ್ತು. ಇಂದಿರಾಗಾಂಧಿಯವರು ರಾಜಧನ ರದ್ದುಮಾಡಿ ಸರ್ಕಾರ ರಾಜಶಾಹಿಯ ಪರವಾಗಿಲ್ಲ ಎನ್ನುವ ಜನಪ್ರಿಯ ನಂಬಿಕೆಯನ್ನು ಹುಟ್ಟುಹಾಕಿದ್ದರು. ಈ ಕಾರಣದಿಂದಾಗಿ ಐವತ್ತರ ದಶಕದಲ್ಲಿ ಕಾಂಗ್ರೆಸ್ ನ್ನು ವಿರೋಧಿಸುತ್ತಿದ್ದ ಸಮಾಜವಾದಿ ನಾಯಕರು ಕೆಲವರು ಕಾಂಗ್ರೆಸ್‌ನ ಕಡೆ ವಾಲತೊಡಗಿದರು. ಹೀಗಾಗಿ ಹಿರಿಯ ಸಮಾಜವಾದಿ ನಾಯಕರು ಹೆಚ್ಚಾಗಿ ಸೊಂಡೂರು ಹೋರಾಟದಲ್ಲಿ ಭಾಗವಹಿಸಲಿಲ್ಲ. ಈ ಹೋರಾಟದ ಸಂದರ್ಭದಲ್ಲಿ ಶಿವಮೊಗ್ಗ ಸಾಗರದ ಸೋಷಲಿಸ್ಟ್ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಿದರು. ಎಂ.ಪಿ. ಪ್ರಕಾಶ್ ರವರು 'ನಮ್ಮ ಸಮಾಜವಾದಿ ಪಕ್ಷದ ಕೇಂದ್ರ ಸ್ಥಳ ಬೆಂಗಳೂರು ಆಗಿದ್ದರೂ ಕೂಡ ನಮ್ಮ ಅನೇಕ ಸಭೆಗಳು ಕಾರ್ಯಕಾರಿ ಸಮಿತಿಯ ಮಾತುಕತೆಗಳು, ಸಭೆಗಳು ಎಲ್ಲವೂ ನಡೆಯುತ್ತಿದ್ದದ್ದು ಶಿವಮೊಗ್ಗದಲ್ಲಿ' ಎನ್ನುತ್ತಾರೆ. ಹೀಗೆ ಸಮಾಜವಾದಿ ಪಕ್ಷದ ಪ್ರಮುಖ ಕಾರ್ಯಕರ್ತರು ಶಿವಮೊಗ್ಗದ ಭಾಗದಲ್ಲಿದ್ದರು. ಅವರೆಲ್ಲ ಈ ಹೋರಾಟದಲ್ಲಿ ಭಾಗವಹಿಸಿದರು. ಸೋಷಲಿಸ್ಟ್ ಪಾರ್ಟಿ ಶಿವಮೊಗ್ಗ ಭಾಗದಲ್ಲಿ ತಾತ್ವಿಕವಾಗಿ ಗಟ್ಟಿಯಾಗಿತ್ತು ಮತ್ತು ಚಳವಳಿಯ ಜೀವಂತಿಕೆಯನ್ನು ಉಳಿಸಿಕೊಂಡಿತ್ತು. ಬೆಂಗಳೂರಿನ ಸಮಾಜ ಕಾರ್ಯಕರ್ತರೂ ಸಹ ಅಲ್ಲಿಯೇ ಹೋರಾಟ ಬೆಂಬಲಿಸಿ ಮತ ಪ್ರದರ್ಶನ ಮಾಡಿದರು. ಹೋರಾಟ ಮುಗಿದ ಕೊನೆಯ ಹಂತದಲ್ಲಿ 'ಸಮಾಜವಾದಿ ಯುವಜನ ಸಭಾ' ಸೊಂಡೂರು ಹೋರಾಟದ ಬಗ್ಗೆ ಹೇಳಿಕೆ ನೀಡಿದರು. ಅದೊಂದು ಪ್ರತಿಕ್ರಿಯೆಯನ್ನು ಬಿಟ್ಟರೆ ಯುವಜನ ಸಭಾದ ಸದಸ್ಯರು ಹೋರಾಟದಲ್ಲಿ ಬಾಗವಹಿಸಿದ್ದು ಕಡಿಮೆ. ಜಯಪ್ರಕಾಶ್ ನಾರಾಯಣ ಅವರ ನವನಿರ್ಮಾಣದಲ್ಲಿ ನಂಬಿಕೆ ಇಟ್ಟ ಇವರಾರಿಗೂ ಸೊಂಡೂರು ರೈತ ಚಳವಳಿ ಕಾಡದಿದ್ದದ್ದು ಆಶ್ಚರ್ಯವೇ ಸರೀ. ಮೇಲಾಗಿ ಇವರು ಚಳವಳಿಯ ಕೇಂದ್ರವನ್ನಾಗಿ ಬೆಂಗಳೂರು, ಶಿವಮೊಗ್ಗ ಸಾಗರದಂತಹ ಪ್ರದೇಶಗಳಿಗೆ ಹೆಚ್ಚು ಸೀಮಿತಗೊಳಿಸಿಕೊಂಡಿದ್ದರು.

ಸೊಂಡೂರಿನ ರೈತ ಹೋರಾಟದಿಂದಾಗಿ ಭೂಮಿ ಸಿಕ್ಕಿತು. ಆದರೆ ಇಲ್ಲಿ ಸಮಾಜವಾದಿ ಹೋರಾಟ ಚಳವಳಿಯ ರೂಪವನ್ನು ಪಡೆಯಲಿಲ್ಲ. ಹೋರಾಟದ ನಂತರ ಸೋಷಲಿಸ್ಟ್ ಕಾರ್ಯಕರ್ತರಾರೂ ಸೊಂಡೂರಿನ ಕಡೆ ತಲೆಹಾಕಲಿಲ್ಲ. ಯಾವ ಭೂಮಿಗಾಗಿ ಹೋರಾಟ

ನಡೆಯಿತೋ ಆ ಜನರಿಗೆ ಭೂಮಿ ಕೊಡಿಸಲು ಇನಾಮು ಭೂಮಿಗಾಗಿ ಅರ್ಜಿ ಹಾಕಿಸಲು ಹೋರಾಟಗಾರರು ಇರಲಿಲ್ಲ. ಎಲಿಗಾರ ತಿಮ್ಮಪ್ಪ ಮಾತ್ರ ಈ ಕಾರ್ಯ ಮಾಡುತ್ತಿದ್ದರು. ಅವರಿಗೆ ಮಿತಿಗಳಿದ್ದವು. ಸಮಾಜವಾದಿ ಸಮಾಜವನ್ನು ರೂಪಿಸುವ ಕನಸು ಈ ಭಾಗದಲ್ಲಿ ಮೊಳಕೆಯೊಡೆಯಲೆ ಇಲ್ಲ. ಬದಲಾಗಿ ಮತ್ತೆ ರಾಜಮನೆತನವೇ ಈ ಭಾಗದ ಆಡಳಿತವನ್ನು ಹಿಡಿಯಿತು. ಎಂ.ವೈ. ಘೋರ್ಪಡೆ ಅವರು ಸೊಂಡೂರನ್ನು ೩೩ ವರ್ಷಗಳ ಕಾಲ ವಿಧಾನಸಭಾ ಸದಸ್ಯರಾಗಿ ಮಂತ್ರಿಗಳಾಗಿ ಆಡಳಿತ ನಡೆಸಿದರು. ಸಮಾಜವಾದಿ ಪಕ್ಷವನ್ನು ಜಿಲ್ಲಾಧ್ಯಕ್ಷರಾಗಿದ್ದ ಎಂ.ಪಿ. ಪ್ರಕಾಶ್ ರವರು ಈ ಭಾಗದಲ್ಲಿ ಸಮಾಜವಾದಿ ಪಕ್ಷವನ್ನು ಬೆಳೆಸಲು, ಚಳವಳಿಯನ್ನು ನಿರಂತರವಾಗಿಸುವ ಸಾಧ್ಯತೆ ಇತ್ತು. ಆದರೆ ಈ ಬಗೆಗೆ ಹೋರಾಟದ ನಂತರ ಅವರು ಹೆಚ್ಚು ಗಮನಹರಿಸಲಿಲ್ಲ.

ಸೊಂಡೂರು ಹೋರಾಟ ರಾಜಮನೆತನದ ವಿರುದ್ಧವೂ, ಆಡಳಿತ ಕಾಂಗ್ರೆಸ್ ವಿರುದ್ಧವೂ ಒಂದರೊಳಗೊಂದು ಬೆರೆತಂತಿತ್ತು. ಹಾಗಾಗಿ ಕಾಂಗ್ರೆಸ್ ಸರ್ಕಾರ ರೈತ ಹೋರಾಟವನ್ನು ಹೇಗೆ ಕಂಡಿತು? ಎನ್ನುವುದು ಮುಖ್ಯ. ಮೂಲತಃ ಮುಖ್ಯಮಂತ್ರಿ ದೇವರಾಜ ಅರಸರು ಭೂಮಿ ವಿಷಯವಾಗಿ ರೈತರ ಪರವಾಗಿದ್ದವರು. ಅವರಿಗಿದ್ದ ಕಾಳಜಿಯನ್ನು ನೋಡಿದರೆ ಚಳವಳಿ ಆರಂಭಿಸುವುದಕ್ಕಿಂತ ಮುಂಚೆಯೇ ಬೇಡಿಕೆ ಈಡೇರಿಸಬಹುದಿತ್ತು. ಆದರೆ ಅವರು ತೆಗೆದುಕೊಳ್ಳುವ ನಿರ್ಧಾರ ತಮ್ಮದೇ ಸಚಿವ ಸಂಪುಟದ ಎಂ.ವೈ. ಘೋರ್ಪಡೆಯವರ ವಿರುದ್ಧವಾಗಿತ್ತು. ಇವರು ಸಂಪುಟದ ಪ್ರಭಾವಿ ಮಂತ್ರಿಯಾಗಿದ್ದರು. ಪ್ರಧಾನಿ ಇಂದಿರಾಗಾಂಧಿ ಯವರೊಂದಿಗೆ ನೇರ ಸಂಪರ್ಕವಿಟ್ಟುಕೊಂಡ ರಾಜಕಾರಣಿಯೂ ಆಗಿದ್ದರು. ಮೇಲಾಗಿ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವಾಗ ೭೦ ಎಕರೆ ಖುಷ್ಕಿ ಜಮೀನು ಮಾತ್ರ ತಮ್ಮ ಒಡೆತನದ ಆಸ್ತಿ ಎಂದು ಹೇಳಿಕೆ ನೀಡಿದ್ದರು.

ಅರಸರು ಒಮ್ಮೆ 'ಸೋಷಲಿಸ್ಟ್ ಪಾರ್ಟಿಯವರು ಹೋರಾಟಕ್ಕೆ ತಪ್ಪು ಆಯ್ಕೆ ಮಾಡಿ ಕೊಂಡಿದ್ದಾರೆ' ಎಂದು ಗೇಲಿ ಮಾಡಿದ್ದರು. ''ನಾನು ಇನಾಮು ರದ್ದತಿಯನ್ನೇ ಮಾಡಿದ್ದೀನಿ. ನೀವಲ್ಲಿ ಹುಡುಗಾಟಿಕೆ ಮಾಡಿ ತಿರುಗಾಡುತ್ತಿದ್ದೀರಿ. ನಿಮ್ಮ ಸಮಾಜವಾದಿ ಪಕ್ಷದವರಿಗೇನು ಬೇರೆ ಕೆಲಸ ಇಲ್ಲವೇನು? ಅಲ್ಲಿ ಗೇಣಿನೇ ಇಲ್ಲ'' ಎಂದು ಹೋರಾಟದ ಮುಖಂಡರನ್ನು ಮಾತುಕತೆಗೆ ಕರೆಸಿದಾಗ ಹೇಳಿದ್ದರು. ಮೈಸೂರು ರಾಜ್ಯದಲ್ಲಿ ಗೇಣಿರದ್ದತಿಗೆ ಕಾಯ್ದೆ ಮಾಡುವ ಹೊತ್ತಿಗೆ ಸೊಂಡೂರಿನ ಸಂಸ್ಥಾನದ್ದೇ ಬೇರೆ ಕಾಯಿದೆಗಳು ಇರುವುದು ಗೊತ್ತಾಗದೆ, ಇಲ್ಲಿ ಮಾತ್ರ ಪದ್ಧತಿ ಹಾಗೆ ಮುಂದುವರಿದಿತ್ತು. ಇದನ್ನು ಕಾನೂನು ವಿಭಾಗದವರು ಮುಖ್ಯಮಂತ್ರಿಗಳಿಗೆ ವಿವರಿಸಿದಾಗ ಸೊಂಡೂರಿನಲ್ಲಿ ಗೇಣಿ ಪದ್ಧತಿ ಇರುವ ಬಗ್ಗೆ ತಿಳಿಯಿತು. ಆ ನಂತರ ಇವರು ಹೋರಾಟವನ್ನು ಗಂಭೀರವಾಗಿ ಪರಿಗಣಿಸಿದರು. ಆದರೆ ಎಂ.ವೈ. ಘೋರ್ಪಡೆಯವರ ಕಾರಣಕ್ಕಾಗಿ ಮೌನವಾದರು. ಹೋರಾಟದ ಬಗೆಗೆ ಹೇಳಿಕೆ ನೀಡಿದಾಗಲೂ ಅದು ರೈತಪರವಾಗಿಲಿಲ್ಲ. ಒಂದೆರಡು ಬೇಡಿಕೆಗಳನ್ನು ಹೊರತುಪಡಿಸಿದರೆ ರಾಜಮನೆತನವನ್ನು ಪೋಷಿಸುವ ನಿರ್ಣಯಗಳಿದ್ದವು. ಸೋಷಲಿಸ್ಟ್ ಪಾರ್ಟಿಯ ಕಾರ್ಯಕರ್ತರು 'ಮುಖ್ಯಮಂತ್ರಿಗಳು ಸೊಂಡೂರಿಗೆ ಬಂದು ಪರಿಶೀಲಿಸಬೇಕೆಂದು' ಆಹ್ವಾನಿಸಿದರು. ಆದರೆ ಅವರು ೪೯ ದಿನಗಳ ಕಾಲ ಹೊರಾಟ ನಡೆದರೂ ಸೊಂಡೂರಿಗೆ ಅರಸರು ಬರಲಲ್ಲ.

ವಿಧಾನಮಂಡಲದ ಕಲಾಪಗಳ ಚರ್ಚೆಯನ್ನು ಗಮನಿಸಿದರೆ ಮುಖ್ಯಮಂತ್ರಿಗಳ ಗೈರು ಹಾಜರಿಯು ಹೆಚ್ಚಿದೆ. ಇದಕ್ಕೆ ಬೇರೆ ಕಾರಣ ಇರಬಹುದಾದರೂ ಸೊಂಡೂರಿನ ಬಗೆಗಿನ ಚರ್ಚೆಗೆ ಪ್ರತಿಕ್ರಿಯಿಸಬೇಕಾಗುತ್ತದೆ ಎನ್ನುವುದು ಇವರ ಗೈರು ಹಾಜರಿಗೆ ಕಾರಣವಿರಬಹುದು. ಹೋರಾಟದ ಕೊನೆಗೆ ಲಾಠಿಚಾರ್ಜ್ ಆಗಿ ಚಳುವಳಿಯಲ್ಲಿ ಹಿಂಸೆ ಆದಗಲೂ ಪೋಲೀಸ್ ದೌರ್ಜನ್ಯದ ವಿರುದ್ಧ ಅರಸು ಮಿದುವಾದ ಧೋರಣೆ ಸುಳಿದರು. ಹೋರಾಟದ ನಂತರ ೧೯೭೪ರಲ್ಲಿ ಎಲಿಗಾರ ತಿಮ್ಮಪ್ಪನನ್ನು ಐ.ಜಿ.ಪಿ, ಲಾಕಪ್‌ನಲ್ಲಿಟ್ಟು ಹಿಂಸೆಕೊಟ್ಟಾಗಲೂ ಈ ಬಗ್ಗೆ ಅರಸು ಪ್ರತಿಕ್ರಿಯೆ ಮೌನವಾಗಿತ್ತು. ಈ ಎಲ್ಲಾ ಕಾರಣದಿಂದಾಗಿ ಕಾಂಗ್ರೆಸ್ ಸರ್ಕಾರ ಹೋರಾಟವನ್ನು ಬೆಂಬಲಿಸುವ ಮತ್ತು ಸಂಪುಟದ ಅರ್ಥಮಂತ್ರಿಯನ್ನು ವಿರೋಧಿಸುವ ಸಂದಿಗ್ಧತೆಯಲ್ಲಿ ಉಳಿಯಿತು. ಆದರೆ ಇನಾಮು ಅಬಾಲಿಷನ್ ಆಕ್ಟ್ ತರುವ ಮೂಲಕ ಗೇಣಿಯನ್ನು ರದ್ದುಗೊಳಿಸಿ ಉಳುವವನೆ ಭೂ ಒಡೆಯ ಎಂಬ ಕಾನೂನನ್ನು ಜಾರಿಗೊಳಿಸಲಾಯಿತು. ಇದು ಸೊಂಡೂರಿನಲ್ಲಾದ ಐತಿಹಾಸಿಕ ಪರಿವರ್ತನೆ. ಅರಸು ಕೆಲವು ಒತ್ತಡಗಳಿಗೆ ಮಣಿದರಾದರೂ ಅಂತಿಮವಾಗಿ ಇನಾಂ ರದ್ದುಗೊಳಿಸುವ ಮೂಲಕ ರೈತ ಪರವಾದ

ಕಾಳಜಿಯನ್ನು ಎತ್ತಿಹಿಡಿದರು. ಕಾಗೋಡು ತಿಮ್ಮಪ್ಪ 'ಕಾಗೋಡು ಚಳುವಳಿಯ ಸಂಧರ್ಭಕ್ಕೆ ಕಾಂಗ್ರೆಸ್ ಹೋರಾಟದ ಬಗ್ಗೆ ತಳೆದ ನಿಲುವು ತುಂಬ ಕಠೋರವಾಗಿತ್ತು. ಕೊನೆಗೂ ಸ್ಪಂದಿಸಲಿಲ್ಲ. ಆದರೆ ಸೊಂಡುರು ಹೋರಾಟಕ್ಕೆ ಕಾಂಗ್ರೆಸ್ ಸರ್ಕಾರ ತಡವಾಗಿಯಾದರೂ ಸ್ಪಂದಿಸಿತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ದೇವರಾಜ ಅರಸರು ಇರುವ ಕಾರಣಕ್ಕೆ ಸೊಂಡೂರಿನ ಜನರಿಗೆ ಭೂಮಿ ಸಿಗುವಂತಾಯಿತು' ಎನ್ನುತ್ತಾರೆ. ಹೀಗೆ ಸೊಂಡೂರು ಹೋರಾಟದಿಂದ ಭೂಮಿ ಸಿಕ್ಕಿತು ಎನ್ನುವುದಾದರೆ ಸೋಷಲಿಸ್ಟ್ ಪಾರ್ಟಿಯ ಹೋರಾಟದಂತೆ ಕಾಂಗ್ರೆಸ್ ಸರ್ಕಾರದ ಸ್ಪಂದನೆ ಮುಖ್ಯ ಎನ್ನುವುದನ್ನು ಮರೆಯುವಂತಿಲ್ಲ. ಈ ಹೋರಾಟದಿಂದ ಅಮೂಲಾಗ್ರ ಬದಲಾವಣೆ ಸಾಧ್ಯವಾಗಲಿಲ್ಲ. ಆದರೆ ರೈತರಲ್ಲಿ ಒಂದು ಸಣ್ಣ ಬದಲಾವಣೆಯ ಬೀಜ ಬಿತ್ತಿತ್ತು.

## ೧೩. ಹೋರಾಟಕ್ಕೆ ಶ್ರಮಿಸಿದವರು

ಅಂತಿಮವಾಗಿ ಸೊಂಡೂರು ಹೋರಾಟ ಸಾಧ್ಯವಾದದ್ದು ಯಾರಿಂದ ಎಂದುಕೊಂಡರೆ ಒಂದು ಸಮೂಹವೇ ಎದುರು ನಿಲ್ಲುತ್ತದೆ. ಈ ಹೋರಾಟ ಒಬ್ಬರ ವೈಯಕ್ತಿಕ ಯಶಸ್ಸಲ್ಲ. ಅದು ಅಂತಿಮವಾಗಿ ಸಮಾನಾಸಕ್ತ ಸಮೂಹದ ಯಶಸ್ಸೆ ಆದರೂ ಸಮೂಹ ದೊಳಗೆ ಭಿನ್ನ ವ್ಯಕ್ತಿತ್ವಗಳು ಒಂದು ಹೋರಾಟಕ್ಕೆ ಬೇರೆ ಬೇರೆ ರೀತಿಯ ಕಾಣಿಕೆ ನೀಡಿರುತ್ತವೆ. ಹಾಗಾಗಿ ಚಳವಳಿಯಲ್ಲಿ ಶ್ರಮಿಸಿದ ವ್ಯಕ್ತಿತ್ವಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಭಾಗವಹಿಸುವಿಕೆಯ ಉಲ್ಲೇಖಗಳು ಈ ಹಿಂದೆ ಬಂದಿರುವುದರಿಂದ ಇಲ್ಲಿ ಸಂಕ್ಷಿಪ್ತವಾಗಿ ಹೋರಾಟಕ್ಕೆ ಶ್ರಮಿಸಿದವರ ಚಿತ್ರಕೊಡಲಾಗಿದೆ.

ಸೊಂಡೂರಿನಲ್ಲಿ ಪ್ರತಿಭಟನೆಯ ಬೀಜ ಬಿತ್ತದ್ದು ಯಜಮಾನ ಶಾಂತರುದ್ರಪ್ಪ. ಇವರು ಬಳ್ಳಾರಿಯವರು. ವಿಠಲ ಪ್ರೆಸ್ ನಡೆಸಿಕೊಂಡು 'ಯಜಮಾನ್ ಅಂಡ್ ಬ್ರದರ್' ಎನ್ನುವ ಪುಸ್ತಕದಂಗಡಿ ಇಟ್ಟುಕೊಂಡು ಇದ್ದವರು. ಬಳ್ಳಾರಿಗೆ ಆಂಧ್ರದ ರೈತ ಹೋರಾಟಗಳ ಪ್ರಭಾವವಿತ್ತು. ತೆಲಂಗಾಣ ಹೋರಾಟವು ಇಲ್ಲಿಯ ಬಹುತೇಕರನ್ನು ಪ್ರಭಾವಿಸಿತು. ಯಜಮಾನರೂ ಇದರಿಂದ ಪ್ರಭಾವಿತರಾದರು. ಬಳ್ಳಾರಿಯು ಹಲವು ಸಂಘರ್ಷ ಪ್ರತಿಭಟನೆಯ ತವರಿನಂತಿತ್ತು. ರಂಜಾನ್ ಸಾಬ್, ಮಹಾಬಳೇಶ್ವರಪ್ಪ ಇಂತಹವರ ಗೆಳೆತನ ಯಜಮಾನರನ್ನು ಹೋರಾಟಗಾರರನ್ನಾಗಿ ಪ್ರಭಾವಿಸಿತು. ಇವರು ಕನ್ನಡ ಪುಸ್ತಕಗಳನ್ನು ತಲೆಮೇಲೆ ಹೊತ್ತು ಮಾರಾಟ ಮಾಡಿದ ಪುಸ್ತಕ ಪ್ರೇಮಿಯೂ ಹೌದು. ೪೦ರ ದಶಕದಲ್ಲಿಯೇ 'ಸೊಂಡೂರು ವಿಮೋಚನಾ ಸಮರ ಸಮಿತಿ' ಯನ್ನು ಹುಟ್ಟು ಹಾಕಿದರು. ಇದರ ಮೂಲಕ ಸೊಂಡೂರು ರಾಜರನ್ನು ವಿರೋಧಿಸಿ ಪ್ರತಿಭಟನೆಗಳನ್ನು ಪ್ರಾರಂಭಿಸಿದರು. ಸೊಂಡುರಿನ ಯಶವಂತರಾವ್ ಘೋರ್ಪಡೆ ಮೂಲವಂಶಜರಲ್ಲ, ಇವರು ಕುಮಾರಸ್ವಾಮಿಯ ದೇವಸ್ಥಾನದ ಮೂಲ ಟ್ರಸ್ಟಿ ರಾಜವಂಶ ಅಲ್ಲ ಎನ್ನುವುದೇ ಇವರು ಹೋರಾಟದ ಪ್ರಮುಖ ಧ್ಯೇಯಗಳಾಗಿದ್ದವು. ಕುಮಾರಸ್ವಾಮಿಯ ಪ್ರತಿ ಜಾತ್ರೆಗೂ ದರ್ಶನ ಕರ ವಿರೋಧಿ ಪ್ರತಿಭಟನೆ ಮಾಡುತ್ತಾ ಬಂದರು ಮೂಲತಃ ಗಾಂಧಿವಾದಿಗಳಾದ ಇವರು ಹೋರಾಟವೆಂದರೆ ಕೋರ್ಟು, ಕಛೇರಿ, ಅರ್ಜಿಗಳ ಮೂಲಕ ಇತ್ಯಾರ್ಥ ಆಗಬೇಕು ಎಂದು ನಂಬಿದವರು. ಕರ್ನಾಟಕ ಏಕೀಕರಣದಲ್ಲಿಯೂ, ಬಳ್ಳಾರಿಯಲ್ಲಿ ಕನ್ನಡಪರ ಚಳವಳಿಯಲ್ಲಿಯೂ ಇವರದು ಮುಂಚೂಣಿ ನಾಯಕತ್ವ. ೧೯೭೩ ಹೋರಾಟದಲ್ಲಿ ಚಳವಳಿಯುದ್ದಕ್ಕೂ ಇದ್ದರು. ಈವರೆಗಿನ ಅವರ ಒಂಟಿತನದ ಹೋರಾಟಕ್ಕೆ ಒಂದು ಸಾಮೂಹಿಕ ಧ್ವನಿ ಬಂದಿತ್ತು. ೧೯೭೩ರಲ್ಲಿ ಹೋರಾಟ ಆಗುವುದಕ್ಕೆ ಈ ಭಾಗದಲ್ಲಿ ಅವರು ಹುಟ್ಟು ಹಾಕಿದ ಹೋರಾಟ ಪರಂಪರೆಯೂ ಕಾರಣವಾಯಿತು.

ಎಲಿಗಾರ ತಿಮ್ಮಪ್ಪ ಈ ಹೋರಾಟದ ರುವಾರಿ, ಯಜಮಾನರು ಮಂದಗಾಮಿ ಹೋರಾಟಗಾರರಾದರೆ, ಇವರು ತೀವ್ರಗಾಮಿ. ಕೋರ್ಟು ಕಛೇರಿಗಳ ಮೂಲಕ ನಮ್ಮ ಹೋರಾಟಕ್ಕೆ ಯಶ ದೊರೆಯಲಾರದು ಎಂದು ನಂಬಿದವರು. ಎಂ. ವೈ. ಘೋರ್ಪಡೆ ಇವರು ಜೊತೆಯಲ್ಲೆ ಓದಿದವರು. ಶಾಲೆಗಳಲ್ಲಿ ಘೋರ್ಪಡೆಯವರಗೆ ಪ್ರತ್ಯೇಕ ಆಸನದಲ್ಲಿ ಕೂರಿಸಿ ಪಾಠ ಮಾಡುವಾಗಲೂ 'ಆತನಿಗೇಕೆ ಪ್ರತ್ಯೇಕ ಆಸನ.. ನಮ್ಮಂತೆ ಆತನೂ ಕುಳಿತುಕೊಳ್ಳಲಿ..' ಎಂದು ಪ್ರತಿಭಟಿಸುತ್ತಿದ್ದರಂತೆ. ಹೀಗೆ ಬಾಲ್ಯದಿಂದಲೂ ರಾಜಮನೆತವನ್ನು ವಿರೋಧಿಸುತ್ತ ಬಂದವರು. ಸೊಂಡೂರನ್ನು ಭಾರತದ ಒಕ್ಕೂಟದಲ್ಲಿ ಸೇರಿಸುವಾಗಲೂ ಹೋರಾಟದಲ್ಲಿ ಇದ್ದರು. ಯಜಮಾನ ಶಾಂತರುದ್ರಪ್ಪನವರ

ಪ್ರತಿಭಟನೆಗಳಿಗೆ ಸೊಂಡೂರಿನಲ್ಲಿ ತಮ್ಮ ಸಹಚರರೊಂದಿಗೆ ಬೆಂಬಲ ದೊರೆಯುತ್ತಿದ್ದುದು ಇವರಿಂದಲೆ ಮೂಲತಃ ಕಾಂಗ್ರೆಸ್ ಇಬ್ಭಾಗವಾದಾಗ ಎಸ್. ನಿಜಲಿಂಗಪ್ಪನವರ ಸಂಸ್ಥಾ ಕಾಂಗ್ರೆಸ್ಸಿಗೆ ಸೇರಿದವರು. ಭೂ ಅಭಿವೃದ್ಧಿ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷರಾಗಿ ಉತ್ತಮ ಕೆಲಸ ನಿರ್ವಹಿಸಿದರು. ಸೊಂಡುರಿನ ರೈತ ಚಳವಳಿಯನ್ನು ಪ್ರಾರಂಭಿಸಲು ಸಂಸ್ಥಾ ಕಾಂಗ್ರೆಸ್ಸಿನ ನಾಯಕರನ್ನು ಕೇಳಿಕೊಂಡರು. ಭೂಮಾಲಿಕರು ತುಂಬಿಕೊಂಡ ಸಂಸ್ಥಾ ಕಾಂಗ್ರೆಸ್ ನಾಯಕರು ಭೂಮಿಗಾಗಿ ನಡೆಯುವ ಹೋರಾಟಕ್ಕೆ ಸಹಜವಾಗಿ ಬೆಂಬಲಿಸಲಿಲ್ಲ. ಇದರಿಂದಾಗಿ ತಿಮ್ಮಪ್ಪನವರು ಸಂಸ್ಥಾ ಕಾಂಗ್ರೆಸ್ ತೊರೆದು ಸೊಂಡುರಿನಲ್ಲೊಂದು 'ರೈತ ಸಂಘ ಸ್ಥಾಪಿಸಿದರು'. ಇದರ ಮೊದಲ ಅಧ್ಯಕ್ಷರು ಇವರೇ ಆದರು. ಸೋಷಲಿಸ್ಟ್ ಪಾರ್ಟಿಯ ಜೆ.ಎಚ್.ಪಟೇಲ್, ಕೆ.ಜಿ.ಮಹೇಶ್ವರಪ್ಪ ಇವರನ್ನು ಸಂಪರ್ಕಿಸಿ ಹೋರಾಟವನ್ನು ರೂಪಿಸಿದರು. ಹೋರಾಟದ ಪ್ರಾರಂಭದಿಂದಲೂ ಕೊನೆಯವರೆಗೆ ಸ್ಥಳೀಯ ನಾಯಕರಾಗಿ ಇವರು ನಿರ್ವಹಿಸಿದ ಪಾತ್ರ ಗಮನಾರ್ಹ. ಹೋರಾಟದ ನಂತರ ರಾಜಮನೆತನದಿಂದ ಚಿತ್ರಹಿಂಸೆ ಅನುಭವಿಸಿದರು. ಸ್ಥಳೀಯವಾಗಿ ರಾಜಮನೆತನಕ್ಕೆ ಇಂತಹ ಪ್ರಭಾವಿ ಪ್ರತಿಸ್ಪರ್ಧಿ ಇರದೆ ಹೋಗಿದ್ದರೆ ಹೋರಾಟ ಸಾಧ್ಯವಾಗುತ್ತಿರಲಿಲ್ಲ.

ಎಲ್ಲರೂ ರಾಜರನ್ನು ಆರಾಧನಾಭಾವದಿಂದ ನೋಡುವ ಹೊತ್ತಲ್ಲಿ ಸೊಂಡೂರು ತಾಲೂಕಿನ ಕೆಲವರು ರಾಜರನ್ನು ವಿರೋಧಿಸುವ ಧೈರ್ಯವನ್ನು ತೋರಿದರು. ಅಂತವರ ಭಾಗವಹಿಸುವಿಕೆ ಕಡಿಮೆ ಇದ್ದರೂ ಇವರಿಂದಾಗಿಯೇ ಚಳವಳಿಗೊಂದು ಶಕ್ತಿ ಬಂದಿತು. ಇಲ್ಲದೆ ಹೋಗಿದ್ದರೆ ಸೋಷಲಿಸ್ಟ್ ಕಾರ್ಯಕರ್ತರು ಮಾತ್ರ ಭಾಗವಹಿಸಿದ ಜನರಿಲ್ಲದ ಹೋರಾಟವಾಗುವ ಸಾಧ್ಯತೆ ಇತ್ತು. ನರಸಾಪುರದ ಷಣ್ಮುಖಪ್ಪ ದೇಸಾಯಿ ಈ ಭಾಗದ ರೈತರನ್ನು ಒಗ್ಗೂಡಿಸುವಲ್ಲಿ ಶ್ರಮಿಸಿದರು. ಸ್ವತಃ ಅವರು ಹೋರಾಟದಲ್ಲಿ ಭಾಗವಹಿಸಿ ರೈತರನ್ನು ಹುರಿದುಂಬಿಸಿದರು. ತಿಮ್ಮಪ್ಪನವರಿಗೆ ಪ್ರಮುಖ ಶಕ್ತಿಯಂತೆಯೂ ಇದ್ದರು. ಅವರನ್ನು ಮಾತನಾಡಿಸಿದಾಗ.. 'ಅದು ದೊಡ್ಡ ಹೋರಾಟ ಬಿಡ್ರಿ... ಅಂಥ ಹೋರಾಟ ಸೊಂಡೂರಿನಲ್ಲಿ ಹಿಂದೆಯೂ ಆಗಿರಲಿಲ್ಲ.. ಇನ್ನು ಮುಂದೆಯೂ ಆಗಲ್ಲ. ನಾವೆಲ್ಲ ರಾಜರ ಕಡೆಯವರಿಂದ ತುಂಬಾ ಕಷ್ಟ ಅನುಭವಿಸಿದ್ವಿ, ಆದ್ರೂ ಭೂಮಿ ಸಿಕ್ತು.. ಈಗ ಆ ಭೂಮಿ ಸಿಕ್ಕವರೇ ಘೋರ್ಪಡೆಯವರನ್ನು ಮೀರಿಸೋ ರೀತಿ ಐದಾರ' ಎನ್ನುತ್ತಾರೆ. ಪಾತ್ರ ಸೀನಪ್ಪ ಹೋರಾಟದಲ್ಲಿ ವಿಶಿಷ್ಟ ಪಾತ್ರವಹಿಸಿದರು. ವೈಯಕ್ತಿಕವಾಗಿ ಎಲಿಗಾರ ತಿಮ್ಮಪ್ಪನನ್ನು ವಿರೋಧಿಸುತ್ತಿದ್ದರು ಎಂದು ಅವರನ್ನು ಮಾತನಾಡಿಸಿದಾಗ ತಿಳಿಯಿತು. 'ಹೋರಾಟಕ್ಕೆ ಆತನೇನು ಕಳ್ಕೊಂಡ.. ಮಕ್ಕಳಿಗೆಲ್ಲ ಆಸ್ತಿ ಮಾಡಿದ.. ಹೋರಾಟಕ್ಕೆ ಹಣ ಖರ್ಚು ಮಾಡಿದ್ದು ನಾನು' ಎನ್ನುತ್ತಾರೆ. ಸಾರಾಯಿ ಕಂಟ್ರಾಕ್ಟ್ ಸೀನಪ್ಪನೇ ಹಿಡಿದುದ್ದರಿಂದ ಚಳವಳಿಯಲ್ಲಿ ಭಾಗವಹಿಸುವ ರೈತರಿಗೆ ಈತ ಸಾರಾಯಿಯನ್ನು ಹಂಚುತ್ತಿದ್ದರಂತೆ ಚಳುವಳಿಯ ಕೊನೆಗೆ ೧೪೪ ಸೆಕ್ಷನ್ ಜಾರಿಯಾದಾಗ ಪೋಲಿಸರಿಂದ ಒದೆ ತಿಂದು ತೀವ್ರ ಗಾಯಗೊಂಡು ಆಸ್ಪತ್ರೆ ಸೇರಿದ್ದರು. ಆ ಗಾಯದ ಗುರುತನ್ನು ತೋರಿಸುತ್ತ 'ಇದೇ ನೋಡ್ರಿ ಹೋರಾಟದ ಗುರ್ತು' ಎಂದು ಹೋರಾಟ ಸಂದರ್ಭದ ಖಾಸಗಿ ವಿವರಗಳನ್ನು ಹೇಳುತ್ತ ಹಾಸ್ಯಭರಿತವಾಗಿ ವಿವರಿಸುತ್ತಾರೆ. ಬಾಚಿಗೊಂಡನಹಳ್ಳಿಯ ಕೆ. ಚನ್ನವಸವನಗೌಡರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾಗ ೧೯೭೨ರಲ್ಲಿ ಸದನದಲ್ಲಿ ಎಂ.ವೈ.ಘೋರ್ಪಡೆ ಇವರನ್ನು ಅಕ್ರಮ ಗಣಿಗಾರಿಕೆ ವಿಷಯವಾಗಿ ಪ್ರಶ್ನಿಸಿದ್ದರು ಆದರೆ ಇವರನ್ನು ಯಾರು ಬೆಂಬಲಿಸಿದಲಿಲ್ಲ. ಇವರು ಹೋರಾಟದಲ್ಲಿ ಭಾಗವಹಿಸಲಿಲ್ಲ. ಮುಂದೆ ಎಂ.ವೈ. ಘೋರ್ಪಡೆ ಅವರನ್ನು ಸನ್ಮಾನಿಸಿದ್ದಾಗಿ ತಮ್ಮ ಆತ್ಮ ಚರಿತ್ರೆಯಲ್ಲಿ ಬರೆಯುತ್ತಾರೆ.

ಸೊಂಡೂರಿನ ಸ್ಥಳೀಯರಿಗಿಂತ ಸುತ್ತಮುತ್ತಲ ಹಳ್ಳಿಗಳ ರೈತರು ಈ ಹೋರಾಟದಲ್ಲಿ ಭಾಗವಹಿಸಿದ್ದು ಹೆಚ್ಚು. ಅವರು ನೇರವಾಗಿ ರಾಜರ ಅಧೀನದಲ್ಲಿದ್ದದ್ದು ಕಡಿಮೆ. ಹಾಗಾಗಿ ಸ್ಥಳೀಯರಿಗಿಂತ ಇವರು ರಾಜಮನೆತನದ ಎದುರಿನ ಹೋರಾಟದಲ್ಲಿ ಭಾಗವಹಿವುದು ಭಯದ ವಿಷಯ ಆಗಿರಲಿಲ್ಲ. ಮೇಲಾಗಿ ಇನಾಮು ಭೂಮಿ ಇದ್ದದ್ದು ಹೆಚ್ಚು ಗ್ರಾಮೀಣ ಭಾಗದ ರೈತರವು. ಅವರೆಂದರೆ ಹರಿಜನ ಬುಡ್ಡಮ್ಮ, ಬಂಡ್ರಿಗ್ರಾಮದ ಸೋಮಪ್ಪ ನಾಯ್ಕರ ಹೊನ್ನೂರಪ್ಪ. ಟಿ.ಕೃಷ್ಣಪ್ಪ, ರೈತ ಸಂಘದ ಡೈರೆಕ್ಟರ್ ಜುಮ್ಮನಗೌಡ, ಸಣ್ಣ ಬಸಪ್ಪ, ಭುಜಂಗ ನಗರದ ವಡ್ಡನಕಟ್ಟೆ ಶಾಂತಮ್ಮ, ದೌಲತ್ ಪುರದ ಪಂಚಾಯ್ತಿ ಸದಸ್ಯ, ಆರ್.ಶಿವಮೂರ್ತಿ, ಪ್ರಮುಖ ರೈತ ವಿ.ನಾಗಪ್ಪ ಕಂಪ್ಲಿ ಇಮಾಮ್ ಸಾಬ್, ಕೃಷ್ಣನಗರದ ಮಾಳಿಗೆಮನೆ ಮಾರಪ್ಪ, ಮುರಡಿ ಕೃಷ್ಣಪ್ಪ, ರೈತ ಸಂಘದ ಉಪಾಧ್ಯಕ್ಷ ಜಿಗಿನಿಹಳ್ಳಿ ಬಸವನಗೌಡ, ತ್ಯಾಗದಾಳು ಪಂಚಾಯ್ತಿ ಸದಸ್ಯ ಲತೀಫ್ ಸಾಹೇಬ್, ನರಸಾಪುರದ ಗಂಗಪ್ಪ, ಸಿ.ಭೀಮಪ್ಪ, ಕೆ ಚೌಡಪ್ಪ, ಆರ್.ಪರಮೇಶ್ವರಪ್ಪ, ವಿ.ಹನುಮಂತಪ್ಪ, ದುರ್ಗಪ್ಪ, ಕೆ.ತಿಮ್ಮಪ್ಪ,

ರೇವಗಲ್ ಕುಮಾರ ಸ್ವಾಮಿ, ಸುಬ್ಬಯ್ಯ, ಮರಿಈರಪ್ಪ, ಹನುಮಂತಪ್ಪ, ಗಿರಿಯಪ್ಪ, ಲಿಂಗಾರೆಡ್ಡಿ, ದುರ್ಗಪ್ಪ, ಕೆ.ತಿಮ್ಮಪ್ಪ, ಕೃಷ್ಣಪ್ಪ, ಕೃಷ್ಣನಗರದ ಪಂಚಾಯ್ತಿ ಅಧ್ಯಕ್ಷ ಇಮಾಮ್ ಸಾಬ್, ಮೇದಾರ ಹುಲ್ಲೆಮ್ಮ, ಮೇದಾರ ಭೀಮಕ್ಕ, ಎನ್.ಎಂ. ಶಿವದೇವಮ್ಮ ಹೀಗೆ ಹೀಲ್ಲೇಖಗೊಂಡ ಮತ್ತು ಮಾಹಿತಿ ಸಿಕ್ಕ ಹೆಸರುಗಳು. ಇವರು ತಮ್ಮ ತಮ್ಮ ಗ್ರಾಮಗಳಿಂದ ರೈತರನ್ನು ಕರೆತಂದು ಚಳುವಳಿಯಲ್ಲಿ ಭಾಗವಹಿಸುತ್ತಿದ್ದರು. ಇವರ ಭಾಗವಹಿಸುವಿಕೆ ಹಿಂದೆ 'ಭೂಮಿ ಸಿಗುತ್ತದೆ.. ನಾವೇ ಒಡೆಯರಾಗುತ್ತೇವೆ' ಎಂಬ ಕನಸಿತ್ತು. ಇನ್ನು ಕೆಲವರು ಇನಾಮು ಭೂಮಿ ಇಲ್ಲದ  ನಾಯಕರೂ ಭಾಗವಹಿಸಿದರು. ಪಾತ್ರ ಸೀನಪ್ಪ ಮಾತನಾಡುತ್ತ 'ನಮ್ ಭೂಮಿ ಇದ್ದು ಹೋರಾಡಿದ್ರೆ ಸ್ವಾರ್ಥ ಆಗುತ್ತೆ.. ಭೂಮಿ ಇರೋ ರೈತರು ಬಾಳ ಜನ ಬರಿಲ್ಲ.. ಅವರೆಲ್ಲ, ರಾಜರು ಅಂದ್ರೆ ಹೆದ್ರಿ ತತ್ತಿ ಹಾಕ್ತಿದ್ರು.. ನಾವು ಅಂಥವರ ಪರವಾಗಿ ಹೋರಾಟದಲ್ಲಿ ಭಾಗವಸಿದ್ವಿ' ಎನ್ನುತ್ತಾರೆ. ಹಾಗೆ ನೋಡಿದರೆ ಈಗಾಗಲೇ ಇನಾಮು ಭೂಮಿ ಹೆಚ್ಚು ಇರುವ ನಾಯಕ (ವಾಲ್ಮೀಕಿ) ಸಮುದಾಯ ಈ ಹೋರಾಟದಲ್ಲಿ ಭಾಗವಹಿಸಿದ್ದು ಬೆರಳೆಣಿಕೆಯ ಜನರು ಮಾತ್ರ. ಕುಮಾರಸ್ವಾಮಿ ಜಮೀನಿಗಾಗಿ  ಹೋರಾಟ ಇದಾಗಿದ್ದರಿಂದ ಕೆಲವರಿಗೆ ದೇವರ ಎದುರಿನ ಹೋರಾಟವಾಗಿ ಕಂಡಿತು. ಹರಿಜನ ತಿಂದಪ್ಪನನ್ನು  ಮಾತನಾಡಿಸಿದಾಗ 'ದೇವರ ಭೂಮಿ ತೊಗೊಂಡು ಯಾರು ಉದ್ಧಾರ ಆಗ್ಯಾರೀ.. ರಾಜರೇನು ಮಾಡಿದ್ರು.. ದೇವರ ಭೂಮಿ ನಿಮಗೆ ಕೊಟ್ವೇವಿ.. ಕುಮಾರಸ್ವಾಮಿಗೆ ಬಿಟ್ಟಿದ್ದು.. ಬಂದದ್ದ ಅನುಭವಸ್ರಿ ಅಂತ ಅಂದ್ರು.. ಆಮ್ಯಾಲೆ ಬಾಳ ಜನಕ್ಕೆ ಕೇಡು ಆಯ್ತು' ಎಂದರು. ಅಂದರೆ ದೇವರ ಹೆಸರಲ್ಲಿ ಹುಟ್ಟಿದ ಭಯವು ರೈತರಲ್ಲಿ ಚಳವಳಿಯಲ್ಲಿ ಭಾಗವಹಿಸುವುದನ್ನು ತಡೆಯಿತು.

'ಕಾಗೋಡು ಸತ್ಯಾಗ್ರಹಕ್ಕೆ ಲೋಹಿಯಾ.. ಸೊಂಡೂರು ಹೋರಾಟಕ್ಕೆ ಜಾರ್ಜ್' ಎಂದು ಸಮಾಜವಾದಿ ಕಾರ್ಯಕರ್ತರು ಮೆರವಣಿಗೆಯಲ್ಲಿ ಕೂಗುತ್ತಿದ್ದರು. ಈ ಹೋರಾಟಕ್ಕೆ ಹೆಚ್ಚು ಜನಪ್ರಿಯತೆ ಮತ್ತು ಗಂಭೀರತೆ ಸಿಕ್ಕಿದ್ದು ಜಾರ್ಜ್ ಫರ್ನಾಂಡಿಸ್ ಅವರಿಂದ. ಹೋರಾಟಕ್ಕೂ ಮುನ್ನ ಸೊಂಡೂರಿನಲ್ಲಿ ಬಹಿರಂಗ ಸಭೆ ಮಾಡಿ ರಾಜಮನೆತನವನ್ನು ಕಟುವಾಗಿ ಟೀಕಿಸಿದರು. ಅವರು ಆಗ ಸಮಾಜವಾದಿ ಪಾರ್ಟಿಯ ರಾಷ್ಟ್ರೀಯ ಅಧ್ಯರಾಗಿದ್ದರು. ಕಾಂಗ್ರೆಸ್ ಪಕ್ಷದ ಪ್ರಬಲ ವಿರೋಧಿ ನಾಯಕರು ಕೂಡ, ಸೊಂಡೂರು ಭೂ ಹೋರಾಟದ ರಾಷ್ಟ್ರೀಯ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಪಕ್ಷದ ಪ್ರಬಲ ವಿರೋಧಿ ನಾಯಕರು ಕೂಡ, ಸೊಂಡೂರು ಭೂ ಹೋರಾಟದ ರಾಷ್ಟ್ರೀಯ ಸಮಿತಿಯ ಅಧ್ಯಕ್ಷರಾಗಿದ್ದರು. ಆದರೆ ಜಾರ್ಜ್ ಹೋರಾಟದ ಸಂದರ್ಭದಲ್ಲಿ ಸೊಂಡೂರಿಗೆ ಬರಲಿಲ್ಲ. ಭಾರತದ ವಿವಿಧ ಕಡೆಗಳಲ್ಲಿ ಅವರು ಭಾಗವಹಿಸಿದ ಸಭೆಗಳಲ್ಲಿ ಇಲ್ಲಿ ನಡೆಯುವ ಹೋರಾಟದ ಬಗ್ಗೆ ಪ್ರಸ್ತಾಪಿಸಿದರು. ಆಯಾ ರಾಜ್ಯದ ಸಮಾಜವಾದಿ ನಾಯಕರನ್ನು ಹೋರಾಟದಲ್ಲಿ ಭಾಗವಹಿಸಲು ಪ್ರೇರೇಪಿಸಿದರು. ದಾವಣಗೆರೆಯ ಕೆ.ಜಿ.ಮಹೇಶ್ವರಪ್ಪ ಆಗ ರಾಜ್ಯ ಸಮಾದಿವಾದಿ ಪಕ್ಷದ ಅಧ್ಯಕ್ಷರಾಗಿದ್ದರು. ಇವರನ್ನು 'ಡಿಕ್ಟೇಟರ್ ಆಫ್ ಸ್ಟ್ರಗಲ್' ಎಂದು ಸಮಾಜವಾದಿ ಪಕ್ಷ ನೇಮಿಸಿತ್ತು. ಇವರು ಹೋರಾಟದ ೪೬ ದಿನವೂ ಸೊಂಡೂರಿನಲ್ಲಿದ್ದು ಅದರ ಯಶಸ್ಸಿಗೆ ಶ್ರಮಿಸಿದರು. ಈ ಹೋರಾಟದ ಸಂದರ್ಭದಲ್ಲಿ ಅವರ ನಿಲುವು ಗಟ್ಟಿಯಾಗಿತ್ತು. ರಾಜಮನೆತನ ಆಮಿಗಳನ್ನು ಒಡ್ಡಿದರೂ ಅದಕ್ಕೆ ಬಲಿಯಾಗಲಿಲ್ಲ. ಹೈಕೋರ್ಟಿನಲ್ಲಿ ಲೀಡಿಂಗ್ ಆಗಿದ್ದರು. ದಿನಕ್ಕೆ ಸಾವಿರಾರು ರೂಪಾಯಿ ಆದಾಯವಿತ್ತು. ಆದರೆ ಹೋರಾಟದೊಂದಿಗೆ ಅವರಿಗಿದ್ದ ಬದ್ಧತೆ ಅವರನ್ನು ವಿಚಲಿತರಾಗದಂತೆ ಕಾಪಾಡಿತು.

ಜೆ.ಎಚ್. ಪಟೇಲರು ಶಿವಮೊಗ್ಗವನ್ನು ಪ್ರತಿನಿಧಿಸಿ ಸಮಾಜವಾದಿ ಪಕ್ಷದಿಂದ ಗೆದ್ದು ಲೋಕಸಭಾ ಸದಸ್ಯರಾಗಿದ್ದರು. ಇವರು ಸಹ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಸೊಂಡೂರಿನಲ್ಲಿ ಈ ಜನ ಸಭೆಗಳಲ್ಲಿ ಜನರನ್ನು ಹುರಿದುಂಬಿಸುವಂತೆ ಮಾತನಾಡುತ್ತಿದ್ದರು. ಬೆಂಗಳೂರಿನಲ್ಲಿ ಆಗುತ್ತಿದ್ದ ಹೋರಾಟ ಸಂಬಂಧಿ ಚರ್ಚೆಗಳನ್ನು ರೈತರಿಗೆ ಹೇಳುತ್ತಿದ್ದರು. ಸರ್ಕಾರಕ್ಕೆ ನೇರವಾಗಿ ಹೋರಾಟದ ನಿರ್ಧಾರವನ್ನು ಹೇಳುತ್ತ, ಟೀಕಿಸುತ್ತ ಆಡಳಿತ ಸರ್ಕಾರದ ಎದುರು ಗಟ್ಟಿಯಾದ ಹುರಿಯಾಳಾಗಿದ್ದರು. ದೇವರಾಜ ಅರಸರನ್ನು ತರಾಟೆಗೆ ತೆಗೆದುಕೊಂಡು  'ಈ ರೈತರಿಗೆ ನ್ಯಾಯ ಒದಗಿಸಿ ಇಲ್ಲವಾದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡುತ್ತಿದ್ದರು. ಎಂ.ಪಿ. ಪ್ರಕಾಶ್‌ರು ಆಗ ಸಮಾಜವಾದಿ ಪಕ್ಷದ ಜಿಲ್ಲಾಧ್ಯಕ್ಷರಾಗಿದ್ದರು. ಆಗತಾನೆ ಅವರು ರಾಜಕೀಯಕ್ಕೆ ಪ್ರವೇಶ ಪಡೆದಿದ್ದರು. ರಾಜಕೀಯ, ಚಳವಳಿಗಿಂತ ರಂಗಭೂಮಿಯಲ್ಲಿ ಹೆಚ್ಚು ಕ್ರಿಯಾಶೀಲರಾಗಿದ್ದರು. ಸೊಂಡೂರು ಹೋರಾಟಕ್ಕೂ ಮುನ್ನ ಹಡಗಲಿಯಲ್ಲಿ ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಭೆ ಮಾಡಿ ಗಮನ ಸೆಳೆದಿದ್ದರು. ಆದರೆ ಹೋರಾಟದಲ್ಲಿ ಇವರ ಭಾಗವಹಿಸುವಿಕೆ

ತೀವ್ರವಾಗಿರಲಿಲ್ಲ. ಬಳ್ಳಾರಿ ಜಿಲ್ಲೆಯವರೇ ಆದ ಇವರು ಇಲ್ಲಿಯ ಪ್ರಭಾವಿ ರಾಜಕಾರಣಿಯಾಗಿ ಎಂ.ವೈ. ಘೋರ್ಪಡೆಯವರ ವಿರುದ್ಧ ಗಟ್ಟಿಯಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ರಾಜ್ಯ ಸಮಾಜವಾದಿ ಪಾರ್ಟಿಯ ಸಹಕಾರ್ಯದರ್ಶಿಯಾಗಿದ್ದ ಎಸ್.ಎಸ್. ಕುಮುಟ ಹೋರಾಟದ ಅಷ್ಟೂ ದಿನ ಸೊಂಡೂರಿನಲ್ಲೆ ಇದ್ದರು. ಈ ಹೋರಾಟದ ಕಮಾಂಡರ್ ಆಗಿ ಅವರನ್ನು ನೇಮಿಸಲಾಗಿತ್ತು. ಬದುಕಿನ ಬಹುಭಾಗ ಹೋರಾಟಗಳಲ್ಲೆ ಕಳೆದ ಕುಮುಟಾ ಸಾಗರದವರು. ಅಪ್ಪಟ ಸಮಾಜವಾದಿಯಾಗಿ ಬದುಕಿದವರು. ಸೊಂಡೂರಿನ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಕಾಗೋಡು ಚಳವಳಿಯಲ್ಲಿಯೂ ಭಾಗವಹಿಸಿ ಸಾರ್ವಜನಿಕ ಬದುಕು ಬದುಕಿದವರು. ಸಾಗರದಲ್ಲಿ ಇವರನ್ನು ಜನರು 'ಸತ್ಯಣ್ಣ' ಎಂದೇ ಕರೆಯುತ್ತಿದ್ದರು. 'ಅಪ್ಪ ಹೋರಾಟಗಳ ಜೊತೆಗಿದ್ದು ಮನೆ ಮರೆತಿದ್ದರು. ಮಕ್ಕಳ ಭವಿಷ್ಯಕ್ಕಿಂತ ಸಮಾಜದ ಬಗೆಗಿನ ಕಾಳಜಿ ಅವರಿಗೆ ಹೆಚ್ಚಾಗಿತ್ತು' ಎಂದು ಅವರ ಮಗಳಾದ ಪ್ರಜಾವಾಣಿ ಪತ್ರಕರ್ತೆ ಸುಜಾತ ಕುಮುಟ ಹೇಳುತ್ತಾರೆ. ಸೊಂಡೂರು ಸಮಿತಿಯ ಸದಸ್ಯರಾಗಿದ್ದ ಕಾಶೀನಾಥ ರಾವ್ ಬೇಲೂರೆ ಬೀದರ್ನವರು. ಇಲ್ಲಿಗೆ ಬಂದು ಹೋರಾಟದಲ್ಲಿ ಭಾಗವಹಿಸಿದರು. 'ರಾತ್ರೋ ರಾತ್ರಿ.. ಲಾರಿಗಳನ್ನು ಹಿಡಿದು ಸೊಂಡೂರಿಗೆ ಬರ್ ಇದ್ವಿ..' ಎಂದು ನೆನಪಿಸಿಕೊಳ್ಳುತ್ತಾರೆ. ಹೋರಾಟದ ಬಗ್ಗೆ ಸರ್ಕಾರದ ಗಮನ ಸೆಳೆಯಲು ವಿಧಾನಸಭೆಯಲ್ಲಿ ತೀವ್ರವಾಗಿ ಪ್ರತಿಭಟಿಸಿದವರೆಂದರೆ ಕಾಗೋಡು ತಿಮ್ಮಪ್ಪ ಹಾಗೂ ಕೋಣಂದೂರು ಲಿಂಗಪ್ಪ. ಇವರು ಸೋಷಲಿಸ್ಟ್ ಪಾರ್ಟಿಯಿಂದ ಗೆದ್ದು ವಿಧಾನಸಭಾ ಸದಸ್ಯರಾಗಿದ್ದರು. ವಿಧಾನಸಭೆಯಲ್ಲಿ ಸರ್ಕಾರದ ನಿರ್ಲಕ್ಷವನ್ನು ವಿರೋಧಿಸಿ ವಾಗ್ದಾಳಿಯನ್ನೆ ಮಾಡಿದರು. ಕಾಗೋಡು ತಿಮ್ಮಪ್ಪನವರಿಗೆ ಭೂ ಕಾಯಿದೆ ಬಗೆಗೆ ತುಂಬಾ ಸೂಕ್ಷ್ಮವಾದ ಪ್ರಾಯೋಗಿಕ ತಿಳುವಳಿಕೆ ಇತ್ತು. ಇದರಿಂದಾಗಿ ಸೊಂಡೂರಿನ ಭೂಮಿ ವಿಷಯದಲ್ಲಿ ಆದ ಲೋಪಗಳನ್ನು ತಿಳಿದು ಅದರ ತಿದ್ದುಪಡಿಗೆ ಸೂಚಿಸಿದರು. ಹಾಗೆಯೇ ಕಾಗೋಡು ಚಳುವಳಿಯ ತೀವ್ರ ಪ್ರಭಾವ ಇವರ ಮೇಲಿದ್ದುದರಿಂದ ಸೊಂಡೂರು ಹೋರಾಟ ರೂಪಿಸುವಲ್ಲಿ ಇವರ ಪಾತ್ರವು ಮುಖ್ಯವಾದುದು. ಇವರನ್ನು ಭೇಟಿಯಾದಾಗ ಹೋರಾಟದ ಬಗೆಗೆ ತುಂಬ ಸೂಕ್ಷ್ಮವಾದ ವಿವರಗಳನ್ನು ತಿಳಿಸಿದರು. 'ಇದು ಅಂತಿಮವಾಗಿ ಎಲಿಗಾರ ತಿಮ್ಮಪ್ಪನಿಂದಾದ ಹೋರಾಟ' ನಾವೆಲ್ಲ ಇದನ್ನು ಬೆಂಬಲಿಸಿದ್ವಿ.. ಆದರೆ ಸ್ಥಳೀಯರಾಗಿ ರಾಜಶಾಹಿಯನ್ನು ವಿರೋಧಿಸುತ್ತ ಬಂದಿದ್ದ ಯಜಮಾನ ಶಾಂತರುದ್ರಪ್ಪ, ಎಲಿಗಾರ ತಿಮ್ಮಪ್ಪನವರ ಸಹಕಾರ ಇಲ್ಲದೆ ಹೋಗಿದ್ದರೆ ಈ ಮಟ್ಟದ ಹೋರಾಟವನ್ನು ರೂಪಿಸಲಿಕ್ಕೆ ಆಗ್ತಾ ಇರ್ಲಿಲ್ಲ' ಎನ್ನುತ್ತಾರೆ.

ರಾಜ್ಯ ಸಮಾಜವಾದಿ ಪಕ್ಷದ ಕಾರ್ಯದರ್ಶಿಯಾಗಿದ್ದ ಎಸ್. ವೆಂಕಟರಾಮ್ ಹೋರಾಟದ ಅಷ್ಟು ದಿನ ಸೊಂಡೂರಿನಲ್ಲಿ ಇದ್ದರು. ಬಂಧನಕ್ಕೊಳಗಾದರು. ಸರ್ಕಾರಕ್ಕೆ ಹೋರಾಟದ ಪರವಾಗಿ ಅರ್ಜಿ ಮುಂತಾಗಿ ಪ್ರತಿಕ್ರಿಯಿಸುವ ಹೊಣೆ ಇವರದಾಗಿತ್ತು. ಹೋರಾಟದ ಕುರಿತಾಗಿ ದೇವರಾಜ ಅರಸು ಹೇಳಿಕೆಗೆ ತೀವ್ರ ಪ್ರತಿಕ್ರಿಯೆ ಮಾಡಿದರು. ಹೊರ ರಾಜ್ಯದಿಂದ ಬಂದ ಸಮಾಜವಾದಿ ನಾಯಕರು ಈ ಹೋರಾಟವನ್ನು ಜನಪ್ರಿಯಗೊಳಿಸಿದರು. ಆದರೆ ಆಡಳಿತಾತ್ಮಕವಾಗಿ ಸರ್ಕಾರವನ್ನು ಪ್ರಭಾವಿಸಲು ಸಾಧ್ಯವಾಗಲಿಲ್ಲ. ಇಲ್ಲಿ ಉಲ್ಲೇಖಿಸಿದ ನಾಯಕರಲ್ಲದೆ ಅನೇಕರು ಹೋರಾಟದಲ್ಲಿ ಭಾಗವಹಿಸಿದರು. ಹೋರಾಟವನ್ನು ರೂಪಿಸುವಲ್ಲಿ ಶ್ರಮಿಸುವವರಿಗೆ ಅನೇಕರು ಹೋರಾಟದಲ್ಲಿ ಭಾಗವಹಿಸಿದರು. ಹೋರಾಟವನ್ನು ರೂಪಿಸುವಲ್ಲಿ ಶ್ರಮಿಸುವವರಿಗೆ ರಾಜಮನೆತನದ ಆಮಿಷಗಳು, ಬೆದರಿಕೆಗಳು, ಆಡಳಿತಾತ್ಮಕ ಕಿರುಕುಳಗಳು ಇದ್ದವು. ಅವುಗಳನ್ನೆಲ್ಲ ಮೀರಿಯೂ ಹೋರಾಟದ ಬದ್ಧತೆಗಾಗಿ ಇವರೆಲ್ಲಾ ಒಂದಾದರು. ಹೀಗೆ ವ್ಯಕ್ತಿಗಳ ಮೂಲಕ ಒಂದು ಹೋರಾಟವನ್ನು ನೋಡುವುದಾದರೆ, ಭಾಗವಹಿಸಿದಷ್ಟು ಜನರ ದೃಷ್ಟಿಕೋನ ಈ ಹೋರಾಟಕ್ಕೆ ಸಿಕ್ಕಿತು. ಅಥವಾ ಅಷ್ಟು ದೃಷ್ಟಿಕೋನಗಳು ಒಂದು ಸಿದ್ಧಾಂತಕ್ಕೆ ಬದ್ಧವಾಗಿದ್ದವು.

## ೧೪. ಹೋರಾಟದ ಸೋಲು ಗೆಲುವು

ಪ್ರತಿ ಹೋರಾಟದ ನಂತರ ಧುತ್ತನೆ ಎದುರಾಗುವ ಪ್ರಶ್ನೆ ಸೋಲು ಗೆಲುವಿನದು. ಒಂದು ಅರ್ಥದಲ್ಲಿ ಸೋತ ಚಳುವಳಿ ಇನ್ನೊಂದು ದೃಷ್ಟಿಯಲ್ಲಿ ಗೆದ್ದಿರುತ್ತದೆ. ಬಹಿರಂಗವಾಗಿ ಗೆಲುವು ಕಂಡ ಹೋರಾಟ ಅಂತರಿಕವಾಗಿ ಸೋತಿರುತ್ತದೆ. ಈ ಸೋಲು ಗೆಲುವಿನ

ಮುಖಾಮುಖಿಯಲ್ಲಿಯೇ ಹೋರಾಟದ ಫಲಿತಗಳು ವಿಸ್ತರಿಸಿಕೊಳ್ಳುತ್ತವೆ. ಅಲ್ಪಕಾಲೀನ ಗೆಲುವು ದೀರ್ಘಕಾಲೀನ ಸೋಲು, ಅಲ್ಪಕಾಲೀನ ಸೋಲು ದೀರ್ಘಕಾಲೀನ ಗೆಲವು ಆಗಿರಲಿಕ್ಕೆ ಸಾಧ್ಯ. ಈ ಬಗೆಯ ಸಂಕೀರ್ಣ ಪ್ರಶ್ನೆಗಳನ್ನಿಟ್ಟುಕೊಂಡು ಒಂದು ಹೋರಾಟವನ್ನು ಪ್ರವೇಶಿಸಿದಾಗಲೂ ನಿರ್ದಿಷ್ಟ ಉತ್ತರ ಸಿಗಲಿಕ್ಕೆ ಸಾಧ್ಯವಾಗದೆ ಇರಬಹುದು.

ನಲವತ್ತಾರು ದಿನದ ಹೋರಾಟ ಸೊಂಡೂರಿನಲ್ಲಿ ಹಿಂದೆಂದೂ ಕಾಣದ ಒಂದು ಭಿನ್ನ ವಾತಾವರಣವನ್ನು ಸೃಷ್ಟಿಸಿತ್ತು. ಇದಕ್ಕೆ ಚಳವಳಿ ಪೋಲಿಸರ ದಬ್ಬಾಳಿಕೆ ಮೂಲಕ ಮುಕ್ತಾಯಗೊಂಡದ್ದು ಕಾರಣ. ಎಲ್ಲಿ ಧ್ವನಿಯೇ ಹೊರಡುವುದಿಲ್ಲ ಎಂದು ತಿಳಿಯಲಾಗಿತ್ತೊ, ಅಲ್ಲ ಧ್ವನಿ ಪ್ರತಿಧ್ವನಿಯಾಗಿ ಮೊಳಗಿತ್ತು. ಇದು ಈ ಭಾಗದ ಜನರಿಗೆ ಏಕಕಾಲಕ್ಕೆ ಕುತೂಹಲವೂ ಭಯವೂ ಆಗಿತ್ತು. 'ಹೋರಾಟದಲ್ಲಿ ಭಾಗವಹಿಸಿದವರನ್ನು ರಾಜರು ಏನು ಮಾಡುತ್ತಾರೋ ಎಂದು ಜನರೆಲ್ಲ ನೋಡುವಂತಾಗಿತ್ತು' ಎಂದು ಕಪ್ಪೆ ಸುಬ್ಬಣ್ಣ ಹೇಳುತ್ತಾರೆ. ಚಳುವಳಿಯಲ್ಲಿ ಭಾಗವಹಿಸಿದ ಸ್ಥಳೀಯರಿಗೂ ಅಂತಕ ಕಾಡತೊಡಗಿತು. ಹಿರಿಯ ನಾಯಕರು ಸರ್ಕಾರದ ಜೊತೆ ಮಾತುಕತೆಗಾಗಿ ಬೆಂಗಳೂರು ಸೇರಿದರು. ಅಕ್ಟೋಬರ್ ೨೨ ರಿಂದ ಜಾರಿಯಲ್ಲಿದ್ದ ನಿಷೇದಾಜ್ಞೆಯನ್ನು ಒಂದು ವಾರದ ಕಾಲ ವಿಸ್ತರಿಸಲಾಯಿತು. ಕಾಯಿದೆ ಹಾಗೂ ಸುವ್ಯವಸ್ಥೆಯಲ್ಲಿ ಯಾವುದೇ ಸುಧಾರಣೆ ಆಗದ ಕಾರಣ ವಿಸ್ತರಿಸಲಾಗಿದೆ ಎಂದು ಡಿವಿಜನಲ್ ಮ್ಯಾಜಿಸ್ಟ್ರೇಟ್ ಸ್ವಾತಂತ್ರರಾವ್ ಪತ್ರಿಕಾ ಹೇಳಿಕೆ ನೀಡಿದರು.

ಅಕ್ಟೋಬರ್ ೨೫ ರಂದು ಕೋಣಂದೂರು ಲಿಂಗಪ್ಪ, ಕಾಗೋಡು ತಿಮ್ಮಪ್ಪ, ಎಸ್. ವೆಂಕಟರಾವ್, ಬಿ.ಎಸ್. ಚಂದ್ರಶೇಕರ್, ವೈ.ಆರ್. ಪರಮೇಶ್ವರಪ್ಪ ಇವರನ್ನೊಳಗೊಂಡ ಒಂದು ಆಯೋಗವು ಸಚಿವ ಹುಚ್ಚಮಾಸ್ತಿ ಗೌಡರನ್ನು ಭೇಟಿ ಮಾಡಿತು. ಸೊಂಡೂರು ಹೋರಾಟದ ಬಗ್ಗೆ ಚರ್ಚಿಸಲಾಯಿತು. ಈ ಚರ್ಚೆಯಲ್ಲಿ ನಿರ್ಧರಿಸಿದ ಅಂಶಗಳೆಂದರೆ ಒಂದು: ಇನಾಂ ರದ್ದತಿ ವಿಧೇಯಕವು ವಿಧಾನ ಸಭೆಯಲ್ಲಿ ಮಂಡನೆಯಾಗಿರುವುದರಿಂದ ರೈತರಿಗೆ ಭೂಮಿಯ ಪಟ್ಟಗಳನ್ನು ಇಷ್ಟರಲ್ಲೇ ಕೊಡಲಾಗುವುದು ಎರಡು: ವ್ಯವಸಾಯ ಯೋಗ್ಯವಲ್ಲದ ಭೂಮಿಯಲ್ಲಿ ತಾಂತ್ರಿಕ ಸ್ನಾತಕೋತ್ತರ ಕೇಂದ್ರದ ಸ್ಥಾಪನೆ, ಮೂರು: ಹೊಗೆಸೊಪ್ಪಿನ ಭೂಮಿಯ ವಿತರಣೆ ಹಾಗೂ ಕುಮಾರಸ್ವಾಮಿ ದೇವಸ್ಥಾನವನ್ನು ಸಾರ್ವಜನಿಕ ಧರ್ಮ ದರ್ಶಿತ್ವಕ್ಕೆ ಒಳಪಡಿಸುವ ಮನವಿಯ ಪರಿಶೀಲನೆ. ನಾಲ್ಕು: ೨೯ ಚದರ ಮೈಲು ಮ್ಯಾಂಗನೀಸ್ ಅರಿದು ಪ್ರದೇಶದ ನವೀಕರಣ ಬಗ್ಗೆ ಮುಖ್ಯಮಂತ್ರಿಗಳು ನಿರ್ಧಾರ ತೆಗೆದುಕೊಳ್ಳುವರೆಂದು ಕಂದಾಯ ಸಚಿವರು ಹೇಳಿದರು.

ನವಂಬರ್ ೫ ರಂದು ಸಮಾಜವಾದಿ ಪಕ್ಷ ಮತ್ತು ಸೊಂಡೂರು ರೈತ ಸಂಘದ ಪ್ರತಿನಿಧಿ ಗಳು ಕೈಗಾರಿಕಾ ಮಂತ್ರಿಯಾಗಿದ್ದ ಎಸ್. ಎಂ. ಕೃಷ್ಣ ಅವರನ್ನು ಭೇಟಿ ಮಾಡಿ ಹೋರಾಟದ ಬೇಡಿಕೆಗಳ ಬಗೆಗೆ ಪುನರ್ ಚರ್ಚಿಸಿದರು. ಈ ಸಮಸ್ಯೆಗಳು ಜಟಿಲವಾಗುತ್ತಲೂ ಪರಿಹಾರ ಹುಡುಕಲು ಸಭೆಯನ್ನು ಮುಂದೂಡಲಾಯಿತು. ಈ ಮಾತುಕತೆಗಳ ಫಲಿತಾಂಶ ಹೊರಬೀಳುವ ತನಕ ಹೋರಾಟವನ್ನು ಎರಡು ವಾರಗಳ ಕಾಲ ಮುಂದೂಡಲಾಯಿತು. ಮೂರನೆ ಸುತ್ತಿನ ಸಂಧಾನವು ಜನವರಿ ೧,೧೯೭೪ರಂದು ಕಂದಾಯ ಸಚಿವ ಹುಚ್ಚಮಾಸ್ತಿಗೌಡರ ಜೊತೆ ನಡೆಯಿತು. ಈ ಸಭೆಯಲ್ಲಿ ಜೆ.ಎಚ್.ಪಟೇಲ್, ಎಸ್. ವೆಂಕಟರಾವ್ ಮಹಾರಾಷ್ಟ್ರದ ಸಮಾಜವಾದಿ ನಾಯಕ ಹೀರಾಚಂದ್ ವಾಘಮೊರೆ, ಆರ್.ವಿ.ದೇಸಾಯಿ, ಕೆ.ಜಿ.ಮಹೇಶ್ವರಪ್ಪ, ಕೋಣಂದೂರು ಲಿಂಗಪ್ಪ, ಎಲಿಗಾರ ತಿಮ್ಮಪ್ಪ, ನರಸಿಂಗರಾವ್, ಶ್ರೀನಿವಾಸ್, ಯಜಮಾನ ಶಾಂತರುದ್ರಪ್ಪ ಅವರುಗಳು ಭಾಗವಹಿಸಿದ್ದರು. ಈ ಚರ್ಚೆಯಲ್ಲಿಯೂ ಮುಂಚಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯ ಮಾಡಲಾಯಿತು. ಈ ಸಂಧಾನ ಚರ್ಚೆಯ ಮೂಲಕ ಅಂತಿಮ ತೀರ್ಮಾನವಾಗಿ ಕೆಲವು ಬೇಡಿಕೆಗಳು ಈಡೇರಿದವು ಅವು ಈ ಕೆಳಗಿನಂತಿವೆ.

ಒಂದು: ಇನಾಂ ರದ್ದಿಯಾತಿ ಕಾನೂನನ್ನು ಜಾರಿಗೆ ತಂದಿದ್ದರಿಂದ ಕುಮಾರಸ್ವಾಮಿ ದೇವಾಸ್ಥಾನಕ್ಕೆ ಸೇರಿದ ೮೦೨೯ ಎಕರೆ ಭೂಮಿ ರೈತರಿಗೆ ಹಂಚಲು ಅರ್ಜಿ ಆಹ್ವಾನಿಸಲಾಯಿತು.

ಎರಡು: ಯಶವಂತ ರಾವ್ ಘೋರ್ಪಡೆಯವರು ತಮ್ಮ ಕುಮಾರಸ್ವಾಮಿ ದೇವಸ್ಥಾನದ ವಂಶಪಾರಂಪರ್ಯ ಧರ್ಮದರ್ಶಿತ್ವವನ್ನು ಬಿಟ್ಟುಕೊಟ್ಟರು. ಹಾಗೂ ಈ ಬಗ್ಗೆ ಇನಾಂ ರದ್ದಿಯಾತಿ ಕಾನೂನಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಯಿತು.

ಮೂರು: ನಂದಿಹಳ್ಳಿ ಮತ್ತು ರಾಘಪುರ ಗ್ರಾಮಗಳ ಬಳಿಯಿರುವ ಹೊಗೆಸೊಪ್ಪಿನ ಗುತ್ತಿಗೆ ಭೂಮಿಯಲ್ಲಿ ತಾಂತ್ರಿಕ ಸ್ನಾತಕೋತ್ತರ ಕೇಂದ್ರ ಹಾಗೂ ತೋಟಗಾರಿಕ ಇಲಾಖೆಯ ಪ್ರಯೋಗ ಮತ್ತು ಬೀಜದ ಕೇಂದ್ರಗಳ ಸ್ಥಾಪನೆಯನ್ನು ತಪ್ಪಿಸುವುದು ಸಾಧ್ಯವಾಗಲಿಲ್ಲ. ಆದರೆ ಸಿದ್ದಾಪುರದ ಬಳಿ ಇರುವ ಹೊಗೆಸೊಪ್ಪಿನ ಗುತ್ತಿಗೆ ಭೂಮಿಯಲ್ಲಿ ೩೦೦ ಎಕರೆ ಪ್ರದೇಶವನ್ನು ಸರಕಾರ ರೈತರಿಗೆ ಬಿಡುಗಡೆ ಮಾಡಿತು.

ನಾಲ್ಕು: ಎಸ್.ಎಂ. ಆಂಡ್ ಐ.ಒ. ಕಂಪನಿಗೆ ನೀಡಲಾಗಿದ್ದ ಮ್ಯಾಂಗನೀಸ್ ಅದಿರು ಪ್ರದೇಶದ ಗುತ್ತಿಗೆಯನ್ನು ೧೯ ಚದರ ಮೈಲಿ ಪ್ರದೇಶದಿಂದ ೧೦ ಚದರ ಮೈಲಿಗೆ ಇಳಿಸಲಾಯಿತು.

ಐದು: ರಾಜಮನೆತನವು ೧೦೦೦ ಎಕರೆ ಅರಣ್ಯ ಭೂಮಿಯಲ್ಲಿ ತಮಗಿದ್ದ ಬೇಟೆ ಹಕ್ಕನ್ನು ಬಿಟ್ಟುಕೊಟ್ಟಿತು.

ಇದು ಹೋರಾಟದಿಂದ ಬಂದ ಸಫಲತೆ. ಅಂದ ಮಾತ್ರಕ್ಕೆ ಹೋರಾಟ ಪೂರ್ಣ ಯಶಸ್ವಿಯಾಯಿತಾ ಎನ್ನುವ ಪ್ರಶ್ನೆಯಿದೆ. ಹೋರಾಟಕ್ಕೂ ಮುಂಚೆ ಸಲ್ಲಿಸಿದ ಮನವಿಯಲ್ಲಿ ಕೆಲವು ನ್ಯಾಯಬದ್ಧ ಬೇಡಿಕೆಗಳನ್ನು ಇಟ್ಟಿದ್ದರು. ಈ ಬೇಡಿಕೆಯ ಪಟ್ಟಿ ಹಾಗೂ ಈಡೇರಿದ ಬೇಡಿಕೆಗಳನ್ನು ಮುಂದಿಟ್ಟುಕೊಂಡರೆ ಕೆಲವು ಅನುಮಾನಗಳು ಉಳಿಯುತ್ತವೆ. ಸೊಂಡೂರು ರಾಜರ ಧರ್ಮದರ್ಶಿತ್ವದಲ್ಲಿರುವ ವಿವಿಧ ದೇವಸ್ಥಾನಗಳ ಸುಮಾರು ೧೩,೦೦೦ ಎಕರೆ ಜಮೀನನ್ನು ಗೇಣಿದಾರರಿಗೆ ಕೊಡಬೇಕೆಂದು ಬೇಡಿಕೆ ಇತ್ತು. ಆದರೆ ಕೊನೆಗೆ ಕುಮಾರಸ್ವಾಮಿ ದೇವಸ್ಥಾನದ ಭೂಮಿ ಮಾತ್ರ ಪರಿಗಣಿಸಲ್ಪಟ್ಟಿತು. ಉಳಿದ ದೇವಸ್ಥಾನಗಳ ಭೂಮಿ ೧೯೮೦ರ ನಂತರ ಹಂಚಲ್ಪಟ್ಟಿತು. ಎಸ್.ಎಂ.ಆಂಡ್ ಐ.ಒ ಕಂಪನಿಯು ನೀಡಲಾದ ೧೯ ಚದರ ಮೈಲು ಗುತ್ತಿಗೆಯನ್ನು ರದ್ದುಪಡಿಸಿ ರಾಷ್ಟ್ರೀಯ ಗಣಿ ಅಭಿವೃದ್ಧಿ ನಿಗಮ ಅಥವಾ ಮೈಸೂರು ಮೆಟಲ್ಸ್ ಲಿಮಿಟೆಡ್ ಈ ಎರಡರಲ್ಲಿ ಒಂದು ಸಂಸ್ಥೆಗೆ ಕೊಡಬೇಕೆಂದು ಕೇಳಿಕೊಂಡಿದ್ದರು. ಆದರೆ ೧೯ ಚದರ ಮೈಲಿನಿಂದ ೧೦ ಚದರ ಮೈಲಿಗೆ ಇಳಿಸಲಾಯಿತು. ಅಂದರೆ ಹೋರಾಟ ದಿಂದಾಗಿ ೯ ಚದರ ಮೈಲು ಮಾತ್ರ ಕಡಿಮೆ ಮಾಡಲಾಯಿತು. ಹೋರಾಟಗಾರರು ಅದರ ಮಾಲಿಕತ್ವವನ್ನು ಪ್ರಶ್ನಿಸಿದ್ದರು. ರಾಷ್ಟ್ರೀಯ ಗಣಿ ಅಭಿವೃದ್ಧಿ ನಿಗಮಕ್ಕೆ ವಹಿಸಲು ಒತ್ತಾಯಸಿದ್ದರು. ಆದರೆ ಇದಾವುದೂ ಪರಿಗಣನೆಗೆ ಆಗಲಿಲ್ಲ. ರಾಜರ ಖಾಸಗಿ ಸಂಸ್ಥೆ ಸ್ಕಂದ ಉದ್ಯಮವನ್ನು ರದ್ದು ಪಡಿಸಬೇಕೆಂದಿದ್ದರು. ಅದೂ ಸಹ ಪರಿಗಣನೆ ಬರಲಿಲ್ಲ. ಶಿವಪುರ ಶಿಕ್ಷಣ ಸಮಿತಿ, ಸೊಂಡೂರು ಶಿಕ್ಷಣ ಸಮಿತಿಯನ್ನು ಸರ್ಕಾರ ವಹಿಸಿಕೊಳ್ಳಬೇಕೆಂಬ ಮತ್ತು 'ರಾಜಮನೆತನದ ವಿರುದ್ಧ ಮಾಡಲಾದ ಆರೋಪಗಳ ಪರಶೀಲನೆಗೆ ವಿಚಾರಣ ಆಯೋಗ ರಚಿಸಬೇಕು, ಘೋರ್ಪಡೆಯವರು ಕೂಡಲೆ ಮಂತ್ರಿ ಪದವಿಯಿಂದ ರಾಜಿನಾಮೆ ಕೊಡಬೇಕು ಎನ್ನುವ ಇನ್ನಿತರ ಬೇಡಿಕೆಗಳಾಗಿದ್ದವು. ಇವು ಕೊನೆಯ ಹಂತದ ಚರ್ಚೆಗೂ ಬರಲಿಲ್ಲ.

"ಸೊಂಡೂರಿನಲ್ಲಿ ಭೂ ಹೋರಾಟವನ್ನು ಫರ್ನಾಂಡಿಸ್ ಅವ್ರು ಭಾರತದಾದ್ಯಂತ ಪ್ರಚಾರ ಮಾಡಿದ್ರು. ಹಾಗಾಗಿ ಇಂದಿರಾಗಾಂಧಿಯವರು ಈ ಹೋರಾಟದ ಬಗ್ಗೆ ಗಮನ ಹರಿಸುವಂತೆ ದೇವರಾಜ ಅರಸರಿಗೆ ಮನವಿ ಮಾಡಿದ ಮೇಲೆ ಅರಸು ಅವರು ಹೋರಾಟದ ಬಗೆಗೆ ಘೋರ್ಪಡೆಯವರ ಹತ್ರ ಚರ್ಚೆಸಿದ್ರು.. ಇಂಥ ಇಕ್ಕಟ್ಟಿನ ಸಂದರ್ಭದಲ್ಲಿ ಈ ಬೇಡಿಕೆಗಳ ಈಡೇರಿಕೆಗೆ ಘೋರ್ಪಡೆಯವರು ಸಹಿ ಹಾಕಿದ್ರು" ಎಂದು ಎಲಿಗಾರ ನಾಗರಾಜಪ್ಪ ಹೇಳುತ್ತಾರೆ. ಈ ಹೋರಾಟ ರಾಷ್ಟ್ರೀಯ ಪ್ರಚಾರ ಪಡೆಯದೆ ಇದ್ದರೆ, ಈಗ ಈಡೇರಿದ ಬೇಡಿಕೆಗಳೂ ಹಾಗೆಯೇ ಉಳಿಯುತ್ತಿದ್ದವು. ಇನಾಮು ಭೂಮಿ ರೈತರಿಗೆ ಎಷ್ಟರ ಮಟ್ಟಿಗೆ ದೊರಕಿತು ಎನ್ನುವುದು ಪ್ರಶ್ನೆ. ಯಾರ್‍ರು ಈಗ ಉಳುಮೆ ಮಾಡುತ್ತಾರೋ ಅವರು ತಮ್ಮ ಹೆಸರಿಗೆ ಪಟ್ಟ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಬೇಕಿತ್ತು. ಅರ್ಜಿ ಸಲ್ಲಿಸುವವರೆಲ್ಲ ಮಹಾ ರಾಜರ ವಿರೋಧಿಗಳು ಎಂಬ ಅರ್ಥ ಬರುವಂತಿತ್ತು. ಹಾಗಾಗಿ ಎಷ್ಟೋ ಜನರು ಅರ್ಜಿ ಸಲ್ಲಿಸುವುದನ್ನೇ ಕೈಬಿಟ್ಟರು. ಅಥವಾ ಅರ್ಜಿ ಸಲ್ಲಿಸಲಾರದಂತಹ ವಾತಾವರಣವನ್ನು ಮಹಾರಾಜರ ಕಡೆಯವರು ಸೃಷ್ಟಿಸಲು ಪ್ರಯತ್ನಿಸಿದರು. ನೇರವಾಗಿ ಹೋರಾಟದ ಜೊತೆ ಗುರುತಿಸಿಕೊಂಡವರು ಧೈರ್ಯಮಾಡಿ ಅರ್ಜಿ ಸಲ್ಲಿಸಿ ಭೂಮಿಯನ್ನು ತಮ್ಮ ಹೆಸರಿಗೆ ಪಟ್ಟ ಮಾಡಿಸಿಕೊಂಡರು. ಇಂಥವರಲ್ಲಿ ಸ್ಥಿತಿವಂತ ಮಧ್ಯಮವರ್ಗದ ರೈತರಿದ್ದರು. ಅದರಲ್ಲೂ ಇನಾಮು ಭೂಮಿ ಇದ್ದದ್ದು ಹೆಚ್ಚಾಗಿ ಭೂಮಾಲಿಕರಿಗೆ, ೧೯೮೦ರ ಜಹೀರು ನಾಮೆಯಲ್ಲಿ ಹೇಳಿರುವಂತೆ 'ರೈತವಾರಿ' ಟೆನರ್ ಗಳಿಗೆ ೮ ಸಾವಿರ ಎಕರೆ ಇನಾಮು ಭೂಮಿಯಿತ್ತು. ಸಾಮಾನ್ಯ ಗೇಣಿದಾರ ಕೂಲಿಕಾರ ರೈತರಿಗೆ ೪ ಸಾವಿರ ಎಕರೆಯಿತ್ತು. ರೈತವಾರಿಗಳ ಜಮೀನಿನಲ್ಲೂ ಕೂಲಿಕಾರ ರೈತರೇ ಉಳುತ್ತಿದ್ದರು. ಹಾಗಾಗಿ ಉಳುವ ಸಾಮಾನ್ಯ ರೈತನಿಗಿಂತ

'ರೈತವಾರಿ' ಗೇಣಿದಾರರಿಗೆ ಇನಾಮು ಭೂಮಿ ಹೆಚ್ಚಾಗಿ ಸಿಕ್ಕಿತೆ. ಇದರಿಂದಾಗಿ ಉಳುವವನೆ ಭೂ ಒಡೆಯ ಎನ್ನುವ ಅರ್ಥದಲ್ಲಿ ಉಳುವ ಕೂಲಿಕಾರ ರೈತರಿಗೆ ಭೂಮಿ ಸಿಕ್ಕಿದ್ದು ಕಡಿಮೆ.

೧೯೭೩ರ ನವೆಂಬರ್ ೧ಕ್ಕೆ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂಬ ನಾಮಕರಣವಾಯಿತು. ಆಗ ಕರ್ನಾಟಕದಾದ್ಯಂತ ಸಂಭ್ರಮದ ವಾತಾವರಣ, ಮಾಧ್ಯಮಗಳು ಕರ್ನಾಟಕಕ್ಕೆ ಹೆಸರು ತಂದು ದೇವರಾಜರು ಹೆಸರಾದರು ಎಂದೆಲ್ಲಾ ವರದಿಯಾಯಿತು. ಸೊಂಡೂರಿನಲ್ಲಿ ರೈತ ಹೋರಾಟ ಅಕ್ಟೋಬರ್ ೨೪ ಕ್ಕೆ ಕೊನೆಗೊಂಡಿತು. ನವೆಂಬರ್ ೧ಕ್ಕೆ 'ಕರ್ನಾಟಕ' ನಾಮಕರಣವಾಯಿತು. ಈ ಘಟನೆ ಹೋರಾಟದ ಒಟ್ಟು ಪರಿಣಾಮದ ಮೇಲೆ ತೀವ್ರ ಪ್ರಭಾವ ಬೀರಿತು. ನವೆಂಬರ್ ೧ ರಂದು ಹಂಪಿಯಲ್ಲಿ ಕರ್ನಾಟಕ ಒಗ್ಗೂಡಿದಾಗ ರಾಜ್ಯಪಾಲರಾಗಿದ್ದ ಜಯಚಾಮರಾಜ ಒಡೆಯರು ಕರ್ನಾಟಕದ ಜ್ಯೋತಿ ಬೆಳಗಿಸಿದರು. 'ಕರ್ನಾಟಕ' ಎಂಬ ನಾಮಫಲಕವೊಂದನ್ನು ಅನಾವರಣ ಮಾಡಿದರು. ಸಚಿವರುಗಳು ಅವರ ಕ್ಷೇತ್ರಗಳಿಗೆ ಹೋಗಿ 'ಕರ್ನಾಟಕ' ನಾಮಕರಣದ ಸಮಾರಂಭಗಳಲ್ಲಿ ಭಾಗವಹಿಸತೊಡಗಿದರು. ಇದರಿಂದಾಗಿ ಹೋರಾಟದ ಬೇಡಿಕೆಗಳ ಈಡೇರಿಕೆಯ ಚರ್ಚೆ ಮುಂದೂಡಲ್ಪಟ್ಟಿತು, ಹೋರಾಟದಲ್ಲಿ ಭಾಗವಹಿಸಿದ ನಾಯಕರು ಈ ಸಂದರ್ಭದಲ್ಲಿ ಒಂದಾದರು. ನವೆಂಬರ್ ತಿಂಗಳು ಪೂರ್ತಿ ಇಂತಹ ದ್ದೊಂದು ನಾಡಾಭಿಮಾನದ ಜಾತ್ರೆಯಂತಹ ವಾತಾವರಣವಿತ್ತು. ಸೊಂಡೂರಿನಲ್ಲಿಯೂ ಎಂ.ವೈ. ಘೋರ್ಪಡೆಯವರು ಪ್ರಜಾಸಭೆ ಮಾಡಿ ಮಾತನಾಡಿದರು. ಈ ಎಲ್ಲ ಕಾರಣದಿಂದ ಹೋರಾಟದ ನಂತರದ ಬೇಡಿಕೆ ಈಡೇರಿಕೆಯ ಬಗೆಗೆ ಗಂಭೀರವಾದ ಚರ್ಚೆ ಸಂವಾದಗಳು ಸಾಧ್ಯವಾಗದೆ ಹೋದವು.

ರೈತರಿಗೆ ಎಷ್ಟು ಭೂಮಿ ದೊರೆಯಿತು ಎನ್ನವದಷ್ಟೇ ಹೋರಾಟದ ಯಶಸ್ಸಲ್ಲ. ಆದರೆ ಭೂಮಿಗಾಗಿ ನಡೆದ ಹೋರಾಟ ಇದಾಗಿದ್ದರಿಂದ ರೈತರಿಗೆ ಎಷ್ಟು ಭೂಮಿ ಸಿಕ್ಕಿತು ಎನ್ನುವುದನ್ನು ನೋಡಬಹುದು. ಕುಮಾರಸ್ವಾಮಿ ಇನಾಮು ಭೂಮಿಯಾದ ೮೦೦೦ ಎಕರೆಗೆ ಅರ್ಜಿ ಕರೆಯಲಾಯಿತು. ಹಂತ ಹಂತವಾಗಿ ಈ ಭೂಮಿ ರೈತರ ಹೆಸರಿಗೆ ಪಟ್ಟವಾಯಿತು. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಮೂರು ನಾಲ್ಕು ಬಾರಿ ತಾಲೂಕು ಕಛೇರಿಗೆ ಭೇಟಿ ನೀಡಲಾಯಿತು. ಅಲ್ಲಿ ದಿನವೂ ಜಾತ್ರೆಯಂತೆ ಜನ ಸೇರುತ್ತಾರೆ. ಕಾರಣ ಮೈನಿಂಗ್ ಭೂಮಿಯ ಸಂಬಂಧದ ಇತ್ಯಾರ್ಥಗಳಿಗಾಗಿ, ಇನಾಂ ರದ್ದತಿಯಿಂದಾಗಿ ಈವರೆಗೂ ದೊರೆತ ಭೂಮಿಯ ಬಗ್ಗೆ ವಿವರ ಪಡೆದೆ. ಭೂನ್ಯಾಯ ಮಂಡಳಿಯಲ್ಲಿ ಇನಾಂ ರದ್ದತಿ ಕಾಯ್ದೆ ಅಡಿ ೭೧೭೬ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಈ ಅರ್ಜಿಗಳ ಭೂಮಿಯ ಒಟ್ಟು ವಿಸ್ತೀರ್ಣ ೩೯,೮೬೮ ಎಕರೆ. ಆದರೆ ಅರ್ಜಿದಾರರ ಪರವಾಗಿ ತೀರ್ಮಾನವಾದದ್ದು ೩೪೪೮ ಅರ್ಜಿಗಳು, ಇದರಿಂದಾಗಿ ಈತನಕ ೨೦,೧೮೦ ಎಕರೆ ಇನಾಮು ಭೂಮಿ ಸೊಂಡೂರು ರೈತರಿಗೆ ದೊರೆತಿದೆ. ಭೂನ್ಯಾಯ ಮಂಡಳಿಯಲ್ಲಿ ತಿರಸ್ಕರಿಸಲ್ಪಟ್ಟ ಅರ್ಜಿಗಳು ೩,೭೨೮ ಇದರ ಭೂಮಿಯ ವಿಸ್ತೀರ್ಣ ೧೯,೬೮೦ ಎಕರೆಗಳು. ಆಶ್ಚರ್ಯವೆಂದರೆ ಇನ್ನು ಹತ್ತೊಂಬತ್ತು ಸಾವಿರ ಎಕರೆಯಷ್ಟು ಭೂಮಿ ಸಾಗುವಳಿ ಯಾಗುತ್ತದೆ. ಆದರೆ ಸಾಗುವಳಿದಾರರ ಹೆಸರಿಗೆ ಪಟ್ಟಾ ಆಗಿಲ್ಲ. ಅರ್ಜಿ ತಿರಸ್ಕೃತ ಆಗಲು ಕಾರಣಗಳೆಂದರೆ, ಪಹಣಿಯಲ್ಲಿ ಸಾಗುವಳಿದಾರರ ಕಾಲಂನಲ್ಲಿ ಅರ್ಜಿದಾರರ ಹೆಸರು ಇಲ್ಲದಿರುವುದು, ಬಂಜರು, ಪರಂಪೋಕ್ ಮುಂತಾದ ಪಟ್ಟಕ್ಕೆ ಯೋಗ್ಯವಲ್ಲದ ಭೂಮಿಯ ಅರ್ಜಿಗಳು ಬಂದಿದ್ದವು.

ಸ್ವೀಕೃತಗೊಂಡ ೩೪೪೮ ಪ್ರಕರಣಗಳ ಪೈಕಿ ಇನ್ನು ಕೆಲವರು ತಮಗೆ ಮುಂಜೂರಾಗಿರುವ ಜಮೀನಿನ ಪಹಣಿಗಳಲ್ಲಿ ತಮ್ಮ ಹೆಸರಿಗೆ (ಕುಮಾರಸ್ವಾಮಿ ಇನಾಮು ಭೂಮಿ ಹೆಸರಿನಿಂದ) ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ. ಅಲ್ಲದೆ ಅವುಗಳ ಪೈಕಿ ಮಂಜೂರಾದ ಜಮೀನಿಗೆ ಈಗಲೂ ಪ್ರೀಮಿಯರ್ (ಇನಾಂ ಕಾಯ್ದೆ ರೀತಿ ಮಂಜೂರಾಗಿರುವ ಜಮೀನಿಗೆ ಕಟ್ಟಬೇಕಾದ ಮೊತ್ತ) ಪಾವತಿಸದೆ ಅರ್ಜಿಗಳನ್ನು ತಮ್ಮ ಬಳಿಯೇ ಇಟ್ಟುಕೊಂಡ ಪ್ರಕರಣಗಳಿವೆ. ಪಾರಂ ೨ ರಲ್ಲಿ 'ಕುಮಾರಸ್ವಾಮಿ ಭೂಮಿ' ಎಂಬ ಸಾಗುವಳಿ ಹೆಸರಿನಿಂದ ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳುವ ಎಚ್ಚರ ಈಗ ಕೆಲವರಿಗೆ ಬಂದಿದೆ. ಕಾರಣ ಮೈನಿಂಗ್ ಕಲ್ಲು ಇರುವ ಭೂಮಿಯನ್ನು ಲೀಜಿಂಗ್ ಹಾಕಲು ಪಟ್ಟಬೇಕಾಗಿದೆ. ತಾಲ್ಲೂಕು ಕಚೇರಿಗೆ ಭೇಟಿ ನೀಡಿದಾಗಲೂ ಇಂತಹ ಮೂರ್ನಾಲ್ಕು ಪ್ರಕರಣಗಳನ್ನು ನೋಡಲಾಯಿತು.

ಹೋರಾಟದ ಮುಂಚಿನ ಬೇಡಿಕೆಗೆಗಳನ್ನು ನೋಡಿದರೆ ಈಡೇರಿದ್ದು ಕೆಲವು ಮಾತ್ರ. ಆ ಕಾರಣಕ್ಕೆ ಹೋರಾಟ ಪೂರ್ಣ ಪ್ರಮಾಣದ ಯಶಸ್ಸು ಪಡೆಯಲಿಲ್ಲ. ಎಂ.ವೈ. ಘೋರ್ಪಡೆ ಅವರು ಇದನ್ನೊಂದು ಹಟದಂತೆ ಸಾಧಿಸಿದರು. ಅವರು ಪಟ್ಟುಹಿಡಿದಂತೆ ಕೆಲವು ಬೇಡಿಕೆಗಳನ್ನು

ಈಡೇರದಂತೆ ನೋಡಿಕೊಂಡರು. ಚಳವಳಿಗಾರರು ರಾಜಮನೆತನದ ರಾಜಶಾಹಿಯನ್ನೆಲ್ಲ ದುರ್ಬಲಗೊಳಿಸುವ, ಪ್ರಜಾಪ್ರಭುತ್ವ ಸಮಾಜದಲ್ಲಿ ರಾಜನೂ ಸಾಮಾನ್ಯ ಪ್ರಜೆಯು ಒಂದೇ ಎಂಬ ಸಮಾಜಿಕ ನ್ಯಾಯದಂತೆ ಬೇಡಿಕೆಗಳನ್ನು ಇಟ್ಟಿದ್ದರು. ಆದರೆ ಇನಾಮು ಭೂಮಿ ರೈತರಿಗೆ ಸಿಕ್ಕಿದ್ದನ್ನು ಹೊರತುಪಡಿಸಿದರೆ ಉಳಿದ ಪ್ರಬಲ ಬೇಡಿಕೆಗಳು ರಾಜಶಾಹಿಯ ಪರವಾಗಿಯೇ ಆದವು. ಈ ಹೋರಾಟ ಸೊಂಡೂರು ಸಂಸ್ಥಾನದ ಪರಂಪರೆಯಲ್ಲಿ ಮೊದಲ ಬಾರಿಗೆ ಸಾಮಾನ್ಯ ಜನರು ರಾಜರ ಎದುರು ದೊಡ್ಡ ಮಟ್ಟದಲ್ಲಿ ಪ್ರತಿರೋಧ ಒಡ್ಡಿದ್ದು. ಈಗಲೂ ಈ ಭಾಗದ ಕೆಲವರು ಈ ಹೋರಾಟವನ್ನು ಬೆಂಗಳೂರಿನಿಂದ ಬಂದ ಜನರು ಮಾಡಿದರು. ಇಲ್ಲಿ ಕೆಲಸವಿಲ್ಲದೆ ಬಿಡಾಡಿಯಾಗಿ ಸುತ್ತುವ ಕೆಲವು ರೈತರು ಊಟ ಸಿಗುತ್ತದೆ ಎಂದು ಹೋರಾಟದಲ್ಲಿ ಭಾಗವಹಿಸಿದರು ಎನ್ನುವ ಅಬಿಪ್ರಾಯ ಕೆಲವರದು. ಕುಮಾರಸ್ವಾಮಿ ಪೂಜಾರಿಯಂತು ಇಲ್ಲಿ ಹೋರಾಟವೇ ಆಗಿಲ್ಲ ಕೆಲವು ರಾಜರ ವಿರೋಧಿಗಳು ಮಾಡಿದ ಕುತಂತ್ರ, ಇಲ್ಲಿನ ಜನ ಮಾಡಿದ್ದು ಅಲ್ಲ ಎನ್ನುತ್ತಾರೆ. ಅಂದರೆ ಈಗಲೂ ರಾಜರ ಬಗೆಗೆ ಅಭಿಮಾನ ಗೌರವ ಇಟ್ಟುಕೊಂಡವರು ಈ ಹೋರಾಟ ನಡೆಯಿತು ಎನ್ನುವುದನ್ನೇ ಅವಮಾನ ದಂತೆ ಮರೆಮಾಚಿಸಲು ಪ್ರಯತ್ನಿಸುತ್ತಾರೆ. ರಾಜ ಏನೇ ಮಾಡಿದರೂ ಅದು ಸರಿ ಎನ್ನುವುದರಲ್ಲಿ ವಿಶ್ವಾಸವಿರಿಸಿದ ಈ ಭಾಗದ ಜನರು ಹೋರಾಟ ನಡೆದಿದನ್ನೇ ನಂಬಿವುದಿಲ್ಲ.

ಕೊನೆಗೂ ಚಳವಳಿಯ ಯಶಸ್ಸು ಇರುವುದು ಅದು ಜನರಲ್ಲಿ ಹುಟ್ಟು ಹಾಕಿದ ರಾಜಕೀಯ ಪ್ರಜ್ಞೆಯಲ್ಲಿ. ಚಳವಳಿಯ ನಂತರದ ಸೊಂಡೂರಿನ ಜನರಲ್ಲಿ ರಾಜಕೀಯ ಪ್ರಜ್ಞೆ ಬೆಳೆಯಿತೆ? ನಂತರ ಚಳವಳಿ ಮುನ್ನಡೆಯಿತೆ? ಎಂದು ಪ್ರಶ್ನೆ ಮಾಡಿಕೊಂಡರೆ, ಸಿಗುವ ಉತ್ತರ ಚಳವಳಿಯ ಸೋಲು-ಗೆಲುವನ್ನು ಸಮಸಮವಾಗಿ ಹಿಬ್ಬಾಗಿಸುತ್ತದೆ. ಕಾರಣ ೧೯೭೩ರ ನಂತರದ ಸೊಂಡೂರಿನಲ್ಲಿ ಆ ಬಗೆಯ ಚಳವಳಿಯ ಪರಂಪರೆ ವ್ಯಾಪಕವಾಗಿ ಬೆಳೆಯಲಿಲ್ಲ. ಹೋರಾಟದಲ್ಲಿ ಭಾಗವಹಿದ ಕೆಲವು ನಾಯಕರೆ ಘೋರ್ಪಡೆಯವರ ಪರವಾದರು. ಯಜಮಾನ ಶಾಂತರುದ್ರಪ್ಪ ಮಾತ್ರ ತನ್ನ ಸಾವಿನವರೆಗೆ (ಮರಣ ೧೯೮೯) ಸಣ್ಣ ಪುಟ್ಟ, ಪ್ರತಿರೋಧವನ್ನು ಮಾಡಿಕೊಂಡಿದ್ದರು. ಇದು ಅವರಿಗೆ ಸ್ವಾಭಾವಿಕವೆ ಆದಂತಾಗಿತ್ತು. ಜನರೂ ಇವರನ್ನು ಬರಬರುತ್ತಾ ನಿರ್ಲಕ್ಷಿಸತೊಡಗಿದ್ದರು, ಇಂಥದ್ದೇ ಸ್ಥಿತಿ ಇಲಿಗಾರ ತಿಮ್ಮಪ್ಪನದೂ ಕೂಡ. ಈ ಎಲ್ಲಾ ಕಾರಣಗಳನ್ನು ನೋಡಿದರೆ ಹೋರಾಟದ ನಂತರ ಜನರಲ್ಲಿ ಕ್ರಾಂತಿಯಾಗುವಂತಹ ರಾಜಕೀಯ ಪ್ರಜ್ಞೆಯನ್ನೇನು ಬೆಳೆಸಲಿಲ್ಲ. ಅಥವಾ ಈ ಭಾಗದ ರೈತರು ಒಂದೆಡೆ ಒಗ್ಗಟ್ಟಾಗುವುದನ್ನು ವ್ಯವಸ್ಥಿತವಾಗಿ ರಾಜಪರವಾದವರು ಮುರಿಯತೊಡಗಿದರು. ತಿಮ್ಮಪ್ಪನ ಬೆಂಬಲಿಗರನ್ನು ಘೋರ್ಪಡೆಯವರು ಆಮಿಷಗಳನ್ನು ಒಡ್ಡಿ ತಮ್ಮ ಪರಮಾಡಿಕೊಂಡರು.

ಕಾಗೋಡು ತಿಮ್ಮಪ್ಪ 'ಇದು ಕೊನೆಗೂ ಒಬ್ಬ ಘೋರ್ಪಡೆಯ ವಿರುದ್ಧದ ಹೋರಾಟವಾಗಿ ಉಳಿಯಿತೇ ವಿನಾ ಜಮೀನ್ದಾರನ ವಿರುದ್ಧ ರೈತರ ಪ್ರತಿಭಟನೆಯಾಗಿ ಬೆಳೆಯಲಿಲ್ಲ. ಅಂತೆಯೇ ಅದು ಕೇವಲ ಸೊಂಡೂರಿನ ಭೂಮಿಯ ವಿಷಯವಾಯಿತೇ ಹೊರತು ಜಿಲ್ಲೆಯ ಇತರ ಭಾಗಗಳಲ್ಲಿದ್ದ ಜಮೀನುದಾರರ ಮೇಲು ಈ ಕಾನೂನಿನ ಪ್ರಭಾವ ಆಗಲಿಲ್ಲ. ಈ ಹೋರಾಟಕ್ಕೆ ಬೇರೆ ಬೇರೆ ಭಾಗದಿಂದ ಸಮಾಜವಾದಿಗಳು ಬಂದರು, ಆದರೆ ರೈತ ಸಂಘ ಈ ಹೋರಾಟದಲ್ಲಿ ಹೆಚ್ಚು ಕ್ರಿಯಾಶೀಲವಾಗಲಿಲ್ಲ. ಬಳ್ಳಾರಿ ಜಿಲ್ಲೆಯ ಇತರ ಭಾಗಗಳಿಂದಲೂ ರೈತರು ಈ ಹೋರಾಟಕ್ಕೆ ಬಂದದ್ದು ಕಡಿಮೆ ಎನ್ನುತ್ತಾರೆ. ಸೊಂಡೂರು ಸುತ್ತಮುತ್ತಲ ತಾಲೂಕುಗಳಲ್ಲಿ ಕೆಲವರನ್ನು ಮಾತನಾಡಿಸಿದಾಗ ಈ ಹೋರಾಟ ನಡೆದ ಬಗ್ಗೆ ನಮಗೆ ಗೊತ್ತೆ ಇಲ್ಲ.. ಇಂತಹ ಚಳುವಳಿ ನಡೆಯಿತಾ? ಎಂದು ಆಶ್ಚರ್ಯದಿಂದ ಕೇಳುತ್ತಾರೆ.ಈ ಹೋರಾಟ ಲಿಂಗಾಯಿತರ ಹೋರಾಟವೆಂಬಂತೆ ರೂಪುಗೊಂಡಿತು. ಭಾಗವಹಿಸಿದ ಸ್ಥಳೀಯ ನಾಯಕರು ಬಹುತೇಕ ಲಿಂಗಾಯತರು. ಯಜಮಾನ ಶಾಂತರುದ್ರಪ್ಪನವರು ಇದು 'ಲಿಂಗಾಯತರ' ಹೋರಾಟ ಎನ್ನುವಂತೆಯೇ ಪ್ರಚಾರ ಮಾಡಿದರು. ಹಾಗಾಗಿ ಬೇರೆ ಜಾತಿ ಸಮುದಾಯದವರು ಈ ಹೋರಾಟದಲ್ಲಿ ಸಾಧ್ಯವಾಗಲಿಲ್ಲ.

ಈ ಎಲ್ಲದರ ನಡುವೆಯೂ ಕರ್ನಾಟಕದ ರೈತ ಸತ್ಯಾಗ್ರಹಗಳಲ್ಲಿ ಇದು ಮಹತ್ವದ ಹೋರಾಟ. ರಾಜರ ಎದುರು ನಿಲ್ಲಲೂ ಆಗದ ಸ್ಥಿತಿಯಲ್ಲಿದ್ದ ಸೊಂಡೂರಿನಲ್ಲಿ ಇಂತಹ ಒಂದು ಹೋರಾಟ ಆಯಿತು ಎನ್ನುವುದೇ ಮುಖ್ಯ ಅಂಶ. ಇದು ರಾಜಶಾಹಿಯ ವಿರುದ್ದದ ಹೋರಾಟ ಹೇಗೋ ಸದ್ಯದ ಸರ್ಕಾರದ ಅರ್ಥ ಸಚಿವರ ವಿರುದ್ದದ ಹೋರಾಟವೂ ಆಗಿತ್ತು. ಹಾಗಾಗಿಯೇ ಹೋರಾಟಕ್ಕೆ ಒಂದು ರಾಜಕೀಯ ಸ್ವರೂಪ ಬಂದದ್ದು.

ನಿಜಕ್ಕೂ ಈ ಹೋರಾಟ ರಾಜಮನೆತನವನ್ನು ವಿಚಲಿತಗೊಳಿಸಿತು. ರೈತರ ನಿಜವಾದ ಶಕ್ತಿ ಏನೆಂಬುದು ರಾಜರಿಗೆ ಅರ್ಥವಾಯಿತು. ಈ ಹೋರಾಟದಿಂದಾಗಿ ರಾಜರ ಬಗೆಗಿದ್ದು ಕಲ್ಪನೆ, ನಂಬಿಕೆ, ಭಯದ ಚಿತ್ರಗಳು ಹೊಸ ರೂಪವನ್ನು ಪಡೆಯಲಿಕ್ಕೆ ಸಾಧ್ಯವಾಯಿತು. ಇನಾಮು ಭೂಮಿ ನೆಪದಲ್ಲಿ ರಾಜರ ಹಂಗಿನಲ್ಲಿದ್ದೇವೆ ಎಂಬ ಅಳುಕು ಇಲ್ಲವಾಯಿತು. ಇನಾಮು ಭೂಮಿಯನ್ನು ತಮ್ಮ ಹೆಸರಿಗೆ ಪಟ್ಟ ಮಾಡಿಸಿಕೊಂಡವರು ಸ್ವಾತಂತ್ರ್ಯದ ಅನುಭವವನ್ನು ಮೊದಲ ಬಾರಿಗೆ ಪಡೆದರು. ಜನಸಮುದಾಯದಲ್ಲಿ ದೊಡ್ಡ ಪ್ರಮಾಣದ ಸಂಚಲವನ್ನು ಈ ಹೋರಾಟ ಹುಟ್ಟು ಹಾಕದಿದ್ದರೂ ಆಳುತ್ತಿದ್ದ ರಾಜಶಾಹಿಯ ಯೋಚನೆಯಿಂದ ಹೊರಬರಲು ಈ ಹೋರಾಟ ನಿಧಾನವಾಗಿ ಮಾಡಿದ ಪರಿಣಾಮ ಮಹತ್ವದ್ದು. ಈ ಹೋರಾಟದಲ್ಲಿಯೇ 'ಜನತಾಪಕ್ಷ'ದ ಬೀಜ ಮೊಳಕೆಯೊಡೆಯಿತು. ರೈತ ಸಂಘ, ಸಾಂಸ್ಥಕಾಂಗ್ರೆಸ್, ಸಮಾಜವಾದಿ ಪಕ್ಷ, ಕಮ್ಯೂನಿಸ್ಟ್ ಮುಂತಾದ ಕಾಂಗ್ರೆಸೇತರ ಪಕ್ಷದ ಕಾರ್ಯಕರ್ತರು ಇದರಲ್ಲಿ ಭಾಗವಹಿಸಿದ್ದರು. ದಾವಣಗೆರೆಯಲ್ಲಿ ೧೯೭೭ರಲ್ಲಿ ಜನತಾಪಕ್ಷದ ಸಭೆ ನಡೆದಾಗ ಜೆ.ಎಚ್. ಪಟೇಲರು 'ಕರ್ನಾಟಕದಲ್ಲಿ ಜನತಾಪಕ್ಷ' ಸಂಡೂರು ಹೋರಾಟದಲ್ಲಿ ಜನ್ಮತಾಳಿತು. ಅಲ್ಲಿ ಕಾಂಗ್ರೆಸೇತರ ಎಲ್ಲ ಪಕ್ಷದವರು ಒಂದಾಗಿದ್ದೆವು' ಎಂದಿದ್ದರು.

## ಹೋರಾಟದ ನಂತರ

ಭೂಹೋರಾಟದಲ್ಲಿ ಭಾಗವಹಿಸಿದವರನ್ನು ಮಾತನಾಡಿಸುತ್ತಿದ್ದಾಗ ಎಲ್ಲರಲ್ಲೂ ಸಮಾನವಾದ ವಿಷಾದವೊಂದಿತ್ತು. ಅದೆಂದರೆ "ಆಗೇನೋ ಹುರುಪಿನ್ಯಾಗ ಭಾಗವಹಿಸಿದ್ವಿ.. ಆನಂತರ ನಾವು ತುಂಬ ಕಷ್ಟ ಅನುಭವಿಸಬೇಕಾಯ್ತು. ಹೋರಾಟದಲ್ಲಿ ಭಾಗವಹಿದವರನ್ನ ಯಾವ ರೀತಿ ಹತ್ತಿಕ್ಲಿಕ್ಕೆ ಸಾಧ್ಯನೋ ಹಾಗೆ ಹತ್ತಿಕ್ಕಿದ್ರು .. ಈಗ್ಲೂ ನಮ್ಮಿಂದ ಮೇಲೇಳಲಿಕ್ಕೆ ಆಗ್ತಾ ಇಲ್ಲ "ಎನ್ನುವುದು, ಭೇಟಿ ಮಾಡಿದ ಬಹುತೇಕರ ಮನೆಯ ಆರ್ಥಿಕ ಸ್ಥಿತಿ ದಾರುಣವಾಗಿದೆ. ಪಾತ್ರ ಸೀನಪ್ಪ ತಾನೊಬ್ಬ ಹುಟ್ಟು ಹೋರಾಟಗಾರ ಈಗ ಏನು ಮಾಡಲಾಗದ ಸ್ಥಿತಿಯಲ್ಲಿದ್ದೇನೆ ಎನ್ನುವಂತೆ ಮಾತನಾಡುತ್ತಿದ್ದರು. ಮಕ್ಕಳು ಇವರನ್ನು ಪ್ರತ್ಯೇಕ ಕೋಣೆಯೊಂದರಲ್ಲಿ ಇರಿಸಿದ್ದಾರೆ. ಅವರ ಈಗಿನ ಸ್ಥಿತಿ ಶೋಚನೀಯ ಹೀಗೆ ಹೋರಾಟದ ನಂತರ ಇದರಲ್ಲಿ ಭಾಗವಹಿಸಿದವರು ಒಂದಲ್ಲ ಒಂದು ರೀತಿ ಪೇಚಿಗೆ ಸಿಕ್ಕಿಹಾಕಿಕೊಂಡರು. ಎಂ.ವೈ. ಘೋರ್ಪಡೆಯವರು ಮಂತ್ರಿಯಾಗಿದ್ದರಿಂದ ಹೋರಾಟದ ನಂತರ ಇವರನ್ನು ಎದುರು ಹಾಕಿಕೊಂಡು ಬದುಕುವ ಶಕ್ತಿ ಚಳವಳಿಗಾರರಿಗೆ ಬಹುದಿನ ಉಳಿಯಲಿಲ್ಲ. ಕೆಲವರು ರಾಜರ ಪಕ್ಷ ಸೇರಿಕೊಂಡರು. ಹೀಗಾಗಿ ಎಲಿಗಾರ ತಿಮ್ಮಪ್ಪನ ಬಣವು ಶಕ್ತಿ ಗುಂದುತ್ತಾ ಹೋಯಿತು.

ಹೋರಾಟದ ಮುಕ್ತಾಯದ ನಂತರ ಸಮಾಜವಾದಿ ಯುವಜನ ಸಭೆಯು ಚೇತರಿಸಿಕೊಂಡು ಹೋರಾಟವನ್ನು ಬೆಂಬಲಿಸಿತು. ಅಕ್ಟೋಬರ್ ೩೧, ೧೯೭೪ರಲ್ಲಿ ಶಿವಮೊಗ್ಗದಲ್ಲಿ ಸಮಾಜವಾದಿ ಯುವಜನ ಸಭಾದ ಒಂದು ಸಭೆ ನಡೆಯಿತು. ಅಲ್ಲಿ ನೆರೆದ ಯುವ ಸಮಾಜವಾದಿಗಳು ಒಂದು ಮನವಿ ಮಾಡಿ 'ಹಿಂಸಾತ್ಮಕ ಹೋರಾಟವನ್ನು ಏಕರೀತಿಯಲ್ಲಿ ಪರಿಗಣಿಸಿ ಲಾಠಿಪ್ರಹಾರ ಮೊದಲಾದ ಉಗ್ರಕ್ರಮಗಳನ್ನು ಅನುಸರಿಸಿ, ಅರಸು ಸರಕಾರ ಸೊಂಡೂರಿನ ಅಹಿಂಸಾತ್ಮಕ ಸತ್ಯಾಗ್ರಹಿಸಿ ಮೇಲೆ ದೌರ್ಜನ್ಯ ನಡೆಸಿದೆ. ನವೆಂಬರ್ ನಾಲ್ಕರ ಒಳಗಾಗಿ ಸರ್ಕಾರವು ಸೊಂಡುರಿನ ಸಮಸ್ಯೆಗೆ ಪರಹಾರ ಸೂಚಿಸದಿದ್ದಲ್ಲಿ ಅಂದಿನಿಂದ ಸರ್ವಶಕ್ತಿಯೊಡನೆ ಸತ್ಯಾಗ್ರಹ ಮುಂದುವರಿಸಲಾಗುವುದು. ರಾಜ್ಯ ಯುವಕ ಸಮುದಾಯವು ಹೋರಾಟಕ್ಕೆ ಇಳಿದ ನಂತರ ಸಂಭವಿಸಬಹುದಾದ ಎಲ್ಲ ಪರಿಸ್ಥಿತಿಗಳಿಗೂ ಸರಕಾರವೇ ಹೊಣೆಯಾಗಿರಬೇಕು' ಎಂದು ಸೂಚನೆ ನೀಡಿದರು. ಈ ನಿರ್ಣಯಕ್ಕೆ ಕಡಿದಾಳ ಶಾಮಣ್ಣ, ಶಿವಮೊಗ್ಗದ ರೈತ ಹೋರಾಟರಾರ ಬಂದಗದ್ದೆ ರಮೇಶ್, ಬಿ.ಎಸ್. ಕೇಶವಪ್ಪ, ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ರೈತ ಚಳವಳಿಯ ಮುಖಂಡರಾದ ಎಂ.ಡಿ. ನಂಜುಂಡಸ್ವಾಮಿ ಹಾಗೂ ಎನ್.ಡಿ. ಸುಂದರೇಶನ್ ಸಹಿ ಮಾಡಿ ಬೆಂಬಲಿಸಿದ್ದಾರೆ. ಇದು ಹೋರಾಟದ ನಂತರದ ಕೊನೆಯ ಹೇಳಿಕೆಯಾಗಿದೆ. ಆನಂತರ ಸೊಂಡೂರಿನಲ್ಲಾದ ಪ್ರಕ್ರಿಯೆಗಳ ಬಗೆಗೆ ಸಮಾಜವಾದಿಗಳ ಗಮನ ಕಡಿಮೆಯಾಯಿತು. ಹಾಗಾಗಿ ಸ್ಥಳೀಯ ಹೋರಾಟಗಾರರು ರಾಜಮನೆತನದ ವಿರೋಧದ ಪರಿಣಾಮವನ್ನು ಎದುರಿಸಬೇಕಾಯಿತು. ಎಲಿಗಾರ ತಿಮ್ಮಪ್ಪನವರಂತೂ ರಾಜ ವಂಶದಿಂದ ಚಿತ್ರಹಿಂಸೆಗೆ ಗುರಿಯಾದರು. ಹೋರಾಟದ ನಂತರ ಅಮಾನುಷ ಮತ್ತು ಅಧಿ ಕಾರದ ದುರುಪಯೋಗ ಆದದ್ದಕ್ಕೆ ತಿಮ್ಮಪ್ಪನವರ ಮೇಲಿನ ಪೋಲಿಸ್ ದೌರ್ಜನ್ಯವೇ ಸಾಕ್ಷಿ.

ಎಲಿಗಾರ ತಿಮ್ಮಪ್ಪ ೧೯೭೩ ಹೋರಾಟದ ರೂವಾರಿ. ಸ್ವತಂತ್ರ ಹೋರಾಟಗಾರರೂ ಕೂಡ. ಇವರ ಮೇಲಿನ ಸೇಡು ತೀರಿಸಿಕೊಳ್ಳಲು ವ್ಯವಸ್ಥಿತ ಸಂಚು ಮಾಡಲಾಯಿತು. ಅರ್ಥ ಸಚಿವರಾಗಿದ್ದ ಎಂ.ವೈ. ಘೋರ್ಪಡೆಯವರ ಆದೇಶದ ಮೇಲೆಗೆ ಪೊಲೀಸರು ವಾರೆಂಟ್ ಇಲ್ಲದೆ ಬಳ್ಳಾರಿಯಲ್ಲಿ ಏಪ್ರೀಲ್ ೧೬,೧೯೭೪ ರಂದು ಬಂಧಿಸಿ ಬೆಂಗಳೂರಿಗೆ ಕರೆದೊಯ್ದು ಐ.ಜಿ.ಪಿ. ಲಾಕಪ್ಪಿನಲ್ಲಿರಿಸಿದರು. ನಂತರ ನವೆಂಬರ್ ೨೮,೧೯೭೩ ರಂದು ಕುಮಾರಸ್ವಾಮಿ ದೇವಸ್ಥಾನದಲ್ಲಿ ನಡೆದ ೫೦,೦೦೦ ರೂಪಾಯಿ ಮೌಲ್ಯದ ಆಭರಣಗಳ ಕಳ್ಳತನದ ಸಂಬಂಧವಾಗಿ ಅವರನ್ನು ಬಂಧಿಸಲಾಗಿದೆ ಎಂದು ಹೇಳಲಾಯಿತು. ಈ ಕುರಿತು ಎಲಿಗಾರ ನಾಗರಾಜಪ್ಪ ”ಅಪ್ಪ ಬಳ್ಳಾರಿಯಲ್ಲಿ ಯಜಮಾನ ಶಾಂತರುದ್ರಪ್ಪ ಅವರ ಅಂಗಡಿ ಮೇಲಿನ ಮಳಿಗೆಯಲ್ಲಿ ಮಲಗಿದ್ರಂತೆ, ಇದ್ದಕ್ಕಿದ್ದಂತೆ ಬಂದ ಪೊಲೀಸರು ಬಂದು ವಿಚಾರಣೆ ಇದೆ ಬನ್ನಿ ಎಂದು ಕರೆದುಕೊಂಡು ಹೋದರಂತೆ, ಏನು? ಯಾಕೆ? ಎಂದು ಕೇಳಿದಾಗ ಅದೆಲ್ಲ ಆಮೇಲೆ ಗೊತ್ತಾಗುತ್ತೆ ಬಾರೋ.. ಎಂದು ದರ್ಪದಿಂದ ಆದಿನ ಬೆಂಗಳೂರಿಗೆ ಕರೆದೊಯ್ಯಲಾಯಿತಂತೆ. ಏಪ್ರಿಲ್ ೧೬ ರಿಂದ ೭ ದಿನಗಳವರೆಗೆ ಐ.ಜಿ.ಪಿ. ಲಾಕಪ್ಪಿನಲ್ಲಿಟ್ಟ ಚಿತ್ರಹಿಂಸೆ ಕೊಟ್ರಂತೆ. ನಮಗೆ ಅಪ್ಪ ಕಾಣೆಯಾಗಿದ್ದು ಭಯವಾಗಿತ್ತು. ಬೆಂಗಳೂರಿನ ಕೆ.ಜಿ.ಮಹೇಶ್ವರಪ್ಪ ಮುಂತಾದವರನ್ನು ಸಂಪರ್ಕಿಸಿದರೂ ಯಾವುದೇ ಮಾಹಿತಿ ಸಿಗ್ಲಿಲ್ಲ. ಏಳನೇ ದಿನ ಕ್ಷೌರ ಮಾಡಲು ಕ್ಷೌರಿಕನೊಬ್ಬ ಬಂದಿದ್ದನಂತೆ ಆತನ ಬಳಿ ಅಪ್ಪ ನಡೆದದ್ದನ್ನೆಲ್ಲಾ ಹೇಳಿ.. ಸಣ್ಣ ದೊಂದು ಚೀಟಿಯಲ್ಲಿ ಇಂಥ ಕಡೆ ಬಂಧನದಲ್ಲಿದ್ದೇನೆ ಎಂದು ಬರೆದು ಅದನ್ನು ಸುಬೇದರ್ ಛತ್ರದ ಬಳಿ ಸೋಷಲಿಸ್ಟ್ ಪಾರ್ಟಿಯ ಕಛೇರಿಯಿದೆ, ಅಲ್ಲಿ ಕೆ.ಜಿ. ಮಹೇಶ್ವರಪ್ಪ ಅಂತ ಇರ್ತಾರೆ ಅವರಿಗೆ ದಯವಿಟ್ಟು ತಲುಪಿಸಿ ಎಂದು ಕೊಟ್ಟರಂತೆ, ಆ ಕೌರಿಕ ಚೀಟಿಯನ್ನು ಸೋಷಲಿಸ್ಟ ಪಾರ್ಟಿ ಆಫೀಸಿಗೆ ತಲುಪಿಸಿದಾಗಲೆ ಬಂಧನದಲ್ಲಿದ್ದ ವಿಷಯ ಗೊತ್ತಾಯ್ತು. ಅದೇ ಸಮಯದಲ್ಲಿ ವಿಧಾನಸಭಾ ಕಲಾಪ ನಡೆದಿತ್ತು… ಅಲ್ಲಿ ದೊಡ್ಡ ಗಲಾಟೆ ಆಯ್ತು” ಎನ್ನುತ್ತಾರೆ.

ವಿಧಾನಸಭಾ ಕಲಾಪದಲ್ಲಿ ಏಪ್ರೀಲ್ ೨೫,೧೯೭೪ರಂದು ಎಂ.ವೈ.ಘೋರ್ಪಡೆಯವರ ರಾಜಕೀಯ ಪ್ರತೀಕಾರದ ವಿರುದ್ಧ ವಿರೋಧ ಪಕ್ಷದವರು ನಿಲುವಳಿ ಸೂಚನೆ ಮಂಡಿಸಿದರು. ವಿಧಾನಸಭಾಧ್ಯಕ್ಷರಾದ ಶ್ರೀಮತಿ ನಾಗರತ್ನಮ್ಮ ಅವರು ವಿರೋಧ ಪಕ್ಷದವರರ ನಿಲುವಳಿ ಮಂಡನೆಗೆ ಅನುಮತಿಯನ್ನು ನಿರಾಕರಿಸಿದರು. ಹಾಗಾಗಿ ವಿರೋಧ ಪಕ್ಷದ ಮುಖಂಡರುಗಳಾದ ಎಚ್.ಡಿ. ದೇವೇಗೌಡ, ಸದಸ್ಯರಾದ ಕಾಗೋಡು ತಿಮ್ಮಪ್ಪ, ಕೋಣಂದೂರು ಲಿಂಗಪ್ಪ, ಎಸ್. ಬಂಗಾರಪ್ಪ, ಬಾಪುಗೌಡ, ಸಿ.ಬೈರೇಗೌಡ, ಡಿ, ಪೋಸಲಿಂಗಮ್, ಎಂ. ರಾಜಶೇಖರಮೂರ್ತಿ, ಎಚ್.ಟಿ. ಕೃಷ್ಣಪ್ಪ, ಎಸ್.ವೈ. ಪಟೇಲ್, ಹನುಮೇಗೌಡ, ಗುರುಸಿದ್ದಪ್ಪ, ಪುಟ್ಟಸ್ವಾಮಯ್ಯ, ಎಂ.ಎಸ್. ಕೃಷ್ಣನ್, ಕೆ.ಎಂ.ನಾಗಣ್ಣ ಮೊದಲಾದವರು ವಿಧಾನಸಭೆಯಲ್ಲಿ ಧರಣಿ ಹೂಡಿದರು. ವೈ.ತಿಮ್ಮಪ್ಪವರ ಬಂಧನಕ್ಕೆ ಕಾರಣವಾದ ಸಂದರ್ಭ ಪೊಲೀಸರ ವರ್ತನೆ, ಪೊಲೀಸರ ವಶದಲ್ಲಿದ್ದಾಗ ಅವರಿಗೆ ನೀಡಲಾದ ಚಿತ್ರಹಿಂಸೆ ಮೊದಲಾದವುಗಳ ಬಗ್ಗೆ ಜಿಲ್ಲಾ ನ್ಯಾಯಾಧೀಶರ ಮಟ್ಟಕ್ಕೆ ಕಡಿಮೆ ಇಲ್ಲದ ನ್ಯಾಯಾಧೀಶರೊಬ್ಬರಿಂದ ನ್ಯಾಯಾಂಗ ವಿಚಾರಣೆ ಆಗಬೇಕೆಂದು ಪಟ್ಟು ಹಿಡಿದರು. ಆ ದಿನ ನಡೆದ ವಿಧಾನಸಭಾ ಚರ್ಚೆಯಲ್ಲಿ ಕಾಗೋಡು ತಿಮ್ಮಪ್ಪನವರು ವಿಧಾನಸಭಾ ಅಧ್ಯಕ್ಷರೊಂದಿಗೆ ದೀರ್ಘವಾಗಿ ಮಾತನಾಡಿದರು. ಇದರ ಒಂದು ಭಾಗ ಹೀಗಿದೆ:

*ಸೊಂಡೂರಿನ ತಿಮ್ಮಪ್ಪನವರ ಈ ಘಟನೆ ಕೇಳಿದರೆ ಹೃದಯ ಇದ್ದ ಮನುಷ್ಯ ತಡೆದುಕೊಳ್ಳುವುದಕ್ಕಾಗುವುದಿಲ್ಲ. ರಾಜಕೀಯ ಎದುರಾಳಿಯನ್ನು ಈ ರೀತಿ ತುಳಿಯಬೇಕು ಎಂದು ಹಣಕಾಸು ಸಚಿವರಿಗೆ ದಾಹ ಇದ್ದರೆ ರಾಜೀನಾಮೆ ಕೊಟ್ಟು ಚುನಾವಣೆ ಬರಲಿ. ಅವರ ಎದುರು ಸ್ಪರ್ಧಿಸಲು ನಾನು ಬರುತ್ತೇನೆ. ಈವರೆಗೂ ಅವರ ವಿರುದ್ಧ ಸ್ಪರ್ಧೆ ಮಾಡಿರತಕ್ಕ ವ್ಯಕ್ತಿ ಎಂದರೆ ಎಲಿಗಾರ ತಿಮ್ಮಪ್ಪ. ಅವರು ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು, ಸೊಂಡೂರು ತಾಲ್ಲೂಕಿನ ರೈತ ಸಂಘದ ಅಧ್ಯಕ್ಷರೂ ಕೂಡ. ಅವರನ್ನು ಹದಿನಾರನೇ ತಾರಿಕು ಬಂಧಿಸಿ, ಐ.ಜಿ.ಪಿ. ಲಾಕಪ್ಪಿನಲ್ಲಿಟ್ಟು ಕೈ ಮೇಲಕ್ಕೆತ್ತಿ ಕಟ್ಟಿ ಲಾಟಿಯಿಂದ ಹೊಡೆದಿದ್ದಾರೆ, ಏರೋಪ್ಲೇನ್ ಏರಿಸಿದ್ದಾರೆ. ಈಗ ಆತನಿಗೆ ನಡೆದಾಡಲು ಬರುವುದಿಲ್ಲ. ೧೯೭೩ರ ನವೆಂಬರ್‌ನಲ್ಲಿ ಸೊಂಡೂರಿನ ಕುಮಾರಸ್ವಾಮಿ ದೇವಸ್ಥಾನದಲ್ಲಿ ಆಭರಣ ಕಳುವಾಗಿದೆ. ಇದನ್ನು ಸಮಾಜವಾದಿಗಳೇ ಮಾಡಿಸಿದ್ದಾರೆ ಎನ್ನುವುದನ್ನು ಸಾಬೀತುಪಡಿಸಲು ತಿಮ್ಮಪ್ಪನಿಗೆ ಹಿಂಸೆ ಕೊಟ್ಟಿದ್ದಾರೆ. ಸಮಾಜವಾದಿಗಳು ಅಂತ ಹೇಯವಾದ ರಾಜಕಾರಣ ಮಾಡಿಲ್ಲ, ಮುಂದೆಯೂ ಮಾಡುವುದಿಲ್ಲ. ರಾಜಮನೆತನದವರೇ ಈ ಕಳ್ಳತನ ಮಾಡಿದ್ದರೆಂದು ಆರೋಪಿಸುತ್ತೇನೆ. ಒಬ್ಬ ತಿಮ್ಮಪ್ಪನನ್ನು ನೆಪಮಾಡಿಕೊಂಡು ರಾಜಕೀಯ ವಿರೋಧಿ ಶಕ್ತಿಯನ್ನು ದಮನ ಮಾಡಲು ಪೊಲೀಸರನ್ನು*

*ಉಪಯೋಗಿಸಿಕೊಳ್ಳಲಾಗಿದೆ. ಈ ಸ್ಥಿತಿ ನಾಳೆ ನಮಗೆ ಬರುತ್ತದೆ. ದೇವರಾಜ ಅರಸರಿಗೂ ಬರುತ್ತದೆ. ಅಧಿಕಾರ ಶಾಶ್ವತ ಇರುವುದಿಲ್ಲ. ಅಧಿಕಾರ ಕಳೆದುಕೊಳ್ಳಬಹುದು ಅಥವಾ ಹೀಗೇ ಇರಬಹುದು, ಆದರೆ ರಾಜಕಾರಣಿಗಳು ಅವರ ವಿರುದ್ಧ ಶಕ್ತಿಗಳನ್ನು ಈ ರೀತಿ ಬಲಿ ತೆಗೆದುಕೊಂಡರೆ ಎಲ್ಲರಿಗೂ ಆ ಸರ್ದಿ ಬರುತ್ತದೆ. ಇವತ್ತು ಇನ್ನೊಬ್ಬರ ಕತ್ತನ್ನು ಹಿಸುಕುವುದಕ್ಕೆ ಪ್ರಯತ್ನ ಮಾಡಿದರೆ, ಅದೇ ಕೈಗಳು ನಾಳೆ ತನ್ನ ಕತ್ತನ್ನು ಹಿಚುಕುತ್ತವೆ ಎನ್ನುವ ಭಯ ಮನುಷ್ಯನಲ್ಲಿ ಇರಬೇಕು. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಎದುರಾಳಿಗಳನ್ನು ಸ್ನೇಹಿತರಂತೆ ಕಾಣಬೇಕು. ಅಂತಹ ಪ್ರವೃತ್ತಿ ಅಧಿಕಾರದಲ್ಲಿದವರಿಗೆ ಇರದಿದ್ದರೆ ಇಂತಹ ಪ್ರಕರಣಗಳು ನಡೆಯುತ್ತವೆ.*

ಈ ಮಾತುಗಳನ್ನು ನೋಡಿದರೆ ಎಲಿಗಾರ ತಿಮ್ಮಪ್ಪನವರ ಪ್ರಕರಣ ಎಂತಹ ಸ್ವರೂಪವನ್ನು ಪಡೆದಿತ್ತು ಎನ್ನುವುದು ತಿಳಿಯುತ್ತದೆ. ರಾಜಮನೆತನ ತನ್ನ ರಾಜಶಾಹಿದರ್ಪವನ್ನು ಮಂತ್ರಿ ಪದವಿ ಮೂಲಕ ವಿಸ್ತರಿಸಿಕೊಂಡ ಬಗೆಗೂ ಸಾಕ್ಷಿಯಂತಿದೆ. ವಿಧಾನಭೆಯಲ್ಲಿ ವಿರೋಧ ಪಕ್ಷದವರ ಬೇಡಿಕೆಯಂತೆ ಈ ಪ್ರಕರಣವನ್ನು ನ್ಯಾಯಾಂಗ ವಿಚಾರಣೆ ನಡೆಸಲು ಸರ್ಕಾರ ಒಪ್ಪಿಕೊಂಡಿತು. ರಾಜ್ಯ ಸರ್ಕಾರವು ಮೇ ೨,೧೯೭೪ರಂದು ಜಿಲ್ಲಾ ನ್ಯಾಯಧೀಶರಾದ ಎಸ್.ಎನ್.ಬಾಟಪ್ ಅವರನ್ನು 'ಶ್ರೀ ತಿಮ್ಮಪ್ಪ ಪ್ರಕರಣ ವಿಚಾರಣಾ ಆಯೋಗ' ದ ಅಧ್ಯಕ್ಷರನ್ನಾಗಿ ನೇಮಿಸಿತು. ಈ ಆಯೋಗವು ಸುಮಾರು ೨ ತಿಂಗಳುಗಳ ಕಾಲ ಸತತವಾಗಿ ವಿಚಾರಣೆ ನಡೆಸಿ ಜುಲೈ ೬,೧೯೭೪ರಂದು ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿತು. ವೈ.ತಿಮ್ಮಪ್ಪನವರನ್ನು ದಸ್ತಗಿರಿ ಮಾಡುವಲ್ಲಿ ಸಿ.ಐ.ಡಿ. ಇನ್‌ಸ್ಪೆಕ್ಟರ್ ಸೂರ್ಯನಾರಾಯಣ ಸ್ವಾಮಿಯವರ ವರ್ತನೆಯ ಆತುರತೆ ಮತ್ತು ಬೇಜವಾಬ್ದಾರಿತನದಿಂದ ಕೂಡಿದ್ದು ಅದು ಅಸಿಂಧು ಮತ್ತು ಆಕ್ಷೇಪಾರ್ಹವಾದುದು, ಪೋಲಿಸ್ ಕಸ್ಟಡಿಯಲ್ಲಿದ್ದಾಗ ಪೋಲಿಸರು ತಿಮ್ಮಪ್ಪನವರಿಗೆ ಚಿತ್ರಹಿಂಸೆಯನ್ನು ಕೊಟ್ಟಿದ್ದು ನಿಜವೆಂದೂ, ತಿಮ್ಮಪ್ಪನವರ ಚಿತ್ರಹಿಂಸೆಗೆ ಸೂರ್ಯ ನಾರಾಯಣ ಅವರೊಬ್ಬರೇ ಜವಾಬ್ದಾರರು ಎಂದು ಆಯೋಗ ತೀರ್ಪು ನೀಡಿ. ಸೂರ್ಯನಾರಾಯಣ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡಿತು.

ಬಾಟಪ್ ಆಯೋಗದ ವರದಿಯಲ್ಲಿ ಈ ಪ್ರಕರಣಕ್ಕೆ ಸಿ.ಐ.ಡಿ ಇನ್‌ಸ್ಪೆಕ್ಟರ್ ಸೂರ್ಯನಾರಾಯಣ ಸ್ವಾಮಿ ಮಾತ್ರ ಕಾರಣರು ಎನ್ನುವಲ್ಲಿ ವಿರೋಧ ಪಕ್ಷದವರು ಆರೋಪಿಸಿದ್ದ ಅರ್ಥ ಸಚಿವರನ್ನು ರಕ್ಷಿಸಲಾಗಿತ್ತು. ಈ ಪ್ರಕರಣದಲ್ಲಿ ಅರ್ಥ ಸಚಿವರ ಕೈವಾಡವಿಲ್ಲ, ಇದು ವಿರೋಧ ಪಕ್ಕದವರ ಅನಗತ್ಯ ಆರೋಪ ಎನ್ನುವಂತಿತ್ತು. ಆದಗ್ಯೂ ತಪ್ಪಿತಸ್ಥರಾದ ಸೂರ್ಯ ನಾರಾಯಣರನ್ನು ಸಸ್ಪೆಂಡ್ ಮಾಡುವುದಾಗಲಿ, ಸೂಕ್ತಕ್ರಮ ಕೈಗೊಳ್ಳುವುದಾಗಲಿ ಸರ್ಕಾರ ಕೂಡಲೆ ಮಾಡಲಿಲ್ಲ. ವಿಧಾನಸಭಾ ಕಲಾಪದಲ್ಲಿಯೂ ಈ ಬಗ್ಗೆ ಚರ್ಚೆ ಆಯಿತು. ಆರೋಪಿಯನ್ನು ಇನ್ನು ಯಾಕೆ ಶಿಕ್ಷಿಸುತ್ತಿಲ್ಲ? ಎನ್ನುವ ವಿರೋಧ ಪಕ್ಷದವರ ಪ್ರಶ್ನೆಗೆ ಆಗಿನ ಸಾರ್ವಜನಿಕ ಸೇವಾ ಮಂತ್ರಿ ಎಚ್.ಎಂ. ಚನ್ನಬಸಪ್ಪ 'ತ್ವರಿತಗತಿಯಲ್ಲಿ ಆರೋಪಿಯನ್ನು ಶಿಕ್ಷಿಸಲಾಗುವುದು' ಎಂದರು. ವಿರೋಧ ಪಕ್ಷದ ನಾಯಕ ಎಚ್.ಡಿ. ದೇವೇಗೌಡರರು, ಎಲಿಗಾರ ತಿಮ್ಮಪ್ಪನ ಪ್ರಕರಣ ಸಂಬಂಧದ ನ್ಯಾಯಾಂಗ ತನಿಖೆ ಹೊರಬಿದ್ದದ್ದು ಜುಲೈ ೬ ರಂದು; ಸೂಕ್ತ ಕ್ರಮಕ್ಕೆ ಅಧಿಕಾರ ನೇಮಿಸಿದ್ದು ಆಗಸ್ಟ್ ೨೮ರಂದು; ಆದರೂ ಆರೋಪಿ ಶಿಕ್ಷೆ ಅನುಭವಿಸದೆ ಆರಾಮವಾಗಿದ್ದಾರೆ. ಸರ್ಕಾರ ಈತನನ್ನು ರಕ್ಷಿಸುತ್ತಿರುವ ಹಿನ್ನಲೆ ಏನು? ಎಂದು ಕಟುವಾಗಿ ಪ್ರಶ್ನೆ ಮಾಡಿದರು.

ನ್ಯಾಯಾಧೀಶ ಎಸ್.ಎಸ್. ಬಾಟಪ್ ಅವರು ಈ ತೀರ್ಪು ನೀಡಿದ್ದಕ್ಕೆ ವರದಿ ಸಲ್ಲಿಸಿದ ಮರುದಿನ ಅವರನ್ನು ವರ್ಗಾಯಿಸಲಾಯಿತು. ಈ ವಿಷಯ ಪ್ರಸ್ತಾಪಿಸಿದ ಎಚ್.ಡಿ.ದೇವೇಗೌಡರು 'ಬಾಟಪ್ ಅವರ ವರ್ಗಾವಣೆಯ ಅಗತ್ಯವೇನಿತ್ತು. ಇದರ ಹಿಂದಿನ ಶಕ್ತಿಗಳಾವುವು?' ಎಂದು ಪ್ರಶ್ನಿಸಿದರು. ಅದೇ ಸದನದಲ್ಲಿ ಕೋಣಂದೂರು ಲಿಂಗಪ್ಪ "ಈ ಕೊಲೆಪಾತಕ ಸರ್ಕಾರಕ್ಕೆ ಮಾನ ಮರ್ಯಾದೆ ಇದ್ದರೆ.. ಎಂದು ಏನೋ ಹೇಳಲು ಪ್ರಯತ್ನಿಸಿದರು. ಮಂತ್ರಿಯೊಬ್ಬರು ನಾಲಿಗೆಯಲ್ಲಿ ಮೂಳೆಯಿಲ್ಲ.. ಎಂದು ಪ್ರತಿಯಾಗಿ ಕಟುಕಿದರು. ಲಿಂಗಪ್ಪ ಮತ್ತೆ ಹೌದೌದು ಕೆಲವರ ತಲೆಯಲ್ಲಿ ಮೂಳೆ ಇರಲ್ಲ ನಾವೇನು ಮಾಡೋಣ? ಎಂದು ಉತ್ತರಿಸಿದರು. ಇಲ್ಲಿನ ಇಡಿಯಾದ ಚರ್ಚೆಯಲ್ಲಿ ಕಾಂಗ್ರೆಸ್ ಸರ್ಕಾರ ತನ್ನನ್ನು ರಕ್ಷಿಸಿಕೊಳ್ಳುವ ಮತ್ತು ವಿರೋಧ ಪಕ್ಷವನ್ನು ದುರ್ಬಲಗೊಳಿಸುವ ತಂತ್ರಗಾರಿಕೆ ಇದ್ದಂತೆ ಕಾಣುತ್ತದೆ.

ಹೋರಾಟದ ನಂತರ ತಿಮ್ಮಪ್ಪನವರ ಈ ಪ್ರಕರಣ ಮಾನವೀಯತೆ ಇರುವವರೆಲ್ಲ ವಿರೋಧಿಸುವಂತಹದ್ದು. ಪ್ರಜಾಪ್ರಭುತ್ವ ಸರ್ಕಾರದಲ್ಲಿ ಅಧಿಕಾರ ಸಾಮಾನ್ಯ ಪ್ರಜೆಯೊಬ್ಬನನ್ನು ಹೇಗೆಲ್ಲ ತುಳಿಯುತ್ತದೆ ಎನ್ನುವುದಕ್ಕೆ ಇದು ನಿದರ್ಶನ. ತಿಮ್ಮಪ್ಪನವರನ್ನು ಬಂಧಿಸಿದ್ದಕ್ಕೆ ಕುಮಾರಸ್ವಾಮಿ ದೇವಸ್ಥಾನದಲ್ಲಿ ಕಳವಾದ ಆಭರಣಗಳು ಕಾರಣ ಎಂದು ಹೇಳಲಾಗಿದೆ. ಆದರೆ ಇದಕ್ಕೆ ಸ್ಥಳೀಯ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಬೇಕಿತ್ತು. ಆದರೆ ದಿಢೀರನೆ ಸಿ.ಐ.ಡಿ ಇನ್ಸ್‌ಪೆಕ್ಟರ್ ಯಾವ ವಾರೆಂಟು ಇಲ್ಲದೆ ಒಬ್ಬರನ್ನು ಬಂಧಿಸುವುದೆಂದರೆ, ಸಾಮಾನ್ಯ ಪ್ರಜೆಯೂ ಗ್ರಹಿಸಬಹುದು ಇದರ ಹಿಂದೆ ಒಂದು ಪ್ರಭಾವಿ ಶಕ್ತಿ ಇದೆ ಎಂದು. ಆರೋಪಿ ಎಂದು ಸಾಬೀತಾದರೂ ಆತನಿಗೆ ಶಿಕ್ಷೆ ಆಗದಿದ್ದದ್ದು ಬಾಟಪ್‌ರನ್ನು ವರದಿ ಸಲ್ಲಿಸಿದ ಕಾರಣಕ್ಕಾಗಿ ವರ್ಗಾವಣೆ ಮಾಡಿಸಿದ್ದು. ಈ ಪ್ರಕರಣಕ್ಕೆ ಎಂ.ವೈ. ಘೋರ್ಪಡೆಯವರು ಯಾವುದೇ ಪ್ರತಿಕ್ರಿಯೆ ನೀಡಿದೆ ಮೌನವಾದದ್ದು, ಮುಖ್ಯಮಂತ್ರಿ ದೇವರಾಜ ಅರಸರು ಎಲ್ಲವೂ ಗೊತ್ತಿದ್ದು ಧ್ವನಿ ಎತ್ತದೆ ಇದ್ದದ್ದು, ಒಂದು ವ್ಯವಸ್ಥೆಯು ಪ್ರಭುತ್ವವನ್ನು ಬೆಂಬಲಿಸುವಂತಿದೆ. ಇದರ ಎದುರು ಎಲಿಗಾರ ತಿಮ್ಮಪ್ಪ ಬಲಿಪಶುವಿನಂತೆ ಕಾಣುತ್ತಾರೆ.

## ಅನುಬಂಧಗಳು – ೧. ತಿಳುವಳಿಕೆದಾರರು

| **ಹೆಸರು** | **ವರ್ಷ** | **ಕೋಂ** | **ಸ್ಥಳ** |
|---|---|---|---|
| ಎಲಿಗಾರ ನಾಗರಾಜಪ್ಪ | ೫೧ | ಲಿಂಗಾಯತ | ಕೃಷ್ಣಾನಗರ |
| ಕಪ್ಪೆ ಸುಬ್ಬಣ್ಣ | ೭೮ | ಲಿಂಗಾಯತ | ಲಕ್ಷ್ಮೀಪುರ |
| ಕಾಗೋಡು ತಿಮ್ಮಪ್ಪ | ೬೧ | ದೀವರು | ಕಾಗೋಡು |
| ಕೃಷ್ಣಪ್ಪ ಮುರುಡಿ | ೬೬ | ಲಿಂಗಾಯತ | ಕೃಷ್ಣಾನಗರ |
| ಗವಿಸಿದ್ದಪ್ಪ | ೪೧ | ಲಿಂಗಾಯತ | ನಂದಿಹಳ್ಳಿ |
| ಗುರುಮೂರ್ತಿ ಪೆಂಡಕೂರು | ೬೧ | ಶೆಟ್ಟಿ | ಹಗರಿಬೊಮ್ಮನಹಳ್ಳಿ |
| ಗೌರಮ್ಮ | ೭೫ | ಲಿಂಗಾಯತ | ಭುಜಂಗನಗರ |
| ಚನ್ನಬಸಪ್ಪ (ಡಾಕ್ಟರ್) | ೪೮ | ಲಿಂಗಾಯತ | ಸೊಂಡೂರು |
| ಜಿಲಾನ್ | ೫೫ | ಮುಸ್ಲಿಂ | ಸೊಂಡೂರು |
| ತಿಂದಪ್ಪ | ೬೮ | ಹರಿಜನ | ಲಕ್ಷ್ಮೀಪುರ |
| ದ್ಯಾಮಪ್ಪ | ೬೦ | ಹರಿಜನ | ಸೊಂಡೂರು |
| ದುರುಗಪ್ಪ | ೬೩ | ಹರಿಜನ | ಲಕ್ಷ್ಮೀಪುರ |
| ದೇಸಾಯಿ ಷಣ್ಮುಣಪ್ಪ | ೬೮ | ಲಿಂಗಾಯತ | ನರಸಾಪುರ |
| ನರಸಿಂಹಲು (ವಕೀಲರು) | ೫೦ | ಕ್ಷೌರಿಕ | ಸೊಂಡೂರು |
| ನಾಗರಾಜ | ೪೦ | ನಾಯಕ | ನಾರಾಯಣಪುರ |
| ನಾಗಪ್ಪ ಎಸ್. | ೬೮ | ಲಿಂಗಾಯತ | ಲಕ್ಷ್ಮೀಪುರ |
| ಪಾತ್ರ ಸೀನಪ್ಪ (ಶ್ರೀನಿವಾಸ) | ೭೧ | ಮರಾಠ | ಸೊಂಡೂರು |
| ಪಾಟೀಲ್ ಪುಟ್ಟಪ್ಪ | ೭೦ | ಲಿಂಗಾಯತ | ಹುಬ್ಬಳ್ಳಿ |
| ಪಾರಮ್ಮ | ೭೧ | ಲಿಂಗಾಯತ | ನಂದಿಹಳ್ಳಿ |
| ಭರಮನಗೌಡರು | ೬೮ | ಲಿಂಗಾಯತ | ಭುಜಂಗನಗರ |

| | | | |
|---|---|---|---|
| ಮಂಜುನಾಥ ಸಿ | ४೨ | ನಾಯಕ | ಸೊಂಡೂರು |
| ಮೃತ್ಯುಂಜಯ ರುಮಾಲೆ | ४೮ | ಜಂಗಮರು | ಹೊಸಪೇಟೆ |
| ಮಹೇಶ್ವರಪ್ಪ ಕೆ.ಜಿ. | ೭೬ | ಲಿಂಗಾಯತ | ದಾವಣಗೆರೆ |
| ಮೇದಾರ ಹೇಮಣ್ಣ | ४೬ | ಮೇದಾರ | ಕೂಡ್ಲಿಗಿ |
| ವಡ್ಡನಕಟ್ಟೆ ಗೌರಮ್ಮ | ೭೦ | ಲಿಂಗಾಯತ | ಭುಜಂಗನಗರ |
| ಶಾಂತರುದ್ರಪ್ಪ | ೫೨ | ಲಿಂಗಾಯತ | ಬಳ್ಳಾರಿ |
| ಸಿದ್ದಪ್ಪ | ४೯ | ನಾಯಕ | ನಾರಾಯಣಪುರ |
| ಸಿರಿಗೆರೆ ಪರಪ್ಪ | ೭೦ | ಲಿಂಗಾಯತ | ಸೊಂಡೂರು |
| ಶಿವಕುಮಾರ ಟಿ.ಎಂ. | ४೬ | ಸೊಂಡೂರು | |

## ಅನುಬಂಧಗಳು – ೨. ಅಭ್ಯಾಸಸೂಚಿ

**ಅ. ಕೃತಿಗಳು**


ಅನಂತ ನಾರಾಯಣ ಎಸ್., ತೆಲಂಗಾಣ ರೈತ ಹೋರಾಟ, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೧೯೮೬

ಕಮಲೇಶ್ ಕೆ.ಆರ್. (ಸಂ), ಕರ್ನಾಟಕ ರಾಜಕೀಯ ಚಿಂತನೆ, ಎಸ್. ನಿಜಲಿಂಗಪ್ಪ ಸಂಸ್ಮರಣ ಗ್ರಂಥ, ಎಸ್. ನಿಜಲಿಮಗಪ್ಪ ರಾಷ್ಟ್ರೀಯ ಪ್ರತಿಷ್ಠಾನ, ಬೆಂಗಳೂರು, ೨೦೦೩

ಕಾಳೇಗೌಡ ನಾಗವಾರ, ನಟರಾಜ ಹುಳಿಯಾರ್ (ಸಂ), ಸ್ವಾತಂತ್ರ್ಯದ ಅಂತರ್ಜಲ (ಸಂಪುಟ ೧), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೬

ಕೀರ್ತಿನಾಥ ಜಿ.ಎಸ್., ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಳುವಳಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ (ಅಪ್ರಕಟಿತ)

ಕೆಶವರಾವ್ ಟಿ.ಬಿ., ಸ್ವಾತಂತ್ರ್ಯ ಸಂಗ್ರಾಮ ಬಳ್ಳಾರಿ, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, ೧೯೭೯

ಕೇಶವರಾವ್ ಟಿ.ಬಿ., ಸೊಂಡೂರು ಘೋರ್ಪಡೆ ಮನೆತನ, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, ೧೯೭೯

ಗಿರಿಜಾ, ಸೊಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಖಿತ ದೇವಾಲಯಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ (ಅಪ್ರಕಟಿತ)

ಗುರುಮೂರ್ತಿ ಪೆಂಡಕೂರು, ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೫

ಗೋದಾವರಿ ಪರುಳೇಕರ್ (ಅನು:ಸರಸ್ವತಿ ರಿಸಬುಡ್), ಮಾನವ ಎಚ್ಚೆತ್ತಾಗ, ಅಧ್ಯಯನ ಪ್ರಕಾಶನ, ಶಿರಸಿ, ೨೦೦೦

ಗೋಪಾಲರಾವ್ ಎಚ್.ಎಸ್., ಕರ್ನಾಟಕ ಏಕೀಕರಣದ ಕತೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಗೋವಿಂದರಾಜು ಸಿ.ಆರ್., ಕರ್ನಾಟಕದ ಏಕೀಕರಣದ ಚಳುವಳಿ ಮತ್ತು ಕನ್ನಡ ಸಾಹಿತ್ಯ, ಎಸ್.ಬಿ.ಎಸ್. ಪಬ್ಲಿಷರ್, ಬೆಂಗಳೂರು, ೧೯೯೮

ಚಂದ್ರ ಪೂಜಾರಿ, ಸ್ವದೇಶಿ ಒಂದು ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಚನ್ನಬಸವನ ಗೌಡ ಕೆ., ನಾನೊಬ್ಬ ಸಾರ್ವಜನಿಕ (ಆತ್ಮಕತೆ), ಕನ್ನಡ ಸಾಹಿತ್ಯ ಪರಿಷತ್ತಿನ ಘಟಕ, ಹಗರಿಬೊಮ್ಮನಹಳ್ಳಿ, ೧೯೯೪

ತಂಬಂಡ ವಿಜಯ ಪೂಣಚ್ಚ, ರೈತ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ತಂಬಂಡ ವಿಜಯ ಪೂಣಚ್ಚ (ಪ್ರ: ಸಂ), ಚರಿತ್ರೆ ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

ತಾಳಂಕಿ ಸುಬ್ಬರಾಯ ಶ್ರೇಷ್ಠಿ, ಕಾರ್ತಿಕೇಶ್ವರಸ್ವಾಮಿ ಲಾವಣಿ, ಕೃಷಿ ಪವರ್ ಪ್ರೆಸ್, ಬಳ್ಳಾರಿ, ೪೧೯೫೫

ದಿವಾಕರ ರಂ.ರಾ., ಕರ್ನಾಟಕ ಏಕೀಕರಣ ಕತೆ, ಲೋಕ ಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ, ೧೯೬೨

ನಂಜುಂಡಸ್ವಾಮಿ ಎಂ.ಡಿ., ರೈತ ಹೋರಾಟ ಏಕೆ?, ಕರ್ನಾಟಕ ರಾಜ್ಯ ರೈತ ಸಂಘ, ೧೯೮೨

ನಟರಾಜ ಹುಳಿಯಾರ್, ಚಿಂತಾಮಣಿ ಕೊಡ್ಲೆಕೆರೆ (ಸಂ), ಮಾನವ ಕುಲದ ಏಕತೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೦

ನಟರಾಜ ಹುಳಿಯಾರ್, ರಾಮಕೃಷ್ಣ ಎಸ್.ಆ. (ಸಂ), ಕಣ್ಣೆದುರಿನ ಪ್ರಶ್ನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇನಾಲಯ, ಬೆಂಗಳೂರು, ೨೦೦೦

ನಾಗರಾಜ ಎಂ.ಜಿ., ಕರ್ನಾಟಕದ ರೈತ ಚಳುವಳಿ-ಸತ್ಯಾಗ್ರಹಗಳು, (ಸಹಸ್ರಮಾನ ಸಂಪುಟ.೨) ಸರ್ಕಾರಿ ಮುದ್ರಣಾಲಯ, ಬೆಂಗಳೂರು, ೨೦೦೬

ನಾಗಭೂಷಣಗೌಡ ಪಾಟೀಲ, ಸಮಾಜವಾದಿ ಚಳುವಳಿ ಮತ್ತು ಆಧುನಿಕ ಕನ್ನಡ ಸಾಹಿತ್ಯ ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

ನಾಗಯ್ಯ ಜೆ.ಎಂ., ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಲೋಹಿಯ ಪ್ರಕಾಶನ, ಬಳ್ಳಾರಿ

ನಾಗೇಶ ಎಚ್. ವಿ, ಎ. ಇ. ಪುನೀತ, ಭಾರತದಲ್ಲಿ ರೈತ ಹೋರಾಟಗಳು, ಚಂದ್ರನಾಥ ಪ್ರಕಾಶನ, ಹುಬ್ಬಳ್ಳಿ, ೧೯೮೪

ನಾರಾಯಣ ಸ್ವಾಮಿ ಜ.ಹೋ. (ಅನು), ಭಾರತದ ರೈತ ಮತ್ತು ಇತರ ಲೇಖನಗಳು, (ಡಾ. ರಾಮಮನೋಹರ ಲೋಹಿಯಾ) ನೆಲಮನೆ ಪ್ರಕಾಶನ, ಶ್ರೀರಂಗ ಪಟ್ಟಣ, ೨೦೦೦

ನಿಂಗಪ್ಪ ಮುದೇನೂರು, ಸೊಂಡೂರು ಕುಮಾರಸ್ವಾಮಿ, ಸೃಷ್ಟಿ ಪ್ರಕಾಸನ, ಬೆಂಗಳೂರು, ೨೦೦೫

ಫಕೀರ್ ಮಹಮದ್ ಕಟ್ಪಾಡಿ, ಕಯ್ಯೂರಿನ ರೈತ ವೀರರು, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೧೯೯೨

ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಬಸವರಾಜ, ಶಿವಮೊಗ್ಗ ರೈತ ಚಳುವಳಿ, ಸಮುದಾಯ ಪ್ರಕಾಶನ, ಬೆಂಗಳೂರು, ೧೯೮೧ ಬಸವರಾಜ ಮಲಶೆಟ್ಟಿ, ಸೊಂಡೂರು ಶ್ರೀದ ಕುಮಾರಸ್ವಾಮಿ ಜನಪದ ಹಾಡುಗಳು, ಕರ್ನಾಟಕ ಪತ್ರಿಕಾ ಪ್ರೈವೇಟ್ ಲಿಮಿಟೆಡ್, ಸೊಂಡೂರು, ೧೯೮೮

ಬಾಲಚಂದ್ರ ಶಾಸ್ತ್ರಿ, ಶ್ರೀ ಸ್ಕಂದ ಕ್ಷೇತ್ರ ಮಹಾತ್ಮೆ, ಶಂಕರಾಚಾರ್ಯ ಪಾಠಶಾಲೆ, ಧಾರವಾಡ, ೨೦೦೦

ಬೋರಲಿಂಗಯ್ಯ ಹಿ.ಚಿ., ಎನ್. ಹುಚ್ಚಪ್ಪ ಮಾಸ್ತರ್ (ಸಂ), ಕಾಗೋಡು ಚಳುವಳಿ ಸುವರ್ಣ ಸಂಪುಟ, ಮಲೆನಾಡು ಜನಪದ ಲೋಕ, ಸಾಗರ, ೨೦೦೨

ಮಾಧವ ಐತಾಳ (ಅನು) ಬತ್ತದ ಚಿಲುಮೆ (ಮೂಲ:ವಂದನಾಶಿವ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

ಯಜಮಾನ್ ಶಾಂತರುದ್ರಪ್ಪ, ಹಸಿದ ಮಾನವ ಹುಸಿ ನುಡಿದು ಹದಗೆಡಿಸಿದ ಸೊಂಡೂರ ನಾಡು, (ಅಪ್ರಕಟಿತ ಕಾದಂಬರಿ), ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು

ಯಜಮಾನ್ ಶಾಂತರುದ್ರಪ್ಪ, ಸೊಂಡೂರು ಹೋರಾಟ ಏಕೆ?, ಸಮಾಜವಾದಿ ಪಕ್ಷ, ಬೆಂಗಳೂರು, ೧೯೭೩

ಯಡೂರು ಮಹಾಬಲ, ನಮ್ಮ ಚಳುವಳಿಯ ಬಗೆಗಿನ ಹಲವು ಪ್ರಶ್ನೆಗಳು, ಸಮತಾ ಪ್ರಕಾಶನ, ಹುಬ್ಬಳ್ಳಿ

ರಮೇಶ್ ಬೆ.ಗೋ., ಸತ್ಯಾಗ್ರಹ, ಅಕ್ಷರ ಪ್ರಕಾಶನ, ಸಾಗರ, ೧೯೮೫

ರಹಮತ್ ತರೀಕೆರೆ, ಲೋಕ ವಿರೋಧಿಗಳ ಜತೆಯಲ್ಲಿ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೨೦೦೬

ರಾಜಪ್ಪ ಟಿ.ಎನ್., ಬಳ್ಳಾರಿ ಜಿಲ್ಲೆಯ ಜನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ, ಮೈಸೂರು, ೧೯೯೫

ರಾಜಶೇಖರ ಜಿ., ಕಾಗೋಡು ಸತ್ಯಾಗ್ರಹ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೮೦ ರಾಮಲಿಂಗಪ್ಪ ಟಿ. ಬೇಗೂರು (ಅನು), ಎಡ್ವರ್ಡ್ ಸೈದ್, ಅಧ್ಯಯನ ಮಂಡಲ, ಬೆಂಗಳೂರು, ೨೦೦೩

ರಾಮರಾಯ ಕೆ., ಶ್ರೀ ಷಣ್ಮುಖ ಯಾತ್ರೆ, ನಿಂಬಳಗೇರಿ, ೧೯೪೭

ಲಿಂಗಣ್ಣ ಸತ್ಯಂಪೇಟೆ, ಗ್ರಾಮಸಮರ, ಪ್ರಕೃತಿ ಪ್ರಕಾಶನ, ಶಹಾಪುರ, ೧೯೮೭

ವಾಸುದೇವ ಬಡಿಗೇರ, ಸೊಂಡೂರು ಪರಿಸರದ ಕಾರ್ತಿಕೇಯ ತಪೋವನ, (ಚಾರಿತ್ರಿಕ ಅಧ್ಯಯನ) ಮಯ ಪ್ರಕಾಶನ, ಹೊಸಪೇಟೆ, ೧೯೯೭

ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಕಲೆಕ್ಟರ್‌ಗಳ ಆಡಳಿತ (೧೮೦೦-೧೯೪)

ಒಂದು ಸಮೀಕ್ಷೆ, (ಎಂ. ಫಿಲ್ ಅಪ್ರಕಟಿತ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಷ್ಣು ನಾಯಕ, ದುಡಿಯುವ ಕೈಗಳ ಹೋರಾಟದ ಕತೆ, ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ, ಅಂಕೋಲಾ, ೨೦೦೪

ವಿಷ್ಣು ನಾಯಕ, ಹದ್ದುಪಾರಿನ ಹಿಂದೆ ಮುಂದೆ, ರಾಘವೇಂದ್ರ ಪ್ರಕಾಶನ ಅಂಕೋಲಾ (ಉ.ಕ), ೧೯೮೭

ವಿಷ್ಣುಮೂರ್ತಿ ಎಚ್.ಸಿ., ಗೋಪಾಲಗೌಡ ಶಾಂತವೇರಿ, ಅನನ್ಯ ಪ್ರಕಾಶನ, ಧಾರವಾಡ, ೧೯೯೯

ಶರದ್ ಜೋಷಿ, ರೈತ ಸಂಘಟನೆಯ ವಿಚಾರ ಮತ್ತು ಕಾರ್ಯ ಪದ್ಧತಿ, ಅಧ್ಯಯನ ಪ್ರಕಾಶನ, ಶಿರಸಿ, ೨೦೦೦

ಶಿವಾನಂದ ಗುಬ್ಬಣ್ಣನವರ, ನರಗುಂದ ನವಲಗುಂದ ರೈತ ಹೋರಾಟ, ಅಕ್ಷಯ ಪ್ರಕಾಶನ, ಧಾರವಾಡ, ೧೯೯೫

ಶೇಷಾದ್ರಿ ಬಿ., ಚಂದ್ರಶೇಖರ್ ಟಿ.ಆರ್., ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

ಶೇಷಾದ್ರಿ  ಬಿ., ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರೀಕರಣ ಮತ್ತು ಜನಾಂದೋಲನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

ಸಂಗಮೇಶ ಕೋಟಿ (ಸಂ), ಕುರುಕ್ಷೇತ್ರ (ಬಾಬುರೆಡ್ಡಿ ತುಂಗಳ್ ಅಭಿನಂದನ ಗ್ರಂಥ), ಬಾಬುರೆಡ್ಡಿ ತುಂಗಳ್ ಅಭಿನಂದನಾ ಸಮಿತಿ, ಜಮಖಂಡಿ,  ೨೦೦೭

ಸವಿತಾ, ಸೊಂಡೂರು ಪರಿಸರದ ಗ್ರಾಮದೈವತೆಗಳು, ಎಂ.ಫಿಲ್ ಪ್ರಬಂಧ ಕನ್ನಡ ವಿ.ವಿ. ಹಂಪಿ, ೨೦೦೭ (ಅಪ್ರಕಟಿತ)

ಸಿದ್ದಯ್ಯ ಪುರಾಣಿಕ, ಗ್ರಾಮ ಸ್ವರಾಜ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೮೨

ಹನುಮಂತ, ಬಾಪು ಹೆದ್ದೂರು ಶೆಟ್ಟಿ (ಸಂ), ಭಾರತೀಯ ಸಮಾಜವಾದದ ಹೆಜ್ಜೆ ಗುರುತುಗಳು, ಜನ ಪ್ರಕಾಶನ, ಬೆಂಗಳೂರು, ೧೯೭೯

ಹನುಮಂತ, ಸೊಂಡೂರು ಹೋರಾಟ, ಜನ ಪ್ರಕಾಶನ, ಬೆಂಗಳೂರು, ೧೯೮೦

ಹನುಮಂತ (ಸಂ), ಸಮಾಜವಾದ, ಜನ ಪ್ರಕಾಶನ, ಬೆಂಗಳೂರು, ೧೯೮೦

ಹಸನ್ ನಯಿ ಸುರಕೋಡ (ಅನು), ಲೋಹಿಯಾ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೦

ಹೇಮಲತಾ ಜಿ., ಸೊಂಡೂರು ವೀರಶೈವ ಸಮುದಾಯದ ಆಚರಣೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭ (ಅಪ್ರಕಟಿತ)

**ಆ.ಪತ್ರಿಕೆಗಳು**

**ದಿನಪತ್ರಿಕೆಗಳು**

ಆಂಧ್ರಪ್ರಭ, ಹೈದರಾಬಾದ್

ಆಂಧ್ರ ಪತ್ರಿಕೆ, ಹೈದರಾಬಾದ್

ಇಂಡಿಯನ್ ಎಕ್ಸ್ ಪ್ರೆಸ್, ಬೆಂಗಳೂರು

ಕನ್ನಡಪ್ರಭ, ಬೆಂಗಳೂರು

ಜನವಾಣಿ, ಹುಬ್ಬಳ್ಳಿ

ಡೆಕ್ಕನ್ ಹೆರಾಲ್ಡ್, ಬೆಂಗಳೂರು

ದಿ ಹಿಂದು, ಬೆಂಗಳೂರು

ದೇಶವಾಣಿ, ಗದಗ

ಪ್ರಜಾವಾಣಿ, ಬೆಂಗಳೂರು

ವಿಶಾಲ ಕರ್ನಾಟಕ, ಸಂ: ಆರ್.ವೈ.ಜಠಾರ, ಕೆ.ವೈ.ಪಾಟೀಲ್, ಧಾರವಾಡ(೧೯೬೫)

ವಿಶಾಲ ಕರ್ನಾಟಕ, ಸಂ: ಎಸ್.ಎನ್. ಸೀತಾರಾಮ ಶಾಸ್ತ್ರಿ, ಹುಬ್ಬಳ್ಳಿ (೧೯೭೦)

ವಿಶ್ವವಾಣಿ, ಹುಬ್ಬಳ್ಳಿ

ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ

**ವಾರಪತ್ರಿಕೆ/ಮಾಸಿಕ**

ಕನ್ನಡ ಟೈಮ್ಸ್, ಸಂ: ಅನಿತಾ ಹುಳಿಯಾರ್, ಬೆಂಗಳೂರು(೨೦೦೭)

ಕರ್ಮಯೋಗಿ, ಸಂ: ಎಂ.ಜಿ. ಕರುಣಾಳ್, ಬೆಂಗಳೂರು (೧೯೫೦)

ಜನ ಪ್ರಗತಿ, ಸಂ: ಕೆ. ದೀಕ್ಷಿತ್, ಹುಬ್ಬಳ್ಳಿ (೧೯೬೫)

ಜ್ವಾಲಾಮುಖಿ, ಬೆಂಗಳೂರು (೧೯೬೦)

ತಾಯಿನಾಡು, ಸಂ: ಪಿ.ಆರ್. ರಾಮಯ್ಯ

ಪ್ರಜಾಮತ/ಪ್ರಜಾಮಿತ್ರ- ಸಂ: ಬಿ.ಎನ್.ಗುಪ್ತ, ಹುಬ್ಬಳ್ಳಿ (೧೯೭೦)

ಪ್ರಪಂಚ, ಸಂ: ಪಾಟೀಲ ಪುಟ್ಟಪ್ಪ, ಹುಬ್ಬಳ್ಳಿ (೧೯೬೦)

ಬುಲೆಟಿನ್, ಸಂ: ಬುಕ್ಕಪ್ಪ ಸಿದ್ದಪ್ಪ ಇಟಗಿ, ಬಳ್ಳಾರಿ (೧೯೬೦)

ರಣಧೀರ, ಸಂ:  ಭಕ್ತವತ್ಸಲ, ಬೆಂಗಳೂರು (೧೯೭೦)

ರುಜುವಾತು, ಸಂ: ಯು.ಆರ್. ಅನಂತಮೂರ್ತಿ, ಬೆಂಗಳೂರು

ರೈತ ಪತ್ರಿಕೆ, ಸಂ: ಕೋ. ಚನ್ನಬಸಪ್ಪ, ಬೆಂಗಳೂರು (೧೯೬೦)

ಲೋಕವಾಣಿ, ಸಂ: ಎಸ್.ಎನ್. ಸೀತಾರಾಮ ಶಾಸ್ತ್ರಿ, ಹುಬ್ಬಳ್ಳಿ

ವಿಕ್ರಮ, ಸಂ: ಜಿ.ಎಸ್. ಮಲ್ಯ, ಬೆಂಗಳೂರು (೧೯೭೦)

ಸಂಗ್ರಾಮ, ಬೆಂಗಳೂರು (೧೯೬೫)

ಸ್ವತಂತ್ರ, ಸಂ: ಎಸ್.ಎಮ್. ಕೊಟ್ರಯ್ಯ, ಹೊಸಪೇಟೆ (೧೯೭೦)

**ಇ. ರಾಜ್ಯ ಪತ್ರಾಗಾರ ಇಲಾಖೆಯ ಮಾಹಿತಿ**

೧. ಸಂಗ್ರಹದ ಹೆಸರು : ಯಜಮಾನ್ ಶಾಂತರುದ್ರಪ್ಪ
ಬಾಕ್ಸ್ ಸಂಖ್ಯೆ ೧೦೬/೧ ಒಟ್ಟು ದಾಖಲೆಗಳು ೧-೪೦೩, New paper Clippings.

೨. ಬಾಕ್ಸ್ ಸಂಖ್ಯೆ ೧೦೬/೨ ಒಟ್ಟು ದಾಖಲೆಗಳು ೧-೨೧೪, Paper Clippings. Printed  Book. Gagette.

೩. ಬಾಕ್ಸ್ ಸಂಖ್ಯೆ ೧೦೬/೩ ಒಟ್ಟು ದಾಖಲೆಗಳು ೧-೪೩, ೧೯೪೮ Sandur State. News Paper P.P. Copies. Printed Books.

೪. ಬಾಕ್ಸ್ ಸಂಖ್ಯೆ ೧೦೬/೪ ಒಟ್ಟು ದಾಖಲೆಗಳು ೧-೨೧, Pampletes. Correspondence Notes. Vikrama Magazine 1928.

**ಈ. ಇಂಗ್ಲಿಷ್ ಪುಸ್ತಕ ಮತ್ತು ದಾಖಲೆ**

1. Census of 1971, Bellary district -Govt. of Karnataka

2. Census of 2001, Bellary district -Govt. of Karnataka

3. Mysore State Gazettes, Bellary district 1972-Govt. of Mysore Bangalore.

4. Sandur State, 1948. Govt. of Sandur.

5. The Grand Resistance-M.Y. Ghorpade. Delhi, 1992

6. The MLA Debates (Karnataka Legislative Assembly Debates)

3rd Session -Vol XXI, Part I – August, 1973

3rd Session -Vol XXII, Part II – Sep, 1973

4th Session -Vol XXIII, Part I – Sep, 1973

3rd Session -Vol XXIII, – May – 1973

4th Session -Vol XXVII, Part A – Sep, 1973

1st Session -Vol XXII, April, 1974_

## ಅನುಬಂಧಗಳು – ೩. ವಿಷಯಸೂಚಿ

ಅಂಗಡಿ ಶರಭಯ್ಯ ೩೮

ಅಂಜನಪ್ಪ ಜಿ.ವಿ. ೯೦

ಅನಂತಮೂರ್ತಿ ಯು.ಆರ್. ೧೦೦

ಅಬ್ಬಿಗೇರಿ ವಿರೂಪಾಕ್ಷಪ್ಪ ೧೨೭

ಅಬುಸಾಹೇಬ್ ಕೆ.ಕೆ. ೮೭, ೧೨೫

ಅಮೇರಿಕ ೩೧, ೧೧೭

ಅರಗಿನದೋಣಿ ರಾಯನಗೌಡ ೬, ೪೬

ಅರಣ್ಯ ಸಂರಕ್ಷಣಾ ಕಾಯ್ದೆ ೧೨

ಅರಳುಕಲ್ಲು ಕುಮಾರಪ್ಪ ೩೮

ಅಲ್ಲಂ ಕರಿಬಸಪ್ಪ ೫೪

ಅಲ್ಲಂ ಸುಮಂಗಳಮ್ಮ ೩೬

ಆಂಧ್ರ ಪ್ರದೇಶ ೧, ೧೭, ೪೧, ೬೮, ೯೯,೧೩೦

ಆಚಾರ್ ಬಿ.ಎಸ್. ೧೦೦

ಇಂಗ್ಲೆಂಡ್ ೨೨, ೩೫, ೧೧೭

ಇಂಟಲಿಜೆಂಟ್ ಹ್ಯೂಮನ್ಸ್ ಗೈಡ್ ೧೧೭

ಇಂಡಿಯನ್ ಎಕ್ಸ್ ಪ್ರಸ್ ೧೧೩

ಇಂದಿರಾಗಾಂಧಿ ೫೭, ೬೬, ೭೦, ೭೪,೮೭, ೧೨೪, ೧೨೫, ೧೨೮, ೧೩೮

ಇಂದೋರ್ ೫೫

ಉಜ್ಜಿನಿ ೧೬

ಉಳ್ಳಾಗಡ್ಡೆ ಕರಿಯಪ್ಪ ೩೮

ಎನ್.ಎಮ್.ಡಿ.ಸಿ. ೫೭, ೭೩

ಎರಡನೇ ಜಾಗತಿಕ ಮಹಾಯುದ್ಧ ೩೫

ಎಲಿಗಾರ ತಿಮ್ಮಪ್ಪ ೩೮, ೪೫, ೪೭, ೪೮, ೫೩, ೬೮, ೭೬, ೯೪, ೧೧೪, ೧೨೮, ೧೩೧, ೧೪೩, ೧೪೬

ಎಲಿಗಾರ ನಾಗರಾಜಪ್ಪ ೨೫, ೧೧೪, ೧೩೮, ೧೪೩

ಏಕನಾಥ ಥೋರ್ಪಡೆ ೯೫,೯೬

ಏಡ್ಸ್ ೧೦

ಐಕಲ್ ಗುರುಸಿದ್ದಪ್ಪ ೪೪

ಐಕ್ಯರಂಗ ೪೭

ಔರಂಗಜೇಬ್ ೧೭, ೧೮

ಕಡಿದಾಳ್ ಮಂಜಪ್ಪ ೧೧೮

ಕಡಿದಾಳ್ ಶಾಮಣ್ಣ ೧೪೩

ಕನ್ನಡ ಪ್ರಭ ೮೪, ೯೪, ೯೬, ೧೧೪

ಕಪ್ಪೆ ಸುಬ್ಬಣ್ಣ ೭೨, ೧೩೬

ಕಬ್ಬನ್ ಪಾರ್ಕ್ ೯೮, ೧೧೫

ಕರ್ಮಯೋಗಿ ಪತ್ರಿಕೆ ೪೭, ೧೧೬

ಕಮ್ಯುನಿಸ್ಟರು ೩೭, ೧೩೦

ಕರ್ನಲ್ ಮೆಕಂಜಿ ೩

ಕರ್ನಾಟಕ ವಿಶ್ವವಿದ್ಯಾಲಯ ೯೬-೧೦೧

ಕರ್ನಾಟಕ ಏಕೀಕರಣ ೪೦, ೧೩೦

ಕರುಣಾನಿಧಿ ಎಂ. ೬೭

ಕಾಗೋಡು ೭೭, ೧೩೪

ಕಾಗೋಡು ತಿಮ್ಮಪ್ಪ ೭೭, ೮೪, ೧೧೩, ೧೨೫, ೧೨೬, ೧೩೪, ೧೩೬, ೧೪೦, ೧೪೩

ಕಂಪ್ಲಿ ಇಮಾಮ್ ಸಾಹೇಬ್ ೯೬

ಕಾಶೀನಾಥರಾವ್  ಬೇಲೂರೆ ೭೯, ೧೩೪

ಕಾಸಿಂ ರಜ್ವಿ ೩೭, ೧೧೮

ಕಾಂಗ್ರೆಸ್ ೩೭, ೪೬-೪೯, ೬೦, ೭೦, ೧೧೮, ೧೨೪-೧೨೯, ೧೪೨, ೧೪೬

ಕಿಸಾನ್ ಖೇತ್ ಮಜದೂರ್ ಪಂಚಾಯ್ತಿ ೮೧, ೮೭

ಕುಮಾರರಾಮ ೧೭

ಕುಮಾರಸ್ವಾಮಿ ದೇವರು ೨೧, ೨೮, ೩೨, ೪೩, ೧೧೦

ಕುಮಾರ ಸ್ವಾಮಿ ಎಚ್.ಡಿ. ೧೨

ಕುಮುಟ ಎಸ್.ಎಸ್. ೭೭, ೮೩, ೧೨೬, ೧೩೪

ಕುವೆಂಪು ೮

ಕುರುಕ್ಷೇತ್ರ ಪತ್ರಿಕೆ ೯೭

ಕೂಡ್ಲಿಗಿ ೭, ೧೫, ೧೬, ೩೦, ೩೩, ೩೭, ೭೩, ೧೦೨

ಕೃಷ್ಣ ಎಸ್. ಎಂ. ೨೩, ೧೨೨, ೧೩೭

ಕೃಷ್ಣಪ್ಪ ಟಿ. ೧೩೬

ಕೆಂಗಲ್ ಹನುಮಂತಯ್ಯ ೪೪, ೧೦೭

ಕೇದಾರ್ ನಾಥ್ ೧೨೫

ಕೇಂಬ್ರಿಜ್ ವಿಶ್ವವಿದ್ಯಾಲಯ ೨೨

ಕೇರಳ ೪೧

ಕೇಶವರಾಯ್ ಟಿ.ಬಿ. ೧೮, ೩೬,

ಕೊಟ್ಟೂರು ೩೮, ೪೭

ಕೊಪ್ಪಳ ೧೯

ಕೊಲ್ಲಾಪುರ ೧೮, ೩೮

ಕೊಚೆ ೪೬, ೪೮, ೧೧೮

ಕೋಣಂದೂರು ಲಿಂಗಪ್ಪ ೭೭, ೮೪, ೧೧೩, ೧೨೫-೧೨೬, ೧೩೪, ೧೩೬, ೧೪೩

ಗಂಗಾಧರ ಪದಕಿ ೯೭

ಗಜೇಂದ್ರಘಡ ೧೯, ೨೧

ಗಣಿಗಾರಿಕೆ ೭, ೧೫, ೫೧, ೧೧೬

ಗಣಿ ಜನಪದ ೧೧

ಗಣಿ ಹಗರಣ ೧೪

ಗಾಂಧಿವಾದ ೬೪, ೯೫, ೧೩೦

ಗ್ರಾಮ ಪಂಚಾಯ್ತಿ ೩೨, ೬೧, ೭೧

ಗುರುಮೂರ್ತಿ ಪೆಂಡಕೂರು ೧೨೨

ಗುರುಶಾಂತಯ್ಯ ಎಚ್.ಎಂ. ೨೫

ಗೊಗ್ಗ ಮರಿಸ್ವಾಮಿ ೫೦

ಗೋಪಾಲಗೌಡರು ೧೨೫, ೧೨೬

ಘೋರ್ಪಡೆ ಎಂ.ವೈ. ೦೬, ೪೭, ೬೮

ಚಂದ್ರಶೇಖರ ಬಿ.ಎಸ್. ೯೮, ೧೩೬

ಚಂದ್ರಶೇಖರ ಪಾಟೀಲ್ ೧೨೪

ಚನ್ನಿಗಪ್ಪ ಸಿ. ೧೨

ಚನ್ನಬಸಪ್ಪ ಡಾಕ್ಟರ್ ೧೪

ಚೋರನೂರು ೪೭

ಜತ್ತಿ ಬಿ.ಡಿ. ೪೫, ೫೯, ೧೧೮

ಜನಪದ ೧೧, ೬೫

ಜನತಾಪಕ್ಷ ೧೪೧

ಜನಾರ್ಧನರೆಡ್ಡಿ ೧೨

ಜಮೀನ್ದಾರಿ ಪದ್ಧತಿ ೧೧೭

ಜಯಪ್ರಕಾಶ್ ನಾರಾಯಣ ೧೨೭

ಜಯಲಕ್ಷ್ಮಮ್ಮಣ್ಣಿ ಎಂ. ೯೭, ೧೦೧

ಜರಿಮಲೆ ೨, ೧೮

ಜಾರ್ಜ್ ಫರ್ನಾಂಡಿಸ್ ೭೪, ೮೭, ೯೦, ೧೨೫, ೧೨೫, ೧೩೩

ಜಾಹಿರುನಾಮೆ ೨೪, ೨೭, ೮೩, ೯೭

ಜಿಗಿನೇಹಳ್ಳಿ ಬಸವನಗೌಡ ೫೦, ೧೩೨

ಜುಮ್ಮನಗೌಡ ೯೧, ೧೩೨

ಜ್ವಾಲಾಮುಖಿ ಪತ್ರಿಕೆ ೧೧೮

ಟಿಪ್ಪುಸುಲ್ತಾನ್ ೧೯, ೨೦

ಟೊಬ್ಯಾಕೊ ಕಂಪನಿ  (ತಂಬಾಕು ಕಂಪನಿ) ೨೭, ೭೯, ೯೨, ೧೩೭

ಟೀಕೂರು ಸುಬ್ರಮಣ್ಯಂ ೪೬, ೬೩

ತಮಿಳುನಾಡು ೪೧, ೫೮, ೧೨೫

ತಲ್ಲೂರುರಾಮನಗೌಡ ೩೮

ತಾಳಂಕಿ ಸುಬ್ರಾಯ ಶ್ರೇಷ್ಠಿ ೩೧

ತುಮಕೂರು ೬೬, ೧೨೫

ತೆಲಂಗಾಣ ರೈತ ಹೋರಾಟ ೧೩೦

ತೋಟಗಾರಿಕೆ ಇಲಾಖೆ ೯೭, ೧೦೧, ೧೩೭

ತ್ರಿಯಂಬಕಭಟ್ಟ ೫೦

ಥಾಮಸ್ ಮನ್ರೊ ೧೯, ೨೦

ದತ್ತವಾಡ ೧೮

ದಯಾನಂದ ನಾಡಕರ್ಣಿ ೯೬

ದರೋಜಿ ೧, ೧೭

ದಕ್ಷಿಣ ಕನ್ನಡ ೬೭

ದಕ್ಷಿಣ ಭಾರತ ೧೭, ೧೯, ೩೧

ದಕ್ಷಿಣಾಮೂರ್ತಿ ಕೆ.ಎಂ. ೪೨

ದಾತಾರೆ ಬಿ.ಎನ್. ೪೩

ದಾವಣಗೆರೆ ೧೦ ೬೭

ದಾಸನ್ ಸಾಲೋಮನ್ ೭೬

ಧಾರವಾಡ ೧, ೧೭, ೯೭, ೧೨೭

ದಿವಾಕರ ಆರ್. ಆರ್. ೬೩

ದಿಲೀಪ್ ಕುಮಾರ್ ಪಿ.ಜೆ. ೧೪

ದೇವಗಿರಿ ೪೧

ದೇವನೂರ ಮಹಾದೇವ ೧೨೪

ದೇವರಾಜ ಅರಸು ಡಿ. ೨೨, ೬೬, ೭೧, ೭೮, ೮೨, ೧೦೫, ೧೧೬, ೧೨೮, ೧೩೪, ೧೪೬

ದೇವೇಗೌಡ ಎಚ್.ಡಿ. ೧೪೩

ದೇಶೀ ಸಂಸ್ಥಾನಿಕರು ೩೬, ೩೯

ದೇಸಾಯಿ ಆರ್. ಪಿ. ೯೯

ನಂಜುಂಡಸ್ವಾಮಿ ಎಂ.ಡಿ. ೧೨೪, ೧೪೩

ನಂದಿಹಳ್ಳಿ ೨೭, ೩೨, ೮೫, ೯೬

ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರ ೧೦, ೮೫, ೯೪, ೯೬, ೯೯, ೧೨೭, ೧೩೭

ನವದೆಹಲಿ ೫೭, ೯೦

ನವನಿರ್ಮಾಣ ಚಳವಳಿ ೧೨೫, ೧೨೭

ನಾಯ್ಕರ ಹೊನ್ನೂರಪ್ಪ ೯೧, ೧೩೨

ನೀಲಗಂಗಯ್ಯ ಪೂಜಾರ ೯೭, ೧೨೬

ಪಟ್ಟಾಭಿರಾಮರೆಡ್ಡಿ ೧೦೦

ಪಟೇಲ್ ಜೆ.ಎಚ್. ೭೭, ೮೨, ೧೦೪, ೧೨೬, ೧೩೩, ೧೩೭

ಪರಮೇಶ್ವರಪ್ಪ ಎಂ.ವೈ.ಆರ್. ೭೬, ೧೩೬

ಪರಿಸರ ೫, ೧೩

ಪಾಟೀಲ್ ಪುಟ್ಟಪ್ಪ ೫೪, ೯೧, ೧೧೪, ೧೧೬

ಪಾತ್ರಸೀನಪ್ಪ ೭೦, ೧೦೨, ೧೩೨

ಪಿಕೆಟಿಂಗ್ ೮೨, ೧೦೪

ಪೂರ್ಣಚಂದ್ರ  ತೇಜಸ್ವಿ ೧೨೪, ೧೪೩

ಪೋಲೀಸರು ೧೦, ೩೪,೬೧, ೬೬, ೭೧, ೯೧, ೧೦೨, ೧೦೪, ೧೪೩

ಪ್ರಕಾಶ್ ಎಂ.ಪಿ. ೭೮, ೮೪, ೯೦, ೧೧೪, ೧೩೪

ಪ್ರಜಾಪ್ರಭುತ್ವ ೫೮, ೬೦, ೭೨, ೧೦೮, ೧೧೭, ೧೧೯, ೧೨೩, ೧೪೦

ಪ್ರಜಾವಾಣಿ ೭೮, ೮೪, ೯೦, ೧೧೪, ೧೩೪

ಪ್ರಜಾಸಮಾಜವಾದಿ ೪೭

ಪ್ರಭಾಕರ ಕಾಳೆ ಜಯಂತ್ ೯೭

ಪ್ರೊಕ್ಲಮೆಷನ್ ೨೪, ೨೭, ೮೩, ೧೦೮

ಬಂಗಾರಪ್ಪ ಎಸ್. ೧೧೩, ೧೨೫, ೧೪೪

ಬರ್ನಾಡ್ ಷಾ ೧೧೭

ಬಸವರಾಜ ಕಟ್ಟೀಮನಿ ೧೦೭

ಬಾಚಿ ಗೊಂಡನಹಳ್ಳಿ ಚನ್ನಬಸವನಗೌಡರು ೧೦೫, ೧೦೬, ೧೧೬

ಬಾಪಟ್ ಎಸ್. ೧೪೪

ಬಾಬುರೆಡ್ಡಿ ತುಂಗಳ್ ೯೭, ೧೨೨

ಬಾಲಕಾರ್ಮಿಕರು ೯

ಬಾವಿಕಟ್ಟಿ ಮರಿಬಸಪ್ಪ ೩೮, ೪೪

ಬಿಲ್ ಕ್ಲಿಂಟನ್ ೩೧

ಬಿಹಾರ ೯೬, ೧೨೫

ಬುಕ್ಕಟ್ಲ ಬಸಪ್ಪ ೯೯

ಬೆಂಗಳೂರು ೧, ೧೦, ೮೮, ೧೦೧

ಬೆಳಗಾವಿ ೨೧

ಬೆಲ್ಜಿಯಂ ೪೪, ೧೧೬

ಬೆಸ್ಸಿನ್ ಒಪ್ಪಂದ ೨೦

ಬೊಮ್ಮನಹಳ್ಳಿ ಕಿಂದರಿಜೋಗಿ ೮

ಬೋಜಮನೆತನ ೩೭

ಬ್ಲಡ್ ಬ್ಯಾಂಕ್ ೫೪

ಬ್ರೂಸ್ ಫೂಟ್ ೧, ೨೬

ಭರತ್ ಝುಂಜನ್ ವಾಲ ೯೯

ಭಾರತದ ಒಕ್ಕೂಟ ೨೭, ೩೬, ೩೯, ೧೩೧

ಭೂಪತಿ ಯು. ೬, ೫೦

ಮದ್ರಾಸ್ ೪೧

ಮದ್ರಾಸ್ ಪ್ರೆಸಿಡೆನ್ಸಿ ೨೪

ಮಧುದಂಡವತೆ ೮೦

ಮಧುಲಿಮೆಯೆ ೮೬

ಮಧ್ಯಪ್ರದೇಶ ೫೬

ಮರಾಠರು ೧೭, ೩೨, ४೦, ೭೦

ಮಲಹೊರುವ ಪದ್ಧತಿ ೬೮

ಮಲ್ಲಿಕಾಘಂಟಿ ೧೧, ೩೨

ಮಲ್ಲೋಜಿರಾವ್ ೧೭-೧೮

ಮಹಾರಾಷ್ಟ ೧೭, ४೭, ೯೬

ಮಹಾಬಳೇಶ್ವರಪ್ಪ ೧೩೦

ಮಹಾತ್ಮಗಾಂಧಿ ೧, ೩೧, ೮೨

ಮಹಿಳೆ ೬, ೯, ೩೨, ೭೦, ೮೨, ೮೩, ೧೦४

ಮಹೇಶ್ವಪ್ಪ ಕೆ.ಜಿ. ೭೫, ೮೨, ೧೦४, ೧೨೦, ೧೩೩, ೧४४

ಮುದುಕನಗೌಡರು ೩೨, ೫೨

ಮುಧೋಳ ೩೬

ಮೃಣಾಲ್ ಘೋರೆ ೧೦४

ಮೆಕಾರ್ಥೆ ಜೆ.೨೦, ೫೨, ೫೩

ಮೈಸೂರು ೩೬, ४೫, ೬೬, ೯೦

ಮೈಸೂರು ದಸರ ೭೧

ಮೊಹಮ್ಮದ್ ಆಯಾಜ್ ೧೦೦

ಯಶವಂತನಿವಾಸ ४४

ಯಜಮಾನ ಶಾಂತರುದ್ರಪ್ಪ ೧೬, ೨೧, ೩೨, ೪೩, ೫೨, ೫೬, ೫೯, ೭೦, ೭೪, ೧೨೧, ೧೨೨, ೧೩೦,೧೩೭

ಯಶವಂತರಾವ್ ಘೋರ್ಪಡೆ ೨೧, ೩೦, ೩೭, ೪೬, ೧೧೮

ಯಶವಂತರಾವ್ ಹೊಳ್ಕರ್ ೫೬

ರಕ್ತದಾನ ೫೪

ರಜಾಕಾರರು ೩೬

ರಂಜಾನ್ ಸಾಬ್ ೧೩೦

ರಣಧೀರ ಪತ್ರಿಕೆ ೧೧೯

ರಾಚಯ್ಯ ಬಿ. ೪೩, ೫೪

ರಾಚಪ್ಪ ಬೆಟ್ಟದೂರು ೯೭

ರಾಜಧನ ೪೯, ೫೭

ರಾಜಶಾಹಿ ೧೧೭, ೧೨೦, ೧೨೪, ೧೪೦

ರಾಜಶೇಖರ ಕೋಟಿ ೯೭

ರಾಜಸ್ಥಾನ೧೨೫

ರಾಣಿಬೆನ್ನೂರು ೬೭

ರಾಮದಾಸ ಕೆ. ೩, ೩೦, ೧೨೪

ರಾಮಾನಾಂದ ತಿವಾರಿ ೧೨೫

ರಾಯಲ್ ಟ್ರೀ ೪೨

ರಾಸಾಯನಿಕ ಗೊಬ್ಬರ ೬೭

ರಾಜ್ಯ ಪತ್ರಾಗಾರ ಇಲಾಖೆ ೫೯, ೧೦೫

ರಾಷ್ಟ್ರಪತಿ ೭೬,೮೬

ರೈತ ಪತ್ರಿಕೆ ೪೬, ೧೧೬, ೧೧೮

ರೈತ ಸಂಘ ೧೪, ೩೩, ೧೩೧

ಲಂಕೇಶ್ ಪಿ ೧೨೪

ಲಂಡನ್ ಮಿಷನ್ ೨೦

ಲಕ್ಷ್ಮೀಪುರದ ನಾಗಪ್ಪ ೧೫, ೫೪, ೫೬, ೮೪

ಲಾಕಪಡೆತ್ ೬೬

ಲಾಡ್ ನಾರ್ಥ ಬ್ರೂಕನ್ ೨೦

ಲಾಲ್ ಬಾಗ್ ೧೦೧

ಲಿಂಗಾಯಿತ ೩೨, ೭೦, ೧೪೧

ಲೋಹಿಯಾ ೧೨೪, ೧೩೩

ವರ್ಮ ಎ.ಕೆ. ೧೪

ವಿಜಯನಗರ  ೧೭, ೧೮, ೫೪

ವಿಜಯ ನಗರ ಉಕ್ಕಿನ ಕಾರ್ಖಾನೆ ೭೪

ವಿಠಲ ಪ್ರೆಸ್ ೩೮

ವಿದ್ಯುತ್ ಮಂಡಳಿ ೩೩, ೯೧, ೧೦೬

ವಿಶ್ವಸಂಸ್ಥೆ ೪೦

ವಿರೂಪಾಕ್ಷಿಪೂಜಾರಹಳ್ಳಿ ೧೬

ವಿ.ವಿ.ಗಿರಿ ೭೭, ೮೬

ವಿಶಾಲ ಕರ್ನಾಟಕ ೩೨, ೧೧೯

ವಿಶ್ವವಾಣಿ ೯೧, ೧೧೫

ವಿಶ್ವಂಬರನ್ ಪಿ. ೮೦

ವೀರಪ್ಪ ಮೊಯಿಲಿ ೨೩

ವೀರೇಂದ್ರ ಪಾಟೀಲ್ ೨೩

ವೆಂಕಟರಾಮ್ ಎಸ್ ೭೬, ೧೨೬, ೧೩೫, ೧೩೭

ಶಿವಾಜಿ ೧೭, ೧೮. ೮೨

ಶೃಂಗೇರಿ ೧೦೯

ಶ್ರೀಗಂಧದ ಮರ ೪೧, ೪೩

ಶ್ರೀನಿವಾಸಾಚಾರ್ಯರು ಟಿ. ೩೪

ಶ್ರೀರಂಗಪಟ್ಟಣ ೧೯

ಷಣ್ಮುಖಪ್ಪ ದೇಸಾಯಿ ೭೩, ೧೦೨, ೧೩೧

ಷರಾಫ್ ಮನೆತನ ೩೭

ಷರಾಫ್ ಯು.ಬಿ. ೩೬, ೪೦

ಸಂಗ್ರಾಮ ಪತ್ರಿಕೆ ೧೧೯

ಸಂಡಪ್ಪಮಟ್ಟೆ ೮೫, ೯೭

ಸಂತೋಷಿತಿಗಾ ೯೬

ಸಂತೋಷ್ ಲಾಡ್ ೬

ಸತ್ಯಾಗ್ರಹ ೩೭, ೫೬, ೭೩, ೧೧೪

ಸದ್ಯೋಜಾತಪ್ಪ ಎಂ.ಎಂ.ಜೆ ೪೭

ಸನ್ ಲೈಟ್ ಅಂಡ್ ಶಾಡ್ಯೋಸ್ ೪೭

ಸಮಾಜವಾದಿ ಪಕ್ಷ ೬೯, ೭೫, ೭೬, ೮೨, ೧೦೪, ೧೨೪, ೧೨೯

ಸಮಾಜವಾದಿ ಯುವಜನ ಸಭಾ ೧೨೪, ೧೨೭, ೧೪೩

ಸಂಯುಕ್ತ ಕರ್ನಾಟಕ ೪೮, ೮೪, ೯೫, ೧೧೪

ಸಾಗರ ೧೨೫, ೧೨೭

ಸಾಯಿಬಾಬ ೧೨೪

ಸಾರಾಯಿ ೯, ೪೮, ೧೩೨

ಸುಂದರೇಶ್ ಎನ್.ಡಿ. ೧೪೩

ಸುಜಾತ ಕುಮುಟ ೧೩೪

ಸುರೇಂದ್ರ ಮೋಹನ್ ೧೦೩

ಸುಶೀಲರಾಜೆ ೨೧, ೪೩, ೫೩, ೫೫

ಸೂರ್ಯನಾರಾಯಣ ಸ್ವಾಮಿ ೧೪೫

ಸೂರಜ್ ಕುಮಾರ್ ಠಾಕೂರ್ ೯೬

ಸೊಂಡೂರು ನಾಗರಿಕ ಹಿತರಕ್ಷಣ ಸಮಿತಿ ೧೪

ಸೊಂಡೂರು ವಿಮೋಚನ ಸಮರ ಸಮಿತಿ ೩೮, ೪೫, ೬೦, ೧೩೦

ಸೋಹನ್ ಕುಮಾರಿ ೧೦೩

ಸ್ವತಂತ್ರ ಪತ್ರಿಕೆ ೧೧೯

ಸ್ಕ್ರೀನೋ ಸಿ.ಪಿ. ೩೪

ಸ್ಟೇಟ್ ಆಕ್ಟ್ ೨೫

ಸ್ಟೇಟ್ ಸೆಲ್ ೩೮

ಸ್ಟೇಟ್ ಫಂಡ್ ೪೨

ಸ್ನೇಹಲತಾ ರೆಡ್ಡಿ ೧೦೦

ಸರ್ದಾರ್ ವಲ್ಲಭಭಾಯಿ ಪಟೇಲ್ ೩೮, ೪೦

ಹರಪನಹಳ್ಳಿ ಪಾಳೆಗಾರರು ೧೮

ಹರಿಜನ ೩೧, ೬೭, ೮೬, ೯೪

ಹಾರಕನಾಳು ೩೩

ಹಿಂದೂಮಹಾಸಭಾ ೩೭

ಹೀರಾಚಂದ್ ವಾಘ್ಮೋರೆ ೯೮, ೧೩೭

ಹೀರೋಜಿ ಲಾಡ್ ೬, ೭೧

ಹುಚ್ಚಮಾಸ್ತಿಗೌಡ ೮೬, ೧೦೫, ೧೧೬, ೧೩೬, ೧೩೪


ಹೈದರಾಲಿ ೧೯, ೨೦

ಹೈದರಾಬಾದ್ ೩೬

## ಅನುಬಂಧಗಳು – ೪. ಛಾಯಾಚಿತ್ರಗಳು




ಯಜಮಾನ ಶಾಂತರುದ್ರಪ್ಪ




ಎಲಿಗಾರ ತಿಮ್ಮಪ್ಪ



ಯಶವಂತರಾವ್ ಘೋರ್ಪಡೆ



ಲಕ್ಷ್ಮೀಪುರದ ನಾಗಪ್ಪ



ಪಾತ್ರ ಸೀನಪ್ಪ



ಜಾರ್ಜ್‌ಫರ್ನಾಂಡಿಸ್



ಜೆ.ಎಚ್. ಪಟೇಲ್



ಎಂ.ಪಿ. ಪ್ರಕಾಶ್



ದೇವರಾಜ ಅರಸು




ಕಾಗೋಡು ತಿಮ್ಮಪ್ಪ



ರಾಮಕೃಷ್ಣ ಹೆಗಡೆ ಜೊತೆ ಕೆ.ಜಿ. ಮಹೇಶ್ವರಪ್ಪ



ಹೋರಾಟ ನಡೆದ ಹಳೆಯ ತಾಲೂಕು ಕಚೇರಿ



ಕುಮಾರಸ್ವಾಮಿ ದೇವಸ್ಥಾನ




ಸೊಂಡೂರು ರಾಜರು ಅಧಿಕಾರ ಕಳೆದುಕೊಂಡಾಗಿನ ಜನಾಭಿಪ್ರಾಯದ ವ್ಯಂಗ್ಯಚಿತ್ರ



ಸೊಂಡೂರು ಸಂಸ್ಥಾನದ ಲಾಂಛನ